ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗಂಗಾಸ್ನಾನ

ಬಿಹಾರದ ಪಟ್ನಾದಲ್ಲಿ ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಶನಿವಾರ ಗಂಗಾಸ್ನಾನ ಮಾಡಿದ ಮಹಿಳೆಯರು ಪರಸ್ಪರ ಸಿಂಧೂರ ಹಚ್ಚಿಕೊಂಡರು

75 ಸ್ವಾತಂತ್ರ್ಯದ ಅಮೃತಮಹೋತ್ಸವ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕರ್ನಾಟಕ ಸರ್ಕಾರವು

ರಾಜ್ಯದಲ್ಲಿ ಕೋವಿಡ್-19 ನ್ನು ನಿಭಾಯಿಸಲು ಸಂಪೂರ್ಣ ಸಿದ್ಧವಾಗಿದೆ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು

ನಮ್ಮ ಸಿದ್ಧತೆಗಳು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಪರೀಕ್ಷಾ ಸಾಮರ್ಥ್ಯ

265 ಲ್ಯಾಬ್‌ಗಳು

2,19,980 ಸಾಮರ್ಥ್ಯ ಪ್ರತಿ ದಿನಕ್ಕೆ (RAT ಹೊರತುಪಡಿಸಿ)

ಸಿಬ್ಬಂದಿಗಳ ಲಭ್ಯತೆ

82,543 ವೈದ್ಯರು / ಸಿಬ್ಬಂದಿಗಳು (ಆರೋಗ್ಯ + ವೈದ್ಯಕೀಯ ಶಿಕ್ಷಣ)

ವೆಂಟಿಲೇಟರ್‌ಗಳು (ಪಿಎಂ ಕೇರ್ಸ್, ಭಾರತ ಸರ್ಕಾರ)

2871 ಸ್ವೀಕರಿಸಲಾಗಿದೆ ಮತ್ತು ಸ್ಥಾಪಿಸಲಾಗಿದೆ

ಭೌತಿಕ ಟ್ರಯಾಜ್ ಕೇಂದ್ರಗಳು

540

ಬೆಂಗಳೂರು ನಗರ	168
ಜಿಲ್ಲೆಗಳು	372

ಆಮ್ಲಜನಕದ ಮೂಲಸೌಕರ್ಯ

1091 ಮೆ.ಟ. ಆಮ್ಲಜನಕದ ಸಾಮರ್ಥ್ಯ

1170 ಮೆ.ಟ. ಆಮ್ಲಜನಕದ ಉತ್ಪಾದನೆ

ಮೆ.ಟ. - ಮೆಟ್ರಿಕ್ ಟನ್

	ಸಂಖ್ಯೆ	ಸಾಮರ್ಥ್ಯ
ಪಿಎಸ್‌ಎ ಘಟಕಗಳ ನಿಯೋಜನೆ	217	220 ಮೆ.ಟ.
ಎಲ್‌ಎಂಒ ಟ್ಯಾಂಕ್	68	630 ಮೆ.ಟ.
ಆಮ್ಲಜನಕ ಸಿಲಿಂಡರ್‌ಗಳು	16387	135 ಮೆ.ಟ.
ಆಮ್ಲಜನಕದ ಸಾಂದ್ರಕಗಳು	7952	106 ಮೆ.ಟ.

ಲಸಿಕಾಕರಣದ ಪ್ರಗತಿ

9,12,79,922 ಡೋಸ್‌ಗಳು

18+ ವಯಸ್ಸಿನವರಿಗೆ 1ನೇ ಡೋಸ್	4,86,58,866	99%
18+ ವಯಸ್ಸಿನವರಿಗೆ 2 ಡೋಸ್‌ಗಳು	4,04,89,045	83%
15-17 ವಯಸ್ಸಿನವರಿಗೆ 1ನೇ ಡೋಸ್	18,89,614	60%

ಜಿನೋಮ್ ಸೀಕ್ವೆನ್ಸಿಂಗ್ ಪ್ರಯೋಗಾಲಯಗಳು

ಕಾರ್ಯನಿರ್ವಹಿಸುತ್ತಿರುವ ಪ್ರಯೋಗಾಲಯಗಳು* :5

- ನಿಮ್ಹಾನ್ಸ್, ಬೆಂಗಳೂರು
- ಇನ್‌ಸ್ಟೆಮ್, ಬೆಂಗಳೂರು
- ಎನ್‌ಸಿಬಿಎಸ್, ಬೆಂಗಳೂರು
- ಐಐಎಸ್‌ಸಿ, ಬೆಂಗಳೂರು
- ಜೆಎನ್‌ಸಿಎಎಸ್‌ಆರ್, ಬೆಂಗಳೂರು

ಹೊಸ ಪ್ರಯೋಗಾಲಯಗಳು :5

- ಬಿಎಂಸಿಆರ್‌ಐ, ಬೆಂಗಳೂರು
- ಶ್ರೀ ಅಟಲ್ ಬಿಹಾರಿ ವಾಜಪೇಯಿ ಎಂಸಿ & ಆರ್‌ಐ, ಬೆಂಗಳೂರು
- ಮೈಸೂರು ವೈದ್ಯಕೀಯ ಕಾಲೇಜು, ಮೈಸೂರು
- ಜಿಮ್ಸ್, ಕಲಬುರಗಿ
- ಬಿಐಎಂಎಸ್, ಬೆಳಗಾವಿ

*ಸಾಮರ್ಥ್ಯ - 370 ಮಾದರಿಗಳು / ಆವರ್ತನ, ಪ್ರತಿ ಆವರ್ತನವು 4-5 ದಿನಗಳನ್ನು ತೆಗೆದುಕೊಳ್ಳುತ್ತದೆ.

ಹಾಸಿಗೆಗಳ ಲಭ್ಯತೆಯ ವಿವರಗಳು

1,94,363 ಒಟ್ಟು ಹಾಸಿಗೆಗಳು

ವಿಭಾಗ	ಸಾಮಾನ್ಯ ಹಾಸಿಗೆಗಳು	ಓ2/ ಎಚ್‌ಡಿಯು	ಐಸಿಯು	ಐಸಿಯು-ವೆಂಟಿಲೇಟರ್	ಒಟ್ಟು
ಸರ್ಕಾರಿ ವೈದ್ಯಕೀಯ ಕಾಲೇಜುಗಳು	4086	12445	1124	1689	19344
ಸರ್ಕಾರಿ ಆಸ್ಪತ್ರೆಗಳು	10604	18316	1111	1718	31749
ಖಾಸಗಿ ವೈದ್ಯಕೀಯ ಕಾಲೇಜುಗಳು	21850	11138	1441	1027	35456
ಖಾಸಗಿ ಆಸ್ಪತ್ರೆಗಳು	89228	13357	3540	1689	107814
ಒಟ್ಟು	125768	55256	7216	6123	194363

ವಾರ್ ರೂಮ್

41 ವಾರ್ ರೂಮ್‌ಗಳು

ರಾಜ್ಯದ ವಾರ್ ರೂಮ್	1
ಕೇಂದ್ರದ ವಾರ್ ರೂಮ್ (ಬಿಬಿಎಂಪಿ)	1
ವಲಯ ನಿಯಂತ್ರಣ ಕೊಠಡಿ (ಬಿಬಿಎಂಪಿ)	8
ಜಿಲ್ಲಾ ಮಟ್ಟದ ನಿಯಂತ್ರಣ ಕೊಠಡಿ	31

ಕೋವಿಡ್-19 ಟ್ರಯಾಜಿಂಗ್ ಶಿಷ್ಟಾಚಾರ



ಟ್ರಯಾಜಿಂಗ್ ವೈದ್ಯರು ಗಮನಿಸಿ -
ಅನಿಯಂತ್ರಿತ ಸಹ ಅಸ್ವಸ್ಥತೆಯನ್ನು ಒಳಗೊಂಡಿರುತ್ತದೆ -
1. ಮಧುಮೇಹಿಗಳಲ್ಲಿ - GRBS>200mg/dl ಅಥವಾ HBA1C>8
2. ಅಧಿಕ ರಕ್ತದೊತ್ತಡದಲ್ಲಿ - BP>160/100mmHg
3. ಕಳೆದ 1 ತಿಂಗಳೊಳಗೆ CVA/CAD
4. CKD ಯಲ್ಲಿ - ಹಂತ 3 ಅಥವಾ ಹೆಚ್ಚು
5. ಬೊಜ್ಜು ಇದ್ದರೆ - BMI>30kg/m2

RR: ಉಸಿರಾಟದ ವೇಗ • SPO2: ಆಮ್ಲಜನಕ ಪ್ರಮಾಣ • SARI: ತೀವ್ರತರವಾದ ಉಸಿರಾಟದ ಕಾಯಿಲೆ • CKD: ದೀರ್ಘಕಾಲೀನ ಕಿಡ್ನಿ ಸಮಸ್ಯೆ

ಗಮನಿಸಿ: • ಮಕ್ಕಳ ಪರೀಕ್ಷೆಗಾಗಿ (<18 ವರ್ಷಗಳು) ಪ್ರತ್ಯೇಕ ಶಿಷ್ಟಾಚಾರ ಅನ್ನು ಬಳಸಲಾಗುತ್ತದೆ. • ಕೋವಿಡ್-19 ಸೋಂಕಿತ ಗರ್ಭಿಣಿ ಮಹಿಳೆಯನ್ನು ಗೊತ್ತುಪಡಿಸಿದ ಕೋವಿಡ್-19 ಆಸ್ಪತ್ರೆ/ಪ್ರಸೂತಿ ಸೇವೆಗಳಿಗೆ ಹಾಗೂ ಪ್ರಸೂತಿ ತಜ್ಞರಿಂದ ಸಲಹೆಗಾಗಿ ಉಲ್ಲೇಖಿಸಲಾಗುತ್ತದೆ.

ಕೋವಿಡ್-19 ನಿರ್ವಹಣೆ ಶಿಷ್ಟಾಚಾರ

C	O	V	I	D
ಆ್ಯಂಟಿ ಕೋಆಗ್ಯುಲೇಷನ್	ಆಕ್ಸಿಜನೇಶನ್	ಆ್ಯಂಟಿ ವೈರಲ್ಸ್	ಆ್ಯಂಟಿ ಇನ್‌ಫ್ಲಮೇಟರಿ	ಡಿಸ್‌ಚಾರ್ಜ್

ಅನಗತ್ಯ ಆಂಟಿಬಯಾಟಿಕ್ಸ್ ಬೇಡ

ಪ್ರಸ್ತುತ ಬ್ಯಾಕ್ಟೀರಿಯಾ ಸೋಂಕು ಅನುಮಾನ. ನಿಯಮಿತವಾಗಿ ಆಂಟಿಬಯೋಟಿಕ್ ಪ್ರಿಸ್ಕ್ರಿಪ್ಷನ್ ಅನಗತ್ಯ. ಆಂಟಿಮೈಕ್ರೊಬಿಯಲ್ ಶಿಷ್ಟಾಚಾರವನ್ನು ಅನುಸರಿಸಬೇಕು.

ಕೋವಿಡ್-19 ಸೂಕ್ತ ನಡವಳಿಕೆ

ದೈಹಿಕ ಅಂತರ, ಒಳಾಂಗಣದಲ್ಲಿ ಮಾಸ್ಕ್ ಬಳಕೆ ಮತ್ತು ಕಟ್ಟುನಿಟ್ಟಾಗಿ ಕೈ ನೈರ್ಮಲ್ಯವನ್ನು ಕಾಪಾಡಿಕೊಳ್ಳುವುದು. ತಾಪಮಾನ ಮತ್ತು ಪಲ್ಸ್ ಆಕ್ಸಿಮೆಟ್ರಿಯೊಂದಿಗೆ ಆಮ್ಲಜನಕ ಪ್ರಮಾಣ ಮೇಲ್ವಿಚಾರಣೆ ಮಾಡುವುದು.

ಮನೆಯಲ್ಲಿ ಪ್ರತ್ಯೇಕತೆ

ಮಾಡಿ	ಮಾಡಬೇಡಿ
• ಪ್ರತ್ಯೇಕವಾಗಿ ಚೆನ್ನಾಗಿ ಗಾಳಿಯಿರುವ ಕೋಣೆಯಲ್ಲಿಯೇ ಇರಿ • ಮೂರು ಪದರಗಳುಳ್ಳ ಮಾಸ್ಕ್ ಬಳಸಿ ಮತ್ತು 72 ಗಂಟೆಗಳ ನಂತರ ತುಂಡುಗಳಾಗಿ ಕತ್ತರಿಸಿ ಕಾಗದದ ಚೀಲದಲ್ಲಿ ಹಾಕಿ ವಿಲೇವಾರಿ ಮಾಡಿ • ಸಾಕಷ್ಟು ನೀರು ಕುಡಿಯಿರಿ • ಉಸಿರಾಟದ ಶಿಷ್ಟಾಚಾರಗಳನ್ನು ಅನುಸರಿಸಿ • ಕೈಗಳನ್ನು ಸ್ವಚ್ಛವಾಗಿಡಿ	• ಮನೆಯಲ್ಲಿ ರೆಮ್‌ಡೆಸಿವಿರ್ ಬಳಸಬೇಡಿ • ವೈದ್ಯರ ಸಲಹೆಯಿಲ್ಲದೆ ಬುಡೆಸೊನೈಡ್ ನೆಬ್ಯುಲೈಜರ್ ಅನ್ನು ಬಳಸಬೇಡಿ • ವೈದ್ಯರ ಸಲಹೆಯಿಲ್ಲದೆ ಆಮ್ಲಜನಕ ಸಿಲಿಂಡರ್ ಬಳಸಬೇಡಿ • ವೈದ್ಯರ ಸಲಹೆಯಿಲ್ಲದೆ ಎಕ್ಸ್-ರೇ / ಸಿಟಿ ಸ್ಕ್ಯಾನ್ ಮಾಡಿಸಬೇಡಿ

ಪರೀಕ್ಷೆಯು ಪಾಸಿಟಿವ್ ಬಂದ ಕನಿಷ್ಠ 7 ದಿನಗಳ ನಂತರ ಮತ್ತು ಸತತ 3 ದಿನಗಳವರೆಗೆ ಜ್ವರವಿಲ್ಲದಿದ್ದರೆ ಪ್ರತ್ಯೇಕತೆ ಅಂತ್ಯಗೊಳಿಸಿ. ಕೋವಿಡ್ ಪರೀಕ್ಷೆಯ ಅಗತ್ಯವಿಲ್ಲ.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ. ಕೆ. ಸುಧಾಕರ್ ರವರಿಂದ ಇಂಡಿಯಾ ಟುಡೇ ಹೆಲ್ತ್‌ಗಿರಿ ಪ್ರಶಸ್ತಿ ಸ್ವೀಕಾರ.

ಸಂಪೂರ್ಣವಾಗಿ ಲಸಿಕೆ ಪಡೆದು ರಕ್ಷಣೆ ಪಡೆಯಿರಿ

ರೋಗಲಕ್ಷಣಗಳು ಉಲ್ಬಣಗೊಂಡರೆ / ತುರ್ತುಸ್ಥಿತಿಗಳ ಸಂದರ್ಭದಲ್ಲಿ ಕರೆ ಮಾಡಿ

14410 ರಾಜ್ಯ ಕೋವಿಡ್ ಸಹಾಯವಾಣಿ

1533 ಬಿಬಿಎಂಪಿ ಸಹಾಯವಾಣಿ

108 ತುರ್ತು ಆಂಬ್ಯುಲೆನ್ಸ್ ಸೇವೆ

"ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸಿ ಬೆಳೆಸುವುದು".
– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಮಾಸ್ಕ್ ಧರಿಸಿ | ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ | ಗುಂಪು ಸೇರುವುದನ್ನು ತಪ್ಪಿಸಿ | ಸ್ವಯಂಪ್ರೇರಿತವಾಗಿ ಲಸಿಕೆ ಪಡೆಯಿರಿ

ಎಲ್ಲರಿಗೂ ಆರೋಗ್ಯ, ಎಲ್ಲೆಡೆಯೂ ಆರೋಗ್ಯ.

ಟಿಕೆಟ್ ಹಂಚಿಕೆ: ಜಾಟವ, ಜಾಟ್ ಸಮುದಾಯ ಓಲೈಕೆಗೆ ಬಿಜೆಪಿ ಯತ್ನ: ಯಾದವೇತರ ಒಬಿಸಿ ಮತಕ್ಕೆ ಎಸ್‌ಪಿ ಕಣ್ಣು

ಪಕ್ಷಗಳ ಕಾರ್ಯತಂತ್ರದ ಸುಳಿವು ಬಯಲು

● ಆನಂದ್ ಮಿಶ್ರಾ

ನವದೆಹಲಿ: ಎಲ್ಲ ಪ್ರಮುಖ ಪಕ್ಷಗಳು ಉತ್ತರ ಪ್ರದೇಶ ಮತ್ತು ಪಂಜಾಬ್ ವಿಧಾನಸಭಾ ಚುನಾವಣೆಗೆ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿವೆ. ಈ ಮೂಲಕ ಚುನಾವಣೆಯಲ್ಲಿ ತಮ್ಮ ಕಾರ್ಯತಂತ್ರ ಏನು ಎಂಬುದರ ಸುಳಿವು ನೀಡಿವೆ.

ಉತ್ತರ ಪ್ರದೇಶದ ಮುಖ್ಯ ಪಕ್ಷಗಳಾದ ಬಿಜೆಪಿ, ಎಸ್‌ಪಿ, ಬಿಎಸ್‌ಪಿ ಮತ್ತು ಕಾಂಗ್ರೆಸ್‌ನ ಅಭ್ಯರ್ಥಿಗಳ ಮೊದಲ ಪಟ್ಟಿಗಳು ಪ್ರಕಟವಾಗಿವೆ. ಪಂಜಾಬ್ ಚುನಾವಣೆಯಲ್ಲಿ ಸ್ಪರ್ಧಿಸಲಿರುವ 86 ಅಭ್ಯರ್ಥಿಗಳ ಪಟ್ಟಿಯನ್ನೂ ಕಾಂಗ್ರೆಸ್ ಪಕ್ಷವು ಪ್ರಕಟಿಸಿದೆ.

ಪಂಜಾಬ್‌ನಲ್ಲಿ ಮೊದಲಿಗೆ ಪಟ್ಟಿ ಪ್ರಕಟಿಸಿದ್ದು ಶಿರೋಮಣಿ ಅಕಾಲಿ ದಳ; ಪಕ್ಷವು ಒಟ್ಟು ಕ್ಷೇತ್ರಗಳ ನಾಲ್ಕನೇ ಒಂದರಲ್ಲಿ ಹೊಸಬರಿಗೆ ಟಿಕೆಟ್ ನೀಡಿದೆ.

ಉತ್ತರ ಪ್ರದೇಶದಲ್ಲಿ ಮಹಿಳಾ ಸಬಲೀಕರಣವನ್ನೇ ಮುಂದಿಟ್ಟುಕೊಂಡು ಕಾಂಗ್ರೆಸ್ ಪಕ್ಷವು ಚುನಾವಣಾ ಕಣಕ್ಕೆ ಇಳಿದಿದೆ. ಆದರೆ, ಪಂಜಾಬ್‌ನಲ್ಲಿ ನಾಲ್ವರು ಮಹಿಳೆಯರಿಗೆ ಮಾತ್ರ ಟಿಕೆಟ್ ಕೊಟ್ಟಿದೆ. ಇದು ಪ್ರಕಟವಾದ ಅಭ್ಯರ್ಥಿಗಳ ಸಂಖ್ಯೆಯ ಶೇ 4ರಷ್ಟು ಮಾತ್ರ. ಉತ್ತರ ಪ್ರದೇಶದಲ್ಲಿ ಮಾತ್ರ ಪಕ್ಷದ 125 ಅಭ್ಯರ್ಥಿಗಳ ಪಟ್ಟಿಯಲ್ಲಿ 50 ಮಹಿಳೆಯರಿದ್ದಾರೆ.

ಬಿಜೆಪಿಯ ಟಿಕೆಟ್ ಹಂಚಿಕೆಯು ಇತರ ಪಕ್ಷಗಳ ಹುಬ್ಬೇರುವಂತೆ ಮಾಡಿದೆ. ದಲಿತ ಸಮುದಾಯದ 19 ಅಭ್ಯರ್ಥಿಗಳಿಗೆ ಬಿಜೆಪಿ ಟಿಕೆಟ್ ನೀಡಿದೆ. ಅವರಲ್ಲಿ 13 ಮಂದಿ, ಮಾಯಾವತಿ ಅವರ ಜಾಟವ ಸಮುದಾಯಕ್ಕೆ ಸೇರಿದವರು. ಬಿಎಸ್‌ಪಿಯ ಕೆಲವು ಹಿರಿಯ ಮುಖಂಡರು ಬಿಜೆಪಿ ಸೇರಲಿದ್ದಾರೆ ಎಂಬ ವದಂತಿಗೆ ಇದು ಪುಷ್ಟಿ ಕೊಟ್ಟಿದೆ. ಬಿಎಸ್‌ಪಿ ಅತ್ಯಂತ ದುರ್ಬಲವಾಗಿದೆ ಎಂಬ ಮಾತು ದಿನ ಕಳೆದಂತೆ ಜೋರಾಗಿಯೇ ಕೇಳಿ ಬರುತ್ತಿದೆ. ಸಾಮಾನ್ಯ ವರ್ಗದ ಹಲವು ಕ್ಷೇತ್ರಗಳಲ್ಲಿಯೂ ದಲಿತ ವರ್ಗದ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲು ಬಿಜೆಪಿ ನಿರ್ಧರಿಸಿದೆ ಎನ್ನಲಾಗಿದೆ.

ಬಿಎಸ್‌ಪಿಯ 53 ಅಭ್ಯರ್ಥಿಗಳ ಪಟ್ಟಿಯಲ್ಲಿ 14 ಮುಸ್ಲಿಮರಿದ್ದಾರೆ. ಇವರಲ್ಲಿ ಹೆಚ್ಚಿನವರಿಗೆ ಉತ್ತರ ಪ್ರದೇಶದ ಪಶ್ಚಿಮ ಭಾಗದ ಕ್ಷೇತ್ರಗಳನ್ನು ನೀಡಲಾಗಿದೆ. ಇದು ಎಸ್‌ಪಿ–ಆರ್‌ಎಲ್‌ಡಿ ಮೈತ್ರಿಕೂಟಕ್ಕೆ ಸಂಕಷ್ಟದ ಸ್ಥಿತಿ ಸೃಷ್ಟಿಸುವ ಸಾಧ್ಯತೆ ಇದೆ. ಏಕೆಂದರೆ, ಈ ಪ್ರದೇಶದ 29 ಕ್ಷೇತ್ರಗಳ ಪೈಕಿ ಎಂಟರಲ್ಲಿ ಮುಸ್ಲಿಮರನ್ನು ಮೈತ್ರಿಕೂಟವು ಕಣಕ್ಕೆ ಇಳಿಸಿದೆ.

ಜಾಟ್ ಸಮುದಾಯವು ಈ ಹಿಂದಿನ ಮೂರು ಚುನಾವಣೆಯಲ್ಲಿ ಬಿಜೆಪಿಯ ಜತೆ ಗಟ್ಟಿಯಾಗಿ ನಿಂತಿತ್ತು. ಈ ಬಾರಿ, ಕೃಷಿ ಕಾಯ್ದೆಗಳ ವಿರುದ್ಧ ಒಂದು ವರ್ಷ ನಡೆದ ಹೋರಾಟದ ಮುಂಚೂಣಿಯಲ್ಲಿ ಜಾಟ್ ಸಮುದಾಯವೇ ಇತ್ತು. ಈ ಹೋರಾಟವು ಬಿಜೆಪಿಯ ಬೆಂಬಲ ನೆಲೆಯನ್ನು ನಡುಗಿಸಿತ್ತು. ಜತೆಗೆ, ಎಸ್‌ಪಿ ಮತ್ತು ಆರ್‌ಎಲ್‌ಡಿ ಮೈತ್ರಿಯು ಬಿಜೆಪಿಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಹಾಗಿದ್ದರೂ ಜಾಟ್ ಸಮುದಾಯವನ್ನು ಕೈಬಿಡುವುದಿಲ್ಲ ಎಂಬ ಸಂದೇಶ ರವಾನಿಸಲು ಬಿಜೆಪಿ ಮುಂದಾಗಿದೆ. ಉತ್ತರ ಪ್ರದೇಶದ ಪಶ್ಚಿಮ ಭಾಗದ 16 ಕ್ಷೇತ್ರಗಳಲ್ಲಿ ಜಾಟ್ ಸಮುದಾಯದವರಿಗೆ ಟಿಕೆಟ್ ನೀಡಲಾಗಿದೆ.

ಅಖಿಲೇಶ್ ಯಾದವ್ ನೇತೃತ್ವದ ಸಮಾಜವಾದಿ ಪಕ್ಷವು (ಎಸ್‌ಪಿ) ಅತಿ ಹೆಚ್ಚು ಮುಸ್ಲಿಮರಿಗೆ ಟಿಕೆಟ್ ನೀಡಿದೆ. ಹಾಗಿದ್ದರೂ, ಮುಸ್ಲಿಂ–ಯಾದವ ಬೆಂಬಲ ನೆಲೆಯ ಆಚೆಗೆ ಪಕ್ಷವನ್ನು ಬೆಳೆಸಲು ಅಖಿಲೇಶ್ ಮುಂದಾಗಿದ್ದಾರೆ. ಅದಕ್ಕಾಗಿ ಉತ್ತರ ಪ್ರದೇಶದ ಪೂರ್ವ ಭಾಗದ ಯಾದವೇತರ ಹಿಂದುಳಿದ ವರ್ಗಗಳು ಮತ್ತು ಬ್ರಾಹ್ಮಣ ಸಮುದಾಯದ ಹಲವು ಮುಖಂಡರನ್ನು ಪಕ್ಷಕ್ಕೆ ಸೇರಿಸಿಕೊಂಡಿದ್ದಾರೆ.

ಪೂರ್ವ ಭಾಗದಲ್ಲಿ, ಕುಶ್ವಾಹಾ ಸಮುದಾಯದ ಮತಗಳನ್ನು ಎಸ್‌ಪಿ ನೆಚ್ಚಿಕೊಂಡಿದೆ. ಅದಕ್ಕಾಗಿ ಈ ಸಮುದಾಯದ ಬೆಂಬಲ ಹೊಂದಿರುವ ಸ್ವಾಮಿ ಪ್ರಸಾದ್ ಮೌರ್ಯ ಮತ್ತು ಅವರ ನಿಷ್ಠಾವಂತ ಶಾಸಕರನ್ನು ಬಿಜೆಪಿಯಿಂದ ಸೆಳೆದುಕೊಂಡಿದೆ. ಇದಕ್ಕೆ ತಿರುಗೇಟು ನೀಡಲು ಮುಂದಾಗಿರುವ ಬಿಜೆಪಿ ಮತ್ತು ಬಿಎಸ್‌ಪಿ, ಕುಶ್ವಾಹಾ ಸಮುದಾಯದ ಹಲವು ಮುಖಂಡರಿಗೆ ಟಿಕೆಟ್ ಕೊಟ್ಟಿವೆ.

ಮೌರ್ಯ ಅವರ ನಿರ್ಗಮನವು ಬಿಜೆಪಿಗೆ ಬಿಸಿ ಮುಟ್ಟಿಸಿದೆ. ಹಾಲಿ ಶಾಸಕರಲ್ಲಿ ಶೇ 50ರಷ್ಟು ಮಂದಿಗೆ ಟಿಕೆಟ್ ನಿರಾಕರಿಸಲು ಬಿಜೆಪಿ ಯೋಜಿಸಿತ್ತು. ಈ ಚಿಂತನೆಯನ್ನು ಪಕ್ಷವು ಕೈಬಿಟ್ಟಿದೆ. ಬಿಜೆಪಿಯ 83 ಅಭ್ಯರ್ಥಿಗಳ ಪಟ್ಟಿಯಲ್ಲಿ 20 ಮಂದಿ ಮಾತ್ರ ಹೊಸಬರು. ಕಳೆದ ಚುನಾವಣೆಯಲ್ಲಿ ಈ ಎಲ್ಲ 83 ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿತ್ತು. ಬಿಜೆಪಿಯ ಮೊದಲ ಪಟ್ಟಿಯಲ್ಲಿ ಶೇ 10ರಷ್ಟು ಮಾತ್ರ ಮಹಿಳೆಯರಿದ್ದಾರೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಠಾಕೂರ್ ಸಮುದಾಯದ ಅಭ್ಯರ್ಥಿಗಳೇ ಗರಿಷ್ಠ ಸಂಖ್ಯೆಯಲ್ಲಿದ್ದಾರೆ. ಎರಡನೇ ಸ್ಥಾನದಲ್ಲಿ ಬ್ರಾಹ್ಮಣರಿದ್ದಾರೆ. ಉತ್ತರ ಪ್ರದೇಶದ ಪೂರ್ವ ಭಾಗದ ಕ್ಷೇತ್ರಗಳ ಟಿಕೆಟ್ ಘೋಷಣೆಯಾದಾಗ ಬ್ರಾಹ್ಮಣ ಸಮುದಾಯದ ಅಭ್ಯರ್ಥಿಗಳಿಗೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಟಿಕೆಟ್ ದೊರೆಯಬಹುದು.



ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಅವರು ಪಕ್ಷದ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಲಖನೌದಲ್ಲಿ ಶನಿವಾರ ಬಿಡುಗಡೆ ಮಾಡಿದರು–ಪಿಟಿಐ ಚಿತ್ರ

ಉತ್ತರಾಖಂಡ: ಟಿಕೆಟ್ ಘೋಷಣೆ ಇನ್ನೂ ಇಲ್ಲ

ಉತ್ತರಾಖಂಡ ವಿಧಾನಸಭೆಯ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲು ಎರಡೂ ರಾಷ್ಟ್ರೀಯ ಪಕ್ಷಗಳು (ಬಿಜೆಪಿ ಮತ್ತು ಕಾಂಗ್ರೆಸ್) ಕಾಯ್ದು ನೋಡುವ ತಂತ್ರದ ಮೊರೆ ಹೋದಂತೆ ಕಾಣಿಸುತ್ತಿದೆ. ಈ ರಾಜ್ಯದಲ್ಲಿ ಎರಡು ದಶಕಗಳಿಂದ ಕಾಂಗ್ರೆಸ್ ಮತ್ತು ಬಿಜೆಪಿ ಪರ್ಯಾಯವಾಗಿ ಆಳ್ವಿಕೆ ನಡೆಸುತ್ತಿವೆ.

ಬಿಜೆಪಿ ಮುಂದಿನ ವಾರ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸುವ ಸಾಧ್ಯತೆ ಇದೆ. ಮೂರು ಬಾರಿ ಮುಖ್ಯಮಂತ್ರಿಯನ್ನು ಬದಲಾಯಿಸಿರುವ ಬಿಜೆಪಿಗೆ ಆಡಳಿತ ವಿರೋಧಿ ಅಲೆಯ ಭೀತಿ ಇದೆ. ಕಾಂಗ್ರೆಸ್ ಪಕ್ಷವು ಹಿರಿಯ ನಾಯಕ ಹರೀಶ್ ರಾವತ್ ಅವರ ಮೇಲೆ ಅವಲಂಬಿತವಾಗಿದೆ. ಕಾಂಗ್ರೆಸ್‌ನ ವಿವಿಧ ಬಣಗಳ ನಡುವೆ ಕಚ್ಚಾಟವೂ ತೀವ್ರವಾಗಿದೆ.

ಗೋವಾದಲ್ಲಿಯೂ ಕಾಂಗ್ರೆಸ್ ಪರಿಸ್ಥಿತಿ ಹೀಗೆಯೇ ಇದೆ. ಆಡಳಿತಾರೂಢ ಬಿಜೆಪಿ, ಹಾಲಿ ಶಾಸಕರಲ್ಲಿ ಹಲವರಿಗೆ ಟಿಕೆಟ್ ನಿರಾಕರಿಸುವ ಬಗ್ಗೆ ಯೋಚಿಸುತ್ತಿದೆ.

ಗೋವಾದಲ್ಲಿ ಮೈತ್ರಿ ವಿಚಾರದಲ್ಲಿ ವಾಕ್ಸಮರ

ಕಾಂಗ್ರೆಸ್–ಟಿಎಂಸಿ ಟ್ವಿಟರ್ ಜಗಳ

ಪಣಜಿ: ಗೋವಾ ವಿಧಾನಸಭೆಗೆ ಫೆ.14ರಂದು ನಡೆಯಲಿರುವ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷಗಳ ನಡುವಿನ ಮೈತ್ರಿ ಮಾತುಕತೆ ದಾರಿ ತಪ್ಪಿದಂತೆ ತೋರುತ್ತಿದ್ದು, ಎರಡೂ ಪಕ್ಷಗಳ ಮುಖಂಡರು ಟ್ವಿಟರ್‌ನಲ್ಲಿ ವಾಕ್ಸಮರ ನಡೆಸುತ್ತಿದ್ದಾರೆ.

ಮೈತ್ರಿ ಮಾತುಕತೆ ನಡೆಯುತ್ತಿದೆ ಎಂಬುದಾಗಿ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರು ಈ ಮೊದಲು ನೀಡಿದ್ದ ಹೇಳಿಕೆಯನ್ನು ಗೋವಾ ಕಾಂಗ್ರೆಸ್ ಘಟಕದ ಉಸ್ತುವಾರಿ ದಿನೇಶ್ ಗುಂಡೂರಾವ್ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಳ್ಳಿಹಾಕಿದ್ದರು.

‘ರಾಹುಲ್ ಗಾಂಧಿ ಅವರ ನೇತೃತ್ವದ ಸಭೆಯಲ್ಲಿ ಟಿಎಂಸಿ ಜೊತೆಗಿನ ಮೈತ್ರಿ ಬಗ್ಗೆ ಚರ್ಚೆಯಾಯಿತು ಎಂಬುದು ಸತ್ಯವಲ್ಲ. ಗೋವಾದಲ್ಲಿ ಕಾಂಗ್ರೆಸ್ ಏಕಾಂಗಿಯಾಗಿ ಸ್ಪರ್ಧಿಸಿ ಅಧಿಕಾರಕ್ಕೆ ಮರಳುವ ವಿಶ್ವಾಸವಿದೆ’ ಎಂದು ವೇಣುಗೋಪಾಲ್ ಅವರು ಜನವರಿ 10ರಂದು ಟ್ವೀಟ್ ಮಾಡಿದ್ದರು. ಎರಡೂ ಪಕ್ಷಗಳ ನಡುವೆ ಮೈತ್ರಿ ಏರ್ಪಡುವ ಹಂತದಲ್ಲಿದೆ ಇದೆ ಎಂಬ ವದಂತಿ ಹಿನ್ನೆಲೆಯಲ್ಲಿ ಅವರು ಈ ಸ್ಪಷ್ಟೀಕರಣ ನೀಡಿದ್ದರು.

ಮಹುವಾ ಮೊಯಿತ್ರಾ

ದಿನೇಶ್ ಗುಂಡೂರಾವ್

ಗೋವಾದಲ್ಲಿ ಬಿಜೆಪಿಯನ್ನು ಸೋಲಿಸಬೇಕಾದರೆ, ಪಶ್ಚಿಮ ಬಂಗಾಳ ಮಾದರಿಯಲ್ಲಿ ಜಂಟಿಯಾಗಿ ಹೋರಾಟ ನಡೆಸಬೇಕು ಎಂಬುದಾಗಿ ಮೊಯಿತ್ರಾ ಟ್ವೀಟ್‌ನಲ್ಲಿ ಅಭಿಪ್ರಾಯಪಟ್ಟಿದ್ದರು. ‘ಮೈತ್ರಿ ಬಗ್ಗೆ ಕಾಂಗ್ರೆಸ್ ಎದುರು ಔಪಚಾರಿಕ ಪ್ರಸ್ತಾವವನ್ನು ಟಿಎಂಸಿ ಇರಿಸಿದೆ. ಆದರೆ, ಇದಕ್ಕೆ ಪ್ರತಿಕ್ರಿಯಿಸಲು ಕಾಂಗ್ರೆಸ್ ಸಮಯಾವಕಾಶ ಕೇಳಿದೆ’ ಎಂದಿದ್ದರು. ‘ಕಾಂಗ್ರೆಸ್‌ಗೆ ಮೈತ್ರಿ ಆಹ್ವಾನ ನೀಡಿ ಎರಡು ವಾರ ಕಳೆದಿವೆ. ಚಿದಂಬರಂ ಅವರು ಸುಮ್ಮನೆ ಹೇಳಿಕೆ ನೀಡುವ ಬದಲು ಪಕ್ಷದ ನಾಯಕತ್ವದ ಜೊತೆ ಸಮಾಲೋಚನೆ ನಡೆಸಿ ತಿಳಿದುಕೊಂಡು ಮಾತನಾಡಬೇಕು’ ಎಂದು ಮೊಯಿತ್ರಾ ಟ್ವೀಟ್‌ನಲ್ಲಿ ಹೇಳಿದ್ದರು.

ಮೊಯಿತ್ರಾ ಅವರ ಟ್ವೀಟ್‌ಗೆ ದಿನೇಶ್ ಗುಂಡೂರಾವ್ ವ್ಯಂಗ್ಯವಾಗಿ ಪ್ರತಿಕ್ರಿಯಿಸಿದ್ದಾರೆ. ‘ವೇಣುಗೋಪಾಲ್ ಅವರ ಉತ್ತರ ಸಾಕಾಗದಿದ್ದಲ್ಲಿ, ದೆಹಲಿಯ ಯಾವ ನಾಯಕರ ಉತ್ತರಕ್ಕೆ ಮಹುವಾ ಇನ್ನೂ ಕಾಯುತ್ತಿದ್ದಾರೆ? ಗೋವಾದಲ್ಲಿ ಕಾಂಗ್ರೆಸ್ ಅನ್ನು ದುರ್ಬಲಗೊಳಿಸಿ, ಬಿಜೆಪಿ ವಿರೋಧಿ ಮತಗಳನ್ನು ಒಡೆಯುವ ಅದ್ಭುತ ಕಾರ್ಯತಂತ್ರವನ್ನು ಟಿಎಂಸಿ ಹೊಂದಿದೆ. ಇದು ಯಾರಿಗೆ ನೆರವಾಗುತ್ತದೆ ಮೊಯಿತ್ರಾ ಅವರೇ’ ಎಂದು ಶನಿವಾರ ಬೆಳಿಗ್ಗೆ ಟ್ವೀಟ್‌ನಲ್ಲಿ ಪ್ರಶ್ನಿಸಿದ್ದಾರೆ.

ದಿನೇಶ್ ಗುಂಡೂರಾವ್ ಟ್ವೀಟ್‌ಗೆ ಮಧ್ಯಾಹ್ನದ ಹೊತ್ತಿಗೆ ಪ್ರತಿಕ್ರಿಯಿಸಿದ ಮಹುವಾ, ಟ್ವಿಟರ್ ಚರ್ಚೆಯನ್ನು ಕೊನೆಗೊಳಿಸುವ ಧಾಟಿಯಲ್ಲಿ ಮಾತನಾಡಿದ್ದಾರೆ. ‘ಬಿಜೆಪಿಯನ್ನು ಸೋಲಿಸಲು ಟಿಎಂಸಿ ಗಂಭೀರ ಯತ್ನ ಮಾಡುತ್ತಿದೆ. ಮಾಹಿತಿಯಿಲ್ಲದೆ ಸುಳ್ಳು ಹೇಳುವ ಧೈರ್ಯವು, ತರ್ಕಬದ್ಧ ಚಿಂತನೆ ಮತ್ತು ಪ್ರಬುದ್ಧತೆಗೆ ಪರ್ಯಾಯವಾಗುವುದಿಲ್ಲ. ಕಾಂಗ್ರೆಸ್‌ನ ವಿವಿಧ ನಾಯಕರ ಜೊತೆ ಮತ್ತಷ್ಟು ಟ್ವಿಟರ್ ಚರ್ಚೆಯಲ್ಲಿ ತೊಡಗಿಸಿಕೊಳ್ಳಲು ಯಾವುದೇ ಇಚ್ಛೆ ಇಲ್ಲ’ ಎಂದು ಅವರು ಹೇಳಿದ್ದಾರೆ.

ಬಿಜೆಪಿಯ ಇನ್ನಷ್ಟು ಶಾಸಕರ ಸೇರ್ಪಡೆ ಇಲ್ಲ: ಅಖಿಲೇಶ್

ಲಖನೌ: ಬಿಜೆಪಿ ಅಥವಾ ಬೇರೆ ಪಕ್ಷಗಳಿಂದ ಹೊರಬರಲಿರುವ ಯಾರನ್ನೂ ಸಮಾಜವಾದಿ ಪಕ್ಷಕ್ಕೆ ಸೇರಿಸಿಕೊಳ್ಳುವುದಿಲ್ಲ ಎಂದು ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಶನಿವಾರ ಹೇಳಿದರು. ಹೊರಗಿನವರಿಗೆ ತಮ್ಮ ಪಕ್ಷದಲ್ಲಿ ಜಾಗ ನೀಡಲು ಇನ್ನುಮುಂದೆ ಆಗುವುದಿಲ್ಲ ಎಂದು ಅವರು ಹೇಳಿದರು.

ಉತ್ತರ ಪ್ರದೇಶದ ಸಚಿವರೊಬ್ಬರು ಬಿಜೆಪಿ ತೊರೆದು ಎಸ್‌ಪಿ ಸೇರಲು ಸಿದ್ಧರಾಗಿದ್ದಾರೆ ಎಂಬ ಸುದ್ದಿ ಹೊರಬಿದ್ದ ಕಾರಣ ಅವರು ಈ ಹೇಳಿಕೆ ನೀಡಿದ್ದಾರೆ.

‘ಬಿಜೆಪಿಯ ಹಲವಾರು ಶಾಸಕರು ನಮ್ಮ ಜೊತೆ ಸಂಪರ್ಕದಲ್ಲಿ ಇದ್ದಾರೆ. ಅವರಲ್ಲಿ ಒಬ್ಬರು ಸಚಿವರು ಕೂಡಾ ಇದ್ದಾರೆ. ಅವರು ನಮ್ಮ ಪಕ್ಷದ ಟಿಕೆಟ್ ಆಕಾಂಕ್ಷಿ ಆಗಿದ್ದಾರೆ. ಆದರೆ ಅವರನ್ನು ಪಕ್ಷಕ್ಕೆ ಬರಮಾಡಿಕೊಳ್ಳುವ ಸ್ಥಿತಿಯಲ್ಲಿ ನಾವು ಇಲ್ಲ’ ಎಂದು ಎಸ್‌ಪಿಯ ಹಿರಿಯ ನಾಯಕರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ದೊಡ್ಡ ಸಂಖ್ಯೆಯಲ್ಲಿ ಬಿಜೆಪಿ ಮುಖಂಡರನ್ನು ಪಕ್ಷಕ್ಕೆ ಬರಮಾಡಿಕೊಳ್ಳುವುದರಿಂದ ನಮ್ಮ ಪಕ್ಷದ ಮುಖಂಡರಿಗೆ ಟಿಕೆಟ್ ಹಂಚಲು ತೊಂದರೆ ಆಗುತ್ತದೆ. ಪಕ್ಷನಿಷ್ಠ ಮುಖಂಡರನ್ನು ನಾವು ಕಡೆಗಣಿಸುವಂತಿಲ್ಲ’ ಎಂದು ಅವರು ಹೇಳಿದರು.


ಅಖಿಲೇಶ್ ಯಾದವ್

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಸಂಪುಟದಲ್ಲಿ ಸಚಿವರಾಗಿದ್ದ, ಹಿಂದುಳಿದ ವರ್ಗಗಳ ಪ್ರಭಾವಿ ನಾಯಕ ಸ್ವಾಮಿ ಪ್ರಸಾದ್ ಮೌರ್ಯ ಅವರು ಮತ್ತೊಬ್ಬ ಸಚಿವ ಮತ್ತು ಆರು ಶಾಸಕರ ಜೊತೆ ಎಸ್‌ಪಿಗೆ ಶುಕ್ರವಾರ ಸೇರಿದರು. ಅವರೆಲ್ಲರೂ ಎಸ್‌ಪಿ ಟಿಕೆಟ್‌ನಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸುವ ಸಾಧ್ಯತೆಗಳಿವೆ ಎನ್ನಲಾಗಿದೆ. ಮತ್ತೊಬ್ಬ ಸಚಿವ ದಾರಾ ಸಿಂಗ್ ಚೌಹಾನ್ ಇತ್ತೀಚೆಗಷ್ಟೇ ಯೋಗಿ ಆದಿತ್ಯನಾಥ ಅವರ ಸಂಪುಟಕ್ಕೆ ರಾಜೀನಾಮೆ ನೀಡಿದ್ದಾರೆ. ಅವರು ಕೂಡಾ ಎಸ್‌ಪಿಯಿಂದ ಸ್ಪರ್ಧಿಸಬಹುದು ಎನ್ನಲಾಗಿದೆ.

ಬಿಜೆಪಿ ಮುಖಂಡರು ದೊಡ್ಡ ಪ್ರಮಾಣದಲ್ಲಿ ಎಸ್‌ಪಿ ಸೇರಿದ್ದರಿಂದ ಮತ್ತು ಎಸ್‌ಪಿ ಟಿಕೆಟ್‌ನಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಲು ಬಯಸಿರುವುದರಿಂದ ಎಸ್‌ಪಿ ಮುಖಂಡರಲ್ಲಿ ಅಸಮಾಧಾನ ಉಂಟಾಗಿದೆ ಎಂದು ಮೂಲಗಳು ತಿಳಿಸಿವೆ.

ಎಸ್‌ಪಿ ಶಾಸಕರು ಇರುವ ಕ್ಷೇತ್ರಗಳಿಂದಲೂ ಸ್ಪರ್ಧಿಸುವ ಅವಕಾಶ ನೀಡುವಂತೆ ಬಿಜೆಪಿಯಿಂದ ಹೊರಬಂದಿರುವ ಮುಖಂಡರಲ್ಲಿ ಕೆಲವರು ಕೇಳಿಕೊಂಡಿದ್ದಾರೆ ಎನ್ನಲಾಗಿದೆ.

ರೂಪದರ್ಶಿಗೆ ಕಾಂಗ್ರೆಸ್ ಟಿಕೆಟ್: ಬಿಕಿನಿ ಚಿತ್ರಗಳು ವೈರಲ್

ಘನತೆಗೆ ಧಕ್ಕೆ: ಅಭ್ಯರ್ಥಿ ಅರ್ಚನಾ ಆಕ್ರೋಶ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರಪ್ರದೇಶದಹಸ್ತಿನಾಪುರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ಪಡೆದಿರುವ ನಟಿ ಹಾಗೂ ರೂಪದರ್ಶಿ ಅರ್ಚನಾ ಗೌತಮ್ ಅವರು ಬಿಕಿನಿ ತೊಟ್ಟಿರುವ ಹಳೆಯ ಫೋಟೊಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ತಮ್ಮ ಘನತೆಗೆ ಕುಂದು ತರುವ ಇಂತಹ ಯತ್ನಗಳನ್ನು ಕೈಬಿಡುವಂತೆ ಅರ್ಚನಾ ಅವರು ಮನವಿ ಮಾಡಿದ್ದಾರೆ.

‘ಮಿಸ್ ಬಿಕಿನಿ 2018’ ಹಾಗೂ ‘ಮಿಸ್ ಯುಪಿ 2014’ ಸ್ಪರ್ಧೆಗಳಲ್ಲಿ ಗೆದ್ದಿರುವ ಅರ್ಚನಾ ಅವರ ಹಳೆಯ ಫೋಟೊಗಳು, ಅವರಿಗೆ ಟಿಕೆಟ್ ಘೋಷಣೆಯಾಗುತ್ತಿದಂತೆಯೇ ಸಾಮಾಜಿಕ ಜಾಲತಾಣಗಳಲ್ಲಿ ತುಂಬಿಹೋಗಿವೆ. ಕೆಲವು ಜಾಲತಾಣ ಬಳಕೆದಾರರು ಈ ಚಿತ್ರಗಳಿಗೆ ಆಕ್ಷೇಪಾರ್ಹ ಪ್ರತಿಕ್ರಿಯೆಗಳನ್ನೂ ನೀಡಿದ್ದಾರೆ.

ತಮ್ಮ ವೃತ್ತಿ ಹಾಗೂ ರಾಜಕೀಯಗಳೆರಡನ್ನೂ ಮಿಶ್ರಣ ಮಾಡಬೇಡಿ ಎಂದು ಅರ್ಚನಾ ಅವರು ಜನರಲ್ಲಿ ಮನವಿ ಮಾಡಿದ್ದಾರೆ. ‘ಎರಡೂ ಭಿನ್ನವಾದ ಕ್ಷೇತ್ರಗಳು. ಜನರ ಸೇವೆ ಮಾಡಲು ನಾನು ರಾಜಕೀಯ ಸೇರಿದ್ದೇನೆ’ ಎಂದು ಅವರು ಹೇಳಿದ್ದಾರೆ.

ಮೀರಠ್‌ನ ನಗ್ಲಾ ಹರ್ಯೆರು ಗ್ರಾಮದಲ್ಲಿ ಜನಿಸಿರುವ ಅರ್ಚನಾ ಅವರು ಎಂಜಿನಿಯರಿಂಗ್ ಪದವಿ ಬಳಿಕ ಮುಂಬೈಗೆ ತೆರಳಿ ಹಿಂದಿ ಚಿತ್ರರಂಗದಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದರು. ಅವರು ಕೆಲವು ತಿಂಗಳ ಹಿಂದೆ ಕಾಂಗ್ರೆಸ್ ಸೇರಿದ್ದರು.

ಅರ್ಚನಾ ಗೌತಮ್–ಟ್ವಿಟರ್ ಚಿತ್ರ

‘ಪ್ರಿಯಾಂಕಾ ಗಾಂಧಿ ಅವರ ‘ನಾನು ಹುಡುಗಿ, ಹೋರಾಡಬಲ್ಲೆ’ ಘೋಷಣೆಯಿಂದ ಪ್ರೇರಣೆಗೊಂಡು ನಾನು ಕಾಂಗ್ರೆಸ್ ಸೇರಿದೆ’ ಎಂದು ಅರ್ಚನಾ ಹೇಳಿದ್ದಾರೆ. ರಾಜಕೀಯದಲ್ಲಿ ಧರ್ಮವನ್ನು ಬೆರೆಸುವ ಬಗ್ಗೆ ಅವರು ಕಳವಳ ವ್ಯಕ್ತಪಡಿಸಿದ್ದಾರೆ. ಎಲ್ಲ ಧರ್ಮಗಳನ್ನೂ ಸಮಾನವಾಗಿ ಗೌರವಿಸಲಾಗುವ ಸಮಾಜ ನಿರ್ಮಾಣದಲ್ಲಿ ತೊಡಗಿಸಿಕೊಳ್ಳುವ ಇಚ್ಛೆಯನ್ನು ಅವರು ವ್ಯಕ್ತಪಡಿಸಿದ್ದಾರೆ.

ಅರ್ಚನಾ ಅವರ ವರ್ಚಸ್ಸು ಹಾಳುಮಾಡುವ ಯತ್ನಗಳನ್ನು ಕಾಂಗ್ರೆಸ್ ಖಂಡಿಸಿದೆ. ‘ಈ ಹಿಂದೆ ಬಾಲಿವುಡ್ ಕಲಾವಿದರು ಚುನಾವಣೆಯಲ್ಲಿ ಸ್ಪರ್ಧಿಸಿದ್ದಾರೆ. ಅರ್ಚನಾ ಅವರ ಉಮೇದುವಾರಿಕೆ ಬಗ್ಗೆ ಕೆಲವರು ಗೊಂದಲಕ್ಕೊಳಗಾಗಿದ್ದಾರೆ. ತಮ್ಮ ಅಭ್ಯರ್ಥಿಯನ್ನು ಅವರು ಸೋಲಿಸಬಹುದು ಎಂದೂ ಭಾವಿಸಿದಂತೆ ತೋರುತ್ತದೆ’ ಎಂದು ಕಾಂಗ್ರೆಸ್ ಅಭಿಪ್ರಾಯಪಟ್ಟಿದೆ.

ಕಾಂಗ್ರೆಸ್–ಬಿಜೆಪಿ ವಾಕ್ಸಮರ

ಅರ್ಚನಾ ಅವರನ್ನು ಕಣಕ್ಕಿಳಿಸುವ ಕಾಂಗ್ರೆಸ್ ಪಕ್ಷದ ನಿರ್ಧಾರವು ಟೀಕೆ–ಪ್ರತಿಟೀಕೆಗೆ ಕಾರಣವಾಗಿದೆ. ಕಾಂಗ್ರೆಸ್ ಪಕ್ಷವು ‘ಕೀಳುಮಟ್ಟದ ಪ್ರಚಾರ’ದಲ್ಲಿ ತೊಡಗಿದೆ ಎಂದು ಬಿಜೆಪಿ ಆರೋಪಿಸಿದೆ. ಆದರೆ ಬಿಜೆಪಿಗೆ ತಿರುಗೇಟು ನೀಡಿರುವ ಕಾಂಗ್ರೆಸ್, ‘ಕಲಾವಿದರೊಬ್ಬರ ರಾಜಕೀಯ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ’ ಎಂದು ತನ್ನ ನಿರ್ಧಾರವನ್ನು ಸಮರ್ಥಿಸಿಕೊಂಡಿದೆ.

‘ಕಣಕ್ಕಿಳಿಸಲು ಕಾಂಗ್ರೆಸ್ ಬಳಿ ಸೂಕ್ತ ಅಭ್ಯರ್ಥಿಗಳೇ ಇಲ್ಲ. ಕೀಳು ಮಟ್ಟದ ಪ್ರಚಾರ ಪಡೆಯಲು ಪಕ್ಷವು ಯಾರಿಗಾದರೂ ಟಿಕೆಟ್ ನೀಡುತ್ತದೆ. ಇಂತಹ ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದರ ಹಿಂದೆ ಜನಸೇವೆಯ ಉದ್ದೇಶ ಇಲ್ಲ. ಕಾಂಗ್ರೆಸ್‌ನವರು ಗಂಭೀರವಾಗಿ ಇಲ್ಲ. ಇದು ಪ್ರಬುದ್ಧತೆಯ ಕೊರತೆಯನ್ನು ತೋರಿಸುತ್ತದೆ’ ಎಂದು ಉತ್ತರ ಪ್ರದೇಶ ಬಿಜೆಪಿ ಘಟಕದ ವಕ್ತಾರ ರಾಕೇಶ್ ತ್ರಿಪಾಠಿ ಹೇಳಿದ್ದಾರೆ.

ಅರ್ಚನಾ ಅವರು ಬಿಕಿನಿ ಧರಿಸಿದ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ಬಳಿಕ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

ರಾಜಕೀಯದಲ್ಲಿ ಆಸಕ್ತಿಯಿರುವ ಕಲಾವಿದರನ್ನು ಚುನಾವಣಾ ಅಭ್ಯರ್ಥಿಯಾಗಿ ಕಣಕ್ಕೆ ಇಳಿಸುವುದರಿಂದ ಏನಾದರೂ ತೊಂದರೆಯಿದೆಯೇ ಎಂದು ಉತ್ತರ ಪ್ರದೇಶ ಕಾಂಗ್ರೆಸ್ ಘಟಕದ ವಕ್ತಾರ ಅಶೋಕ್ ಸಿಂಗ್ ಪ್ರಶ್ನಿಸಿದ್ದಾರೆ. ‘ಬಿಜೆಪಿಯಲ್ಲಿ ಸಾಕಷ್ಟು ಕಲಾವಿದರಿದ್ದಾರೆ. ಒಬ್ಬರು ಸಚಿವರೂ ಆಗಿದ್ದಾರೆ. ಜನಸೇವೆ ಮಾಡಲು ಕಲಾವಿದರು ರಾಜಕೀಯಕ್ಕೆ ಬರುವುದು ಒಳ್ಳೆಯ ಬೆಳವಣಿಗೆ. ಇದನ್ನು ಪ್ರಶಂಸಿಸಬೇಕು. ಇಂತಹ ಆರೋಪವು ಬಿಜೆಪಿಯ ಕೆಟ್ಟ ಮನಃಸ್ಥಿತಿ ಬಿಂಬಿಸುತ್ತದೆ’ ಎಂದು ಅಶೋಕ್ ಸಿಂಗ್ ಹೇಳಿದ್ದಾರೆ.

‘ಮಾನಸಿಕವಾಗಿ ದಿವಾಳಿಯಾಗಿರುವ ಕಾಂಗ್ರೆಸ್ ಪಕ್ಷದಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ’ ಎಂದು ಅಖಿಲ ಭಾರತ ಹಿಂದೂ ಮಹಾಸಭಾ ಮತ್ತು ಸಂತ ಮಹಾಸಭಾ ಮುಖ್ಯಸ್ಥ ಸ್ವಾಮಿ ಚಕ್ರಪಾಣಿ ಹೇಳಿದ್ದಾರೆ.

ಉತ್ತರ ಪ್ರದೇಶ: ಎಸ್‌ಪಿ ಜತೆಗೆ ಎನ್‌ಸಿಪಿ ಮೈತ್ರಿ

ಮುಂಬೈ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಸಮಾಜವಾದಿ ಪಕ್ಷದ ಜತೆಗೆ ಎನ್‌ಸಿಪಿಯ ಸೀಟು ಹಂಚಿಕೆ ಮಾತುಕತೆ ಪ್ರಗತಿಯಲ್ಲಿದೆ ಎಂದು ಎನ್‌ಸಿಪಿ ವಕ್ತಾರ ನವಾಬ್ ಮಲಿಕ್ ಶನಿವಾರ ಹೇಳಿದ್ಧಾರೆ.

ಎನ್‌ಸಿಪಿಗೆ ಒಂದು ಕ್ಷೇತ್ರ ಬಿಟ್ಟುಕೊಡುವುದು ಅಂತಿಮವಾಗಿದೆ. ಇತರ ಕ್ಷೇತ್ರಗಳ ಬಗ್ಗೆ ಮಾತುಕತೆ ಮುಂದುವರಿದಿದೆ ಎಂದು ಅವರು ತಿಳಿಸಿದ್ದಾರೆ.

ಉತ್ತರ ಪ್ರದೇಶದಲ್ಲಿ ಬಿಜೆಪಿಯ ಸ್ಥಿತಿ 1993ರಲ್ಲಿ ಇದ್ದ ಹಾಗೆ ಈಗ ಇದೆ. 1993ರಲ್ಲಿ ಬಿಜೆಪಿ ಅಧಿಕಾರ ಕಳೆದುಕೊಂಡಿತ್ತು. ಮುಲಾಯಂ ಸಿಂಗ್ ನೇತೃತ್ವದ ಎಸ್‌ಪಿ ಮತ್ತು ಕಾನ್ಶೀರಾಂ ನೇತೃತ್ವದ ಬಿಎಸ್‌ಪಿ ಮೈತ್ರಿ ಮಾಡಿಕೊಂಡಿದ್ದವು. ಚುನಾವಣೆಯಲ್ಲಿ ಬಿಜೆಪಿ ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿದರೂ, ಇತರ ಪಕ್ಷಗಳ ಬೆಂಬಲದಲ್ಲಿ ಎಸ್‌ಪಿ–ಬಿಎಸ್‌ಪಿ ಮೈತ್ರಿಕೂಟವು ಸರ್ಕಾರ ರಚಿಸಿತ್ತು.

ನವಾಬ್ ಮಲಿಕ್

‘ಉತ್ತರ ಪ್ರದೇಶದ ಜನರು ಬಿಜೆಪಿ ಶೈಲಿಯ ರಾಜಕಾರಣವನ್ನು ತಿರಸ್ಕರಿಸಿದ್ಧಾರೆ. ದಲಿತರು, ಹಿಂದುಳಿದ ವರ್ಗಗಳ ಜನರು, ರೈತರು, ಕಾರ್ಮಿಕರು ಎಲ್ಲರೂ ಬಿಜೆಪಿಯಿಂದ ದೂರ ಸರಿದಿದ್ದಾರೆ’ ಎಂದು ಮಲಿಕ್ ಹೇಳಿದ್ದಾರೆ.

ಚುನಾವಣೆ ಘೋಷಣೆ ಆಗಿರುವ ಇತರ ರಾಜ್ಯಗಳ ಮೈತ್ರಿ ಬಗ್ಗೆಯೂ ಮಲಿಕ್ ಮಾತನಾಡಿದ್ದಾರೆ. ಮಣಿಪುರದಲ್ಲಿ ಕಾಂಗ್ರೆಸ್ ಜತೆಗೆ ಎನ್‌ಸಿಪಿ ಮೈತ್ರಿ ಮಾಡಿಕೊಂಡಿದೆ. ಗೋವಾದಲ್ಲಿ ಸೀಟು ಹಂಚಿಕೆ ಮಾತುಕತೆಯಲ್ಲಿ ಯಾವುದೇ ಪ್ರಗತಿ ಆಗಿಲ್ಲ. ಹಾಗಾಗಿ, ಎನ್‌ಸಿಪಿ ಏಕಾಂಗಿಯಾಗಿಯೇ ಸ್ಪರ್ಧಿಸುವ ಬಗ್ಗೆ ಯೋಚಿಸುತ್ತಿದೆ ಎಂದು ಅವರು ಹೇಳಿದ್ದಾರೆ.

ಅಯೋಧ್ಯೆ, ಮಥುರಾ ಬಿಜೆಪಿಗೆ ಸುರಕ್ಷಿತವಲ್ಲ

● ಸಂಜಯ ಪಾಂಡೆ

ಲಖನೌ: ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಗೋರಖಪುರದಿಂದ ಸ್ಪರ್ಧಿಸುವುದು ಗೋರಖಪುರ–ಬಸ್ತಿ ವಿಭಾಗದ 40ಕ್ಕೂ ಹೆಚ್ಚು ಕ್ಷೇತ್ರಗಳ ಮೇಲೆ ಪರಿಣಾಮ ಬೀರಲಿದೆ. ಈ ಭಾಗದ ಹಲವು ಮುಖಂಡರು ಪಕ್ಷ ಬದಲಾಯಿಸಿದ್ದಾರೆ. ಹಾಗಾಗಿ, ಪಕ್ಷದ ಕಾರ್ಯಕರ್ತರ ಆತ್ಮಸ್ಥೈರ್ಯ ವೃದ್ಧಿಸಲು ಪ್ರಬಲ ಅಭ್ಯರ್ಥಿಯೊಬ್ಬರು ಇಲ್ಲಿಂದ ಸ್ಪರ್ಧಿಸುವ ಅಗತ್ಯ ಇತ್ತು ಎಂದು ಬಿಜೆಪಿಯ ಸ್ಥಳೀಯ ಮುಖಂಡರೊಬ್ಬರು ಹೇಳಿದ್ದಾರೆ.

ಅಯೋಧ್ಯೆ ಮತ್ತು ಮಥುರಾ ‘ಸುರಕ್ಷಿತ ಕ್ಷೇತ್ರಗಳು’ ಅಲ್ಲ ಎಂಬ ಭಾವನೆ ಪಕ್ಷದಲ್ಲಿ ಇರುವುದರಿಂದಲೇ ಯೋಗಿ ಅವರು ಗೋರಖಪುರವನ್ನು ಆಯ್ದುಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ರಾಮದೇಗುಲಕ್ಕೆ ಸಾಗುವ ಕಿರಿದಾದ ದಾರಿಯ ಇಕ್ಕೆಲಗಳಲ್ಲಿ ಇದ್ದ ಹತ್ತಾರು ಅಂಗಡಿಗಳನ್ನು ರಾಮ ಮಂದಿರ ನಿರ್ಮಾಣಕ್ಕಾಗಿ ತೆರವು ಮಾಡಲಾಗಿದೆ. ಇದರಿಂದಾಗಿ, ಇಲ್ಲಿನ ವರ್ತಕ ಸಮುದಾಯವು ಬಿಜೆಪಿ ವಿರುದ್ಧ ತಿರುಗಿ ಬೀಳುವ ಸಾಧ್ಯತೆ ಇದೆ. ತೆರವುಗೊಳಿಸುವ ಸಂದರ್ಭದಲ್ಲಿ ವರ್ತಕರು ಪ್ರತಿಭಟನೆಯನ್ನೂ ಮಾಡಿದ್ದರು. ಬೇರೆಡೆಗೆ ಜಾಗ ಕೊಡಬೇಕು ಎಂಬ ಬೇಡಿಕೆಯನ್ನೂ ಇಟ್ಟಿದ್ದರು. ಪಟ್ಟಣದ ವಿಸ್ತರಣೆಗೆ ಭೂಸ್ವಾಧೀನಕ್ಕೂ ವಿರೋಧ ವ್ಯಕ್ತವಾಗಿತ್ತು ಎಂದು ಮೂಲಗಳು ಹೇಳಿವೆ.

ಯೋಗಿ ಅವರು ಅಯೋಧ್ಯೆಯಿಂದ ಸ್ಪರ್ಧಿಸಬಾರದು, ಬದಲಿಗೆ ಅವರು ಗೋರಖಪುರವನ್ನೇ ಆಯ್ದುಕೊಳ್ಳಬೇಕು ಎಂದು ತಾತ್ಕಾಲಿಕ ರಾಮ ಮಂದಿರದ ಮುಖ್ಯ ಅರ್ಚಕ ಸತ್ಯೇಂದ್ರ ದಾಸ್ ಇತ್ತೀಚೆಗೆ ಹೇಳಿದ್ದರು.

ಶ್ರೀಕೃಷ್ಣ ಜನ್ಮಭೂಮಿಗೆ ಸಂಬಂಧಿಸಿ ಹೋರಾಟ ಮಾಡಲು ಬಿಜೆಪಿ ಮುಂದಾಗಿದ್ದರೂ ಮಥುರಾ ಕ್ಷೇತ್ರವು ಬಿಜೆಪಿಗೆ ಸುರಕ್ಷಿತವಲ್ಲ. ಏಕೆಂದರೆ, ಮಥುರಾದಲ್ಲಿ ಗಣನೀಯ ಸಂಖ್ಯೆಯ ಬ್ರಾಹ್ಮಣ ಮತದಾರರಿದ್ದಾರೆ. ಕಾಂಗ್ರೆಸ್ ಮುಖಂಡ ಪ್ರದೀಪ್ ಮಥುರಾ ಅವರು ಈ ಕ್ಷೇತ್ರದಲ್ಲಿ ಭಾರಿ ಜನಪ್ರಿಯತೆ ಹೊಂದಿದ್ದಾರೆ. ಅಲ್ಲದೆ, ಈ ಹಿಂದೆ ಹಲವು ಬಾರಿ ಅವರು ಈ ಕ್ಷೇತ್ರದಲ್ಲಿ ಗೆದ್ದಿದ್ದಾರೆ.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಗೋರಖಪುರದ ಗೋರಖನಾಥ ದೇವಸ್ಥಾನದಲ್ಲಿ ಶನಿವಾರ ಖಿಚಡಿ ಅರ್ಪಿಸಿದರು–ಪಿಟಿಐ ಚಿತ್ರ

ನುಡಿ–ಕಿಡಿ

ಸಮಾಜವಾದಿ ಪಕ್ಷ ಮತ್ತು ರಾಷ್ಟ್ರೀಯ ಲೋಕ ದಳದ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಗಮನಿಸಿದರೆ, ಅಖಿಲೇಶ್ ಯಾದವ್ ಅವರು ಅಪರಾಧಿಗಳು, ಗೂಂಡಾಗಳು ಮತ್ತು ಗಲಭೆಕೋರರನ್ನು ಕೈಬಿಡಲು ಸಿದ್ಧರಿಲ್ಲ ಎಂಬ ಸಂದೇಶ ಸ್ಪಷ್ಟವಾಗುತ್ತದೆ. ಎಸ್‌ಪಿ–ಆರ್‌ಎಲ್‌ಡಿ ಮೈತ್ರಿಯ ನಿಜ ಸ್ವರೂಪದ ಬಗ್ಗೆ ಬಿಜೆಪಿ ಅಭಿಯಾನ ನಡೆಸಲಿದೆ. ಜನರಿಗೆ ಸಂದೇಶವನ್ನು ನೀಡಲಿದೆ

ಕೇಶವ ಪ್ರಸಾದ್ ಮೌರ್ಯ, ಉತ್ತರ ಪ್ರದೇಶ ಉಪ ಮುಖ್ಯಮಂತ್ರಿ

ಬಿಜೆಪಿ ಅಧಿಕಾರಕ್ಕೆ ಬಂದರೆ ಮುಸ್ಲಿಮರನ್ನು ದೇಶದಿಂದ ಹೊರಗೆ ಹಾಕಲಿದೆ ಎಂದು ಕಾಂಗ್ರೆಸ್, ಎಸ್‌ಪಿ ಮತ್ತು ಬಿಎಸ್‌ಪಿ ಸೇರಿದಂತೆ ಎಲ್ಲ ವಿರೋಧ ಪಕ್ಷಗಳು ಆರ್‌ಎಸ್‌ಎಸ್ ಮತ್ತು ಬಿಜೆಪಿ ವಿರುದ್ಧ ಅಪಪ್ರಚಾರ ಮಾಡುತ್ತಲೇ ಬಂದಿವೆ. ಕಳೆದ ಏಳು ವರ್ಷಗಳಲ್ಲಿ ಎಷ್ಟು ಮುಸ್ಲಿಮರನ್ನು ದೇಶದಿಂದ ಹೊರಕ್ಕೆ ದಬ್ಬಲಾಗಿದೆ?

ಆರ್‌ಎಸ್‌ಎಸ್‌ನ ಮುಸ್ಲಿಂ ಘಟಕ

ಜೋಗಿಂದರ್ ಮಾನ್ ಎಎಪಿ ಸೇರ್ಪಡೆ

ಚಂಡೀಗಡ (ಪಿಟಿಐ): ಪಂಜಾಬ್ ಮಾಜಿ ಸಚಿವ ಜೋಗಿಂದರ್ ಸಿಂಗ್ ಮಾನ್ ಅವರು ಆಮ್ ಆದ್ಮಿ ಪಕ್ಷಕ್ಕೆ (ಎಎಪಿ) ಶನಿವಾರ ಸೇರ್ಪಡೆಯಾದರು. ಶುಕ್ರವಾರವಷ್ಟೇ ಅವರು ಕಾಂಗ್ರೆಸ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು.

ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಜೋಗಿಂದರ್ ಮಾನ್ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು.

ಮಾನ್ ಅವರ ಸೇರ್ಪಡೆ ಕುರಿತು ಎಎಪಿ ನಾಯಕ ರಾಘವ ಛಡ್ಡಾ ಅವರು ಟ್ವೀಟ್ ಮಾಡಿದ್ದಾರೆ. ‘ಮಾನ್ ಅವರ ಸೇರ್ಪಡೆಯಿಂದ ಎಎಪಿ ಪಂಜಾಬ್ ಘಟಕಕ್ಕೆ ದೊಡ್ಡ ಶಕ್ತಿ ಬಂದಿದೆ’ ಎಂದು ಹೇಳಿದ್ದಾರೆ. ಜೊತೆಗೆ, ಕೇಜ್ರಿವಾಲ್ ಅವರು ಜೋಗಿಂದರ್ ಮಾನ್ ಅವರನ್ನು ಪಕ್ಷಕ್ಕೆ ಬರಮಾಡಿಕೊಳ್ಳುತ್ತಿರುವ ಚಿತ್ರವೊಂದನ್ನೂ ಪೋಸ್ಟ್ ಮಾಡಿದ್ದಾರೆ.

ಪರಿಶಿಷ್ಟ ಜಾತಿ ಸಮುದಾಯದ ಪ್ರಬಲ ನಾಯಕರಾದ ಮಾನ್ ಅವರು, ಪರಿಶಿಷ್ಟ ಜಾತಿಗಳ ವಿದ್ಯಾರ್ಥಿ ವೇತನ ಹಗರಣ ಕುರಿತು ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎಂಬ ಕಾರಣಕ್ಕೆ ಅಸಮಾಧಾನ ಹೊಂದಿದ್ದರು.

ಹಲ್ಲೆ: 6 ಮಂದಿ ಬಂಧನ

ಜಯಪುರ (ಮೈಸೂರು ತಾಲ್ಲೂಕು):ಪಾನಿಪುರಿ ತಿನ್ನಲು ಕೇರಿಗೆ ಬಂದರು ಎಂಬ ಕಾರಣದಿಂದ ಜಯಪುರ ಹೋಬಳಿಯ ಅರಸಿನಕೆರೆಯಲ್ಲಿ ಪರಿಶಿಷ್ಟರ ಮನೆಗೆ ನುಗ್ಗಿ ಹಲ್ಲೆ ನಡೆಸಲಾಗಿದ್ದು, ಈ ಸಂಬಂಧ ಆರು ಮಂದಿಯನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಗ್ರಾಮದ ಮೂರ್ತಿ, ಸಚ್ಚಿನ್, ನವೀನ್, ಮಹದೇವಸ್ವಾಮಿ, ಚಂದನ್, ಸಂತೋಷ್ ಬಂಧಿತರು. ಹಲ್ಲೆಗೀಡಾದ ಸೌಭಾಗ್ಯ, ದಿಲೀಪ, ಚಂದನ, ಮಧುಕರ, ಪ್ರಸನ್ನ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನಾರಾಯಣ ಗುರು ಸ್ತಬ್ಧಚಿತ್ರ ತಿರಸ್ಕಾರ: ಖಂಡನೆ

ಬೆಂಗಳೂರು: ಸಮಾಜ ಸುಧಾರಕ ಬ್ರಹ್ಮಶ್ರೀ ನಾರಾಯಣ ಗುರುಗಳ ಸ್ತಬ್ಧಚಿತ್ರವನ್ನು ಈ ವರ್ಷದ ಗಣರಾಜ್ಯೋತ್ಸವ ಪರೇಡ್‌ಗೆ ಕೇಂದ್ರದ ಗಣರಾಜ್ಯೋತ್ಸವ ಸಮಿತಿ ತಿರಸ್ಕರಿಸಿರುವುದನ್ನು ಖಂಡಿಸಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, ‘ಇದು ನಮ್ಮ ನೆಲದ ನಂಬಿಕೆಗಳಿಗೆ ಮಾಡಿರುವ ಅವಮಾನ’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಶನಿವಾರ ಸರಣಿ ಟ್ವೀಟ್ ಮಾಡಿರುವ ಅವರು, ‘ಸ್ತ್ರೀ ಸಮಾನತೆಯನ್ನು ಪ್ರತಿಪಾದಿಸಿದ ಮತ್ತು ಮನುಷ್ಯರೆಲ್ಲ ಒಂದೇ, ಒಂದೇ ಜಾತಿ, ಒಂದೇ ಮತ ಮತ್ತು ಒಬ್ಬನೇ ದೇವರು ಎಂಬ ಸಂದೇಶದೊಂದಿಗೆ ಅರಿವಿನ ಬೆಳಕು ಮೂಡಿಸಿದವರು ನಾರಾಯಣ ಗುರುಗಳು. ಅವರ ಚಿತ್ರವಿದ್ದ ಸ್ತಬ್ಧಚಿತ್ರವನ್ನು ತಿರಸ್ಕರಿಸಿರುವುದು ಕ್ಷಮಾರ್ಹವಲ್ಲದ ತಪ್ಪು’ ಎಂದಿದ್ದಾರೆ.

ಭಾರತೀಯ ಸುಧಾರಣಾ ಪರಂಪರೆಯ ಬಗ್ಗೆ ತಿಳಿವಳಿಕೆ ಇಲ್ಲದ ಅಜ್ಞಾನದ ಪರಮಾವಧಿ ಇದು. ಆಯ್ಕೆ ಸಮಿತಿಯಲ್ಲಿ ಇಂಥಹ ಅಜ್ಞಾನಿಗಳಿರುವುದು ದೇಶಕ್ಕೆ ಶೋಭೆಯಲ್ಲ. ಕೂಡಲೇ ಈ ತಪ್ಪನ್ನು ಸರಿಪಡಿಸಬೇಕು. ನಾರಾಯಣ ಗುರುಗಳ ಚಿತ್ರವಿರುವ ಸ್ತಬ್ಧಚಿತ್ರವನ್ನು ಗಣರಾಜ್ಯೋತ್ಸವ ಪರೇಡ್‌ಗೆ ಆಯ್ಕೆ ಮಾಡಲು ಕೇಂದ್ರದ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಕೇರಳ ಪ್ರಸ್ತಾವನೆ ತಿರಸ್ಕರಿಸಿದ್ದ ಸಮಿತಿ

ತಿರುವನಂತರಪುರ: ಗಣರಾಜ್ಯೋತ್ಸವ ಪರೇಡ್‌ಗಾಗಿ ಕೇರಳ ಸರ್ಕಾರ ಸಲ್ಲಿಸಿದ್ದ ಸ್ತಬ್ಧಚಿತ್ರ (ಟ್ಯಾಬ್ಲೊ) ಪ್ರಸ್ತಾವವನ್ನು ಕೇಂದ್ರದ ಗಣರಾಜ್ಯೋತ್ಸವ ಸಮಿತಿ ತಿರಸ್ಕರಿಸಿದೆ. ಕೊಲ್ಲಂ ಜಿಲ್ಲೆಯ ಚಡಯಮಂಗಲಂನಲ್ಲಿ ನಿರ್ಮಾಣಗೊಂಡಿರುವ ಜಟಾಯುಪುತ್ರ ಪಾರ್ಕ್ ಮತ್ತು ಸಮಾಜ ಸುಧಾರಕ ನಾರಾಯಣ ಗುರು ಅವರನ್ನೊಳಗೊಂಡ ಟ್ಯಾಬ್ಲೊವನ್ನು ಸಿದ್ಧಪಡಿಸುವ ಬಗ್ಗೆ ಕೇರಳ ಸರ್ಕಾರ ಪ್ರಸ್ತಾವನೆ ಸಲ್ಲಿಸಿತ್ತು. ಇದನ್ನು ತಿರಸ್ಕರಿಸಿದ್ದ ಸಮಿತಿಯು, ಆದಿ ಶಂಕರರ ಜೀವನದ ಬಗ್ಗೆ ಇರುವ ಟ್ಯಾಬ್ಲೊ ಸಿದ್ಧಗೊಳಿಸುವಂತೆ ಸೂಚಿಸಿತ್ತು.

ಚುನಾವಣಾ ಕಣದಲ್ಲಿ...

- **ಪ್ರಧಾನಿ ಸಂವಾದ:** ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಲೋಕಸಭಾ ಕ್ಷೇತ್ರ ಉತ್ತರ ಪ್ರದೇಶದ ವಾರಾಣಸಿಯ ಬಿಜೆಪಿ ಸದಸ್ಯರ ಜತೆಗೆ ಮಂಗಳವಾರ (ಜ. 18) ಸಂವಾದ ನಡೆಸಲಿದ್ದಾರೆ. ಪಕ್ಷದ ಕಾರ್ಯಕರ್ತರನ್ನು ಚುನಾವಣೆಗೆ ಸಜ್ಜುಗೊಳಿಸುವ ಪ್ರಯತ್ನ ಇದು ಎಂದು ಮೂಲಗಳು ಹೇಳಿವೆ. ಈ ಸಂವಾದವು ವರ್ಚುವಲ್ ರೂಪದಲ್ಲಿ ಇರುವ ಸಾಧ್ಯತೆ ಹೆಚ್ಚು. ಈ ಸಂವಾದಕ್ಕೆ ಸಂಬಂಧಿಸಿ ಕಾರ್ಯಕರ್ತರು ತಮ್ಮ ಸಲಹೆ ಮತ್ತು ಚಿಂತನೆಗಳನ್ನು ನಮೋ ಆ್ಯಪ್ ಮೂಲಕ ಹಂಚಿಕೊಳ್ಳಬಹುದು ಎಂದು ಉತ್ತರ ಪ್ರದೇಶ ಬಿಜೆಪಿ ಘಟಕವು ಹೇಳಿದೆ.
- **ಕಾಂಗ್ರೆಸ್ ಶಾಸಕ ಬಿಜೆಪಿಗೆ:** ಟಿಕೆಟ್ ನಿರಾಕರಿಸಿದ ಕಾರಣ ಮೋಗಾ ಶಾಸಕ ಹರಜೋತ್ ಕಮಲ್ ಅವರು ಕಾಂಗ್ರೆಸ್ ತೊರೆದು ಬಿಜೆಪಿಗೆ ಶನಿವಾರ ಸೇರಿದ್ದಾರೆ. ಬಾಲಿವುಡ್ ನಟ ಸೋನ್ ಸೂದ್ ಅವರ ತಂಗಿ ಮಾಳವಿಕಾ ಸೂದ್ ಅವರಿಗೆ ಈ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ನೀಡಿದೆ. 21 ವರ್ಷದಿಂದ ಪಕ್ಷಕ್ಕಾಗಿ ಕೆಲಸ ಮಾಡಿದ್ದರೂ ಪಕ್ಷವು ತಮ್ಮನ್ನು ನಿರ್ಲಕ್ಷಿಸಿದೆ ಎಂದು ಕಮಲ್ ಹೇಳಿದ್ಧಾರೆ. ಮಾಳವಿಕಾ ಅವರ ಅರ್ಹತೆ ಏನು, ಸೋನ್ ಸೂದ್ ಅವರ ಸೋದರಿ ಎಂಬುದು ಮಾತ್ರವಲ್ಲವೇ ಎಂದು ಅವರು ಪ್ರಶ್ನಿಸಿದ್ದಾರೆ
- **ಎಸ್‌ಕೆಎಂ ಭಾಗವಲ್ಲ:** ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ರೈತ ಸಂಘಟನೆಗಳು ಸಂಯುಕ್ತ ಕಿಸಾನ್ ಮೋರ್ಚಾದ (ಎಸ್‌ಕೆಎಂ) ಭಾಗವಾಗಿ ಉಳಿಯುವುದಿಲ್ಲ ಎಂದು ಎಸ್‌ಕೆಎಂ ಹೇಳಿದೆ. ರೈತ ಸಂಘಗಳು ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ಎಸ್‌ಕೆಎಂ ಒಪ್ಪುವುದಿಲ್ಲ. ಚುನಾವಣೆಯಲ್ಲಿ ಸ್ಪರ್ಧಿಸಿದ ಸಂಘಗಳ ಜತೆಗೆ ಎಸ್‌ಕೆಎಂನ ಸಂಬಂಧ ಯಾವ ರೀತಿ ಇರಲಿದೆ ಎಂಬುದನ್ನು ಮುಂದಿನ ದಿನಗಳಲ್ಲಿ ನಿರ್ಧರಿಸಲಾಗುವುದು ಎಂದು ಎಸ್‌ಕೆಎಂ ಮುಖಂಡ ಯದುವೀರ್ ಸಿಂಗ್ ಹೇಳಿದ್ದಾರೆ
- **ಎಸ್‌ಪಿಗೆ ನೋಟಿಸ್:** ವರ್ಚುವಲ್ ರ‍್ಯಾಲಿಯ ಹೆಸರಿನಲ್ಲಿ ಸಾವಿರಾರು ಜನರನ್ನು ಸೇರಿಸಿ ಕೋವಿಡ್ ನಿಯಮಾವಳಿ ಉಲ್ಲಂಘಿಸಿದ ಆರೋಪದಲ್ಲಿ ಸಮಾಜವಾದಿ ಪಕ್ಷಕ್ಕೆ ಚುನಾವಣಾ ಆಯೋಗವು ನೋಟಿಸ್ ನೀಡಿದೆ. ನೋಟಿಸ್ ಸಿಕ್ಕ 24 ತಾಸುಗಳಲ್ಲಿ ಉತ್ತರ ಸಲ್ಲಿಸಬೇಕು ಎಂದು ಆಯೋಗವು ಸೂಚಿಸಿದೆ. ಬಿಜೆಪಿ ತೊರೆದ ಸ್ವಾಮಿ ಪ್ರಸಾದ್ ಮೌರ್ಯ ಮತ್ತು ಇತರರ ಎಸ್‌ಪಿ ಸೇರ್ಪಡೆ ಕಾರ್ಯಕ್ರಮದಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು ಎನ್ನಲಾಗಿದೆ

ಪಂಜಾಬ್: 86 ಅಭ್ಯರ್ಥಿಗಳು ಅಖೈರು

ಕಾಂಗ್ರೆಸ್ ಮೊದಲ ಪಟ್ಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಂಜಾಬ್ ವಿಧಾನಸಭಾ ಚುನಾವಣೆಗೆ 86 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಕಾಂಗ್ರೆಸ್ ಶನಿವಾರ ಬಿಡುಗಡೆ ಮಾಡಿದೆ. ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರು ಚಮಕೌರ್ ಸಾಹಿಬ್‌ನಿಂದ, ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಅವರು ಅಮೃತಸರ ಪೂರ್ವ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ.

ಚುನಾವಣಾ ಪ್ರಣಾಳಿಕೆ ಸಮಿತಿಯ ಮುಖ್ಯಸ್ಥ ಹಾಗೂ ರಾಜ್ಯಸಭಾ ಸದಸ್ಯ ಪ್ರತಾಪ್ ಬಾಜ್ವಾ ಅವರು ಕೈದಾನ್ ಸ್ಪರ್ಧಿಸಲಿದ್ದಾರೆ. ಪಟ್ಟಿಯಲ್ಲಿ ನಾಲ್ವರು ಮಹಿಳೆಯರಿಗೆ ಸ್ಥಾನ ನೀಡಲಾಗಿದೆ. ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ಸುನಿಲ್ ಜಾಖಡ್ ಅವರ ಹೆಸರು ಮೊದಲ ಪಟ್ಟಿಯಲ್ಲಿ ಇಲ್ಲ. ಆದರೆ ಅವರ ಸಂಬಂಧಿ ಹಾಗೂ ಯುವಕಾಂಗ್ರೆಸ್ ಮುಖಂಡ ಸಂದೀಪ್ ಜಾಖಡ್ ಅವರನ್ನು ಅಬೋಹರ್ ಕ್ಷೇತ್ರದಿಂದ ಕಣಕ್ಕಿಳಿಸಲಾಗಿದೆ.

ಚನ್ನಿ ಅವರು ತಮ್ಮ ಹಾಲಿ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ. ಅವರನ್ನು ಎರಡು ಕಡೆ ಕಣಕ್ಕೆ ಇಳಿಸಲಾಗುವುದು ಎಂಬ ಮಾತುಗಳು ಆರಂಭದಲ್ಲಿ ಕೇಳಿಬಂದಿದ್ದವು. ತಮ್ಮ ಸಹೋದರ ಫತೇ ಜಂಗ್ ಅವರು ಪ್ರತಿನಿಧಿಸಿದ್ದ ಕ್ಷೇತ್ರದಿಂದ ಬಾಜ್ವಾ ಕಣಕ್ಕೆ ಇಳಿಯುತ್ತಿದ್ದಾರೆ. ಸ್ಥಾನ ನೀಡಿದರೆ ಕಾಂಗ್ರೆಸ್‌ಗೆ ಮರಳುವ ಇರಾದೆಯಲ್ಲಿ ಜಂಗ್ ಇದ್ದಾರೆ. ಹಲವು ಹಾಲಿ ಶಾಸಕರು ಹಾಗೂ ವಲಸಿಗರಿಗೆ ಟಿಕೆಟ್ ಸಿಕ್ಕಿದೆ. ಎಎಪಿಯಿಂದ ಬಂದಿರುವ ರೂಪಿಂದರ್ ರೂಬಿ ಅವರಿಗೂ ಟಿಕೆಟ್ ನೀಡಲಾಗಿದೆ.

ಉಪಮುಖ್ಯಮಂತ್ರಿ ಓಂಪ್ರಕಾಶ್ ಸೋನಿ ಅವರು ಅಮೃತಸರ ಕೇಂದ್ರ ಕ್ಷೇತ್ರದಿಂದ ಸ್ಪರ್ಧೆ ಮಾಡಲಿದ್ದಾರೆ. ಮತ್ತೊಬ್ಬ ಉಪಮುಖ್ಯಮಂತ್ರಿ ಸುಖ್‌ಜಿಂದರ್ ರಾಂಧವ ಅವರು ಡೇರಾ ಬಾಬಾ ನಾಯಕ್ ಕ್ಷೇತ್ರದಲ್ಲಿ ಅದೃಷ್ಟ ಪರೀಕ್ಷೆಗೆ ಇಳಿಯಲಿದ್ದಾರೆ.

ಕಾಂಗ್ರೆಸ್ ಕಾರ್ಯಾಧ್ಯಕ್ಷ ಕುಲ್ಜಿತ್ ಅವರು ಫತೇಗಡ ಸಾಹಿಬ್‌ನಿಂದ ಹಾಗೂ ಸಿಧು ಅವರ ಆಪ್ತ, ಸಚಿವ ಪ್ರಗತ್ ಸಿಂಗ್ ಅವರು ಜಲಂಧರ್ ಕಂಟೋನ್ಮೆಂಟ್‌ನಿಂದ ಅಖಾಡಕ್ಕೆ ಧುಮುಕಿದ್ದಾರೆ. ಇತ್ತೀಚೆಗೆ ಪಕ್ಷಕ್ಕೆ ಸೇರ್ಪಡೆಯಾದ, ನಟ ಸೋನು ಸೂದ್ ಅವರ ತಂಗಿ ಮಾಳವಿಕಾ ಸೂದ್ ಅವರು ಮೋಗಾದಿಂದ ಉಮೇದುವಾರಿಕೆ ಸಲ್ಲಿಸಲಿದ್ದಾರೆ. ಲೆಹ್ರಾದಿಂದ ಮಾಜಿ ಮುಖ್ಯಮಂತ್ರಿ ರಾಜಿಂದರ್ ಕೌರ್ ಭಠ್ಠಲ್, ಮಾನ್ಸಾದಿಂದ ಗಾಯಕ ಸಿಧು ಮೂಸೇವಾಲಾ ಸ್ಪರ್ಧೆ ಮಾಡುತ್ತಿದ್ದಾರೆ.

ಸಚಿವರಾದ ಭರತ್ ಭೂಷಣ್ ಆಶು (ಲೂಧಿಯಾನ ಪಶ್ಚಿಮ), ಅರುಣಾ ಚೌಧರಿ (ದಿನಾ ನಗರ), ತೃಪ್ತ್ ರಾಜಿಂದರ್ ಬಾಜ್ವಾ (ಫತೇಗಡ ಚುರಿಯನ್), ರಾಣಾ ಗುರ್ಜೀತ್ ಸಿಂಗ್ (ಕಪುರ್ತಲಾ), ಮನ್‌ಪ್ರೀತ್ ಬಾದಲ್ (ಭಟಿಂಡಾ–ನಗರ), ಸಂಗತ್ ಸಿಂಗ್ ಗುಲ್ಜಿಯನ್ (ಉರ್ಮರ್), ಗುರುಕೀರತ್ ಕೋಟಲಿ (ಖನ್ನಾ) ಅವರೂ ಮೊದಲ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ಮುಖ್ಯಾಂಶಗಳು

- ಪಂಜಾಬ್‌ನಲ್ಲಿ ಫೆಬ್ರುವರಿ 14ರಂದು ಒಂದೇ ಹಂತದಲ್ಲಿ ಮತದಾನ
- ಮುಖ್ಯಮಂತ್ರಿ ಚನ್ನಿ, ನವಜೋತ್ ಸಿಂಗ್ ಸಿಧು ಕಣಕ್ಕೆ
- ಮುಖ್ಯಮಂತ್ರಿ ಅಭ್ಯರ್ಥಿಗಳು ಎಂಬುದಾಗಿ ತಮ್ಮನ್ನು ಬಿಂಬಿಸಿಕೊಂಡಿರುವ ಚನ್ನಿ, ಸಿಧು, ಬಾಜ್ವಾ, ಜಾಖಡ್

ನವಜೋತ್ ಸಿಂಗ್ ಸಿಧು

ಚರಣ್‌ಜಿತ್ ಸಿಂಗ್ ಚನ್ನಿ

ಭಾನುವಾರ, ಜನವರಿ 16, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 16 | ಪುಟ 16

• www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ಎರಡು ವರ್ಷಗಳಿಂದ ಕೊರೊನಾ ಪಿಡುಗು ಕೊಪ್ಪಳದ ಅಜ್ಜನ ಜಾತ್ರೆಯ ಸಂಭ್ರಮಕ್ಕೆ ಬ್ರೇಕ್ ಹಾಕಿದೆ. ಸರಳ ರಥೋತ್ಸವ ಹತ್ತಿರವಿರುವಾಗ ಗತಕಾಲದ ಸಡಗರದ ಮೆಲುಕು

ಕೋವಿಡ್: ಪೊಲೀಸರ ಸೂಚನೆ ಕಡೆಗಣಿಸಿ ಭಕ್ತರ ಪಾದಯಾತ್ರೆ 5

ಹೋರಾಟದಿಂದ ಹಿಂದೆ ಸರಿಯದಿರಲು ಅತಿಥಿ ಉಪನ್ಯಾಸಕರ ತೀರ್ಮಾನ

ರಾಘವೇಶ್ವರ ಶ್ರೀಗಳ ವಿರುದ್ಧದ ಅರ್ಜಿಗಳ ವಜಾ 5

‘ಕೇಳಿದ್ದು ಸೇವಾ ಭದ್ರತೆ, ಗೌರವಧನ ಹೆಚ್ಚಳವಲ್ಲ’ 5

ಟೆಸ್ಟ್ ನಾಯಕತ್ವ ತ್ಯಜಿಸಿದ ಕೊಹ್ಲಿ

ಬೆಂಗಳೂರು: ಭಾರತ ಟೆಸ್ಟ್ ಕ್ರಿಕೆಟ್ ತಂಡದ ನಾಯಕತ್ವಕ್ಕೂ ವಿರಾಟ್ ಕೊಹ್ಲಿ ವಿದಾಯ ಹೇಳಿದ್ದಾರೆ.

ದಕ್ಷಿಣ ಆಫ್ರಿಕಾ ಎದುರು ನಡೆದ ಮೂರು ಪಂದ್ಯಗಳ ಸರಣಿಯಲ್ಲಿ ಭಾರತ 1–2 ಅಂತರದಲ್ಲಿ ಸೋತಿತ್ತು. ಕೊನೆಯ ಪಂದ್ಯ ನಾಲ್ಕನೇ ದಿನವಾದ ಶುಕ್ರವಾರವೇ ಮುಕ್ತಾಯ-ಗೊಂಡಿತ್ತು. ನಾಯಕತ್ವ ತ್ಯಜಿಸಿರುವ ವಿಷಯವನ್ನು ಅವರು ಶನಿವಾರ ಮಾಡಿರುವ ಟ್ವೀಟ್‌ನಲ್ಲಿ ಬಹಿರಂಗ ಮಾಡಿದ್ದಾರೆ.

7

ಚಿನಕುರಳಿ

ಪ್ರಕಾಶ್ ಶೆಟ್ಟಿ

ಜಲ ಮಾಲಿನ್ಯದ ಬಗ್ಗೆ ಸಾಕಷ್ಟು ದೂರು ಬಂದಿದ್ದರೂ, ಕಠಿಣ ಕ್ರಮ ಕೈಗೊಂಡಿದ್ದು ವಿರಳ

ಮಳೆಯಲ್ಲಿ ಕರಗುವ ‘ಮಾಲಿನ್ಯ’

• ಹರ್ಷವರ್ಧನ ಪಿ. ಆರ್.

ಒಳನೋಟ

ಜಲಮೂಲ ನಿರ್ಲಕ್ಷ್ಯ

ಪ್ರತಿಕ್ರಿಯಿಸಿ: 9606038256
feedback@prajavani.co.in

ಮಂಗಳೂರು: ಅಭಿವೃದ್ಧಿ ಯೋಜನೆಗಳನ್ನು ಪರಿಸರ ಮತ್ತು ಪ್ರಾದೇಶಿಕ ವೈಶಿಷ್ಟ್ಯ, ವೈವಿಧ್ಯಕ್ಕೆ ಅನುಗುಣವಾಗಿ ರೂಪಿಸಿದರೆ ಮಾತ್ರ ನಿಜಾರ್ಥದ ಅಭಿವೃದ್ಧಿ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅಭಿವೃದ್ಧಿಗೆ ತೆರಬೇಕಾದ ಬೆಲೆ ದುಬಾರಿಯಾಗುತ್ತದೆ ಎಂಬುದಕ್ಕೆ ದಕ್ಷಿಣ ಕನ್ನಡ ಕರಾವಳಿಯ ಪರಿಸರ ಸಾಕ್ಷಿಯಾಗುತ್ತಿದೆ.

ಸುಮಾರು ಮೂರೂವರೆ ದಶಕದಿಂದ ಈ ಭಾಗದಲ್ಲಿ ನಡೆಯುತ್ತಿರುವ ಅಭಿವೃದ್ಧಿಯು ಪರಿಸರಕ್ಕಾಗಲಿ, ಕರಾವಳಿಯ ವೈಶಿಷ್ಟ್ಯ–ವೈವಿಧ್ಯಕ್ಕಾಗಲಿ ಪೂರಕವಾಗಿಲ್ಲ ಎಂಬುದನ್ನು ಸ್ಥಳೀಯರು ಈಗ ಗಟ್ಟಿದನಿಯಲ್ಲಿ ಹೇಳುತ್ತಿದ್ದಾರೆ. ಆದರೆ ಅಭಿವೃದ್ಧಿಯ ಮಂತ್ರ ಜಪಿಸುವವರಿಗೆ ಇದು ಇನ್ನೂ ಅರ್ಥವಾಗುತ್ತಿಲ್ಲ ಎಂಬುದು ಪರಿಸರ-ಪ್ರೇಮಿಗಳ ಅಳಲಾಗಿದೆ.

ವಿಶಾಲ ಕಡಲತೀರ, ಹಚ್ಚ ಹಸಿರಿನ ಬೆಟ್ಟಗುಡ್ಡಗಳು, ತುಂಬಿ ಹರಿಯುವ ನದಿಗಳಿಂದ ಕೂಡಿದ ಕರಾವಳಿಯು ಈಗ ತನ್ನ ಮೂಲ ಸತ್ವವನ್ನು ಕಳೆದುಕೊಳ್ಳು-ತ್ತಿದೆ. ನದಿಗಳಷ್ಟೇ ಅಲ್ಲ, ಸಮುದ್ರ, ಗಾಳಿ ಎಲ್ಲವೂ ಮಲಿನವಾಗಿದೆ. ಕೈಗಾರಿಕೆಗಳ ಜಿಡ್ಡು, ರಾಸಾಯನಿಕ, ತೈಲ ಸಮುದ್ರ ಸೇರಿ ಮೀನಿನ ಸಂತತಿ ಕ್ಷೀಣಿಸುತ್ತಿದೆ ಎಂದು ಮೀನುಗಾರರು ದೂರುತ್ತಾರೆ.

ನದಿಗಳ ನೀರು, ವಿಶೇಷವಾಗಿ ಕೈಗಾರಿಕಾ ಪ್ರದೇಶದ ಪಕ್ಕದಲ್ಲೇ ಹರಿಯುವ ಫಲ್ಗುಣಿ ನದಿಯ ನೀರು ಬಳಕೆಗೂ ಯೋಗ್ಯವಲ್ಲ ಎಂಬುದು ಇತ್ತೀಚಿನ ಅಧ್ಯಯನದಿಂದ ತಿಳಿದುಬಂದಿದೆ. 2021ರ ಜನವರಿ ತಿಂಗಳಲ್ಲಿ ಫಲ್ಗುಣಿ ನದಿಯ ಅಕ್ಕಪಕ್ಕದ

ಫಲ್ಗುಣಿ ನದಿ ಉಳಿಸಿ ಜಾಥಾ ನಡೆದ ಸಂದರ್ಭ

> ಜನಪ್ರತಿನಿಧಿಗಳ ಭರವಸೆಯಲ್ಲಿ, ಕೈಗಾರಿಕಾ ಸಂಸ್ಥೆಗಳು ನೀಡುವ ಮಾಹಿತಿಯಲ್ಲಿ ಯಾವುದೇ ‘ಮಾಲಿನ್ಯ’ ಕಂಡು ಬರುವುದಿಲ್ಲ. ಏಕೆಂದರೆ, ಮಾಲಿನ್ಯಕ್ಕೆ ಬಲಿಯಾಗುವವರು ಸಾಮಾನ್ಯ ಜನರು
>
> **ಮುನೀರ್ ಕಾಟಿಪಳ್ಳ,** ಹೋರಾಟಗಾರ

> ಕೆಲವು ಕೈಗಾರಿಕೆಗಳು ತ್ಯಾಜ್ಯವನ್ನು ನದಿ, ಸಮುದ್ರಕ್ಕೆ ಬಿಟ್ಟ ಕಾರಣ ಪರಿಸರಕ್ಕೆ ಹಾನಿಯಾದ ಬಗ್ಗೆ ದೂರುಗಳಿವೆ. ಈ ಬಗ್ಗೆ ಕಠಿಣ ಕ್ರಮ ಕೈಗೊಳ್ಳಲು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸೂಚಿಸಲಾಗಿದೆ
>
> **ಕೋಟ ಶ್ರೀನಿವಾಸ ಪೂಜಾರಿ,** ಸಚಿವ

ಊರುಗಳ ತೆರೆದ ಬಾವಿಗಳ ನೀರು ಕಲುಷಿತಗೊಂಡ ಕಾರಣ ನದಿಯ ಮಾಲಿನ್ಯ ತಡೆಗೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಹೋರಾಟ ಆರಂಭವಾಗಿತ್ತು. ತೈಲ ಸಂಸ್ಕರಣಾ ಸಂಸ್ಥೆ ಎಂಆರ್‌ಪಿ-ಎಲ್‌ನಿಂದ ಕಪ್ಪು ತ್ಯಾಜ್ಯವು ನದಿಗೆ ಸೇರುತ್ತಿದೆ ಎಂದು ವರದಿಯಾಯಿತು. ಈ ಸಂಸ್ಥೆಯ ವಿರುದ್ಧವೂ ಆಗ ಪ್ರತಿಭಟನೆ ಜೋರಾಗಿಯೇ ನಡೆದಿತ್ತು.

4ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 4

ರ‍್ಯಾಲಿ ನಿಷೇಧ: 22ರವರೆಗೆ ವಿಸ್ತರಣೆ

ನವದೆಹಲಿ (ಪಿಟಿಐ): ವಿಧಾನಸಭೆಗೆ ಚುನಾವಣೆ ನಡೆಯಲಿರುವ ಐದು ರಾಜ್ಯಗಳಲ್ಲಿ ಭೌತಿಕ ರ‍್ಯಾಲಿಗಳು, ರೋಡ್ ಶೋಗಳ ಮೇಲಿನ ನಿಷೇಧವನ್ನು ಚುನಾವಣಾ ಆಯೋಗವು ಇದೇ 22ರವರೆಗೆ ವಿಸ್ತರಿಸಿ ಶನಿವಾರ ಆದೇಶ ಹೊರಡಿಸಿದೆ. ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಈ ನಿರ್ಧಾರಕ್ಕೆ ಬರಲಾಗಿದೆ. ಮುಂದಿನ ದಿನಗಳಲ್ಲಿ ಪರಿಸ್ಥಿತಿಯ ಆಧಾರದಲ್ಲಿ ನಿರ್ಧಾರದ ಮರುಪರಿಶೀಲನೆ ಆಗಲಿದೆ ಎಂದು ಆಯೋಗವು ತಿಳಿಸಿದೆ.

ಹಾಗಿದ್ದರೂ ರಾಜಕೀಯ ಪಕ್ಷಗಳಿಗೆ ಒಂದು ವಿನಾಯಿತಿಯನ್ನು ಆಯೋಗವು ನೀಡಿದೆ. ಒಳಾಂಗಣ ಸಭೆಗಳನ್ನು ನಡೆಸಲು ಅವಕಾಶ ಕೊಟ್ಟಿದೆ. ಆದರೆ, ಸಭಾಂಗಣದ ಸಾಮರ್ಥ್ಯದ ಶೇ 50ರಷ್ಟು ಅಥವಾ ಗರಿಷ್ಠ 300 ಮಂದಿ ಸೇರಲು ಮಾತ್ರ ಅವಕಾಶ ಇದೆ. ಅಥವಾ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ನಿಗದಿ ಮಾಡಿದ ಮಿತಿಯನ್ನು ಪಾಲಿಸಬೇಕು ಎಂದು ಆಯೋಗವು ಸೂಚಿಸಿದೆ.

ಕೇಂದ್ರ ಆರೋಗ್ಯ ಸಚಿವಾಲಯದ ಜತೆಗೆ ಶನಿವಾರ ನಡೆಸಿದ ವರ್ಚುವಲ್ ಸಭೆ ಮತ್ತು ಚುನಾವಣೆ ನಡೆಯಲಿರುವ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಕಾರ್ಯದರ್ಶಿಗಳು ಮತ್ತು ಮುಖ್ಯ ಚುನಾವಣಾ ಅಧಿಕಾರಿಗಳ ಜತೆಗೆ ನಡೆಸಿದ ಸಭೆಯಲ್ಲಿ ದೊರೆತ ಮಾಹಿತಿಯ ಆಧಾರದಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಆಯೋಗ ಹೇಳಿದೆ.

ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸಬೇಕು, ಕೋವಿಡ್ ಹರಡುವಿಕೆ ತಡೆ ನಿಯಮಗಳನ್ನು ಪಾಲಿಸಬೇಕು ಎಂದು ರಾಜಕೀಯ ಪಕ್ಷಗಳಿಗೆ ಆಯೋಗವು ನಿರ್ದೇಶನ ನೀಡಿದೆ.

ಅಯೋಧ್ಯೆಯಿಂದ ಯೋಗಿ ಸ್ಪರ್ಧೆ ಇಲ್ಲ

ಲಖನೌ: ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಕಳೆದ ಕೆಲವು ದಿನಗಳಿಂದ ಕೇಳಿ ಬರುತ್ತಿದ್ದ ಊಹಾಪೋಹಗಳಿಗೆ ವ್ಯತಿರಿಕ್ತವಾಗಿ ತಮ್ಮ ‘ಭದ್ರಕೋಟೆ ಮತ್ತು ಸುರಕ್ಷಿತ ಕ್ಷೇತ್ರ’ ಗೋರಖಪುರದಿಂದ ಸ್ಪರ್ಧಿಸಲಿದ್ದಾರೆ.

ಅಯೋಧ್ಯೆ ಅಥವಾ ಮಥುರಾದಿಂದ ಅವರು ಸ್ಪರ್ಧಿಸಲಿದ್ದಾರೆ ಎಂದು ಈ ಹಿಂದೆ ಹೇಳಲಾಗಿತ್ತು. ಆದರೆ, ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರಿಗೆ ಕೂಡ ಅಚ್ಚರಿಯಾಗುವ ರೀತಿಯಲ್ಲಿ ಯೋಗಿ ಅವರು ಗೋರಖಪುರ ಆಯ್ದುಕೊಂ-ಡಿದ್ದಾರೆ. ಜನಸಂಘದ ಕಾಲದಿಂದ ಅಂದರೆ, 1967ರಿಂದ ಈವರೆಗೆ ಒಮ್ಮೆಯೂ ಈ ವಿಧಾನಸಭಾ ಕ್ಷೇತ್ರದಲ್ಲಿ ಜನಸಂಘ ಅಥವಾ ಬಿಜೆಪಿ ಸೋತಿಲ್ಲ. ಹಾಲಿ ಶಾಸಕ ರಾಧಾಮೋಹನ್ ದಾಸ್ ಅಗರ್‌ವಾಲ್ ಅವರು ಯೋಗಿ ಅವರ ನಿಷ್ಠಾವಂತ. 2002ರಿಂದ ಈ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ.

*This offer is only available on Dalmia DSP Cement and not on any other variants of Dalmia Cement. Offer is valid from 1st December 2021 to 31st January 2022 or till the stock of gift lasts. Offer can be availed only through Dalmia authorised dealer partner. ** T&C applied. For more information visit www.DalmiaDSPoffer.com or contact your nearest dealer partner. Images shown are only for visual representation. Dalmia Cement reserves the right to change or withdraw any or all of the offers without prior notice. All third party trademarks and brand names referred to above are and will remain the property of their respective owners.

ಸಂಜಯ ಗಾಂಧಿ ಆಸ್ಪತ್ರೆಯಲ್ಲಿ ಪ್ರಾರಂಭ • ಅತ್ಯಾಧುನಿಕ ಶಸ್ತ್ರಚಿಕಿತ್ಸೆ ಪ್ರಾರಂಭಿಸಿದ ದೇಶದ ಮೊದಲ ಆಸ್ಪತ್ರೆ

ಮೂಳೆ ಮುರಿತಕ್ಕೆ '3ಡಿ ಮುದ್ರಣ' ಶಸ್ತ್ರಚಿಕಿತ್ಸೆ

• ವರುಣ್ ಹೆಗಡೆ

ಬೆಂಗಳೂರು: ಮೂಳೆ ಮುರಿತದಿಂದ ಸಂಕೀರ್ಣ ಸಮಸ್ಯೆಗೆ ಒಳಗಾಗುವವರಿಗೆ ಸಂಜಯ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯು '3ಡಿ ಮುದ್ರಣ ತಂತ್ರಜ್ಞಾನ' ಆಧಾರಿತ ಅತ್ಯಾಧುನಿಕ ಶಸ್ತ್ರಚಿಕಿತ್ಸೆಯನ್ನು ಪ್ರಾರಂಭಿಸಿದೆ. ಮೂಳೆ ಶಸ್ತ್ರಚಿಕಿತ್ಸೆಗೆ ಈ ತಂತ್ರಜ್ಞಾನವನ್ನು ಅಳವಡಿಸಿಕೊಂಡ ದೇಶದ ಮೊದಲ ಸರ್ಕಾರಿ ಸಂಸ್ಥೆ ಇದಾಗಿದೆ.

ಕೃತಕ ಮಂಡಿ ಜೋಡಣೆ, ಭುಜದ ಕೀಲು ಅಳವಡಿಕೆ ಸೇರಿದಂತೆ ಮೂಳೆ ಶಸ್ತ್ರಚಿಕಿತ್ಸೆಗೆ ಸಂಜಯ ಗಾಂಧಿ ಆಸ್ಪತ್ರೆ ಹೆಸರುವಾಸಿಯಾಗಿದೆ. ಇಲ್ಲಿ ರೋಬೋಟಿಕ್ ಸೇರಿದಂತೆ ವಿವಿಧ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಈಗ ಈ ಸಾಲಿಗೆ '3ಡಿ ಮುದ್ರಣ ತಂತ್ರಜ್ಞಾನ'ವೂ ಸೇರಿದೆ. ಗಂಭೀರ ಹಾನಿಗೊಳಗಾಗಿ, ವಿರೂಪಗೊಳ್ಳುವ ಮೂಳೆಯ ಭಾಗಗಳನ್ನು ಮೊದಲಿನ ಸ್ವರೂಪಕ್ಕೆ ತರಲು ಈ ತಂತ್ರಜ್ಞಾನ ಸಹಕಾರಿ. ಸಂಸ್ಥೆಯಲ್ಲಿ ಈ ತಂತ್ರಜ್ಞಾನದ ನೆರವಿನಿಂದ ಐವರಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ.

ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) 'ಮೆಟೀರಿಯಲ್ಸ್' ವಿಭಾಗದ ಸಹಯೋಗದಲ್ಲಿ ಆಸ್ಪತ್ರೆಯು ಈ ತಂತ್ರಜ್ಞಾನ ಆಧರಿತ ಶಸ್ತ್ರಚಿಕಿತ್ಸೆಗಳನ್ನು ಮಾಡುತ್ತಿದೆ. 3ಡಿ ಮುದ್ರಣ ತಂತ್ರಜ್ಞಾನ ತಂತ್ರಾಂಶದ ನೆರವಿನಿಂದ ಕೃತಕ ಮೂಳೆಯ ಮಾದರಿಗಳು ಹಾಗೂ ಮಿಶ್ರ ಲೋಹದ ಪ್ಲೇಟ್‌ಗಳನ್ನು ಐಐಎಸ್ಸಿ ಸಂಶೋಧಕರು ವಿನ್ಯಾಸ ಮಾಡಿಕೊಡುತ್ತಿದ್ದಾರೆ. ಸಂಸ್ಥೆಯಲ್ಲಿ ಸದ್ಯ ಕೈಗಳ ಮೂಳೆ ಮುರಿತಕ್ಕೆ ಈ ಶಸ್ತ್ರಚಿಕಿತ್ಸೆ ನಡೆಸಲಾಗುತ್ತಿದೆ.

3ಡಿ ಮುದ್ರಣ ತಂತ್ರಜ್ಞಾನದ ನೆರವಿನಿಂದ ವಿನ್ಯಾಸ ಮಾಡಲಾದ ಕೃತಕ ಮೂಳೆಯ ಮಾದರಿಗಳನ್ನು ಡಾ.ಸತ್ಯವಂಶಿ ಕೃಷ್ಣ ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ/ ರಂಜು ಪಿ.

ಪ್ರಜಾವಾಣಿ ವಿಶೇಷ

ನಿಖರ ಶಸ್ತ್ರಚಿಕಿತ್ಸೆ ಸಾಕಾರ: 'ಯುರೋಪ್ ದೇಶಗಳಲ್ಲಿ ಕ್ಯಾನ್ಸರ್ ಸೇರಿದಂತೆ ವಿವಿಧ ಶಸ್ತ್ರಚಿಕಿತ್ಸೆಗಳನ್ನು ಈ ತಂತ್ರಜ್ಞಾನದ ನೆರವಿನಿಂದ ನಿಖರವಾಗಿ ನಡೆಸಲಾಗುತ್ತಿದೆ. ಇದರಿಂದ ಮೂಳೆಮುರಿತದಂತಹ ಸಂಕೀರ್ಣ ಶಸ್ತ್ರಚಿಕಿತ್ಸೆಗಳನ್ನೂ ನಡೆಸಲು ಸಾಧ್ಯವಿದೆ. ನಮ್ಮ ದೇಶದಲ್ಲಿ ಈ ತಂತ್ರಜ್ಞಾನವು ಶಸ್ತ್ರಚಿಕಿತ್ಸೆ ಕ್ಷೇತ್ರದಲ್ಲಿ ಅಷ್ಟಾಗಿ ಬಳಕೆಯಲ್ಲಿಲ್ಲ' ಎಂದು ಸಂಸ್ಥೆಯ ಶಸ್ತ್ರಚಿಕಿತ್ಸಕ ಡಾ.ಸತ್ಯವಂಶಿ ಕೃಷ್ಣ ತಿಳಿಸಿದರು.

'ಮೂಳೆ ಮುರಿದಾಗ ಅದರ ಸ್ವರೂಪ ಬದಲಾಗಿರುತ್ತದೆ. ಮುರಿದ ಜಾಗವನ್ನು ಜೋಡಿಸಲು ಮಿಶ್ರಲೋಹದ ಪ್ಲೇಟ್ ಅಳವಡಿಸಬೇಕಾಗುತ್ತದೆ. ಸದ್ಯ ಬಳಕೆಯಲ್ಲಿರುವ ಪ್ಲೇಟ್‌ಗಳು ಒಂದೇ ರೂಪದಲ್ಲಿ ವಿನ್ಯಾಸಗೊಂಡಿರುತ್ತವೆ. ಹಾನಿಗೊಳಗಾದ ಮೂಳೆಯ ಸ್ವರೂಪದಲ್ಲಿ ವ್ಯತ್ಯಾಸವಿರುವುದರಿಂದ ಮಿಶ್ರಲೋಹದ ಪ್ಲೇಟ್‌ಗಳು ಎಲ್ಲರಿಗೂ ಸರಿಯಾಗಿ ಹೊಂದಿಕೆಯಾಗುವುದಿಲ್ಲ. ಹೀಗಾಗಿ, 3ಡಿ ಮುದ್ರಣ ತಂತ್ರಜ್ಞಾನವು ಈ ಸಮಸ್ಯೆಗೆ ಪರಿಹಾರ ಒದಗಿಸಲಿದೆ' ಎಂದು ವಿವರಿಸಿದರು.

'3ಡಿ ಮುದ್ರಣ ತಂತ್ರಜ್ಞಾನ ಆಧರಿಸಿ ಶಸ್ತ್ರಚಿಕಿತ್ಸೆ ನಡೆಸುವಾಗ ವ್ಯಕ್ತಿಯ ಮೂಳೆಯ ಕೃತಕ ಮಾದರಿಗಳನ್ನು ವಿನ್ಯಾಸ ಮಾಡಿಸಲಾಗುತ್ತದೆ. ಹಾನಿಯಾದ ಜಾಗಕ್ಕೆ ಸರಿಯಾಗಿ ಹೊಂದಿಕೆಯಾಗುವ ರೀತಿಯಲ್ಲಿ ಮಿಶ್ರಲೋಹದ ಪ್ಲೇಟ್ ಅನ್ನು ತಯಾರಿಸಲಾಗುತ್ತದೆ. ಸಿದ್ಧಪಡಿಸಿಕೊಂಡಿರುವ ಕೃತಕ ಮೂಳೆಯ ಮಾದರಿಗೆ ಮೊದಲು ಪ್ಲೇಟ್ ಅಳವಡಿಸಲಾಗುವುದು. ಸಮರ್ಪಕವಾಗಿ ಹೊಂದಿಕೆಯಾಗಲಿದೆ ಎಂದು ಖಚಿತಪಟ್ಟ ಬಳಿಕವೇ ವ್ಯಕ್ತಿಗೆ ಶಸ್ತ್ರಚಿಕಿತ್ಸೆ ನಡೆಸಲಾಗುತ್ತದೆ. ಇದರಿಂದ ಸುಲಭ ಮತ್ತು ನಿಖರವಾಗಿ ಶಸ್ತ್ರಚಿಕಿತ್ಸೆ ನಡೆಸಲು ಸಾಧ್ಯ. ರೋಗಿಗಳೂ ಬೇಗ ಚೇತರಿಸಿಕೊಳ್ಳಲಿದ್ದಾರೆ' ಎಂದು ವಿವರಿಸಿದರು.

'ಸಾಂಪ್ರದಾಯಿಕ ವಿಧಾನದಲ್ಲಿ ನಡೆಸುವ ಶಸ್ತ್ರಚಿಕಿತ್ಸೆಯಲ್ಲಿ ಶೇ 100 ರಷ್ಟು ಫಲಿತಾಂಶ ನಿರೀಕ್ಷಿಸಲು ಸಾಧ್ಯವಿಲ್ಲ. ಆದರೆ, ಈ ಹೊಸ ವಿಧಾನದಲ್ಲಿ ನಡೆಸುವ ಶಸ್ತ್ರಚಿಕಿತ್ಸೆಯಲ್ಲಿ ನಿರೀಕ್ಷಿತ ಫಲಿತಾಂಶ ದೊರೆಯಲಿದೆ. ಶಸ್ತ್ರಚಿಕಿತ್ಸೆ ಮಾಡುವ ವೈದ್ಯರಿಗೂ ವಿಶೇಷ ಅನುಭವ ಬೇಕಾಗುವುದಿಲ್ಲ' ಎಂದು ಹೇಳಿದರು.

ದುಬಾರಿ ಶಸ್ತ್ರಚಿಕಿತ್ಸೆ ಬಿಪಿಎಲ್ ಕುಟುಂಬದವರಿಗೆ ಉಚಿತ

ಐಐಎಸ್ಸಿಯ 'ಮೆಟೀರಿಯಲ್ಸ್' ವಿಭಾಗವು ಸದ್ಯ ಮಾದರಿಗಳನ್ನು ಸಂಸ್ಥೆಗೆ ಉಚಿತವಾಗಿ ವಿನ್ಯಾಸ ಮಾಡಿಕೊಡುತ್ತಿದೆ. ಆಸ್ಪತ್ರೆಯು ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ ಯೋಜನೆಯಡಿ ಉಚಿತವಾಗಿ ಶಸ್ತ್ರಚಿಕಿತ್ಸೆ ನಡೆಸುತ್ತಿದೆ. ಇದರಿಂದಾಗಿ ₹ 2 ಲಕ್ಷದಿಂದ ₹ 3 ಲಕ್ಷದ ಶಸ್ತ್ರಚಿಕಿತ್ಸೆ ಬಿಪಿಎಲ್ ಕುಟುಂಬದವರಿಗೆ ಉಚಿತವಾಗಿ ಲಭ್ಯವಾಗುತ್ತಿದೆ.

'3ಡಿ ಮುದ್ರಣ ತಂತ್ರಜ್ಞಾನ ಬಳಸಿಕೊಂಡು ಶಸ್ತ್ರಚಿಕಿತ್ಸೆ ನಡೆಸುವುದರಿಂದ ಸಂಕೀರ್ಣ ಶಸ್ತ್ರಚಿಕಿತ್ಸೆಗಳನ್ನೂ ಸುಲಭವಾಗಿ ನಡೆಸಬಹುದಾಗಿದೆ. ಹಲವು ಬಾರಿ ಎಕ್ಸ್–ರೆ ತೆಗೆಯಬೇಕಾದ ಅಗತ್ಯವೂ ಇಲ್ಲ. ರೋಗಿಯು ಅನಗತ್ಯವಾಗಿ ವಿಕಿರಣಕ್ಕೆ ಒಡ್ಡಿಕೊಳ್ಳುವುದು ತಪ್ಪಲಿದೆ. ಈ ತಂತ್ರಜ್ಞಾನದ ಪ್ರಯೋಜನ ರೋಗಿಗಳಿಗೆ ಸಿಗಬೇಕು. ಈ ಬಗ್ಗೆ ಐಐಎಸ್ಸಿ ಜೊತೆಗೆ ಚರ್ಚಿಸುತ್ತೇನೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಎಚ್.ಎಸ್. ಚಂದ್ರಶೇಖರ್ ವಿವರಿಸಿದರು.



ಶಸ್ತ್ರಚಿಕಿತ್ಸೆಗೂ ಮೊದಲು ಯೋಜನೆ ರೂಪಿಸಲು ಈ ತಂತ್ರಜ್ಞಾನ ಸಹಕಾರಿ. ದೇಹದ ವಿವಿಧ ಭಾಗಗಳ ಮೂಳೆ ಹಾನಿಗೂ ಈ ತಂತ್ರಜ್ಞಾನ ಬಳಸಿಕೊಳ್ಳುತ್ತೇವೆ.

ಡಾ.ಎಚ್.ಎಸ್. ಚಂದ್ರಶೇಖರ್
ಸಂಜಯ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ ನಿರ್ದೇಶಕ

ಅಂಕಿ-ಅಂಶಗಳು

70,000 ಸಂಜಯಗಾಂಧಿ ಆಸ್ಪತ್ರೆಗೆ ವರ್ಷದಲ್ಲಿ ಬರುವ ಹೊರರೋಗಿಗಳ ಸರಾಸರಿ ಸಂಖ್ಯೆ

7,000 ಒಳರೋಗಿಗಳ ಸರಾಸರಿ ಸಂಖ್ಯೆ

6,000 ಆಸ್ಪತ್ರೆಯಲ್ಲಿ ವರ್ಷದಲ್ಲಿ ನಡೆಯುವ ಶಸ್ತ್ರಚಿಕಿತ್ಸೆಗಳು (ಸರಾಸರಿ)

ಸಂಸ್ಕೃತ ವಿವಿ ವಿರೋಧಿಸಿ ಇಂದು ಟ್ವಿಟರ್ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆಗೆ ಕರ್ನಾಟಕ ರಕ್ಷಣಾ ವೇದಿಕೆ ವಿರೋಧ ವ್ಯಕ್ತಪಡಿಸಿದ್ದು, ಇದೇ ಭಾನುವಾರ ಬೆಳಿಗ್ಗೆ 11 ಗಂಟೆಯಿಂದ ಟ್ವಿಟರ್ ಅಭಿಯಾನ ಹಮ್ಮಿಕೊಂಡಿದೆ.

ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನಲ್ಲಿ 100 ಎಕರೆ ಪ್ರದೇಶವನ್ನು ಸಂಸ್ಕೃತ ವಿಶ್ವವಿದ್ಯಾಲಯ ನಿರ್ಮಾಣಕ್ಕೆ ಗುರುತಿಸಲಾಗಿದೆ. ₹ 320 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ವಿಶ್ವವಿದ್ಯಾಲಯದ ಶಂಕುಸ್ಥಾಪನೆಯನ್ನು ಇತ್ತೀಚೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೆರವೇರಿಸಿದ್ದರು. ಇದನ್ನು ವಿರೋಧಿಸಿರುವ ರಕ್ಷಣಾ ವೇದಿಕೆ, '#ಸಂಸ್ಕೃತವಿವಿಬೇಡ' ಮತ್ತು '#SayNoToSanskrit' ಎಂಬ ಶೀರ್ಷಿಕೆಯಡಿ ಟ್ವಿಟರ್ ಅಭಿಯಾನ ಹಮ್ಮಿಕೊಂಡಿದೆ.

'ಕನ್ನಡಿಗರ ತೆರಿಗೆ ಹಣದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯ ಬೇಕಾಗಿಲ್ಲ. ಹಿಂದೆ ಇದೇ ಸಂಸ್ಕೃತ ಹೇರಿಕೆ ವಿರುದ್ಧ ರಾಜ್‌ಕುಮಾರ್ ಅವರ ನೇತೃತ್ವದಲ್ಲಿ ಗೋಕಾಕ್ ಚಳವಳಿ ನಡೆಸಲಾಗಿತ್ತು. ಈಗ ಮತ್ತೆ ಅಂತಹದ್ದೇ ಕಾಲ ಬಂದಿದೆ' ಎಂದು ವೇದಿಕೆಯ ಅಧ್ಯಕ್ಷ ಟಿ.ಎ. ನಾರಾಯಣಗೌಡ ಟ್ವೀಟ್ ಮಾಡಿದ್ದಾರೆ.

ಸುದ್ದಿ 2 ನಿಮಿಷ

ಟೆಲಿ ಸಮಾಲೋಚನೆ: ರಾಜ್ಯದಲ್ಲಿ 35 ಲಕ್ಷ ಬಳಕೆದಾರರು

ಬೆಂಗಳೂರು: ಕೋವಿಡ್ ಕಾಣಿಸಿಕೊಂಡ ಬಳಿಕ ಟೆಲಿ ಸಮಾಲೋಚನೆಗೆ ಒಳಪಡುವವರ ಸಂಖ್ಯೆ ರಾಜ್ಯದಲ್ಲಿ ಹೆಚ್ಚಳವಾಗಿದೆ. ಇ–ಸಂಜೀವಿನಿ ಟೆಲಿ ಸಮಾಲೋಚನೆ ತಂತ್ರಾಂಶದಡಿ ಬಳಕೆದಾರರ ಸಂಖ್ಯೆ 35 ಲಕ್ಷಕ್ಕೆ ಏರಿಕೆಯಾಗಿದೆ.

ಈ ತಂತ್ರಾಂಶದಡಿ ಅಧಿಕ ಸಂಖ್ಯೆಯಲ್ಲಿ ಟೆಲಿ ಸಮಾಲೋಚನೆ ಬಳಕೆದಾರರನ್ನು ಹೊಂದಿರುವ ರಾಜ್ಯಗಳ ಸಾಲಿನಲ್ಲಿ ಕರ್ನಾಟಕ ದ್ವಿತೀಯ ಸ್ಥಾನದಲ್ಲಿದೆ. ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಸಮಾಲೋಚನೆ ನಡೆಯಲಿದೆ. ಇದಕ್ಕಾಗಿ ಪ್ರತ್ಯೇಕ ಮೊಬೈಲ್ ಆ್ಯಪ್ ಕೂಡ ಅಭಿವೃದ್ಧಿಪಡಿಸಲಾಗಿದೆ. ಸೇವೆಗಳು ಉಚಿತವಾಗಿ ಲಭ್ಯವಾಗಲಿವೆ ಎಂದು ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ತಿಳಿಸಿದ್ದಾರೆ.

ಆನ್‌ಲೈನ್ ಮೂಲಕ ಹೊರರೋಗಿ ವಿಭಾಗಗಳ ಸೇವೆ, ವಿಡಿಯೊ ಸಮಾಲೋಚನೆ, ಮಾಹಿತಿ ವಿನಿಮಯಕ್ಕೆ ಅವಕಾಶ ಇರಲಿದೆ. ಇದರಿಂದ ಆಸ್ಪತ್ರೆಗಳಿಗೆ ತೆರಳಿ, ವೈದ್ಯರಿಗೆ ಕಾಯುವುದು ತಪ್ಪಲಿದೆ. ಅನಾರೋಗ್ಯ ಸಮಸ್ಯೆಗಳಿಗೆ ಮನೆಯಿಂದಲೇ ವೈದ್ಯರನ್ನು ಮೊಬೈಲ್ ಮೂಲಕ ಸಂಪರ್ಕಿಸಿ, ಚಿಕಿತ್ಸೆ ಪಡೆದುಕೊಳ್ಳಬಹುದು ಎಂದು ಆರೋಗ್ಯ ಇಲಾಖೆ ಹೇಳಿದೆ.

ಮಕರ ಸಂಕ್ರಾಂತಿ ಸರಳ ಆಚರಣೆ

ದೇವನಹಳ್ಳಿ: ಕೋವಿಡ್ ಮೂರನೇ ಅಲೆ ವ್ಯಾಪಿಸುತ್ತಿರುವುದರಿಂದ ಮಕರ ಸಂಕ್ರಾಂತಿ ಹಬ್ಬವನ್ನು ಸರಳವಾಗಿ ಆಚರಿಸಲಾಗುತ್ತಿದೆ ಎಂದು ಖಾದಿ ಬೋರ್ಡ್ ನಿರ್ದೇಶಕ ಹಾಗೂ ಕಾರಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯ ಜಯರಾಮಗೌಡ ತಿಳಿಸಿದರು.

ತಾಲ್ಲೂಕಿನ ಕಾರಹಳ್ಳಿಯ ಆಂಜನೇಯಸ್ವಾಮಿ ದೇಗುಲದಲ್ಲಿ ಮಕರ ಸಂಕ್ರಾಂತಿ ಪ್ರಯುಕ್ತ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದರು.

ವಿಶ್ವವು ಕೋವಿಡ್ ಸಾಂಕ್ರಾಮಿಕದಿಂದ ಹೊರಬರುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸಿದರು.

ದೇವಸ್ಥಾನದ ಅರ್ಚಕ ರಮೇಶ್ ದೀಕ್ಷಿತ್ ಮಾತನಾಡಿ, ಚೋಳ ಮಹಾರಾಜರ ಕಾಲದಿಂದಲೂ ಆಂಜನೇಯ ಸ್ವಾಮಿ ದೇಗುಲವಿತ್ತು. ಪ್ರತಿ ವರ್ಷ ಅದ್ಧೂರಿಯಾಗಿ ಕಾರ್ಯಕ್ರಮ ಮಾಡಲಾಗುತಿತ್ತು. ಆದರೆ ಈ ಬಾರಿ ಕೋವಿಡ್‌ನಿಂದಾಗಿ ದೇವರಿಗೆ ಅಲಂಕಾರ ಮಾಡಿ ಸರಳವಾಗಿ ಪೂಜೆ ಮಾಡಲಾಗಿದೆ ಎಂದರು.

ಬೆಂಗಳೂರು ಸಹಕಾರಿ ಯೂನಿಯನ್ ನಿರ್ದೇಶಕ ಲಕ್ಷ್ಮೇಗೌಡ, ಕಾರಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯೆ ಸರಳಾ ಶಶಿಕುಮಾರ್, ಕಾಂಗ್ರೆಸ್ ಮುಖಂಡ ಅಶೋಕ್, ಶಿವಕುಮಾರ್, ಶಶಿಧರ್, ಗ್ರಾಮಸ್ಥರಾದ ಲಕ್ಷ್ಮೀನಾರಾಯಣ, ಎಸ್.ರಾಜಣ್ಣ ಭಾಗವಹಿಸಿದ್ದರು.

ವಲ್ಸಾದ್: ರಾಜಧಾನಿ ಎಕ್ಸ್‌ಪ್ರೆಸ್ ರೈಲು ಹಳಿ ತಪ್ಪಿಸಲು ಯತ್ನ

ವಲ್ಸಾದ್, ಗುಜರಾತ್ (ಪಿಟಿಐ): ದಕ್ಷಿಣ ಗುಜರಾತ್‌ನ ವಲ್ಸಾದ್ ಬಳಿ ಶುಕ್ರವಾರ ರಾತ್ರಿ ಮುಂಬೈ–ದೆಹಲಿ ರಾಜಧಾನಿ ಎಕ್ಸ್‌ಪ್ರೆಸ್ ರೈಲು ಹಳಿ ತಪ್ಪಿಸುವ ಯತ್ನ ನಡೆದಿದೆ.

ರೈಲ್ವೆ ಹಳಿ ಮೇಲೆ ದುಷ್ಕರ್ಮಿಗಳು ಸಿಮೆಂಟ್ ಕಂಬವನ್ನು ಹಾಕಿದ್ದರು. ರೈಲು ಡಿಕ್ಕಿ ಹೊಡೆದ ಕೂಡಲೆ ಸಿಮೆಂಟ್ ಕಂಬ ಪಕ್ಕಕ್ಕೆ ಉರುಳಿದ ಪರಿಣಾಮ ರೈಲು ಹಳಿ ತಪ್ಪಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಶುಕ್ರವಾರ ರಾತ್ರಿ 7.10ರ ಸುಮಾರಿಗೆ ಈ ಘಟನೆ ನಡೆದಿದ್ದು, ದೆಹಲಿಗೆ ತೆರಳುತ್ತಿದ್ದ ರೈಲನ್ನು ಹಳಿತಪ್ಪಿಸುವ ಪ್ರಯತ್ನ ನಡೆದಿದೆ. ಪ್ರಯಾಣಿಕರಿಗೆ ಯಾವುದೇ ಅಪಾಯವಾಗಿಲ್ಲ ಎಂದು ಪೊಲೀಸ್ ಅಧಿಕಾರಿಗಳು ಶನಿವಾರ ಹೇಳಿದ್ದಾರೆ.

ಮಾಹಿತಿ ದೊರೆಯುತ್ತಿದ್ದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಮತ್ತು ರೈಲ್ವೆ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿದರು. 'ಕೆಲವು ದುಷ್ಕರ್ಮಿಗಳು ರೈಲು ಹಳಿ ಮೇಲೆ ಸಿಮೆಂಟ್ ಕಂಬ ಇರಿಸಿದ್ದಾರೆ. ರೈಲು ಡಿಕ್ಕಿ ಹೊಡೆದಿದ್ದರ ಬಗ್ಗೆ ರೈಲ್ವೆ ವ್ಯವಸ್ಥಾಪಕರು ಸ್ಥಳೀಯ ಸ್ಟೇಷನ್ ಮಾಸ್ಟರ್‌ಗೆ ತಕ್ಷಣ ಮಾಹಿತಿ ನೀಡಿದರು' ಎಂದು ಸೂರತ್‌ನ ಐಜಿ ರಾಜ್‌ಕುಮಾರ್ ಪಾಂಡಿಯನ್ ಸುದ್ದಿಗಾರರಿಗೆ ತಿಳಿಸಿದರು.

ಹೊಸ ಬಟ್ಟೆ ಧರಿಸಿ ಚಿಣ್ಣರ ಸಂಭ್ರಮ: ಗೋವುಗಳಿಗೆ ವಿಶೇಷ ಪೂಜೆ

ಮನೆಗಳಿಗೆ ಸೀಮಿತವಾದ ಸಂಕ್ರಾಂತಿ ಸಡಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವಾರಾಂತ್ಯ ಕರ್ಫ್ಯೂ ಜಾರಿಯಲ್ಲಿದ್ದರಿಂದ ಈ ಬಾರಿ ಸಂಕ್ರಾಂತಿ ಹಬ್ಬದ ಸಡಗರವು ಮನೆಗಳಿಗಷ್ಟೇ ಸೀಮಿತವಾಯಿತು.

ವಾರಾಂತ್ಯ ಕರ್ಫ್ಯೂ ಇದ್ದಿದ್ದರಿಂದ ಹಲವರು ಶುಕ್ರವಾರ ರಾತ್ರಿಯೇ ಕಬ್ಬು, ಹೂವು, ಹಣ್ಣು ಹಾಗೂ ತಳಿರು– ತೋರಣಗಳನ್ನು ಖರೀದಿಸಿದರು. ಕೆಲವರು ಇವುಗಳನ್ನು ಕೊಳ್ಳಲು ಶನಿವಾರ ಮುಂಜಾನೆ ಮಾರುಕಟ್ಟೆಗಳಿಗೆ ಎಡತಾಕಿದರು. ಬೀದಿ ಬದಿ ವ್ಯಾಪಾರಿಗಳ ಬಳಿ ಮಾವಿನ ಸೊಪ್ಪು ಹಾಗೂ ಕಬ್ಬು ಖರೀದಿಸಿ ಮನೆಯ ಬಾಗಿಲುಗಳನ್ನು ಸಿಂಗರಿಸುತ್ತಿದ್ದ ದೃಶ್ಯಗಳು ಕಂಡುಬಂದವು. ಮಹಿಳೆಯರು ಮುಂಜಾನೆಯೇ ಮನೆಯ ಅಂಗಳಗಳನ್ನು ಸಾರಿಸಿ ರಂಗೋಲಿಗಳ ಚಿತ್ತಾರ ಬಿಡಿಸುತ್ತಿದ್ದರು.

ದೇವಸ್ಥಾನಗಳಲ್ಲಿ ಬೆಳಿಗ್ಗೆಯಿಂದಲೇ ವಿಶೇಷ ಪೂಜೆಗಳನ್ನು ನೆರವೇರಿಸಲಾಯಿತು. ಕೋವಿಡ್‌ನಿಂದಾಗಿ ಭಕ್ತರಿಗೆ ದೇಗುಲ ಪ್ರವೇಶ ಇರಲಿಲ್ಲ. ಪುಟಾಣಿಗಳು ಹಾಗೂ ಹಿರಿಯರು ಹೊಸ ಬಟ್ಟೆಗಳನ್ನು ಧರಿಸಿ ಸಂಭ್ರಮಿಸಿದರು. ಪರಸ್ಪರ ಎಳ್ಳು ಬೆಲ್ಲ ಹಾಗೂ ಕಬ್ಬು ಹಂಚಿ ಖುಷಿಪಟ್ಟರು. ಮನೆಗಳಲ್ಲಿ ಸಿಹಿ ಪದಾರ್ಥಗಳನ್ನು ತಯಾರಿಸಿ ಸವಿದರು.

ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಸಂಕ್ರಾಂತಿ ಪ್ರಯುಕ್ತ ರಾಜಭವನದಲ್ಲಿ ಗೋವುಗಳಿಗೆ ವಿಶೇಷ ಪೂಜೆ ಸಲ್ಲಿಸಿದರು. ಬಿಎಂಟಿಸಿ ಅಧ್ಯಕ್ಷ ನಂದೀಶ್ ರೆಡ್ಡಿ ತಮ್ಮ ನಿವಾಸದಲ್ಲಿ ಗೋಪೂಜೆ ನೆರವೇರಿಸಿದರು.

ಜಯನಗರದ ಕನಕನಪಾಳ್ಯದ ನಿವಾಸಿಗಳು ಹಸು ಹಾಗೂ ಎತ್ತುಗಳಿಗೆ ಪೂಜೆಮಾಡಿ ಸಂಜೆಯ ಹೊತ್ತಿನಲ್ಲಿ ಕಿಚ್ಚು ಹಾಯಿಸಿ ಸಂಭ್ರಮಿಸಿದರು.

ಎತ್ತಿನ ಗಾಡಿಯಲ್ಲಿ ಸಾಮಾಗ್ರಿ ಸಾಗಿಸುವ ವ್ಯಕ್ತಿಯೊಬ್ಬರು ಸಂಕ್ರಾಂತಿ ಪ್ರಯುಕ್ತ ಜೋಡೆತ್ತುಗಳಿಗೆ ಹೂವು ಹಾಗೂ ಬಣ್ಣದ ಟೇಪ್‌ಗಳನ್ನು ಕಟ್ಟಿ ಸಿಂಗರಿಸಿದ್ದರು. ಅವುಗಳ ಬೆನ್ನು ಹಾಗೂ ಕೊರಳಿಗೆ ಗಂಟೆಗಳನ್ನು ಕಟ್ಟಿದ್ದರು. ಕೊಂಬುಗಳನ್ನು ಬಲೂನುಗಳಿಂದ ಅಲಂಕರಿಸಿದ್ದ ದೃಶ್ಯ ಎಸ್.ಜೆ.ಪಿ. ರಸ್ತೆಯಲ್ಲಿ ಕಂಡುಬಂತು.

ಕನಕನಪಾಳ್ಯದಲ್ಲಿ ಶನಿವಾರ ಹಸುಗಳಿಗೆ ಕಿಚ್ಚು ಹಾಯಿಸಿ ಸಂಕ್ರಾಂತಿ ಆಚರಿಸಲಾಯಿತು ಪ್ರಜಾವಾಣಿ ಚಿತ್ರ/ಎಂ.ಎಸ್. ಮಂಜುನಾಥ್

ಗೋಪೂಜೆ ನೆರವೇರಿಸಿದ ಗೆಹಲೋತ್

ಬೆಂಗಳೂರು: ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ರಾಜಭವನದಲ್ಲಿ ಶನಿವಾರ ಗೋಪೂಜೆ ನರವೇರಿಸಿದರು.

ರಾಜಭವನದ ಆವರಣದಲ್ಲಿ ಗೋವುಗಳನ್ನು ಸಿಂಗರಿಸಿ ಪೂಜೆಗೆ ವ್ಯವಸ್ಥೆ ಮಾಡಲಾಗಿತ್ತು. ಹಸು ಮತ್ತು ಕರುಗಳಿಗೆ ಹೂಮಾಲೆ ಹಾಕಿ, ಅರಿಶಿನ ಮತ್ತು ಕುಂಕುಮ ಹಚ್ಚಿ ಸಿಂಗರಿಸಲಾಗಿತ್ತು.

ಗೋವುಗಳಿಗೆ ಹುಲ್ಲು ಮತ್ತು ಆಹಾರ ನೀಡಿದ ರಾಜ್ಯಪಾಲರು, ಬಳಿಕ ಪೂಜೆ ನೆರವೇರಿಸಿದರು. ರಾಜಭವನದಲ್ಲಿರುವ ಹಸುಗಳ ಕೊಟ್ಟಿಗೆಗೂ ತೆರಳಿ ಅವುಗಳ ಮೇಲೆ ಪುಷ್ಪಾರ್ಚನೆ ಮಾಡಿದರು.

ಶಂಕರನಹಳ್ಳದಲ್ಲಿ ಸಂಕ್ರಾಂತಿ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಗಡಿಭಾಗ ತಮಿಳುನಾಡಿನ ದೇವರಬೆಟ್ಟದ ಬಳಿಯಿರುವ ಶಂಕರನಹಳ್ಳದಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ಶಂಕರೇಶ್ವರ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಸಹಸ್ರಾರು ಭಕ್ತರು ಕಾಲ್ನಡಿಗೆಯಲ್ಲಿ ಸಾಗಿ ಕಾಡಿನ ಮಧ್ಯದಲ್ಲಿನ ಶಂಕರೇಶ್ವರ ಸ್ವಾಮಿ ದರ್ಶನ ಪಡೆದರು.

ಶಂಕರನಹಳ್ಳವು ದಟ್ಟಕಾಡಿನಲ್ಲಿದ್ದು ಥಳೀ ಸಮೀಪದ ಗಿಜನಗುಪ್ಪೆ ಗ್ರಾಮದ ಮೂಲಕ ಅಥವಾ ದೇವರ ಬೆಟ್ಟದಿಂದ ಕಾಡಿನಲ್ಲಿ ಸುಮಾರು 8 ಕಿ.ಮೀ. ನಡೆದು ದರ್ಶನ ಪಡೆಯಬೇಕು. ಬೆಟ್ಟಗುಡ್ಡಗಳ ನಡುವೆ ಕಾಡು ಹಾದಿಯಲ್ಲಿ ಸಾಗಿದರೆ ಶಂಕರನಹಳ್ಳ ತಲುಪಬಹುದು.

ಭಕ್ತರು ಸ್ವಾಮಿಗೆ ಹರಕೆ ಮಾಡಿಕೊಂಡು ಹರಿಕೆ ಈಡೇರಿದರೆ ಇಲ್ಲಿಯೇ ಹೋಳಿಗೆ ಮಾಡಿ ಭಕ್ತರಿಗೆ ಹಂಚುವುದು ರೂಢಿ. ಹರಕೆ ಮಾಡಿಕೊಂಡ ಹಲವಾರು ಭಕ್ತರು ಕಾಡಿನ ಪ್ರದೇಶದ ಶಂಕರನ ಹಳ್ಳದಲ್ಲಿ ಹೋಳಿಗೆಯ ಸಿದ್ಧತೆ ಮಾಡುವ ದೃಶ್ಯ ಎಲ್ಲೆಡೆ ಕಂಡುಬಂತು.

ಕಂಗ್ರಾಳಿ: ಕನ್ನಡ ಫಲಕಗಳಿಗೆ ಮಸಿ

ಬೆಳಗಾವಿ: ತಾಲ್ಲೂಕಿನ ಕಂಗ್ರಾಳಿ ಹೊರವಲಯದ ರಸ್ತೆಬದಿಯಲ್ಲಿ ಕನ್ನಡದಲ್ಲಿರುವ ಸಂಚಾರ ನಿಯಮ ಜಾಗೃತಿ ಫಲಕಗಳಿಗೆ ಕಿಡಿಗೇಡಿಗಳು ಮಸಿ ಎರಚಿ ವಿಕೃತಿ ಮೆರೆದಿದ್ದಾರೆ. ಯಾವಾಗ ಮಸಿ ಎರಚಲಾಗಿದೆ ಎಂಬ ಮಾಹಿತಿ ಇಲ್ಲ. ಆದರೆ, ಈ ಕುರಿತಾತ ಫೋಟೊಗಳು ಸಾಮಾಜಿಕ ಜಾಲತಾಣದಲ್ಲಿ ಶನಿವಾರ ವೈರಲ್ ಆಗಿವೆ.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎ/ಸಿಎನ್/ಬಿಎನ್‌ಸಿ/79/2022
ದಿನಾಂಕ : 11-01-2022
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಗಿಣಿಗೇರ – ರಾಯಚೂರು ಹೊಸ ಬಿಜಿ ಮಾರ್ಗದಲ್ಲಿ ಗೋರೆಬಾಳ ಮತ್ತು ಸಿಂಧನೂರು ರೈಲ್ವೆ ನಿಲ್ದಾಣದ ಕಟ್ಟಡಗಳ ಮತ್ತು ಪ್ಲಾಟ್‌ಫಾರಂಗಳ ವಿದ್ಯುದೀಕರಣ ಮತ್ತು ಸರ್ಕ್ಯುಲೇಟಿಂಗ್ / ಲೋಡಿಂಗ್ ಪ್ರದೇಶದಲ್ಲಿ ವಿದ್ಯುತ್ ವ್ಯವಸ್ಥೆ ಮತ್ತು ಬೆಳಕಿನ ಸೌಲಭ್ಯಗಳು.	ರೂ. 1,23,47,907/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 04–02–2022ರಂದು 11:30 ಗಂಟೆಯವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ಜ / ನಿರ್ಮಾಣ
ಪಿಯುಬಿ/376/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021–22 ಬೆಂಗಳೂರು ದಂಡು
S.W.Railways SWRRLY SWRRLY

ವಾಹನ ಬಿಡಿಭಾಗದಲ್ಲಿ ಮೂಡಿದ ಕಲಾಕೃತಿಗಳು

ಪ್ರಜಾವಾಣಿ ವಾರ್ತೆ

ಯಲಹಂಕ: ನಿರುಪಯುಕ್ತ ವಾಹನಗಳ ಬಿಡಿಭಾಗಗಳಿಂದ ತಯಾರಿಸಿರುವ ಕಲಾಕೃತಿಗಳು ಇಲ್ಲಿನ ದೊಡ್ಡಬಳ್ಳಾಪುರ ಮುಖ್ಯರಸ್ತೆಯ ಎನ್.ಇ.ಎಸ್ ವೃತ್ತ, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ ಹಾಗೂ ಡೇರಿ ವೃತ್ತದ ಪಾದಚಾರಿ ಮಾರ್ಗಗಳಲ್ಲಿ ಜನರನ್ನು ಆಕರ್ಷಿಸುತ್ತಿವೆ.

ಅಶೋಕ ಸ್ತಂಭ, ಕುದುರೆ, ಜಿಂಕೆ, ಆನೆ, ಗೂಳಿ, ಸಿಂಹ, ಆಟೊ, ಟ್ರ್ಯಾಕ್ಟರ್, ಅಂಬಾಸೆಡರ್ ಕಾರ್ ಸೇರಿದಂತೆ ಲೋಹದ ವಿವಿಧ ಕಲಾಕೃತಿಗಳನ್ನು ರಸ್ತೆಬದಿ ಹಾಗೂ ವೃತ್ತಗಳಲ್ಲಿ ನಿಲ್ಲಿಸಲಾಗಿದೆ. ಇವುಗಳಿಗೆ ಬಣ್ಣ ಬಣ್ಣದ ವಿದ್ಯುತ್ ದೀಪಗಳ ಅಲಂಕಾರ ಮಾಡಲಾಗಿದೆ. ರಾತ್ರಿ ವೇಳೆ ಝಗಮಗಿಸುವ ಬೆಳಕಿನಿಂದ ಕಂಗೊಳಿಸುತ್ತಿರುವ ಈ ಕಲಾಕೃತಿಗಳು ಇಲ್ಲಿನ ರಸ್ತೆಗಳಲ್ಲಿ ಸಾಗುವವರ ಕಣ್ಮನ ಸೆಳೆಯುತ್ತಿವೆ.

ಕಲಾಕೃತಿಗಳನ್ನು ಉದ್ಘಾಟಿಸಿದ ಶಾಸಕ ಎಸ್.ಆರ್.ವಿಶ್ವನಾಥ್, 'ನಿರುಪಯುಕ್ತ ವಾಹನಗಳ ಬಿಡಿಭಾಗಗಳನ್ನು ಬಳಸಿಕೊಂಡು ಈ ಲೋಹದ ಕಲಾಕೃತಿಗಳನ್ನು ಸಿದ್ಧಪಡಿಸಲಾಗಿದೆ. ಜನರನ್ನು ಆಕರ್ಷಿಸುವಂತೆ ರಸ್ತೆ ಬದಿಗಳಲ್ಲಿ ನಿಲ್ಲಿಸಲಾಗಿದೆ. ಈ ಕಲಾಕೃತಿಗಳಿಗೆ ಹಾಗೂ ಇಲ್ಲಿನ ವಿಶೇಷ ಉದ್ಯಾನ ನಿರ್ಮಾಣಕ್ಕೆ ಪಾಲಿಕೆ ವತಿಯಿಂದ ಒಟ್ಟು ₹3 ಕೋಟಿ ವೆಚ್ಚ ಮಾಡಲಾಗಿದೆ' ಎಂದರು.

'ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಯಲಹಂಕ ನಗರವನ್ನು ವಿಶೇಷ ಆಕರ್ಷಣೆಗಳ ಮೂಲಕ ಮತ್ತಷ್ಟು ವರ್ಣರಂಜಿತವಾಗಿಸಲು ಕ್ರಮ ಕೈಗೊಳ್ಳಲು ಸರ್ಕಾರ ಬದ್ಧವಾಗಿದೆ' ಎಂದರು.

ಬಿಬಿಎಂಪಿ ಯಲಹಂಕ ವಲಯದ ಜಂಟಿ ಆಯುಕ್ತರಾದ ಪೂರ್ಣಿಮಾ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ನಂದೀಶ್, ಬಿಜೆಪಿ ಮುಖಂಡರಾದ ಎಂ.ಸತೀಶ್, ಎಂ.ಮುನಿರಾಜು, ಎ.ಸಿ.ಮುನಿಕೃಷ್ಣಪ್ಪ ಇದ್ದರು.

ವಾಹನಗಳ ಬಿಡಿಭಾಗಗಳಿಂದ ತಯಾರಿಸಿರುವ ಕಲಾಕೃತಿ

ಗಣರಾಜ್ಯೋತ್ಸವ ಪರೇಡ್: 24 ಸಾವಿರ ಮಂದಿಗೆ ಸೀಮಿತ

ನವದೆಹಲಿ (ಪಿಟಿಐ): ರಾಜಧಾನಿ ದೆಹಲಿಯಲ್ಲಿ ವ್ಯಾಪಕವಾಗಿರುವ ಕೋವಿಡ್ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಈ ವರ್ಷ ಜನವರಿ 26ರಂದು ನಡೆಯುವ ಗಣರಾಜ್ಯೋತ್ಸವ ಸಮಾರಂಭದ ಪರೇಡ್‌ಗೆ ಸುಮಾರು 24 ಸಾವಿರ ಜನರಿಗಷ್ಟೇ ಅನುಮತಿ ನೀಡಲಾಗುವುದು ಎಂದು ಕೇಂದ್ರ ಸರ್ಕಾರದ ಮೂಲಗಳು ಶನಿವಾರ ತಿಳಿಸಿವೆ.

2020ರಲ್ಲಿ, ಭಾರತದಲ್ಲಿ ಸಾಂಕ್ರಾಮಿಕ ರೋಗ ವ್ಯಾಪಿಸುವುದಕ್ಕೂ ಮೊದಲು ನಡೆದ ಗಣರಾಜ್ಯೋತ್ಸವದಲ್ಲಿ ಸುಮಾರು 1.25 ಲಕ್ಷ ಜನರಿಗೆ ಭಾಗವಹಿಸಲು ಅವಕಾಶ ಕಲ್ಪಿಸಲಾಗಿತ್ತು. 2021ನೇ ಸಾಲಿನಲ್ಲಿ ಕೋವಿಡ್ ಪಿಡುಗು ವ್ಯಾಪಿಸಿದ್ದರಿಂದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸುವವರ ಸಂಖ್ಯೆಯನ್ನು 25 ಸಾವಿರಕ್ಕೆ ಮೊಟಕುಗೊಳಿಸಲಾಗಿತ್ತು ಎಂದು ಮೂಲಗಳು ಹೇಳಿವೆ.

ಕಳೆದ ವರ್ಷದಂತೆ ಈ ವರ್ಷವೂ ಕೋವಿಡ್ ಕಾರಣದಿಂದಾಗಿ ಗಣರಾಜ್ಯೋತ್ಸವ ಸಮಾರಂಭದಲ್ಲಿ ಯಾವುದೇ ವಿದೇಶಿ ಗಣ್ಯರು ಅತಿಥಿಯಾಗಿ ಪಾಲ್ಗೊಳ್ಳುವ ಸಾಧ್ಯತೆ ಇಲ್ಲ. ಅದಾಗ್ಯೂ, ಭಾರತವು ಉಜ್ಬೇಕಿಸ್ತಾನ್, ತುರ್ಕಮೆನಿಸ್ತಾನ್, ಕಜಕಿಸ್ತಾನ್, ಕಿರ್ಗಿಜ್ ಗಣರಾಜ್ಯ ಮತ್ತು ತಜಕಿಸ್ತಾನ್ ನಾಯಕರನ್ನು ಆಹ್ವಾನಿಸಲು ಯೋಜಿಸಿತ್ತು ಎಂದು ಹೇಳಲಾಗಿದೆ.

ಈ ವರ್ಷ ಗಣರಾಜ್ಯೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲಿರುವ ಸುಮಾರು 24,000 ಜನರಲ್ಲಿ 19,000 ಮಂದಿಯನ್ನು ಆಹ್ವಾನಿಸಲಾಗುವುದು. ಉಳಿದ ಸಾರ್ವಜನಿಕರು ಟಿಕೆಟ್ ಖರೀದಿಸಬಹುದು ಎಂದು ಮೂಲಗಳು ತಿಳಿಸಿವೆ. ಸಮಾರಂಭದಲ್ಲಿ ಎಲ್ಲ ರೀತಿಯಲ್ಲೂ ಕೋವಿಡ್ ನಿಯಮಗಳನ್ನು ಪಾಲಿಸಲಾಗುತ್ತದೆ. ಆಸನ ವ್ಯವಸ್ಥೆ ಮಾಡುವಾಗ ವ್ಯಕ್ತಿಗತ ಅಂತರ ಅನುಸರಿಸಲಾಗುತ್ತದೆ. ಮಾಸ್ಕ್ ಧರಿಸುವುದು ಕಡ್ಡಾಯವಾಗಿದ್ದು, ಸ್ಯಾನಿಟೈಸರ್ ವ್ಯವಸ್ಥೆ ಮಾಡಲಾಗುತ್ತದೆ ಎಂದು ಹೇಳಿವೆ.

ಜ.23ರಿಂದಲೇ ಗಣರಾಜ್ಯೋತ್ಸವ ಸಂಭ್ರಮ

ನವದೆಹಲಿ (ಪಿಟಿಐ): ಗಣರಾಜ್ಯೋತ್ಸವ ಸಂಭ್ರಮಾಚರಣೆಯು ಇನ್ನು ಮುಂದೆ ಜನವರಿ 24ರ ಬದಲಿಗೆ ಒಂದು ದಿನ ಮೊದಲು ಅಂದರೆ ಜನವರಿ 23ರಿಂದ ಆರಂಭವಾಗಲಿದೆ. ಸ್ವಾತಂತ್ರ್ಯ ಹೋರಾಟಗಾರ ಸುಭಾಷ್‌ಚಂದ್ರ ಬೋಸ್ ಅವರ ಜನ್ಮದಿನವೂ ಜನವರಿ 23 ಆಗಿದ್ದು, ಆ ದಿನವನ್ನು ಕೇಂದ್ರ ಸರ್ಕಾರ ಈ ಮೂಲಕ ಸ್ಮರಿಸಲು ಮುಂದಾಗಿದೆ.

ಈ ರೀತಿಯ ಕಾರ್ಯಕ್ರಮಗಳ ಮೂಲಕ ಕೇಂದ್ರ ಸರ್ಕಾರ ದೇಶದ ಇತಿಹಾಸ ಮತ್ತು ಸಂಸ್ಕೃತಿಯ ಪ್ರಮುಖ ಅಂಶಗಳನ್ನು ಸ್ಮರಿಸಲಿದೆ. ಈಗಾಗಲೇ ಬೋಸ್ ಅವರ ಜನ್ಮ ದಿನವನ್ನು 'ಪರಾಕ್ರಮ್ ದಿವಸ್' ಎಂದು ಕೇಂದ್ರ ಸರ್ಕಾರ ಆಚರಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ತಾಳ್ಮೆ ಪರೀಕ್ಷಿಸುವ ತಪ್ಪು ಮಾಡಬೇಡಿ –ಜನರಲ್ ನರವಣೆ

'ಗಡಿ ಯಥಾಸ್ಥಿತಿ ಬದಲಿಸಲು ಅವಕಾಶ ಇಲ್ಲ'

ನವದೆಹಲಿ (ಪಿಟಿಐ): 'ದೇಶದ ಗಡಿಯುದ್ದಕ್ಕೂ ಯಥಾಸ್ಥಿತಿಯನ್ನು ಬದಲಿಸುವ ಯಾವುದೇ ಪ್ರಯತ್ನಗಳಿಗೂ ಅವಕಾಶ ನೀಡುವುದಿಲ್ಲ ಎಂಬ ಭಾರತೀಯ ಸೇನೆಯ ಸಂದೇಶ ಸ್ಪಷ್ಟವಾಗಿದ್ದು, ಇದರಲ್ಲಿ ಯಶಸ್ವಿಯಾಗಿದ್ದೇವೆ' ಎಂದು ಸೇನೆಯ ಮುಖ್ಯಸ್ಥ ಜನರಲ್ ಎಂ.ಎಂ.ನರವಣೆ ಶನಿವಾರ ಹೇಳಿದರು.

ಸೇನಾ ದಿನದ ಕವಾಯತು ಉದ್ದೇಶಿಸಿ ಮಾತನಾಡಿದ ಅವರು, ಚೀನಾದ ಗಡಿಯುದ್ದಕ್ಕೂ ಇರುವ ಸ್ಥಿತಿಯನ್ನು ಉಲ್ಲೇಖಿಸಿದ ಅವರು, 'ಕಳೆದ ವರ್ಷ ಭಾರತೀಯ ಸೇನೆಗೆ ತೀವ್ರ ಸವಾಲಿನದಾಗಿತ್ತು' ಎಂದು ಹೇಳಿದರು.

ಸ್ವಾತಂತ್ರ್ಯಾನಂತರ ಭಾರತ ಸೇನೆಯ ಮೊದಲ ಚೀಫ್ ಕಮಾಂಡರ್ ಆಗಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರಿಯಪ್ಪ ಅವರು ಅಧಿಕಾರ ಸ್ವೀಕರಿಸಿದ ನೆನಪಿಗಾಗಿ ಜನವರಿ 15 ಅನ್ನು 'ಸೇನಾ ದಿನ'ವಾಗಿ ಆಚರಿಸಲಾಗುತ್ತಿದೆ.

ಪೂರ್ವ ಲಡಾಖ್‌ನಲ್ಲಿನ ಅನಿಶ್ಚಿತತೆಯನ್ನು ಉಲ್ಲೇಖಿಸಿ, ಪರಿಸ್ಥಿತಿಯನ್ನು ನಿಯಂತ್ರಣದಲ್ಲಿಡಲು ಭಾರತ–ಚೀನಾ ನಡುವೆ ಸೇನಾ ಹಂತದಲ್ಲಿ ಇತ್ತೀಚೆಗಷ್ಟೇ 14ನೇ ಸುತ್ತಿನ ಮಾತುಕತೆ ಮುಗಿದಿದೆ. ವಿವಿಧ ಹಂತದಲ್ಲಿ ನಡೆದ ಜಂಟಿ ಯತ್ನದ ಫಲವಾಗಿ ವಿವಿಧೆಡೆ ನಿಯೋಜಿಸಿದ್ದ ಸೇನೆಯ ತುಕಡಿಗಳನ್ನು ಹಿಂಪಡೆಯಲಾಗಿದೆ ಎಂದು ಹೇಳಿದರು.

ಪರಸ್ಪರ ಮತ್ತು ಸಮಾನ ಭದ್ರತೆಗಾಗಿ ಈಗಿನ ಸ್ಥಿತಿಗೆ ಪರಿಹಾರ ಕಂಡುಕೊಳ್ಳುವ ಯತ್ನ ನಡೆದಿದೆ. ಭದ್ರತೆಗಾಗಿ ಹಿಮಾವೃತ ಶಿಖರದಲ್ಲಿ ನಿಯೋಜಿಸಲಾಗಿರುವ ಸೈನಿಕರ ನೈತಿಕಶಕ್ತಿಯು ಉನ್ನತವಾದುದು ಎಂದು ಶ್ಲಾಘಿಸಿದರು.

ಸೇನೆ ದಿನ ನಿಮಿತ್ತ ನವದೆಹಲಿಯಲ್ಲಿ ಶನಿವಾರ ನಡೆದ ಕವಾಯತು ವೇಳೆ ಆಕಾಶ್ ಕ್ಷಿಪಣಿ ವ್ಯವಸ್ಥೆ ಪ್ರದರ್ಶಿಸಲಾಯಿತು –ಪಿಟಿಐ ಚಿತ್ರ

'ಸೇನೆಯಿಂದ ನಾಗರಿಕ ಆತ್ಮವಿಶ್ವಾಸ ವೃದ್ಧಿ'

ಭಾರತವು ಇನ್ನಷ್ಟು ಸದೃಢಗೊಂಡು, ಉನ್ನತ ಸ್ಥಾನಕ್ಕೆ ಏರಿದಂತೆ ದೇಶದ ಹಿತಾಸಕ್ತಿಯನ್ನು ರಕ್ಷಿಸುವ ವಿಷಯದಲ್ಲಿ ಭಾರತೀಯ ಸೇನೆಯು ಎಂದಿಗೂ ಕೇಂದ್ರ ಸ್ಥಾನದಲ್ಲಿಯೇ ಇರಲಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

ಸೇನೆಯು ನಾಗರಿಕರ ಆತ್ಮ ವಿಶ್ವಾಸವನ್ನು ಹೆಚ್ಚಿಸಿದೆ. ಗಡಿಭಾಗದಲ್ಲಿ ನಿರಂತರವಾಗಿ ಕಟ್ಟೆಚ್ಚರ ವಹಿಸಿದೆ ಎಂದು ಸೇನೆ ದಿನದ ಸಂದೇಶದಲ್ಲಿ ಶ್ಲಾಘಿಸಿದರು.

ಜಮ್ಮು – ಕಾಶ್ಮೀರ: ವಾರಾಂತ್ಯ ನಿರ್ಬಂಧ ಆರಂಭ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿ ಕೋವಿಡ್ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಇಲ್ಲಿನ ಆಡಳಿತವು ಶನಿವಾರ ಮುಂಜಾನೆಯಿಂದಲೇ ಅಗತ್ಯ ವಸ್ತುಗಳ ಮಾರಾಟ ಹಾಗೂ ಸೇವೆಗಳು ಹೊರತುಪಡಿಸಿ ಬೇರೆಲ್ಲಾ ಚಟುವಟಿಕೆಗಳಿಗೆ ನಿರ್ಬಂಧ ವಿಧಿಸಿ ಆದೇಶ ಹೊರಡಿಸಿದೆ.

ಮುಖ್ಯ ಕಾರ್ಯದರ್ಶಿ ಎ.ಕೆ. ಮೆಹ್ತಾ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದ್ದು, ಆದೇಶದ ಹಿನ್ನೆಲೆಯಲ್ಲಿ ಅಂಗಡಿ ಮುಂಗಟ್ಟುಗಳು ಮುಚ್ಚಿದ್ದವು. ವಾರಾಂತ್ಯ ನಿರ್ಬಂಧದ ಅರಿವಿಲ್ಲದೇ ಕೆಲಸ ಕಾರ್ಯಗಳಲ್ಲಿ ತೊಡಗಿದ್ದ ಜನರನ್ನು ಅಧಿಕಾರಿಗಳು ಮನವೊಲಿಸಿ ಮನೆಗಳಿಗೆ ಕಳುಹಿಸಿದರು.

ವಾರಾಂತ್ಯ ಕರ್ಫ್ಯೂ ಆದೇಶವು ಪ್ರತಿ ಶುಕ್ರವಾರ ರಾತ್ರಿ 9ಗಂಟೆಯಿಂದ ಸೋಮವಾರ ಮುಂಜಾನೆ 6 ಗಂಟೆವರೆಗೆ ಜಾರಿ ಇರಲಿದ್ದು, ಶಾಲಾ–ಕಾಲೇಜುಗಳಲ್ಲಿ ಆನ್‌ಲೈನ್ ತರಗತಿಗಳು ಮುಂದುವರೆಯಲಿವೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

'ರಸ್ತೆ, ವಾಯು ಹಾಗೂ ರೈಲು ಮಾರ್ಗಗಳ ಮೂಲಕ ರಾಜ್ಯಕ್ಕೆ ಬರುವ ಕೋವಿಡ್ ಲಕ್ಷಣಗಳು ಇಲ್ಲದ ಪ್ರಯಾಣಿಕರು ಆರ್‌ಟಿಪಿಸಿಆರ್ ಹಾಗೂ ರ್‍ಯಾಪಿಡ್ ಆಂಟಿಜೆನ್ ಪರೀಕ್ಷೆಗೆ ಒಳಗಾಗುವ ಅಗತ್ಯವಿಲ್ಲ. ಲಕ್ಷಣ ಇರುವವರು ಆರ್‌ಟಿಪಿಸಿಆರ್ ಅಥವಾ ಆರ್‌ಎಟಿ ಪರೀಕ್ಷೆ ಒಳಗಾಗುವುದು ಕಡ್ಡಾಯ.

ಟೆಂಡರ್ ಸೂಚನೆ ದಿ ಡೆನ್ ಬೆಂಗಳೂರು, ವೈಟ್‌ಫೀಲ್ಡ್

1 ಮತ್ತು 2, ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ಡಾನ್ ಹಾಸ್ಪಿಟಾಲಿಟಿ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಒಂದು ಘಟಕ ದಿ ಡೆನ್ ಬೆಂಗಳೂರಿನಲ್ಲಿ ಏಪ್ರಿಲ್ 1, 2022 ರಿಂದ ಮಾರ್ಚ್ 31, 2023ರ ವರೆಗೆ ವಾರ್ಷಿಕ ದರ ಒಪ್ಪಂದದ ಆಧಾರದ ಮೇಲೆ ಈ ಕೆಳಗಿನ ವಸ್ತುಗಳನ್ನು ಪೂರೈಸುವ ಸಲುವಾಗಿ ಸ್ಥಾಪಿತ ಮಾರಾಟಗಾರರಿಂದ ಟೆಂಡರ್ ಆಹ್ವಾನ ನೀಡುತ್ತದೆ.

ತರಕಾರಿಗಳು, ಸ್ಥಳೀಯ ಮತ್ತು ಆಮದು ಮಾಡಿಕೊಂಡ ಹಣ್ಣುಗಳು, ವಿಲಕ್ಷಣ ತರಕಾರಿಗಳು, ಅಣಬೆಗಳು, ಸಿಪ್ಪೆ ಸುಲಿದ ಮೊಳಕೆಯ ವಸ್ತುಗಳು, ಹಾಲು ಮತ್ತು ಹಾಲು ಉತ್ಪನ್ನಗಳು, ಮೀನು, ಸಮುದ್ರ ಆಹಾರ, ಮಟನ್, ಹಂದಿ, ಮೊಟ್ಟೆಗಳು, ಶೀತಲ ಕಟ್ಸ್, ನೀರು, ಚಾರ್ಕೋಲ್, ತಾಜಾ ಹೂವುಗಳು, ದಿನಸಿ ಮತ್ತು ನಿಬಂಧನೆಗಳು / ಆಟಾ / ಮೈದಾ, ಗೋಡಂಬಿ ಬೀಜಗಳು, ಐಸ್ ಬ್ಲಾಕ್ / ಐಸ್ ಘನಗಳು / ಡ್ರೈ ಐಸ್, ಸ್ಕ್ರಾಪ್, ಪೋರ್ಟಬಲ್ ವಾಟರ್ ಟ್ಯಾಂಕರ್, ಆಡಿಯೋ ವಿಷುಯಲ್ ಸಲಕರಣೆಗಳ ನೇಮಕ, ಸಾರಿಗೆ ಪೂರೈಕೆದಾರರು (ಸಿಬ್ಬಂದಿ ಡ್ರಾಪ್) ಔತಣಕೂಟ ನೇಮಕಾತಿ – ಬೆಳಕು, ಟೆಂಟ್ ಸೇವೆಗಳು / ಸಿಜಿಎಸ್ ವಸ್ತುಗಳು, ಮೋಟಾರ್ ರಿವೈಂಡಿಂಗ್, ಡಿಬ್ರಿಸ್ ಕ್ಲೀನಿಂಗ್, ಕೊರಿಯರ್ ಸರ್ವೀಸಸ್, ನಿರ್ವಹಣೆ / ದುರಸ್ತಿ ಕೆಲಸದ ಕೆಲಸ, ಸಿವಿಲ್, ಕೊಳಾಯಿ ಮತ್ತು ನೈರ್ಮಲ್ಯ, ಪೀಠೋಪಕರಣ, ವಿದ್ಯುತ್, ಯಾಂತ್ರಿಕ, ಹವಾನಿಯಂತ್ರಣ ಇತ್ಯಾದಿಗಳನ್ನು ಒಳಗೊಂಡಿದೆ.

ಜನವರಿ 17, 2022 ರಿಂದ ಫೆಬ್ರವರಿ 02, 2022 ರವರೆಗೆ ಬೆಳಿಗ್ಗೆ 10–00 ರಿಂದ ಸಂಜೆ 5–00 ವರೆಗೆ ಟೆಂಡರ್ ಅರ್ಜಿಯನ್ನು ಸಂಗ್ರಹಿಸಬಹುದು. ರೂ. 500/– ನಗದು (ಮರುಪಾವತಿಸಲಾಗದು) ಮೊಹರು ಹೊದಿಕೆಯೊಳಗೆ ಅರ್ಜಿಯನ್ನು ಸರಿಯಾಗಿ ತುಂಬಿದ ಫಾರ್ಮ್ ಅನ್ನು 2022ರ ಫೆಬ್ರವರಿ 12ರ ಸಂಜೆ 5–00 ಹೊತ್ತಿಗೆ ಹೋಟೆಲ್ ದಿ ಡೆನ್ ಬೆಂಗಳೂರಿನಲ್ಲಿ ಮೆಟೀರಿಯಲ್ಸ್ ಇಲಾಖೆಗೆ ಸಲ್ಲಿಸಬೇಕು. ಹೊಸ ಎಫ್‌ಎಸ್‌ಎಸ್‌ಎಐ ಕಾಯಿದೆಯ ನಿಬಂಧನೆಗಳನ್ನು ಅನುಸರಿಸಲು ಎಲ್ಲಾ ಟೆಂಡರುಗಳು : ಐಎಸ್‌ಓ 22000/ 14000 ಪ್ರಮಾಣೀಕರಣಗಳೊಂದಿಗೆ ರೈತರು / ತಯಾರಕರು / ಮಾರಾಟಗಾರರಿಗೆ ಆದ್ಯತೆ ನೀಡಲಾಗುವುದು

ಸಂಪರ್ಕಿಸಿ : 08071117316 / 7317
ಈಮೇಲ್ : mmr.blr@denhotels.com & apm.blr@denhotels.com
ನಾವು ಡಾನ್ ಹಾಸ್ಪಿಟಾಲಿಟಿ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಸ್ವೀಕರಿಸುವ / ತಿರಸ್ಕರಿಸುವ ಹಕ್ಕುಗಳನ್ನು ಕಾಯ್ದಿರಿಸಿ

ತಾಲೀಮಿನ ಸಲಕರಣೆಗಳು

ಗರಡಿ ಮನೆ ಹೊರನೋಟ

ಶಿವಾಜಿನಗರ: ಇಲ್ಲಿ ವ್ಯಾಯಾಮ ಶಿಕ್ಷಣ ಉಚಿತ • ರೆಸ್ಟೋರೆಂಟ್‌ನ ಆದಾಯದಲ್ಲಿ ಬಾಡಿಗೆ ವೆಚ್ಚ

ಶತಮಾನ ಕಂಡ ಗರಡಿ ಮನೆ

• ಶಿವರಾಜ ರಾಮನಾಳ

ಬೆಂಗಳೂರು: ಸುತ್ತಲೂ ವಾಣಿಜ್ಯ ಮಳಿಗೆಗಳು, ಮೂಗಿಗೆ ಬಡಿಯುವ ಘಮಗುಡುವ ಬಿರಿಯಾನಿಯ ಸ್ವಾದ, ಸದಾ ಜನಜಂಗುಳಿಯಿಂದ ಕೂಡಿರುವ ಶಿವಾಜಿನಗರದ ನಡುವೆ ಒಂದು ಕಸರತ್ತಿನ ಅಖಾಡವಿದೆ. ಈ ಗರಡಿ ಮನೆ 100 ವರ್ಷಗಳಿಗೂ ಹಳೆಯದು. ಈಗಿನ ತಲೆಮಾರಿನ ಅನೇಕರಿಗೆ ಇದರ ಪರಿಚಯ ಇರಲಿಕ್ಕಿಲ್ಲ. ಆದರೆ, ಕುಸ್ತಿಯ ಬಗ್ಗೆ ಒಲವಿದ್ದ ಹಳೆಯ ತಲೆಮಾರಿನ ನಗರವಾಸಿಗಳಿಗೆ ಈ ಗರಡಿ ಮನೆ ಚೆನ್ನಾಗಿಯೇ ಗೊತ್ತು.

ಬಹಳ ಹಳೆಯದಾದ, ಪುಟ್ಟದ್ವಾರ, ಅದರ ಮೇಲೆ ಒಂದು ತುಕ್ಕು ಹಿಡಿದ ಫಲಕ. ಅಲ್ಲಿ 'ಶಿವಾಜಿನಗರ್ ಗರ್‌ಡಿ ಉಸ್ತಾದ್ ಪೆಹಲ್‌ವಾನ್ ಕಾಲೆ ಭೈ' ಎಂದು ಕನ್ನಡ, ಉರ್ದು ಮತ್ತು ಇಂಗ್ಲಿಷಿನಲ್ಲಿ ಬರೆದಿರುವ ಬರಹ ನಮ್ಮನ್ನು ಈ ಗರಡಿ ಮನೆಗೆ ಸ್ವಾಗತಿಸುತ್ತದೆ. ಹೊಸ್ತಿಲನ್ನು ದಾಟುತ್ತಿದ್ದಂತೆಯೇ ಎದುರಾಗುವುದು ಪಂಕ್ತಿ ಊಟದ ಮೇಜುಗಳು. ಮೂಗಿಗೆ ಬಡಿಯುವ ಒಗ್ಗರಣೆಯ ಘಾಟು. ಅದರ ಪಕ್ಕದಲ್ಲೇ ಕುಸ್ತಿಯ ಪಟ್ಟುಗಳನ್ನು ಹಾಕುವ ಮಟ್ಟಿ (ಅಖಾಡ) ನಮ್ಮನ್ನು ಸೆಳೆಯುತ್ತದೆ. ಇಲ್ಲಿ ಈಗಲೂ ಕುಸ್ತಿಯ ಮಟ್ಟುಗಳನ್ನು ಅಭ್ಯಾಸ ಮಾಡಲಾಗುತ್ತದೆ. ಚೌಕಾಕಾರದ ಈ ಮಟ್ಟಿಯಲ್ಲಿ ಕೆಂಪು ಮಣ್ಣು ಹರಡಿದೆ. ಅದರಲ್ಲಿ ಕಸರತ್ತು ನಡೆಸುವ ಸರಪಟ, ದಂಡ ಮೊದಲಾದ ಸಲಕರಣೆಗಳಿವೆ. ಇವುಗಳನ್ನು ನೋಡುವಾಗಲೇ ಇವು ಬಹಳ ಹಳೆಯ ಕಾಲದವು ಎನ್ನುವುದು ಮನದಟ್ಟಾಗುತ್ತದೆ.

ಸುಮಾರು 1900ರಲ್ಲಿ ಆರಂಭವಾದ ಈ ಗರಡಿ ಮನೆಯನ್ನು ಸದ್ಯ ಖದೀರ್ ಅಹ್ಮದ್ ಖುರೇಷಿ ಎಂಬುವರು ನಡೆಸುತ್ತಿದ್ದಾರೆ. ಇವರು ನಾಲ್ಕನೇ ತಲೆಮಾರಿನವರಂತೆ. ಇವರ ಮುತ್ತಾತ ವೇಲೂರು ಹುಸೇನ್ ಆರಂಭಿಸಿದ ಈ ಗರಡಿಯನ್ನು ಮುನ್ನಡೆಸುವ ನೊಗವನ್ನು ಈಗ ಖದೀರ್ ಹೊತ್ತಿದ್ದಾರೆ. ಅಫ್ಘಾನಿಸ್ತಾನದವರಾದ ಇವರ ಕುಟುಂಬ ಇಲ್ಲಿಗೆ ಬಂದು ನೆಲೆನಿಂತು ಗರಡಿ ಕಾಯಕ ಆರಂಭಿಸಿದ್ದೂ ಕುತೂಹಲಕಾರಿ ಕತೆ. ಅದನ್ನು ಖದೀರ್ ಹೀಗೆ ವಿವರಿಸುತ್ತಾರೆ.

'ನಮ್ಮ ಮುತ್ತಾತ ಕುಸ್ತಿಪಟು ಆಗಿದ್ದರು. ಆಗ ಶಿವಾಜಿನಗರ ಪ್ರದೇಶದಲ್ಲಿ ಬ್ರಿಟೀಷರ ಆಡಳಿತ ಕಚೇರಿಯೊಂದಿತ್ತು. ಕುಸ್ತಿ ಮಾಡುತ್ತಿದ್ದ ಮುತ್ತಾತನನ್ನು ಬ್ರಿಟಿಷ್ ಅಧಿಕಾರಿಯೊಬ್ಬರು ಅಖಾಡಕ್ಕೆ ಆಹ್ವಾನಿಸಿದ್ದರು. ಮುತ್ತಾತ ಪಂದ್ಯದಲ್ಲಿ ಜಯಿಸಿದರು. ಅಲ್ಲಿದ್ದ ಕೆಲ ಆಸಕ್ತರು ತಮಗೂ ಕುಸ್ತಿ ಹೇಳಿಕೊಡುವಂತೆ ಅವರಲ್ಲಿ ಕೋರಿದರು. ಕುಸ್ತಿಯ ಅಖಾಡಕ್ಕಾಗಿ ದೇವಸ್ಥಾನದ ಜಾಗವನ್ನು ಬಾಡಿಗೆ ಪಡೆದು ಅಲ್ಲಿ ಗರಡಿ ಮನೆ ಆರಂಭಿಸಲಾಯಿತು. ತರುಣರಾಗಿದ್ದ ಮುತ್ತಾತ ಇಲ್ಲಿನ ಮಕ್ಕಳಿಗೆ ಹಾಗೂ ಯುವಕರಿಗೂ ಕಸರತ್ತುಗಳನ್ನು ಹೇಳಿಕೊಟ್ಟರು. ನಂತರ ತಾತ ಮೊಹಮ್ಮದ್ ಇಬ್ರಾಹಿಂ ಕಾಲೆ ಭಾಯಿ, ಬಳಿಕ ತಂದೆ ಬಷೀರ್ ಅಹ್ಮದ್ ಖುರೇಷಿ, ಈಗ ನಾನು..' ಎಂದು ಗರಡಿ ಮನೆಯ ಹಿರಿಮೆಯನ್ನು ವಿವರಿಸುವಾಗ ಹೆಮ್ಮೆಯ ನಗೆಯೊಂದು ಅವರ ಮೊಗದಲ್ಲಿ ಮೂಡಿತ್ತು.

'ಇಲ್ಲಿ ಉಚಿತವಾಗಿ ಕಸರತ್ತು ಹೇಳಿಕೊಡಲಾಗುತ್ತದೆ. ಜಾತಿ, ಮತದ ಹಂಗಿಲ್ಲದೆ, ಶುಲ್ಕ ವಿಧಿಸದೆ ವ್ಯಾಯಾಮ ಶಿಕ್ಷಣ ನೀಡುತ್ತೇವೆ. ಬಾಡಿಗೆಯ ವೆಚ್ಚ ಭರಿಸಲು ಇದರ ಸ್ವಲ್ಪ ಭಾಗವನ್ನು ರೆಸ್ಟೋರೆಂಟ್ ಆಗಿ ಪರಿವರ್ತಿಸಿದ್ದೇವೆ' ಎನ್ನುತ್ತಾರೆ ಖದೀರ್ ಅಹ್ಮದ್.

'ಇಲ್ಲಿ ದೇಹ ದಂಡಿಸಿದ ತೋಡವಾಲೆ ಅಹ್ಮದ್ ಹುಸೇನ್, ಅಮೀದ್ ಪೈಲ್ವಾನ್ ತಮಿಳು ಸಿನಿಮಾಗಳಲ್ಲಿ ನಟಿಸಿದ್ದಾರೆ. ಪಾಕಿಸ್ತಾನದಿಂದ ಚುಡಿ ಪೈಲ್ವಾನ್ ಇಲ್ಲಿ ಬಂದಿದ್ದರು' ಎಂದು ಖದೀರ್ ಮೆಲುಕು ಹಾಕಿದರು.

ಮೈಸೂರು, ಕೋಲಾರ, ಬಂಗಾರಪೇಟೆ, ಕೊಲ್ಹಾಪುರ, ಸೊಲ್ಲಾಪುರ, ಮುಂಬೈ, ಹುಬ್ಬಳ್ಳಿ-ಧಾರವಾಡದಲ್ಲಿ ನಡೆಯುವ ಸ್ಪರ್ಧೆಗಳಲ್ಲಿ ಇಲ್ಲಿನ ಪೈಲ್ವಾನರು ಭಾಗವಹಿಸುತ್ತಾರೆ.

ಬೆಳಿಗ್ಗೆ 6 ರಿಂದ 9 ಮತ್ತು ಸಂಜೆ 6.30 ರಿಂದ ರಾತ್ರಿ 9.30ರವರೆಗೆ ಗರಡಿ ತಾಲೀಮು ನಡೆಯುತ್ತದೆ. ನಿತ್ಯ 30 ಮಂದಿ ಅಭ್ಯಾಸ ನಡೆಸುತ್ತಾರೆ. ಭಾನುವಾರ ಗರಡಿಗೆ ವಿರಾಮ. ವೇಗವಾಗಿ ಬದಲಾಗುತ್ತಿರುವ ಈ ಸಿಲಿಕಾನ್ ಸಿಟಿಯಲ್ಲಿ ಈಗಲೂ ಕುಸ್ತಿಯಂತಹ ಸಾಂಪ್ರದಾಯಿಕ ಕ್ರೀಡೆಯನ್ನು ಜತನದಿಂದ ಪೋಷಿಸಿಕೊಂಡು ಬಂದಿರುವ ಖದೀರ್ ಕುಟುಂಬದ ಕಾಳಜಿಗೊಂದು ಸಲಾಂ.

ಕಣ್ಸೆಳೆವ ಗರಡಿ ಪರಿಕರಗಳು

ಕೈಹಿಡಿ, ಮಣೆ, ಗದೆ, ಸರಪಟ, ದಂಡ, ಹಗ್ಗದ ಗಾಡಿ, ಗುರಾಣಿ, ಗುದ್ದಲಿ ಮುಂತಾದ ಗರಡಿ ಮನೆಯ ಪರಿಕರಗಳೂ ಕಣ್ಸೆಳೆಯುವಂತಿವೆ. ಇಲ್ಲಿ ಕಲಿಸುವ ಜೋ ಕಡ್ತಿ, ಕರೇಲಿ, ಹಗ್ಗ ಎಳೆಯುವ, ದಂಡ ಬೀಸುವ, ಬಸ್ಕಿ ಹೊಡೆಯುವ ಪರಿ, ಜಿಗಿಯುತ್ತಾ ಓಡುವ ಒಂದೊಂದು ಕಸರತ್ತುಗಳೂ ರೋಚಕ ಅನುಭವ ನೀಡುತ್ತವೆ.

ಪಹಿಳ್ವಾನಿ ಹಂಡಿ

ಹೆಸರು ಕೇಳಿದೊಡನೆ ಬಹುತೇಕರು ತಪ್ಪು ತಿಳಿಯುತ್ತಾರೆ. ಇದು ಹಂದಿ ಮಾಂಸ ಅಲ್ಲ. ಇದೊಂದು ವಿಶೇಷ ಖಾದ್ಯವಾಗಿದ್ದು ರಂಜಾನ್ ಹಬ್ಬದ ವೇಳೆ ಮಾತ್ರ ತಯಾರಿಸುತ್ತೇವೆ. ಮಟನ್ ಅನ್ನು ಬೆಣ್ಣೆ, ತುಪ್ಪದೊಂದಿಗೆ ಬೆರೆಸಿ ಮಡಕೆಯಲ್ಲಿ ಬೇಯಿಸುವ ಒಂದು ವಿಶೇಷ ಪದಾರ್ಥ. ಇದು ಬಹಳ ಪೌಷ್ಠಿಕಾಂಶಯುಕ್ತ ಆಹಾರ. ಮಡಕೆಯಲ್ಲಿ ಬೇಯಿಸುವುದರಿಂದ ಹಂಡಿ ಎಂಬ ರೂಢಿನಾಮ ಬಂದಿದೆ ಎಂದು ಖದೀರ್ ಅವರು ವಿವರಿಸುತ್ತಾರೆ.

ಜನರಲ್ಲಿ ಕುಸ್ತಿ ಬಗ್ಗೆ ಆಸಕ್ತಿ ಕಡಿಮೆಯಾಗುತ್ತಿದೆ. ನೈಸರ್ಗಿಕ ದೃಢಕಾಯ ಹೊಂದುವುದಕ್ಕೆ ಬೇಕಾದ ಎಲ್ಲಾ ಕಸರತ್ತು ಇಲ್ಲಿ ಕಲಿಸಲಾಗುತ್ತದೆ. ಮಕ್ಕಳೂ ಸೇರಬಹುದು

ಖದೀರ್ ಅಹ್ಮದ್ ಖುರೇಷಿ,
ಗರಡಿಮನೆಯ ಉಸ್ತುವಾರಿ

ಗರಡಿ ಮನೆಯಲ್ಲಿ ಪಾಕಶಾಲೆ

ಗರಡಿ ಮನೆಯ ಬಾಡಿಗೆ ಮತ್ತು ಇತರ ವೆಚ್ಚಕ್ಕಾಗಿ ಖದೀರ್ 1995ರಲ್ಲಿ ಈ ರೆಸ್ಟೋರೆಂಟ್ ಆರಂಭಿಸಿದ್ದಾರೆ. ಗರಡಿ ಮನೆಯ ಪೈಲ್ವಾನರು ಉಳಿದುಕೊಳ್ಳುತ್ತಿದ್ದ ಜಾಗ ಈಗ ಪಾಕಶಾಲೆಯಾಗಿದೆ. ಆದರೆ ಇದು ಮಧ್ಯಾಹ್ನ 12.30 ರಿಂದ ಸಂಜೆ 4.30ರವರೆಗೆ ಮಾತ್ರ ಕಾರ್ಯನಿರ್ವಹಿಸುತ್ತದೆ. ಉಳಿದ ಸಮಯದಲ್ಲಿ ಗರಡಿಯ ತಾಲೀಮು ನಡೆಯುತ್ತದೆ. ರೆಸ್ಟೋರೆಂಟ್ ವಹಿವಾಟು ವಾರದ ಏಳೂ ದಿನಗಳೂ ನಡೆಯುತ್ತದೆ.

ಇಲ್ಲಿ ಮಟನ್, ಚಿಕನ್ ಮತ್ತು ಮೀನಿನ ಖಾದ್ಯಗಳು ಮಾತ್ರ ದೊರೆಯುತ್ತವೆ. ಶುಕ್ರವಾರ ಮಾತ್ರ ವಿಶೇಷ ಮಟನ್ ಬಿರಿಯಾನಿ ದೊರೆಯುತ್ತದೆ. ಉಳಿದಂತೆ ಎಲ್ಲ ದಿನವೂ ಇಲ್ಲಿ ವಿಶೇಷ ಖಾದ್ಯಗಳಾದ ಚಟ್‌ಪಟಿ ಪಾಲ್, ಸಿಯರ್ ಫಿಶ್ ತಿನಿಸುಗಳು ಲಭ್ಯ. ಬೇರೆ ಯಾವುದೇ ರೀತಿಯ ಮಾಂಸ ಇಲ್ಲಿ ದೊರೆಯುವುದಿಲ್ಲ ಎನ್ನುತ್ತಾರೆ ಖದೀರ್.

ಕಾರ್ಯಕ್ರಮದಲ್ಲಿ (ಕುಳಿತವರು; ಎಡದಿಂದ) ಕೆ.ಆರ್.ಯಶಸ್ವಿನಿ, ಎಲ್.ಎನ್.ಮುಕುಂದರಾಜ್ ಹಾಗೂ ಕಲಾವಿದ ಸಂಗಮೇಶ ಉಪಾಸೆ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. (ನಿಂತವರು; ಎಡದಿಂದ) ಪ್ರಾಧ್ಯಾಪಕ ರಾಜಕುಮಾರ್, ಕವಯಿತ್ರಿ ರತ್ನಾಕಾಳೇಗೌಡ, ಮರುಳಸಿದ್ದಪ್ಪ, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಪ್ರಕಾಶಮೂರ್ತಿ, ಎ.ಎಸ್.ನಾಗರಾಜ ಸ್ವಾಮಿ ಹಾಗೂ ಚಿಂತಕ ರಾಮಣ್ಣ ಎಚ್.ಕೋಡಿಹೊಸಹಳ್ಳಿ ಇದ್ದರು.

'ಕೇಂದ್ರ ಸರ್ಕಾರದಿಂದ ಭಾಷಾ ತಾರತಮ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾವೆಲ್ಲ ಒಕ್ಕೂಟ ವ್ಯವಸ್ಥೆಯಲ್ಲಿ ಬಾಳುತ್ತಿದ್ದೇವೆ. ಹೀಗಿರುವಾಗ ಎಲ್ಲಾ ಭಾಷಿಕರನ್ನೂ ಸಮಾನವಾಗಿ ಕಾಣಬೇಕಿದ್ದ ಕೇಂದ್ರ ಸರ್ಕಾರ ಭಾಷಾ ತಾರತಮ್ಯ ನೀತಿ ಅನುಸರಿಸುತ್ತಿದೆ. ಇದನ್ನು ಎಲ್ಲರೂ ಒಗ್ಗಟ್ಟಾಗಿ ವಿರೋಧಿಸಬೇಕು' ಎಂದು ಸಾಹಿತಿ ಡಾ.ಕೆ.ಮರುಳಸಿದ್ದಪ್ಪ ತಿಳಿಸಿದರು.

ಕನ್ನಡ ಸಂಘರ್ಷ ಸಮಿತಿ ಹಮ್ಮಿಕೊಂಡಿದ್ದ ರಾಷ್ಟ್ರಕವಿ ಕುವೆಂಪು ಅವರ 117ನೇ ಜನ್ಮದಿನ ಕಾರ್ಯಕ್ರಮದಲ್ಲಿ ಲೇಖಕ ಎಲ್.ಎನ್.ಮುಕುಂದ ರಾಜ್ (ಕುವೆಂಪು ಅನಿಕೇತನ), ಕವಯಿತ್ರಿ ಕೆ.ಆರ್.ಯಶಸ್ವಿನಿ (ಕುವೆಂಪು ಯುವಕವಿ) ಹಾಗೂ ಕಲಾವಿದ ಸಂಗಮೇಶ ಉಪಾಸೆ (ನಂ. ನಂಜಪ್ಪ ಚಿರಂತನ) ಅವರಿಗೆ ಪ್ರಶಸ್ತಿಗಳನ್ನು ಪ್ರದಾನ ಮಾಡಿ ಶುಕ್ರವಾರ ಮಾತನಾಡಿದರು.

ಸಂಗಮೇಶ ಉಪಾಸೆ ಅವರು ತಮ್ಮ ತಂದೆಯ ಹೆಸರಿನಲ್ಲಿ ದತ್ತಿ ಸ್ಥಾಪಿಸುವುದಾಗಿ ಘೋಷಿಸಿದರು. ಇದಕ್ಕಾಗಿ ಪ್ರಶಸ್ತಿ ಮೊತ್ತ ₹5 ಸಾವಿರ ಸೇರಿ ಒಟ್ಟು ₹1 ಲಕ್ಷ ನಗದನ್ನು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ಗೆ ನೀಡಿದರು. ಪ್ರತಿ ವರ್ಷ ವೈಚಾರಿಕ ಕೃತಿಕಾರರಿಗೆ ಪ್ರಶಸ್ತಿ ನೀಡುವಂತೆ ಮನವಿ ಮಾಡಿದರು.

'ಪಾಟ್ಕರ್‌ಗೆ ಉತ್ತರಿಸಲು ಸರ್ಕಾರ ಇದೆ'

ಬೆಂಗಳೂರು: 'ಮೇಕೆದಾಟು ಯೋಜನೆ ಬಗ್ಗೆ ಯಾರು ಏನು ಬೇಕಾದರೂ ಹೇಳಿಕೊಳ್ಳಲಿ. ಅವರಿಗೆ ಉತ್ತರ ಕೊಡಲು ಸರ್ಕಾರ ಇದೆ. ನಾವು ಯಾಕೆ ಉತ್ತರಿಸೋಣ? ನಾನು ಸರ್ಕಾರ ಅಲ್ಲ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಡಿ.ಕೆ. ಶಿವಕುಮಾರ್

ಮೇಧಾ ಪಾಟ್ಕರ್ ಹಾಗೂ ಇತರರು ಯೋಜನೆಗೆ ವಿರೋಧ ವ್ಯಕ್ತಪಡಿಸಿರುವ ಬಗ್ಗೆ ಶನಿವಾರ ಪ್ರತಿಕ್ರಿಯಿಸಿದ ಅವರು, 'ಯೋಜನೆಗೆ ನನ್ನದೂ ಸೇರಿದಂತೆ, ನಮ್ಮ ಕ್ಷೇತ್ರದ ಜನರ ಆಸ್ತಿಗಳು ಹೋಗುತ್ತಿವೆ. ವಿರೋಧವನ್ನು ನಾವು ಮಾಡಬೇಕು. ಈ ಯೋಜನೆಯಿಂದ ನಮ್ಮ ತಾಲ್ಲೂಕಿಗೆ ದೊಡ್ಡ ನಷ್ಟ ಉಂಟಾಗಲಿದೆ. ಮೇಧಾ ಅವರು ಹಿರಿಯರು. ಅವರಿಗೆ ಉತ್ತರ ನೀಡಲು ಬೊಮ್ಮಾಯಿ ಸೂಕ್ತ ವ್ಯಕ್ತಿ' ಎಂದರು.

'ಮೇಧಾ ಪಾಟ್ಕರ್ ಅವರ ಭಾವನೆಯನ್ನು ಗೌರವಿಸುತ್ತೇವೆ. ಅವರು ತಮ್ಮದೇ ಆದ ಚಿಂತನೆಗಳ ಮೇಲೆ ಹೋರಾಟ ಮಾಡಿಕೊಂಡು ಬಂದಿದ್ದಾರೆ. ನಮ್ಮ ಹೋರಾಟ ವ್ಯಕ್ತಿಗತ ಚಿಂತನೆಯಲ್ಲ, ಜನರ ಚಿಂತನೆ. ನೀರು ನಮಗೆ ಜೀವ. ಜೀವ ಇದ್ದರಷ್ಟೇ ಜೀವನ. ಅವರ ಅಭಿಪ್ರಾಯ ಅವರದ್ದು. ಸರ್ಕಾರ ಇಂಥ ಯೋಜನೆಗೆ ಪರಿಸರ ಇಲಾಖೆಯಿಂದ ಅನುಮತಿಯಂಥ ಕಾನೂನು ಮಾಡಿರುವುದು ಈ ಉದ್ದೇಶಕ್ಕೆ' ಎಂದರು.

ಬೆಂಗಳೂರಿನ ಕೆರೆ ಕಟ್ಟೆಗಳನ್ನು ಜೀರ್ಣೋದ್ಧಾರ ಮಾಡಿದರೆ ಬೆಂಗಳೂರು ನಗರಕ್ಕೆ ಕುಡಿಯುವ ನೀರು ಪೂರೈಸಬಹುದು ಎಂಬ ಹೇಳಿಕೆಗೆ, 'ಸರ್ಕಾರ ಈ ವಿಚಾರವಾಗಿ ಸಮಿತಿ ಮಾಡಲಿ. ಎಲ್ಲರೂ ಮಳೆ ನೀರಿನ ಕೊಯ್ಲು ಪದ್ಧತಿ ಅಳವಡಿಸಿಕೊಳ್ಳಬೇಕು ಎಂಬ ನಿಯಮವಿದೆ. ಎಲ್ಲರೂ ಅದನ್ನು ಎಲ್ಲಿ ಮಾಡುತ್ತಿದ್ದಾರೆ' ಎಂದು ಪ್ರಶ್ನಿಸಿದರು.

ಕೋವಿಡ್ ಪರೀಕ್ಷೆ ಮಾಡಿಸಲಿ ಎಂದು ಬಿಜೆಪಿ ಸವಾಲೆಸೆದಿರುವ ಬಗ್ಗೆ ಕೇಳಿದ ಪ್ರಶ್ನೆಗೆ, 'ಕಾಯಿಲೆ ಇರುವವರು ಆಸ್ಪತ್ರೆಗೆ ಹೋಗಬೇಕು. ಅವರಿಗೆ ಇದ್ದರೆ ಅವರು ಹೋಗಿ ಪರೀಕ್ಷೆ ಮಾಡಿಸಿಕೊಳ್ಳಲಿ' ಎಂದರು.

'ಪಾದಯಾತ್ರೆ ಯಶಸ್ವಿಗಾಗಿ ನೀವು ಬಿಜೆಪಿಯ ಗುರಿ ಆಗುತ್ತೀರಾ' ಎಂಬ ಪ್ರಶ್ನೆಗೆ, 'ಇದಕ್ಕೆ ಕೊನೆ ಇಲ್ಲ, ನಾವು ಇದರ ಜತೆಯೇ ಬದುಕಿ, ಸಾಯಲು ಸಿದ್ಧರಿದ್ದೇವೆ' ಎಂದರು.

ಪಾದಯಾತ್ರೆಯ ಬಾವುಟ ಕಟ್ಟಲು ತಮಿಳುನಾಡಿನ ಕಾರ್ಮಿಕರು ಬಂದಿದ್ದಾರೆ ಎಂಬ ಎಚ್.ಡಿ. ಕುಮಾರಸ್ವಾಮಿ ಅವರ ಟೀಕೆಗೆ, 'ತಮಿಳುನಾಡಿನ ಜನ ನಮ್ಮ ಸಹೋದರರು. ಗಡಿಯಲ್ಲಿ ನಾವು ಕಿತ್ತಾಡಬೇಕೇ? ಅವರು ತಮ್ಮ ಚಪಲಕ್ಕೆ ಮಾತನಾಡುತ್ತಾರೆ' ಎಂದರು.

'ಜನಸಂಖ್ಯೆಯಿಂದಾಗಿ ಕಲಿಕೆಯ ವ್ಯಾಪಕ ಆಯ್ಕೆಗೆ ಅವಕಾಶವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್-19ರಲ್ಲಿ ಪೋಷಕರನ್ನು ಕಳೆದುಕೊಂಡು ತಬ್ಬಲಿಯಾದ ಮಗು ತಾನು ಇಂತಹದ್ದೇ ಶಾಲೆಯಲ್ಲಿ ಕಲಿಯಬೇಕು. ಅದಕ್ಕಾಗಿ ಅವಕಾಶ ಕಲ್ಪಿಸಿಕೊಡಿ ಎಂದು ನಿರ್ದಿಷ್ಟ ಶಾಲೆಯಲ್ಲಿ ಪ್ರವೇಶ ಬಯಸಿದರೆ; ಅಂತಹ ಮನವಿಗೆ ಕೋರ್ಟ್‌ನ ಕೃಪಾದೃಷ್ಟಿ ದಕ್ಕುವುದು ಕಷ್ಟ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ನನಗೆ ಕುಶಾಲನಗರ ತಾಲ್ಲೂಕಿನ ಸೈನಿಕ ಶಾಲೆಯಲ್ಲಿ 8ನೇ ತರಗತಿಗೆ ಪ್ರವೇಶ ದೊರಕಿಸಿಕೊಡಲು ನಿರ್ದೇಶಿಸಬೇಕು' ಎಂದು ಕೋರಿ ಮಲ್ಲೇಶ್ವರದ ಮೊಹಮದ್ ಬ್ಲಾಕ್‌ನ 14 ವರ್ಷದ ಮೊಹಮದ್ ತಾಖಿ ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

'ಮಕ್ಕಳಿಗೆ ಶಿಕ್ಷಣ ಅತ್ಯವಶ್ಯಕ ಎಂಬುದೇನೊ ಸರಿ. ಆದರೆ, ಭಾರತೀಯ ಸಮಾಜ ಜನಸಂಖ್ಯೆಯಿಂದ ತುಂಬಿ ತುಳುಕಾಡುತ್ತಿದ್ದು, ಕಲಿಕೆಯ ವ್ಯಾಪಕ ಆಯ್ಕೆಗೆ ಅವಕಾಶವೇ ಇಲ್ಲದಂತಾಗಿದೆ' ಎಂದು ಹೇಳಿರುವ ನ್ಯಾಯಪೀಠ, 'ಅರ್ಜಿದಾರ ವಿದ್ಯಾರ್ಥಿಗೆ ಬೆಂಗಳೂರು ವ್ಯಾಪ್ತಿಯಲ್ಲಿನ ನೇತಾಜಿ ಸುಭಾಷ್‌ಚಂದ್ರ ಬೋಸ್ ವಸತಿ ಶಾಲೆ ಅಥವಾ ನವೋದಯ ವಿದ್ಯಾಲಯದಲ್ಲಿ 2021-2022ರ ಶೈಕ್ಷಣಿಕ ಸಾಲಿನಲ್ಲಿ 8ನೇ ತರಗತಿಗೆ ಪ್ರವೇಶ ನೀಡಿ' ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿಗೆ ನಿರ್ದೇಶಿಸಿದೆ.

ಪ್ರಕರಣವೇನು?: ಎರಡೂವರೆ ವರ್ಷದ ಮಗುವಿದ್ದಾಗ ಮೊಹಮದ್ ತಾಖಿಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವತಿಯಿಂದ ದತ್ತು ಪಡೆಯಲಾಗಿತ್ತು. ದತ್ತು ಪಡೆದಿದ್ದ ತಾಯಿ, ತನ್ನ ಕುಟುಂಬದಲ್ಲಿದ್ದ ಆನುವಂಶಿಕ ಕಾಯಿಲೆಯ ಪರಿಣಾಮ ಮದುವೆಯಾಗಿರಲಿಲ್ಲ.

ದುರದೃಷ್ಟ ಎಂಬಂತೆ ಕೋವಿಡ್-19 ಪಿಡುಗಿನ ವೇಳೆ ಈ ತಾಯಿಯನ್ನೂ ಕಳೆದುಕೊಂಡು ತಬ್ಬಲಿಯಾಗಿದ್ದ ಮೊಹಮದ್ ತಾಖಿಯನ್ನು ಸದ್ಯ ಬೆಂಗಳೂರಿನ ಬಸವೇಶ್ವರ ನಗರದ ಬಿಇಎಂಎಲ್ ಲೇ ಔಟ್‌ನ ಸಾಮಾಜಿಕ ಕಾರ್ಯಕರ್ತ ಎನ್.ಶ್ರೀಕಂಠಯ್ಯ ಅವರು ಕಾನೂನು ಪ್ರಕ್ರಿಯೆಗೆ ಒಳಪಟ್ಟು ಪೋಷಕರಾಗಿ ಸಲಹುತ್ತಿದ್ದಾರೆ.

ಕೋವಿಡ್-19ರ ಪಿಡುಗಿನ ಸಂದರ್ಭದಲ್ಲಿ ತಬ್ಬಲಿಯಾದ ಮಕ್ಕಳಿಗೆ ಪಿ.ಎಂ ಕೇರ್ಸ್ ಮಕ್ಕಳ ನಿಧಿ ಅಡಿಯಲ್ಲಿ ನೀಡಲಾಗುವ ಅವಕಾಶಗಳ ಅನುಸಾರ ಮೊಹಮದ್ ತಾಖಿಗೆ ಕೊಡಗು ಸೈನಿಕ ಶಾಲೆಯಲ್ಲಿ 8ನೇ ತರಗತಿಗೆ ಪ್ರವೇಶ ನೀಡಬೇಕೆಂದು ಕೋರಲಾಗಿತ್ತು. ಆದರೆ, ಕೊಡಗು ಸೈನಿಕ ಶಾಲೆ ಪ್ರವೇಶ ನಿರಾಕರಿಸಿತ್ತು.

'6ನೇ ಮತ್ತು 9ನೇ ತರಗತಿಗೆ ಸೇರಬಯಸುವ ವಿದ್ಯಾರ್ಥಿಗಳಿಗೆ ಮಾತ್ರವೇ ಇಲ್ಲಿ ಪ್ರವೇಶಾವಕಾಶ ಉಂಟು. ಇದಕ್ಕಾಗಿ ಪೂರ್ವಭಾವಿಯಾಗಿ ನಡೆಸಲಾಗುವ ಪ್ರವೇಶ ಪರೀಕ್ಷೆಯನ್ನು ಕಡ್ಡಾಯವಾಗಿ ಪಾಸಾಗಿರಬೇಕು. ಹೀಗಾಗಿ ನಿಯಮ ಮೀರಿ ಮೊಹಮದ್‌ಗೆ 8ನೇ ತರಗತಿಗೆ ಪ್ರವೇಶ ನೀಡಲು ಸಾಧ್ಯವಿಲ್ಲ' ಎಂದು ಸೈನಿಕ ಶಾಲೆ ಪ್ರತಿಕ್ರಿಯಿಸಿತ್ತು.

ಈ ಉತ್ತರವನ್ನು ಪ್ರಶ್ನಿಸಿದ್ದ ಮೊಹಮದ್ ತಾಖಿ, 'ನನಗೆ ಸೈನಿಕ ಶಾಲೆಯಲ್ಲಿಯೇ ಪ್ರವೇಶ ನೀಡಬೇಕು. ಇದಕ್ಕಾಗಿ ಸೈನಿಕ ಶಾಲೆಯ ಚಾಲ್ತಿಯಲ್ಲಿರುವ ನಿಯಮಾವಳಿಗಳನ್ನು ಸಡಿಲಿಸಿ ಪ್ರವೇಶ ನೀಡುವಂತೆ ನಿರ್ದೇಶಿಸಬೇಕು' ಎಂದು ಕೋರಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು.

ಪ್ರಕರಣದಲ್ಲಿ ಕೇಂದ್ರ ಮಹಿಳಾ ಮತ್ತು ಮಕ್ಕಳ ಸಚಿವಾಲಯದ ಸಂಪುಟ ಕಾರ್ಯದರ್ಶಿ ಹಾಗೂ ರಕ್ಷಣಾ ಸಚಿವಾಲಯದ ಜಂಟಿ ಕಾರ್ಯದರ್ಶಿಯನ್ನು ಪ್ರತಿವಾದಿಯನ್ನಾಗಿ ಕಾಣಿಸಲಾಗಿತ್ತು.

ಅನಾಥ ಮಕ್ಕಳಿಗೆ ಪಿ.ಎಂ ಕೇರ್ಸ್ ನಿಧಿ

ವಿಚಾರಣೆ ವೇಳೆ ಕೇಂದ್ರದ ಪರ ಹಾಜರಾಗಿದ್ದ ಸಹಾಯಕ ಸಾಲಿಸಿಟರ್ ಜನರಲ್, ಎಚ್.ಶಾಂತಿಭೂಷಣ್, 'ಕೋವಿಡ್-19ರಲ್ಲಿ ತಬ್ಬಲಿಯಾದ ಮಕ್ಕಳ ಶಿಕ್ಷಣ ಮತ್ತು ಭವಿಷ್ಯಕ್ಕೆ ನೆರವು ನೀಡುವ ದಿಸೆಯಲ್ಲಿ ಪಿ.ಎಂ ಕೇರ್ಸ್ ಮಕ್ಕಳ ನಿಧಿ ಸ್ಥಾಪಿಸಲಾಗಿದೆ. ಈ ನಿಧಿಯ ಅನುಸಾರ ಅನಾಥ ಮಕ್ಕಳ ಶಿಕ್ಷಣದ ಹೊಣೆಯನ್ನು ಸರ್ಕಾರವೇ ವಹಿಸಿಕೊಳ್ಳಲಿದೆ. ಇಂತಹ ಮಕ್ಕಳಿಗೆ 18 ವರ್ಷ ತುಂಬಿದ ಬಳಿಕ ಪ್ರತಿ ತಿಂಗಳೂ ಸ್ಟೈಪೆಂಡ್ ನೀಡಲಾಗುವುದು. ಅಂತೆಯೇ, ಈ ಮಕ್ಕಳಿಗೆ 23 ವರ್ಷ ತುಂಬಿದ ಬಳಿಕ ₹ 10 ಲಕ್ಷ ಮೊತ್ತವನ್ನು ಅವರ ಖಾತೆಗೆ ಜಮೆ ಮಾಡಲಾಗುತ್ತದೆ. ಜೊತೆಗೆ ಉನ್ನತ ಶಿಕ್ಷಣಕ್ಕೂ ಸೂಕ್ತ ಅವಕಾಶ ಕಲ್ಪಿಸಲಾಗುವುದು. ಈ ಪ್ರಕರಣದಲ್ಲಿ ಅರ್ಜಿದಾರರಿಗೆ ಸೈನಿಕ ಶಾಲೆಯ ಬದಲಿಗೆ ಬೇರೆ ಶಾಲೆಯಲ್ಲಿ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲಾಗುವುದು' ಎಂದು ತಿಳಿಸಿದ್ದರು.

'ಭಿನ್ನ ದನಿಯ ಬಂಡಾಯಗಾರ ಚಂಪಾ'

ಬೆಂಗಳೂರು: 'ಸಾಹಿತಿ ದಿವಂಗತ ಚಂದ್ರಶೇಖರ ಪಾಟೀಲ (ಚಂಪಾ) ಅವರು ಕನ್ನಡದ ಕಟ್ಟಾಳು. ನಮ್ಮ ನಡುವಣ ಭಿನ್ನ ದನಿಯ ಬಂಡಾಯಗಾರರಲ್ಲಿ ಒಬ್ಬರಾಗಿದ್ದ ಅವರು ಬಿಚ್ಚುಮಾತು ಹಾಗೂ ಚುಚ್ಚುಮಾತಿಗೆ ಹೆಸರಾಗಿದ್ದರು. ಯಾರ ಮನಸ್ಸನ್ನೂ ಘಾಸಿಗೊಳಿಸದ ಚುಚ್ಚುಮಾತು ಅವರದ್ದಾಗಿತ್ತು' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆ ಹಮ್ಮಿಕೊಂಡಿದ್ದ 'ಚಂಪಾ' ನುಡಿನಮನ ಕಾರ್ಯಕ್ರಮದಲ್ಲಿ ಶನಿವಾರ ಅವರು ಮಾತನಾಡಿದರು.

'ಆರಂಭದ ದಿನಗಳಿಂದಲೂ ಕನ್ನಡಪರ ಹೋರಾಟಗಳಲ್ಲಿ ಸಕ್ರಿಯರಾಗಿದ್ದ ಚಂಪಾ, ವಿಭಿನ್ನ ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದರು. ಯಾವುದೇ ಮುಲಾಜಿಲ್ಲದೆ ಎಲ್ಲರ ಬಗ್ಗೆಯೂ ಬರೆಯುತ್ತಿದ್ದರು. ಹಲವು ಲೇಖಕರ ಬಗ್ಗೆ ವಿಡಂಬನೆ ಮಾಡುತ್ತಿದ್ದರು. ಅದರಲ್ಲಿ ವಿಮರ್ಶೆ ಅಡಗಿರುತ್ತಿತ್ತು' ಎಂದರು.

'ನವ್ಯ ಸಾಹಿತ್ಯದಿಂದ ಹೊರ ಬಂದು ಪ್ರಗತಿಪರ ಚಳವಳಿಗಳಲ್ಲಿ ಸಕ್ರಿಯವಾಗಿದ್ದವರ ಸಾಲಿನಲ್ಲಿ ಚಂಪಾ ಮೊದಲಿಗರು. ಅವರ ಬರಹಗಳಲ್ಲಿ ಗಾಢವಾದ ಕಾಡುವಿಕೆ ಇತ್ತು. ಅವರ ಸಮಗ್ರ ಸಾಹಿತ್ಯ ಕನ್ನಡದ ಜನರಿಗೆ ಕೈಗೆಟಕುವ ದರದಲ್ಲಿ ಸಿಗಬೇಕು. ಆ ಕೆಲಸವನ್ನು ಸರ್ಕಾರ ಮಾಡಬೇಕು' ಎಂದು ಒತ್ತಾಯಿಸಿದರು.

ಜಲಮಂಡಳಿ ವಿರುದ್ಧ ಮುಖ್ಯಮಂತ್ರಿಗೆ ಪತ್ರ

ಹೆಚ್ಚುವರಿ ಶುಲ್ಕ ವಸೂಲಿ ವಿರುದ್ಧ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳಕೆ ಮಾಡಿದ ನೀರಿನ ಜೊತೆಗೆ ಹೆಚ್ಚುವರಿಯಾಗಿ ಮಾಸಿಕ ಶೇ 50ರಷ್ಟು ಸ್ವಾಧೀನಾನುಭವ ಪ್ರಮಾಣಪತ್ರ (ಒ.ಸಿ) ಶುಲ್ಕ ವಸೂಲಿ ಮಾಡುತ್ತಿರುವ ಜಲಮಂಡಳಿ ಕ್ರಮದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ಹೇರೋಹಳ್ಳಿ ವಾರ್ಡ್ 72ರ ಬಿ.ಟಿ.ಎಸ್.ಬಡಾವಣೆ ನಿವಾಸಿಗಳು ಈ ಸಂಬಂಧ ಮುಖ್ಯಮಂತ್ರಿಯವರಿಗೂ ಪತ್ರ ಬರೆದಿದ್ದಾರೆ.

'ಬಿಬಿಎಂಪಿ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಗೊಂಡ 110 ಹಳ್ಳಿಗಳಲ್ಲಿ ಯಶವಂತಪುರ ವಿಧಾನಸಭಾ ಕ್ಷೇತ್ರದ ಹೇರೋಹಳ್ಳಿ ವಾರ್ಡ್ 72 ಕೂಡ ಒಂದು. ನಮ್ಮ ಭಾಗಕ್ಕೆ ಒಂದು ವರ್ಷದ ಹಿಂದೆ ಕಾವೇರಿ ಕುಡಿಯುವ ನೀರಿನ ಯೋಜನೆ ಜಾರಿಗೊಳಿಸಲಾಗಿದೆ. ಪ್ರತಿ ತಿಂಗಳ ನೀರಿನ ಬಿಲ್ಲಿನಲ್ಲಿ ಬಳಸಿದ ನೀರಿನ ಜೊತೆಗೆ ಹೆಚ್ಚುವರಿಯಾಗಿ ಶೇ 50ರಷ್ಟು ದರ ವಿಧಿಸಲಾಗುತ್ತಿದೆ. ಈ ಬಗ್ಗೆ ಜಲಮಂಡಳಿ ಅಧಿಕಾರಿಗಳನ್ನು ವಿಚಾರಿಸಿದರೆ ಬಿಬಿಎಂಪಿಯಿಂದ ಸ್ವಾಧೀನಾನುಭವ ಪ್ರಮಾಣಪತ್ರ ತರಬೇಕೆಂದು ತಿಳಿಸುತ್ತಾರೆ. ಬಿಬಿಎಂಪಿ ಅಧಿಕಾರಿಗಳು ಅದನ್ನು ಕೊಡಲು ಸಾಧ್ಯವಿಲ್ಲ ಎಂದು ತಿಳಿಸುತ್ತಿದ್ದಾರೆ. ಇದರಿಂದ ನಾವು ಪರಿತಪಿಸುವಂತಾಗಿದೆ' ಎಂದು ನಿವಾಸಿಗಳು ಅಳಲು ತೋಡಿಕೊಂಡಿದ್ದಾರೆ.



ನೀರಿನ ಬಿಲ್

'ಮನೆಗಳಿಗೆ ನೀರಿನ ಸಂಪರ್ಕ ಪಡೆದುಕೊಳ್ಳುವಾಗ ಲಕ್ಷಕ್ಕೂ ಅಧಿಕ ಮೊತ್ತ ಠೇವಣಿ ಇರಿಸಿಕೊಂಡಿದ್ದಾರೆ. ಈಗ ಮತ್ತೆ ದುಪ್ಪಟ್ಟು ದರ ವಸೂಲಿ ಮಾಡುತ್ತಿದ್ದಾರೆ. ಇದು ಯಾವ ನ್ಯಾಯ' ಎಂದು ಪ್ರಶ್ನಿಸಿದ್ದಾರೆ.

'ಮಾಸಿಕ ಬಿಲ್‌ನಲ್ಲಿ ಒಳಚರಂಡಿ ವೆಚ್ಚ, ಮೀಟರ್ ವೆಚ್ಚ, ಬೋರ್‌ವೆಲ್‌ಗಳ ವೆಚ್ಚವನ್ನು ಸೇರಿಸುತ್ತಿದ್ದಾರೆ. ಇತರೆ ವೆಚ್ಚ ಎಂದು ನಮೂದಿಸಿ ಶೇ 50ರಷ್ಟು ಹಣ ವಸೂಲಿ ಮಾಡುತ್ತಿದ್ದಾರೆ. ಪ್ರತಿ ತಿಂಗಳು ₹100ರ ಬದಲು ₹1,500ರಷ್ಟು ಹಣ ಪಾವತಿಮಾಡಬೇಕಾದ ಅನಿವಾರ್ಯಕ್ಕೆ ಸಿಲುಕಿದ್ದೇವೆ. ಈ ಸಮಸ್ಯೆಯನ್ನು ಕೂಡಲೇ ಬಗೆಹರಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರಲ್ಲಿ ಮನವಿ ಮಾಡಿದ್ದೇವೆ' ಎಂದು ಬಿ.ಟಿ.ಎಸ್. ಬಡಾವಣೆ ನಿವಾಸಿ ಎಂ.ಉಮಾನಾಥ ಶಾಸ್ತ್ರಿ ಹೇಳಿದರು.

'ನೀರಿನ ಬಳಕೆಯ ಪ್ರಮಾಣ ಹೆಚ್ಚಿದಂತೆಲ್ಲಾ ಮೀಟರ್ ದರವನ್ನೂ ಜಾಸ್ತಿ ಮಾಡುತ್ತಾರೆ. ಬಿ.ಇ.ಎಲ್. ಬಡಾವಣೆ, ಇನ್‌ಕಮ್ ಟ್ಯಾಕ್ಸ್ ಲೇಔಟ್, ಮುನೇಶ್ವರ ಬಡಾವಣೆ ಹೀಗೆ ಎಲ್ಲಾ ಬಡಾವಣೆಗಳ ನಿವಾಸಿಗಳಿಗೂ ಇದರಿಂದ ತೊಂದರೆಯಾಗುತ್ತಿದೆ. ಮನೆಗಳಿಗೆ ನೀರಿನ ಸಂಪರ್ಕ ಪಡೆಯುವಂತೆ ಅಧಿಕಾರಿಗಳು ಬಲವಂತಪಡಿಸಿದರು. ಈಗ ಮಳೆ ನೀರು ಸಂಗ್ರಹ ವ್ಯವಸ್ಥೆ ಮಾಡಿಕೊಂಡಿಲ್ಲ ಎಂಬ ಕಾರಣ ಹೇಳಿ ದುಬಾರಿ ದಂಡ ವಿಧಿಸುತ್ತಿದ್ದಾರೆ. ಇದನ್ನು ಮೊದಲೇ ಹೇಳಬೇಕಿತ್ತಲ್ಲವೇ' ಎಂದು ಪ್ರಶ್ನಿಸಿದರು.

ಬೈಯಪ್ಪನಹಳ್ಳಿ ರೈಲು ನಿಲ್ದಾಣ: ಸಂಪರ್ಕ ರಸ್ತೆ ನಿರ್ಮಾಣ ಕಾಮಗಾರಿಯೂ ಪೂರ್ಣ

ಉದ್ಘಾಟನೆಗಾಗಿ ಕಾಯುತ್ತಿದೆ ಟರ್ಮಿನಲ್

● ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ವಿಮಾನ ನಿಲ್ದಾಣದ ಮಾದರಿಯ ಮೂಲಸೌಕರ್ಯದೊಂದಿಗೆ ಬೈಯಪ್ಪನಹಳ್ಳಿ ಬಳಿ ನಿರ್ಮಾಣವಾಗಿರುವ ಸರ್ ಎಂ. ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್ ಕಾಮಗಾರಿ ಮುಗಿದು ವರ್ಷ ಕಳೆದರೂ ಸಾರ್ವಜನಿಕರ ಬಳಕೆಗೆ ಲಭ್ಯವಾಗಿಲ್ಲ. ಇದರ ಉದ್ಘಾಟನೆಗೆ ಇನ್ನೂ ಮೀನಮೇಷ ಎಣಿಸಲಾಗುತ್ತಿದೆ.

ಬೈಯಪ್ಪನಹಳ್ಳಿ ಹಳೆ ರೈಲು ನಿಲ್ದಾಣ ಮತ್ತು ಬಾಣಸವಾಡಿ ರೈಲು ನಿಲ್ದಾಣಗಳ ನಡುವೆ ಈ ರೈಲು ನಿಲ್ದಾಣ ಚಿಟ್ಟೆಯಾಕಾರದಲ್ಲಿ ನಿರ್ಮಾಣವಾಗಿದೆ. ನೈರುತ್ಯ ರೈಲ್ವೆ ಇತಿಹಾಸದಲ್ಲಿ ಹಲವು ಪ್ರಥಮಗಳನ್ನು ದಾಖಲಿಸುತ್ತಿರುವ ಈ ಟರ್ಮಿನಲ್, ವಿಮಾನ ನಿಲ್ದಾಣವನ್ನು ಹೋಲುವಂತೆ ವಿನ್ಯಾಸಗೊಳಿಸಲಾದ ಮೊದಲ ರೈಲು ನಿಲ್ದಾಣ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಬೆಂಗಳೂರಿನ ರೈಲ್ವೆ ಇತಿಹಾಸದಲ್ಲೇ ಇದು ಹೊಸ ಮೈಲಿಗಲ್ಲು.

ವಾಹನಗಳ ನಿಲುಗಡೆಗೆ ವಿಶಾಲವಾದ ತಾಣ, ಕಾರಂಜಿಯನ್ನು ಒಳಗೊಂಡ ಸಣ್ಣ ಉದ್ಯಾನ, ಅದರ ಪಕ್ಕದಲ್ಲಿ 'ಐ ಲವ್ ಬೆಂಗಳೂರು' ಎಂಬ ಆಕರ್ಷಕವಾದ ಫಲಕಗಳನ್ನು ಅಳವಡಿಸಲಾಗಿದೆ. ಪ್ರಯಾಣಿಕ ರೈಲುಗಳಿಗೆ 7 ಪ್ಲಾಟ್‌ಫಾರಂಗಳು, ಒಂದು ಪ್ಲಾಟ್‌ಫಾರಂನಿಂದ ಇನ್ನೊಂದು ಪ್ಲಾಟ್‌ಫಾರಂ ತಲುಪಲು ಸಬ್‌ವೇ ಮತ್ತು ಪಾದಚಾರಿ ಮೇಲ್ಸೇತುವೆ ನಿರ್ಮಿಸಲಾಗಿದೆ. ಮೆಟ್ರೊ ರೈಲು ನಿಲ್ದಾಣಗಳ ಮಾದರಿಯಲ್ಲಿ ಎಲ್ಲ ಪ್ಲಾಟ್‌ಫಾರಂಗಳಿಗೂ ಲಿಫ್ಟ್ ಮತ್ತು ಎಸ್ಕಲೇಟರ್ ಸೌಲಭ್ಯ ಕಲ್ಪಿಸಲಾಗಿದೆ.

ಇಷ್ಟೆಲ್ಲಾ ಸುಸಜ್ಜಿತ ಸೌಲಭ್ಯಗಳೊಂದಿಗೆ ನಿರ್ಮಾಣಗೊಂಡಿರುವ ಈ ನಿಲ್ದಾಣ ಸುತ್ತಮುತ್ತಲ ಜನರ ಪ್ರವಾಸಿ ತಾಣವಾಗಿ ಮಾರ್ಪಟ್ಟಿದೆ. 2015–16ನೇ ಸಾಲಿನಲ್ಲಿ ಈ ನಿಲ್ದಾಣದ ಕಾಮಗಾರಿಗೆ ರೈಲ್ವೆ ಮಂಡಳಿ ಮಂಜೂರಾತಿ ನೀಡಿತ್ತು. 2017ರಿಂದ ಕಾಮಗಾರಿ ಆರಂಭವಾಗಿತ್ತು.

ಕಾಮಗಾರಿ ಪೂರ್ಣಗೊಂಡರೂ ಈ ನಿಲ್ದಾಣಕ್ಕೆ ಸಂಪರ್ಕ ರಸ್ತೆಯದ್ದೇ ದೊಡ್ಡ ಸಮಸ್ಯೆಯಾಗಿತ್ತು. ರೈಲ್ವೆ ನಿಲ್ದಾಣ ನಿರ್ಮಾಣ ಮಾಡುವ ಸಂದರ್ಭದಲ್ಲೇ ಸಂಪರ್ಕ ರಸ್ತೆ ಬಗ್ಗೆಯೂ ಆಲೋಚಿಸಿ ರಸ್ತೆ ನಿರ್ಮಿಸಿಕೊಂಡಿದ್ದರೆ ಒಂದು ವರ್ಷಕ್ಕೂ ಮೊದಲೇ ರೈಲ್ವೆ ನಿಲ್ದಾಣ ಕಾರ್ಯಾರಂಭ ಆಗಬೇಕಿತ್ತು. ನಿಲ್ದಾಣದ ಕಾಮಗಾರಿ ಮುಗಿದ ಬಳಿಕ ಸಂಪರ್ಕ ರಸ್ತೆ ಬಗ್ಗೆ ಆಲೋಚನೆ ಮಾಡಲಾಗಿದೆ. ಮೂಲಸೌಕರ್ಯ ಒದಗಿಸಬೇಕಾದ ಇಲಾಖೆಗಳ ನಡುವೆ ಪರಸ್ಪರ ಸಮನ್ವಯ ಇಲ್ಲ. ಸಮಗ್ರ ಯೋಜನೆ ರೂಪಿಸಿಕೊಳ್ಳದೆಯೇ ಕಾಮಗಾರಿ ನಿರ್ವಹಿಸುತ್ತಿರುವುದಕ್ಕೆ ಇದೂ ಒಂದು ಉದಾಹರಣೆ ಎನ್ನುತ್ತಾರೆ ರೈಲ್ವೆ ಹೋರಾಟಗಾರರು.

'ಸಂಪರ್ಕ ರಸ್ತೆ ಮತ್ತು ಮೇಲ್ಸೇತುವೆ ಕಾಮಗಾರಿಗಳನ್ನು ಬಿಬಿಎಂಪಿ ಇತ್ತೀಚೆಗೆ ಪೂರ್ಣಗೊಳಿಸಿದೆ. ಉದ್ಘಾಟನೆಗೆ ಯಾವುದೇ ರೀತಿಯ ತಾಂತ್ರಿಕ ತೊಡಕುಗಳೂ ಇಲ್ಲ. ರೈಲ್ವೆ ಸಚಿವಾಲಯಕ್ಕೆ ಮಾಹಿತಿ ನೀಡಿದ್ದೇವೆ. ಅಲ್ಲಿಂದ ಪ್ರತಿಕ್ರಿಯೆ ಬಂದರೆ ದಿನಾಂಕ ನಿಗದಿ ಮಾಡಿ ರೈಲ್ವೆ ನಿಲ್ದಾಣದ ಉದ್ಘಾಟನೆಗೆ ಕ್ರಮಕೈಗೊಳ್ಳಲಾಗುವುದು' ಎಂದು ರೈಲ್ವೆ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

'ಕೋವಿಡ್ ಕಾರಣ, ಚುನಾವಣೆಗಳ ಮೇಲೆ ಚುನಾವಣೆಗಳ ನಿಗದಿ ಆಗಿರುವುದರಿಂದ ಇನ್ನೂ ಎರಡು ಮೂರು ತಿಂಗಳು ವಿಳಂಬವಾಗುವ ಸಾಧ್ಯತೆ ಇದೆ. ಖುದ್ದು ಸ್ಥಳಕ್ಕೆ ಬಂದು ರೈಲು ನಿಲ್ದಾಣಕ್ಕೆ ಚಾಲನೆ ನೀಡಬೇಕಿಲ್ಲ. ರೈಲ್ವೆ ಸಚಿವರು ದೆಹಲಿಯಲ್ಲೇ ಕುಳಿತು ಆನ್‌ಲೈನ್ ಮೂಲಕ ಚಾಲನೆ ನೀಡಿದರೂ ಸಾಕು. ರೈಲು ನಿಲ್ದಾಣ ಆದಷ್ಟು ಬೇಗ ಪ್ರಯಾಣಿಕರಿಗೆ ಲಭ್ಯವಾಗಬೇಕು' ಎಂದು ರೈಲ್ವೆ ಹೋರಾಟಗಾರ ಅಭಿಷೇಕ್ ಒತ್ತಾಯಿಸಿದರು.

ರೈಲು ನಿಲ್ದಾಣದ ಉದ್ಘಾಟನೆ ಸಂದರ್ಭದಲ್ಲಿ ಈ ನಿಲ್ದಾಣದಿಂದ ಹೊರಡುವ ಹೊಸದೊಂದು ರೈಲಿಗೆ ಚಾಲನೆ ನೀಡುವ ಉದ್ದೇಶವನ್ನೂ ರೈಲ್ವೆ ಇಲಾಖೆ ಹೊಂದಿದೆ ಎಂದು ಮೂಲಗಳು ತಿಳಿಸಿವೆ.

ಬೈಯಪ್ಪನಹಳ್ಳಿಯಲ್ಲಿ ನಿರ್ಮಾಣಗೊಂಡಿರುವ ರೈಲು ನಿಲ್ದಾಣ –ಪ್ರಜಾವಾಣಿ ಚಿತ್ರ

ಬೈಯಪ್ಪನಹಳ್ಳಿ ಟರ್ಮಿನಲ್ ಬಳಿ ನಿರ್ಮಾಣವಾಗಿರುವ ಸಂಪರ್ಕ ರಸ್ತೆ

'ಶೀಘ್ರವೇ ರೈಲ್ವೆ ಅಧಿಕಾರಿಗಳ ಜತೆ ಸಭೆ'



ಬೈಯಪ್ಪನಹಳ್ಳಿ ರೈಲ್ವೆ ಟರ್ಮಿನಲ್ ಉದ್ಘಾಟನೆ ಸಂಬಂಧ ಶೀಘ್ರವೇ ರೈಲ್ವೆ ಅಧಿಕಾರಿಗಳ ಜತೆ ಸಭೆ ನಡೆಸಲಾಗುವುದು ಎಂದು ಸಂಸದ ಪಿ.ಸಿ.ಮೋಹನ್ ತಿಳಿಸಿದರು.

'ಈ ಹಿಂದೆ ರೈಲ್ವೆ ಸಚಿವರನ್ನು ಭೇಟಿಯಾಗಿದ್ದ ಸಂದರ್ಭದಲ್ಲಿ ರೈಲು ನಿಲ್ದಾಣಕ್ಕೆ ಅಗತ್ಯ ಇದ್ದ ಸಂಪರ್ಕ ರಸ್ತೆಯ ಬಗ್ಗೆ ಮನವರಿಕೆ ಮಾಡಿಸಿದ್ದೆವು. ಈಗ ಸಂಪರ್ಕ ರಸ್ತೆ ಕೂಡ ಅಭಿವೃದ್ಧಿಗೊಂಡಿದೆ. ಸದ್ಯದಲ್ಲೇ ನಿಲ್ದಾಣವನ್ನು ಲೋಕಾರ್ಪಣೆ ಮಾಡಲಿದ್ದೇವೆ' ಎಂದರು.

ಪ್ರಜಾವಾಣಿ ವಿಶೇಷ

ಹೊಸ ಟರ್ಮಿನಲ್: ಪ್ರಯೋಜನಗಳೇನು?

- ವೈಟ್‌ಫೀಲ್ಡ್, ಕೆ.ಆರ್.ಪುರ, ಮಹದೇವಪುರ, ಬೈಯಪ್ಪನಹಳ್ಳಿ ಪ್ರಯಾಣಿಕರಿಗೆ ಈ ನಿಲ್ದಾಣ ತುಂಬಾ ಸಮೀಪ
- ಯಶವಂತಪುರ-ಕೆಎಸ್‌ಆರ್ ರೈಲು ನಿಲ್ದಾಣದ ಮೇಲಿನ ಒತ್ತಡ ನಿವಾರಣೆ
- ಹೊಸ ಮಾರ್ಗದಲ್ಲಿ ಕಾರ್ಯಾಚರಣೆ ಆರಂಭಿಸಲು ಅವಕಾಶ
- ಉಪನಗರ ಸಂಪರ್ಕಿಸುವ ಮೆಮು ರೈಲುಗಳ ಸಂಖ್ಯೆ ಹೆಚ್ಚಿಸಲು ಅವಕಾಶ
- ಹಳಿಗಳ ದುರಸ್ತಿ ಸಂದರ್ಭದಲ್ಲಿ ಕಾರ್ಯಾಚರಣೆ ಸ್ಥಗಿತಗೊಳಿಸದೆ ನಿರ್ವಹಣೆ ಮಾಡಬಹುದು
- ತಡೆರಹಿತವಾಗಿ ಸರಕು ಸಾಗಣೆ ರೈಲುಗಳ ಕಾರ್ಯಾಚರಣೆಗೂ ಅನುಕೂಲ

ಅಂಕಿ-ಅಂಶಗಳು

₹240 ಕೋಟಿ ಟರ್ಮಿನಲ್ ನಿರ್ಮಾಣಕ್ಕೆ ತಗುಲಿದ ವೆಚ್ಚ

7 ಪ್ಲಾಟ್‌ಫಾರಂಗಳ ಸಂಖ್ಯೆ

137 ಸಿಗ್ನಲ್‌ಗಳ ಸಂಖ್ಯೆ

600 ಮೀಟರ್ ಪ್ಲಾಟ್‌ಫಾರಂ ಉದ್ದ

ಜಿಲ್ಲೆಗಳಲ್ಲೂ ಹೆಚ್ಚುತ್ತಿದೆ ಕೋವಿಡ್

24 ಗಂಟೆಯಲ್ಲಿ 32,793 ಮಂದಿಗೆ ಸೋಂಕು ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿಯೂ ಕೋವಿಡ್‌ನ ಹೊಸ ಪ್ರಕರಣಗಳು ಏರಿಕೆ ಕಾಣುತ್ತಿವೆ. ಈವರೆಗೆ ಬೆಂಗಳೂರಿನಲ್ಲಿ ಮಾತ್ರ ವೇಗವಾಗಿ ಏರಿಕೆಯಾಗುತ್ತಿತ್ತು. ರಾಜ್ಯದಲ್ಲಿ ಶನಿವಾರ 32,793 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದೆ.

ಕಳೆದ ಎರಡು ವಾರ ವರದಿಯಾದ ಹೊಸ ಪ್ರಕರಣಗಳಲ್ಲಿ ಶೇ 75 ರಷ್ಟು ಪ್ರಕರಣಗಳು ಬೆಂಗಳೂರಿನಲ್ಲಿಯೇ ದೃಢಪಟ್ಟಿದ್ದವು. ಆ ಪ್ರಮಾಣ ಈಗ ಶೇ 68ಕ್ಕೆ ಇಳಿಕೆಯಾಗಿದೆ. ರಾಜ್ಯದಲ್ಲಿ ಒಂದು ದಿನದಲ್ಲಿ 2.18 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 15 ರಷ್ಟು ವರದಿಯಾಗಿದೆ.

ಈ ತಿಂಗಳು 15 ದಿನಗಳಲ್ಲಿ 1,78,694 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 31.86 ಲಕ್ಷಕ್ಕೆ ಏರಿಕೆಯಾಗಿದೆ.

ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ 22,284ಕ್ಕೆ ಏರಿಕೆಯಾಗಿದೆ. 23 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮೂರಂಕಿಯಲ್ಲಿದೆ. ತುಮಕೂರಿನಲ್ಲಿ 1,326, ಹಾಸನದಲ್ಲಿ 968, ದಕ್ಷಿಣ ಕನ್ನಡದಲ್ಲಿ 792, ಮೈಸೂರಿನಲ್ಲಿ 729, ಮಂಡ್ಯದಲ್ಲಿ 718, ಧಾರವಾಡದಲ್ಲಿ 648, ಉಡುಪಿಯಲ್ಲಿ 607 ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ 503 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ಕ್ಕಿಂತ ಕಡಿಮೆ ಇವೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 1.69 ಲಕ್ಷ ದಾಟಿದೆ. ಸೋಂಕಿತರಲ್ಲಿ ಏಳು ಮಂದಿ ಮೃತಪಟ್ಟಿದ್ದಾರೆ. ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 0.02 ರಷ್ಟು ವರದಿಯಾಗಿದೆ.

ದೇಶದಲ್ಲಿ 2.68 ಲಕ್ಷ ಹೊಸ ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ ಶನಿವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ಗಂಟೆಗಳಲ್ಲಿ ಹೊಸದಾಗಿ 2,68,833 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಇದೇ ಅವಧಿಯಲ್ಲಿ 402 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ. ಈ ಪೈಕಿ 199 ಮಂದಿ ಕೇರಳದವರು ಮತ್ತು 34 ಮಂದಿ ದೆಹಲಿಯವರು ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ದೇಶದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 14,17,820ಕ್ಕೆ ತಲುಪಿದ್ದು, ಕೋವಿಡ್ ದೃಢ ಪ್ರಮಾಣ 16.66ಕ್ಕೆ ಏರಿಕೆಯಾಗಿದೆ. 6,041 ಓಮೈಕ್ರಾನ್ ಪ್ರಕರಣಗಳು ವರದಿಯಾಗಿವೆ. ಇದು ಹಿಂದಿನ ದಿನಕ್ಕೆ ಹೋಲಿಸಿದರೆ ಶೇ 5.01ರಷ್ಟು ಹೆಚ್ಚಳವಾಗಿದೆ. ಪುದುಚೇರಿಯಲ್ಲಿ ಪರೀಕ್ಷೆಗೆ ಒಳಪಟ್ಟ 2,344 ಮಂದಿಯ ಪೈಕಿ 1,213 ಮಂದಿಗೆ ಕೋವಿಡ್ ದೃಢಪಟ್ಟಿದ್ದು, ಪಾಸಿಟಿವಿಟಿ ದರ ಶೇ 51.75 ಆಗಿದೆ.

ಕೋವಿಡ್ ಅಂಕಿ-ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	32.50 ಕೋಟಿ ▲	3.68 ಕೋಟಿ ▲
ಸಕ್ರಿಯ ಪ್ರಕರಣ	5.36 ಕೋಟಿ ▲	11.17 ಲಕ್ಷ ▼
ಗುಣಮುಖ	26.59 ಕೋಟಿ ▲	3.49 ಕೋಟಿ ▲
ಸಾವು	55.50 ಲಕ್ಷ ▲	4.85 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	32.34 ಲಕ್ಷ ▼	2.68 ಲಕ್ಷ ▲
ಗುಣಮುಖ	11.92 ಲಕ್ಷ ▲	1.22 ಲಕ್ಷ ▲
ಸಾವು	7,861 ▲	402 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಫ್ರಾನ್ಸ್	ಬ್ರಿಟನ್
8.27 ಲಕ್ಷ ▲	3.29 ಲಕ್ಷ ▲	99,652 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು

ಅಮೆರಿಕ	ಫ್ರಾನ್ಸ್	ಬ್ರಿಟನ್
2.23 ಕೋಟಿ ▲	44.81 ಲಕ್ಷ ▲	37.06 ಲಕ್ಷ ▲

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.41 ಲಕ್ಷ
ಕೇರಳ	50,568 ▲
ತಮಿಳುನಾಡು	36,956 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	71.24 ▲
ಕೇರಳ	53.42 ▲
ತಮಿಳುನಾಡು	28.91 ▲

ಭಾರತದ ಕೋವಿಡ್ ಸಂಖ್ಯೆ ವಿವರ: ಶನಿವಾರ ಬೆಳಿಗ್ಗೆ 8ರವರೆಗಿನ ಮಾಹಿತಿ

ಪ್ರಜಾವಾಣಿ ಗ್ರಾಫಿಕ್ಸ್

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

13,95,736 ▲ ಒಟ್ಟು ಸೋಂಕಿತರು (13,73,452 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
1,29,112 ▲	12,50,175 ▲	16,448 ▲

ದಿನದ ಏರಿಕೆ

ಹೊಸ ಪ್ರಕರಣ	22,284 ▲
ಗುಣಮುಖ	2,479 ▲
ಸಾವು	05 ▼

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

'ಜ.16 ರಾಷ್ಟ್ರೀಯ ನವೋದ್ಯಮ ದಿನ'

ನವದೆಹಲಿ (ಪಿಟಿಐ): ದೇಶದಲ್ಲಿ ನವೋದ್ಯಮ ಸಂಸ್ಕೃತಿಯನ್ನು ತಳಮಟ್ಟದಿಂದ ಗಟ್ಟಿಗೊಳಿಸುವ ಉದ್ದೇಶದಿಂದ ಜನವರಿ 16ನ್ನು 'ರಾಷ್ಟ್ರೀಯ ನವೋದ್ಯಮ ದಿನ'ವಾಗಿ ಆಚರಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ತಿಳಿಸಿದ್ದಾರೆ.

ವಿಡಿಯೊ ಕಾನ್ಫರೆನ್ಸ್ ಮೂಲಕ 150ಕ್ಕೂ ಅಧಿಕ ನವೋದ್ಯಮಗಳೊಂದಿಗೆ ಸಂವಾದ ನಡೆಸಿದ ಅವರು, 'ನವೋದ್ಯಮಗಳು ನವ ಭಾರತದ ಬೆನ್ನೆಲುಬಾಗಿ ಇರುತ್ತವೆ ಎಂದು ನಾನು ನಂಬುತ್ತೇನೆ' ಎಂದರು. ದೇಶಕ್ಕಾಗಿ ಆವಿಷ್ಕಾರ ಮಾಡೋಣ, ದೇಶದಿಂದ ಆವಿಷ್ಕಾರ ಮಾಡೋಣ ಎಂದು ಕರೆ ನೀಡಿದರು.

ನವೋದ್ಯಮಗಳು ಪ್ರಮುಖ ಪಾತ್ರ ವಹಿಸಬಹುದಾದ ಹಲವು ವಲಯಗಳ ಬಗ್ಗೆ ಮೋದಿ ಅವರು ಸಂವಾದದಲ್ಲಿ ಯುವ ಉದ್ಯಮಿಗಳ ಗಮನ ಸೆಳೆದರು.

ಕೆ.ಆರ್. ಮಾರುಕಟ್ಟೆ ಬಳಿ ಆರೋಗ್ಯ ಸಿಬ್ಬಂದಿ ಶನಿವಾರ ಸಾರ್ವಜನಿಕರಿಂದ ಗಂಟಲು ದ್ರವ ಸಂಗ್ರಹಿಸಿದರು – ಪ್ರಜಾವಾಣಿ ಚಿತ್ರ

ಸೋಂಕು ಪತ್ತೆ ದರ ಶೇ 19.96ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪತ್ತೆ ಪರೀಕ್ಷೆಯ ದೈನಂದಿನ ಸಂಖ್ಯೆ 1.11 ಲಕ್ಷ ದಾಟಿದ್ದು, ಕೋವಿಡ್ ಸೋಂಕು ಪತ್ತೆ ದರ ಶನಿವಾರ ಶೇ 20ರ ಸಮೀಪಕ್ಕೆ ತಲುಪಿದೆ.

ಬಿಬಿಎಂಪಿ ಶನಿವಾರ ಬಿಡುಗಡೆ ಮಾಡಿರುವ ಅಂಕಿ ಅಂಶಗಳ ಪ್ರಕಾರ, ನಗರದಲ್ಲಿ ಶುಕ್ರವಾರ 1,11,662 ಜನರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿತ್ತು. ಅವರಲ್ಲಿ 22,284 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದೆ. ಅಂದರೆ ಪರೀಕ್ಷೆಗೊಳಗಾದವರಲ್ಲಿ ಸೋಂಕು ಪತ್ತೆ ದರವು ಶೇ 19.96ರಷ್ಟು ಇತ್ತು. ಗುರುವಾರ 1,02,508 ಜನರನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಅದರಲ್ಲಿ 20,121 ಜನರಲ್ಲಿ ಸೋಂಕು ಪತ್ತೆಯಾಗಿತ್ತು. ಸೋಂಕು ಪತ್ತೆ ದರವು ಶೇ 19.63ರಷ್ಟು ಇತ್ತು.

ಬೆಂಗಳೂರಿಗೆ ಬಂದಿಳಿಯುತ್ತಿರುವ ಅಂತರ ರಾಷ್ಟ್ರೀಯ ಪ್ರಯಾಣಿಕರ ಸಂಖ್ಯೆ ಕಳೆದ ಹತ್ತು ದಿನಗಳಿಗೆ ಹೋಲಿಸಿದರೆ ಕಡಿಮೆಯಾಗಿದೆ. ಜ.12ರಂದು 895 ಜನ ಬೆಂಗಳೂರಿಗೆ ಬಂದಿದ್ದರು. ಅವರಲ್ಲಿ 11 ಜನರಿಗೆ ಕೋವಿಡ್ ದೃಢಪಟ್ಟಿತ್ತು. 13ರಂದು 188 ಜನ ಪ್ರಯಾಣಿಕರು ಬಂದಿಳಿದಿದ್ದು, ಅವರಲ್ಲಿ ಮೂವರಿಗೆ ಕೋವಿಡ್ ದೃಢಪಟ್ಟಿತ್ತು. ಜ.14ರಂದು ಬೆಂಗಳೂರಿಗೆ ಬಂದಿದ್ದ 338 ಜನರಲ್ಲಿ 6 ಜನರಿಗೆ ಕೋವಿಡ್ ದೃಢಪಟ್ಟಿದೆ. 10 ದಿನಗಳ ಹಿಂದೆ ಅಂದರೆ ಜ.5ರಂದು ಅಂತರರಾಷ್ಟ್ರೀಯ ಪ್ರಯಾಣಿಕರ ಸಂಖ್ಯೆ 1,122 ಇತ್ತು. ಅವರಲ್ಲಿ 14 ಜನರಿಗೆ ಸೋಂಕು ದೃಢಪಟ್ಟಿತ್ತು.

10 ಸಾವಿರ ವೈದ್ಯ ವಿದ್ಯಾರ್ಥಿಗಳ ನಿಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಕೋವಿಡ್ ಸಮಯದಲ್ಲಿ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಲಾಗಿದೆ. ಈವರೆಗೆ ಸುಮಾರು 2.5 ಲಕ್ಷ ಆರೋಗ್ಯ ಸಿಬ್ಬಂದಿಗೆ ತಂತ್ರಜ್ಞಾನದ ಮೂಲಕ ತರಬೇತಿ ನೀಡಲಾಗಿದೆ. ಇದು ಉಳಿದ ರಾಜ್ಯಗಳಿಗೂ ಮಾದರಿ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಸ್ಟೆಪ್ ಒನ್ ಸಂಸ್ಥೆಯ ಸಹಯೋಗದಲ್ಲಿ ಕೋವಿಡ್ ರೋಗಿಗಳ ಪ್ರತ್ಯೇಕ ಮನೆ ವಾಸಕ್ಕೆ (ಮನೆಯಲ್ಲಿಯೇ ಐಸೋಲೇಶನ್) ಸಂಬಂಧಿಸಿದಂತೆ 10 ಸಾವಿರ ವೈದ್ಯರು, ಆಯುಷ್ ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕೋವಿಡ್ ಮೊದಲ ಅಲೆಯಲ್ಲಿ ಆರೋಗ್ಯ ಸಿಬ್ಬಂದಿಗೆ ಹೊಸ ವೈರಾಣು ಕುರಿತು ತರಬೇತಿ ನೀಡಬೇಕಿತ್ತು. ಆದರೆ, ಲಾಕ್ ಡೌನ್ ಮತ್ತಿತರ ಕಾರಣಗಳಿಂದ ಸಾಧ್ಯವಾಗಿರಲಿಲ್ಲ. ಆ ಸಂದರ್ಭದಲ್ಲಿ ರಾಜೀವ್ ಗಾಂಧಿ ವಿಶ್ವವಿದ್ಯಾಲಯ ಸೇರಿದಂತೆ ವಿವಿಧ ಸಂಸ್ಥೆಗಳ ನೆರವಿನಲ್ಲಿ ತಂತ್ರಜ್ಞಾನ ಬಳಸಿ ತರಬೇತಿ ನೀಡಲಾಯಿತು. ರಾಜ್ಯದಲ್ಲಿ ತಂತ್ರಜ್ಞಾನದ ಪರಿಣಾಮಕಾರಿ ಬಳಕೆಯನ್ನು ಕೇಂದ್ರ ಸರ್ಕಾರ ಕೂಡ ಗುರುತಿಸಿದೆ' ಎಂದರು.

'ಕೋವಿಡ್ ಮೂರನೇ ಅಲೆಯಲ್ಲಿ 2-3 ದಿನಗಳಲ್ಲಿ ಪ್ರಕರಣಗಳ ಸಂಖ್ಯೆ ದುಪ್ಪಟ್ಟಾಗುತ್ತಿದ್ದರೂ ತೀವ್ರತೆ ಕಡಿಮೆ ಇದೆ. ಶೇ 93ರಷ್ಟು ಸೋಂಕಿತರು ಮನೆಯಲ್ಲಿಯೇ ಪ್ರತ್ಯೇಕವಾಗಿ ಇದ್ದಾರೆ. ಶೇ 5ರಿಂದ 6ರಷ್ಟು ಜನರು ಆಸ್ಪತ್ರೆ, ಶೇ 1ರಷ್ಟು ಜನರು ಕೋವಿಡ್ ಆರೈಕೆ ಕೇಂದ್ರದಲ್ಲಿದ್ದಾರೆ' ಎಂದರು.

'ಅಗತ್ಯ ಇರುವವರಿಗೆ ಹಾಸಿಗೆ ಸೌಲಭ್ಯ'

'ಮನೆಯಲ್ಲಿಯೇ ಪ್ರತ್ಯೇಕವಾಗಿರುವ ಸೋಂಕಿತರ ಆರೋಗ್ಯದ ಮೇಲೆ ಹೆಚ್ಚು ನಿಗಾ ಇರಿಸಲಾಗಿದೆ. ಇದಕ್ಕಾಗಿ ಸುಮಾರು 10 ಸಾವಿರ ವೈದ್ಯ ವಿದ್ಯಾರ್ಥಿಗಳನ್ನು ನಿಯೋಜಿಸಲಾಗಿದೆ. ಇನ್ನೂ 10 ಸಾವಿರ ಸಿಬ್ಬಂದಿಯನ್ನು ನಿಯೋಜಿಸುವ ಉದ್ದೇಶವಿದೆ. 500 ತಜ್ಞ ವೈದ್ಯರು ಈ ವ್ಯವಸ್ಥೆಗೆ ಬೆಂಬಲ ನೀಡುತ್ತಿದ್ದಾರೆ. ಎರಡನೇ ಅಲೆಯಲ್ಲಿ ರೋಗಿಗಳಿಗೆ 1.33 ಕೋಟಿ ದೂರವಾಣಿ ಕರೆ ಮಾಡಿ ಆರೋಗ್ಯ ವಿಚಾರಿಸಲಾಗಿತ್ತು. 42.57 ಲಕ್ಷ ವೈದ್ಯರನ್ನು ಸಮಾಲೋಚನೆಗೆ ಬಳಸಲಾಗಿತ್ತು. 36 ಸಾವಿರ ರೋಗಿಗಳಿಗೆ ಮಾನಸಿಕ ಆರೋಗ್ಯ ಕೌನ್ಸೆಲಿಂಗ್ ಮಾಡಲಾಗಿದೆ' ಎಂದು ಸುಧಾಕರ್ ವಿವರಿಸಿದರು.

'ಅನೇಕ ರೋಗಿಗಳು ಅಗತ್ಯವಿಲ್ಲದಿದ್ದರೂ ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ಇದನ್ನು ತಪ್ಪಿಸಿ ಅಗತ್ಯವಿರುವವರಿಗೆ ಹಾಸಿಗೆ ಒದಗಿಸಲು ವೈದ್ಯರ ಸಲಹೆ, ಮಾರ್ಗದರ್ಶನ ಅಗತ್ಯ. ದೂರವಾಣಿ ಕರೆ ಮಾಡಿ ಮಾರ್ಗದರ್ಶನ ನೀಡುವುದರಿಂದ ಅನೇಕರ ಜೀವ ಉಳಿಸಲು ಸಹಾಯಕವಾಗುತ್ತದೆ' ಎಂದರು.

ಹೆಚ್ಚುತ್ತಿರುವ ಕೋವಿಡ್: ಬಸ್‌ಗಳ ಸಂಖ್ಯೆ ಹೆಚ್ಚಿಸುವಂತೆ ಸಿಪಿಎಂ ಒತ್ತಾಯ

ಬೆಂಗಳೂರು: 'ಸದ್ಯ ಬಿಎಂಟಿಸಿ ಬಸ್‌ಗಳಲ್ಲಿ ಅಂತರ ನಿಯಮ ಪಾಲನೆಯಾಗುತ್ತಿಲ್ಲ. ಬಸ್‌ಗಳ ಸಂಖ್ಯೆ ಹೆಚ್ಚಿಸುವ ಮೂಲಕ ಈ ನಿಯಮ ಕಡ್ಡಾಯಗೊಳಿಸಿ ಸೋಂಕು ಹರಡುವಿಕೆ ತಡೆಯಲು ಸರ್ಕಾರ ಮುಂದಾಗಬೇಕು' ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಒತ್ತಾಯಿಸಿವೆ.

'ನಗರದಲ್ಲಿ ಕೋವಿಡ್ ಪೀಡಿತರ ಸಂಖ್ಯೆ ದಿನೆ ದಿನೇ ಹೆಚ್ಚುತ್ತಿದೆ. ಇದರಿಂದ ದುಡಿಯುವ ಜನರ ಬದುಕು ಬೀದಿಗೆ ಬೀಳುವ ಅಪಾಯ ಎದುರಾಗಿದೆ. ತಮ್ಮ ನಿತ್ಯದ ಕೆಲಸಗಳಿಗಾಗಿ ಪ್ರತಿನಿತ್ಯ 40 ಲಕ್ಷಕ್ಕೂ ಅಧಿಕ ಮಂದಿ ಬಿಎಂಟಿಸಿ ಬಸ್ ಸೇವೆ ಅವಲಂಬಿಸಿದ್ದಾರೆ. ಬಿಎಂಟಿಸಿಯು ಬಸ್‌ಗಳಲ್ಲಿ ಸಾಮರ್ಥ್ಯದ ಶೇ 50ರಷ್ಟು ಪ್ರಯಾಣಿಕರಿಗೆ ಮಾತ್ರ ಅವಕಾಶ ನೀಡಬೇಕು. ಜೊತೆಗೆ ಬಸ್ ಟ್ರಿಪ್‌ಗಳನ್ನು ಹೆಚ್ಚಿಸಿ ಇತರರಿಗೆ ತೊಂದರೆಯಾಗುವುದನ್ನು ತಪ್ಪಿಸಬೇಕು. ಬಸ್‌ಗಳಲ್ಲಿ ಸೋಂಕು ನಿವಾರಕ ದ್ರಾವಣವನ್ನೂ ಸಿಂಪಡಿಸಬೇಕು' ಎಂದು ಆಗ್ರಹಿಸಿವೆ. 'ಕೆಲ ಮಾರ್ಗಗಳಲ್ಲಿ ಸಂಚರಿಸುವ ಬಸ್‌ಗಳು ಪ್ರಯಾಣಿಕರಿಂದ ತುಂಬಿರುತ್ತವೆ. ಶ್ರಮಿಕ ವರ್ಗದವರು ಅಂತಹ ಬಸ್‌ಗಳಲ್ಲಿ ಪ್ರಯಾಣಿಸುವುದು ಅನಿವಾರ್ಯ. ಇದರಿಂದ ಕೊರೊನಾ ಸೋಂಕು ವೇಗವಾಗಿ ಹರಡುವ ಅಪಾಯ ಎದುರಾಗಿದೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು' ಎಂದು ಸಮಿತಿಗಳು ಹೇಳಿವೆ.

ಮೇಕೆದಾಟು ಭದ್ರತೆ: ಪೊಲೀಸರಿಗೆ ಸೋಂಕು

ಬೆಂಗಳೂರು: ಮೇಕೆದಾಟು ಪಾದಯಾತ್ರೆಯ ಬಂದೋಬಸ್ತ್‌ಗೆ ವಿವಿಧ ಜಿಲ್ಲೆಗಳಿಂದ ತೆರಳಿದ್ದ 57ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಗೆ ಶನಿವಾರ ಕೋವಿಡ್ ದೃಢಪಟ್ಟಿದೆ.

ಕೋಲಾರ ಜಿಲ್ಲೆ ಕೆಜಿಎಫ್‌ನ 28, ರಾಮನಗರದ 11, ಬೇತಮಂಗಲ ಹಾಗೂ ತುಮಕೂರಿನ ತಲಾ 9 ಪೊಲೀಸರು ಸೇರಿದಂತೆ ಒಟ್ಟು 57 ಸಿಬ್ಬಂದಿಗೆ ಕೋವಿಡ್ ದೃಢಪಟ್ಟಿದೆ. ಪರೀಕ್ಷೆ ಮಾಡಿಸಿಕೊಂಡ ಇನ್ನೂ ಅನೇಕರ ವರದಿ ಬರಬೇಕಿದ್ದು, ಸಂಖ್ಯೆ ಹೆಚ್ಚಳವಾಗುವ ಸಾಧ್ಯತೆ ಇದೆ.

ಕೆಜಿಎಫ್‌ನಿಂದ ತೆರಳಿದ್ದ ಪೊಲೀಸರ ಪೈಕಿ 25 ಸಿಬ್ಬಂದಿ ಶುಕ್ರವಾರ ಕೋವಿಡ್ ದೃಢಪಟ್ಟತ್ತು. ಆ ಸಂಖ್ಯೆ ಈಗ 53 ದಾಟಿದೆ.

ಮೇಕೆದಾಟು ಪಾದಯಾತ್ರೆ ಬಂದೋಬಸ್ತ್‌ನಿಂದ ಹಿಂದಿರುಗಿದ ಬಳಿಕ ಹೆಚ್ಚಿನ ಸಿಬ್ಬಂದಿಯಲ್ಲಿ ಕೋವಿಡ್ ಲಕ್ಷಣ ಕಾಣಿಸಿಕೊಂಡಿವೆ. ಹೊರ ಜಿಲ್ಲೆಗಳ ಮೂರು ಸಾವಿರ ಮತ್ತು ರಾಮನಗರ ಜಿಲ್ಲೆಯ ಎರಡು ಸಾವಿರ ಪೊಲೀಸರು ಸೇರಿದಂತೆ ಒಟ್ಟು ಐದು ಸಾವಿರ ಪೊಲೀಸ್ ಸಿಬ್ಬಂದಿಯನ್ನು ಬಂದೋಬಸ್ತ್ ಕೆಲಸಕ್ಕೆ ನಿಯೋಜಿಸಲಾಗಿತ್ತು.

ಬೇರೆ ಜಿಲ್ಲೆಗಳಿಂದ ಭದ್ರತೆಗೆ ತೆರಳಿದ್ದ ಪೊಲೀಸರೊಂದಿಗೆ ಕಲ್ಯಾಣ ಮಂಟಪದಲ್ಲಿ ಮೂರ್ನಾಲ್ಕು ದಿನ ಒಟ್ಟಿಗೆ ಕಾಲ ಕಳೆದಿದ್ದಾರೆ. ಎಲ್ಲರೂ ಒಂದೇ ಶೌಚಾಲಯ ಮತ್ತು ಸ್ನಾನದ ಮನೆ ಬಳಸಿದ್ದಾರೆ. ಇದರಿಂದಾಗಿ ಹೆಚ್ಚಿನ ಜನರಿಗೆ ಸೋಂಕು ತಗುಲಿರುವ ಸಾಧ್ಯತೆ ಇದೆ ಎನ್ನುತ್ತಾರೆ ಹೆಸರು ಬಹಿರಂಗ ಪಡಿಸಲು ಇಚ್ಛಿಸದ ಪೊಲೀಸ್ ಸಿಬ್ಬಂದಿ.

ರಾಮನಗರಕ್ಕೆ ತೆರಳಿದ್ದ ಎಲ್ಲಾ ಸಿಬ್ಬಂದಿಗೂ ಕಡ್ಡಾಯವಾಗಿ ಕೋವಿಡ್ ಪರೀಕ್ಷೆ ನಡೆಸಬೇಕು ಎಂದು ಹಿರಿಯ ಅಧಿಕಾರಿಗಳು ಸೂಚಿಸಿದ ಹಿನ್ನೆಲೆಯಲ್ಲಿ ಆರ್‌ಟಿಪಿಸಿಆರ್ ಮತ್ತು ರ‍್ಯಾಪಿಡ್ ಆ್ಯಂಟಿಜೆನ್ ಪರೀಕ್ಷೆ ನಡೆಸಲಾಗಿದೆ.

ಶಾಸಕ ನಿಸರ್ಗ ನಾರಾಯಣಸ್ವಾಮಿಗೆ ಕೋವಿಡ್

ವಿಜಯಪುರ: ದೇವನಹಳ್ಳಿ ಶಾಸಕ ನಿಸರ್ಗ ನಾರಾಯಣಸ್ವಾಮಿ ಅವರಿಗೆ ಶನಿವಾರ ಕೋವಿಡ್ ದೃಢಪಟ್ಟಿದೆ. ಸಂಪರ್ಕಕ್ಕೆ ಬಂದಿರುವ ಎಲ್ಲರೂ ಪರೀಕ್ಷೆ ಮಾಡಿಸಿಕೊಳ್ಳುವಂತೆ ಶಾಸಕರು ಮನವಿ ಮಾಡಿದ್ದಾರೆ.

ದೇವನಹಳ್ಳಿಯಲ್ಲಿ ವಾಸವಾಗಿರುವ ಶಾಸಕರ ಪತ್ನಿ ಹಾಗೂ ಸೊಸೆಗೂ ಸೋಂಕು ಪತ್ತೆಯಾಗಿದೆ.

ತಾಲ್ಲೂಕಿನ ಕುಂದಾಣ, ವಿಜಯಪುರ ಹಾಗೂ ಚನ್ನರಾಯಪಟ್ಟಣದಲ್ಲಿ ನಾಡಕಚೇರಿ ನೂತನ ಕಟ್ಟಡಗಳಿಗೆ ಶಾಸಕರು ಶುಕ್ರವಾರ ಭೂಮಿಪೂಜೆ ನೆರವೇರಿಸಿದ್ದರು.

ಬ್ಯಾಂಕ್‌ಗೆ ನುಗ್ಗಿ ದರೋಡೆ: ವಿಶೇಷ ತಂಡ ರಚನೆ

ಬೆಂಗಳೂರು: ಬಿಟಿಎಂ ಲೇಔಟ್ 1ನೇ ಹಂತದಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಶಾಖೆಯಲ್ಲಿ ದರೋಡೆ ನಡೆದಿದ್ದು, ಆರೋಪಿ ಪತ್ತೆಗಾಗಿ ಪೊಲೀಸರ ವಿಶೇಷ ತಂಡ ರಚಿಸಲಾಗಿದೆ.

'ಶುಕ್ರವಾರ ಸಂಜೆ ಗ್ರಾಹಕರ ಸೋಗಿನಲ್ಲಿ ಬ್ಯಾಂಕ್‌ಗೆ ಹೋಗಿದ್ದ ಆರೋಪಿಯೊಬ್ಬ, ವ್ಯವಸ್ಥಾಪಕರ ಕೊಠಡಿಗೆ ನುಗ್ಗಿದ್ದ. ಅವರಿಗೆ ಚಾಕು ತೋರಿಸಿ ಬೆದರಿಸಿದ್ದ. ನಂತರ, ₹ 3.75 ಲಕ್ಷ ದೋಚಿಕೊಂಡು ಪರಾರಿಯಾಗಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ಮುಖಕ್ಕೆ ಮಾಸ್ಕ್ ಧರಿಸಿದ್ದ. ಆತನ ಪೂರ್ಣ ಮುಖ ಚಹರೆಯನ್ನು ಬ್ಯಾಂಕ್ ಸಿಬ್ಬಂದಿ ಗಮನಿಸಿಲ್ಲ. ಕೃತ್ಯದ ಬಗ್ಗೆ ವ್ಯವಸ್ಥಾಪಕ ದೂರು ನೀಡಿದ್ದು, ಅದರನ್ವಯ ಪ್ರಕರಣ ದಾಖಲಾಗಿದೆ. ಬ್ಯಾಂಕ್ ಬಗ್ಗೆ ತಿಳಿದುಕೊಂಡಿರುವ ವ್ಯಕ್ತಿಯೇ ಕೃತ್ಯ ಎಸಗಿರುವ ಅನುಮಾನವಿದೆ. ಘಟನೆ ಸಮಯದಲ್ಲಿ ಭದ್ರತಾ ಸಿಬ್ಬಂದಿ ಸಹ ಇರಲಿಲ್ಲವೆಂಬುದು ಗೊತ್ತಾಗಿದೆ' ಎಂದೂ ತಿಳಿಸಿವೆ.

ಸುತ್ತೂರು ಶಿವರಾತ್ರೀಶ್ವರ ಜಾತ್ರೆ ರದ್ದು

ನಂಜನಗೂಡು/ವರುಣಾ: ತಾಲ್ಲೂಕಿನ ಸುತ್ತೂರು ಕ್ಷೇತ್ರದಲ್ಲಿ ಜ.28ರಿಂದ ಫೆ.2ರವರೆಗೆ ನಡೆಯಬೇಕಿದ್ದ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವವನ್ನು ಸರ್ಕಾರದ ಮಾರ್ಗಸೂಚಿಯಂತೆ ರದ್ದುಪಡಿಸಲಾಗಿದೆ.

ಜ.29ರಂದು ಸಂಜೆ ಹಾಗೂ 30ರಂದು ಸಾಂಪ್ರದಾಯಿಕವಾಗಿ ನಡೆಯುವ ಧಾರ್ಮಿಕ ಆಚರಣೆಗಳನ್ನು ಆನ್‌ಲೈನ್‌ನಲ್ಲಿ http://Youtube.com/c/JSSMahavidyapeethaonline , https://www.facebook.com/JSSMVP ವೀಕ್ಷಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಗಂಡನಿಗೆ ನಷ್ಟವನ್ನುಂಟು ಮಾಡಲು ಸುಪಾರಿ

ವ್ಯವಸ್ಥಾಪಕ ಹತ್ಯೆ: 'ಡಾಬಾ' ಪಾಲುದಾರನ ಪತ್ನಿ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಸೋಲದೇವನಹಳ್ಳಿ ಬಳಿಯ 'ಯು ಟರ್ನ್' ಡಾಬಾ ವ್ಯವಸ್ಥಾಪಕ ಮನೋಜ್ ಕೊಲೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಪೊಲೀಸರು, ಡಾಬಾ ಪಾಲುದಾರನ ಪತ್ನಿ ಶೀತಲ್ ಎಂಬಾಕೆಯನ್ನು ಬಂಧಿಸಿದ್ದಾರೆ.

'2021ರ ಡಿಸೆಂಬರ್ 23ರಂದು ತಡರಾತ್ರಿ ವ್ಯವಸ್ಥಾಪಕ ಮನೋಜ್ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಲಾಗಿತ್ತು. ತೀವ್ರ ಗಾಯಗೊಂಡಿದ್ದ ಮನೋಜ್, ಚಿಕಿತ್ಸೆಗೆ ಸ್ಪಂದಿಸದೇ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಡಿ. 28ರಂದು ಮೃತಪಟ್ಟಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಆಸ್ಪತ್ರೆಗೆ ದಾಖಲಾಗಿದ್ದ ಸಂದರ್ಭದಲ್ಲಿ ಮನೋಜ್ ನೀಡಿದ್ದ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಕೊಲೆ ಆರೋಪದಡಿ ಮಂಜುನಾಥ್, ಹೇಮಂತ್ ಹಾಗೂ ಮನುಕುಮಾರ್ ಎಂಬುವರನ್ನು ಇತ್ತೀಚೆಗಷ್ಟೇ ಬಂಧಿಸಲಾಗಿತ್ತು. ಸುಪಾರಿ ನೀಡಿದ್ದರು ಎನ್ನಲಾದ ಆರೋಪಿ ಶೀತಲ್ ಹಾಗೂ ಆರೋಪಿಗಳಿಗೆ ಆಶ್ರಯ ನೀಡಿದ್ದ ರವಿರಾಜ್‌ಗೌಡ ಎಂಬಾತನನ್ನು ಶನಿವಾರ ಬಂಧಿಸಲಾಗಿದೆ' ಎಂದೂ ತಿಳಿಸಿದರು.

ಸ್ನೇಹಿತನಿಗೆ ಸುಪಾರಿ: 'ಆರೋಪಿ ಶೀತಲ್, ಕೆಂಪಾಪುರ ನಿವಾಸಿ. ಸಾಫ್ಟ್‌ವೇರ್ ಕಂಪನಿ ಉದ್ಯೋಗಿ ಆಗಿದ್ದ ಈಕೆಯನ್ನು ಅರ್ಪಿತ್ ಎಂಬುವರು ಮದುವೆಯಾಗಿದ್ದರು. ಜೀವನ ನಿರ್ವಹಣೆಗಾಗಿ ಅರ್ಪಿತ್, ಸ್ನೇಹಿತರ ಜೊತೆ ಸೇರಿ ಪಾಲುದಾರಿಕೆಯಲ್ಲಿ 'ಯು ಟರ್ನ್' ಡಾಬಾ ತೆರೆದಿದ್ದರು. ವ್ಯಾಪಾರವೂ ಚೆನ್ನಾಗಿತ್ತು' ಎಂದು ಅಧಿಕಾರಿ ಹೇಳಿದರು.

'ಅರ್ಪಿತ್ ಹಾಗೂ ಶೀತಲ್ ನಡುವೆ ವೈಮನಸ್ಸು ಉಂಟಾಗಿತ್ತು. ಕೌಟುಂಬಿಕ ವ್ಯಾಜ್ಯದಿಂದಾಗಿ ಅವರಿಬ್ಬರು ದೂರವಾಗಿದ್ದರು. ಡಾಬಾ ವ್ಯವಹಾರದಿಂದ ಅರ್ಪಿತ್ ಅವರು ಆರ್ಥಿಕವಾಗಿ ಸದೃಢವಾಗುತ್ತಿದ್ದರು. ಅದನ್ನು ಸಹಿಸದ ಶೀತಲ್, 'ಹೇಗಾದರೂ ಮಾಡಿ ಡಾಬಾ ಬಂದ್ ಮಾಡಿಸಿ, ಗಂಡನಿಗೆ ನಷ್ಟವನ್ನುಂಟು ಮಾಡಬೇಕು' ಎಂದುಕೊಂಡಿದ್ದಳು.'

'ಸ್ನೇಹಿತನೇ ಆದ ಆರೋಪಿ ಮನುಕುಮಾರ್‌ನನ್ನು ಸಂಪರ್ಕಿಸಿದ್ದ ಶೀತಲ್, 'ಗಂಡನನ್ನು ಬೆದರಿಸಿ ಡಾಬಾ ಬಂದ್ ಮಾಡಿಸು' ಎಂದು ಹೇಳಿ ಸುಪಾರಿ ನೀಡಿದ್ದಳು. ಬಳಿಕವೇ ಮನು, ಸಹಚರರಾದ ಮಂಜುನಾಥ್ ಹಾಗೂ ಹೇಮಂತ್‌ನನ್ನು ಡಾಬಾಗೆ ಕಳುಹಿಸಿ ಬೆಂಕಿ ಹಚ್ಚಿಸಿದ್ದ. ತಡೆಯಲು ಬಂದ ವ್ಯವಸ್ಥಾಪಕ ಮನೋಜ್ ಮೇಲೆಯೇ ಆರೋಪಿಗಳು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಂದಿದ್ದರು' ಎಂದೂ ತಿಳಿಸಿದರು.

ಕೊಠಡಿಯಲ್ಲಿದ್ದ ಆರೋಪಿಗಳು: 'ಕೃತ್ಯದ ಬಳಿಕ ಆರೋಪಿಗಳಾದ ಮಂಜುನಾಥ್ ಹಾಗೂ ಹೇಮಂತ್, ಬಂಧನದ ಭೀತಿಯಲ್ಲಿ ತಲೆಮರೆಸಿಕೊಂಡಿದ್ದರು. ಅವರಿಬ್ಬರಿಗೂ ಆರೋಪಿ ರವಿರಾಜ್ ಗೌಡ, ಕೊಠಡಿಯೊಂದರಲ್ಲಿ ಆಶ್ರಯ ನೀಡಿದ್ದ. ಅವರ ಬಗ್ಗೆ ಪೊಲೀಸರಿಗೆ ಮಾಹಿತಿ ಸಿಗದಂತೆ ನೋಡಿಕೊಂಡಿದ್ದ' ಎಂದು ಅಧಿಕಾರಿ ಹೇಳಿದರು.

'ತನಿಖೆ ಕೈಗೊಂಡಿದ್ದ ವಿಶೇಷ ತಂಡ, ಘಟನಾ ಸ್ಥಳದಲ್ಲಿ ಸಿಕ್ಕ ಪುರಾವೆಗಳನ್ನು ಪರಿಶೀಲಿಸಿತ್ತು. ಆರೋಪಿಗಳ ಮಾಹಿತಿ ಕಲೆಹಾಕಿ, ಕೊಠಡಿಯಿಂದಲೇ ಅವರನ್ನು ಬಂಧಿಸಿ ಕರೆತಂದಿದೆ' ಎಂದೂ ತಿಳಿಸಿದರು.

ಪಿಸ್ತೂಲ್ ತೋರಿಸಿ ಕೃತ್ಯವೆಸಗಿದ್ದ ಆರೋಪಿಗಳು ● ಸಂಬಂಧಿಯಿಂದಲೇ ಸಂಚು

ಪೊಲೀಸರ ಸೋಗಿನಲ್ಲಿ ಮನೆಗೆ ನುಗ್ಗಿ ದರೋಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸರ ಸೋಗಿನಲ್ಲಿ ಮನೆಗೆ ನುಗ್ಗಿ ಚಿನ್ನಾಭರಣ ಹಾಗೂ ನಗದು ದರೋಡೆ ಮಾಡಿದ್ದ ಪ್ರಕರಣದಲ್ಲಿ ಐವರು ಆರೋಪಿಗಳನ್ನು ಮಹಾಲಕ್ಷ್ಮಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ರೌಡಿಗಳಾದ ಬಾಗಲಗುಂಟೆಯ ಬಾಲಕೃಷ್ಣ, ಯಲಹಂಕದ ಚೇತನ್‌ಕುಮಾರ್, ಅಪರಾಧ ಹಿನ್ನೆಲೆಯುಳ್ಳ ಪುನೀತ್, ಪೃಥ್ವಿ ಹಾಗೂ ರೋಹನ್ ಬಂಧಿತರು. ಅವರಿಂದ ₹ 16 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ₹ 10.30 ಲಕ್ಷ ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಮಹಾಲಕ್ಷ್ಮಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ಸಮಯ ನಾಯ್ಕ ಎಂಬುವರ ಮನೆಗೆ 2021ರ ಡಿಸೆಂಬರ್ 31ರಂದು ಮಧ್ಯಾಹ್ನ ನುಗ್ಗಿದ್ದ ಆರೋಪಿಗಳು, ಪಿಸ್ತೂಲ್ ತೋರಿಸಿ ಬೆದರಿಸಿದ್ದರು. ಚಿನ್ನಾಭರಣ ಹಾಗೂ ನಗದು ದರೋಡೆ ಮಾಡಿಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು' ಎಂದೂ ತಿಳಿಸಿದರು.

ಬಂಧಿತ ಆರೋಪಿಗಳು

ಸಂಬಂಧಿಯಿಂದಲೇ ಸಂಚು: 'ಬಂಧಿತ ಆರೋಪಿ ರೋಹನ್, ದೂರುದಾರ ಸಮಯ ನಾಯ್ಕ ಅವರ ಸಂಬಂಧಿ. ಕೆಲದಿನಗಳ ಹಿಂದಷ್ಟೇ ಸಮಯನಾಯ್ಕ ಬಳಿ ಹಣ ಕೇಳಿದ್ದ. ಆದರೆ, ಅವರು ಕೊಟ್ಟಿರಲಿಲ್ಲ. ಅದೇ ಕಾರಣಕ್ಕೆ ಸ್ನೇಹಿತರ ಜೊತೆ ಸೇರಿ ಸಂಚು ರೂಪಿಸಿ ಕೃತ್ಯ ಮಾಡಿಸಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿದೆ' ಎಂದು ಅಧಿಕಾರಿ ಹೇಳಿದರು.

'ಛಾಯಾಗ್ರಾಹಕ ರೋಹನ್‌ಗೆ ಆರೋಪಿ ಪುನೀತ್ ಪರಿಚಯವಿತ್ತು. ಆತನಿಗೆ ರೌಡಿಗಳಾದ ಬಾಲಕೃಷ್ಣ ಹಾಗೂ ಚೇತನ್‌ಕುಮಾರ್ ಜೊತೆ ಒಡನಾಟವಿತ್ತು. ಎಲ್ಲರೂ ಸೇರಿ ಆಗಾಗ ಮದ್ಯದ ಪಾರ್ಟಿಗಳನ್ನು ಮಾಡುತ್ತಿದ್ದರು. ತಮ್ಮ ಸಂಬಂಧಿ ಮನೆಯಲ್ಲಿ ಭಾರಿ ಪ್ರಮಾಣದ ಚಿನ್ನಾಭರಣ ಹಾಗೂ ನಗದು ಇರುವುದಾಗಿ ಹೇಳಿದ್ದ ರೋಹನ್, ದರೋಡೆ ಮಾಡಲು ಸೂಚಿಸಿದ್ದ' ಎಂದೂ ತಿಳಿಸಿದರು.

ದಾಳಿ ನೆಪದಲ್ಲಿ ನುಗ್ಗಿದ್ದರು: 'ನಾವು ಪೊಲೀಸರು. ಕಳ್ಳನೊಬ್ಬನಿಂದ ಚಿನ್ನಾಭರಣ ಖರೀದಿಸಿರುವ ಮಾಹಿತಿ ಬಂದಿದ್ದು, ದಾಳಿ ಮಾಡಲು ಬಂದಿದ್ದೇವೆ' ಎಂಬುದಾಗಿ ಹೇಳಿ ಆರೋಪಿಗಳು ಮನೆಯೊಳಗೆ ನುಗ್ಗಿದ್ದರು. ಪಿಸ್ತೂಲ್ ತೋರಿಸಿ ಬೆದರಿಕೆ ಹಾಕಿದ್ದರು. ಚಿನ್ನಾಭರಣ ಹಾಗೂ ನಗದು ದೋಚಿದ್ದರು. ನಂತರ, ಸಮಯ ನಾಯ್ಕ ಹಾಗೂ ಅವರ ಮಗನನ್ನು ಅಪಹರಿಸಿಕೊಂಡು ಹೋಗಿದ್ದರು' ಎಂದು ಪೊಲೀಸ್ ಅಧಿಕಾರಿ ಮಾಹಿತಿ ನೀಡಿದರು.

'ಸಮಯ ನಾಯ್ಕ ಹಾಗೂ ಅವರ ಮಗನನ್ನು ನಗರದ ಹಲವೆಡೆ ಕಾರಿನಲ್ಲಿ ಸುತ್ತಾಡಿಸಿದ್ದ ಆರೋಪಿಗಳು, '₹20 ಲಕ್ಷ ಕೊಟ್ಟರೆ, ಬಿಡುಗಡೆ ಮಾಡುತ್ತೇವೆ. ಚಿನ್ನಾಭರಣವನ್ನೂ ವಾಪಸು ಕೊಡುತ್ತೇವೆ' ಎಂದಿದ್ದರು. ಅದಕ್ಕೆ ಸಮಯ ನಾಯ್ಕ ಒಪ್ಪಿರಲಿಲ್ಲ. ನಂತರ, ಇಬ್ಬರನ್ನೂ ಕಾರಿನಿಂದ ಇಳಿಸಿ ಆರೋಪಿಗಳು ಪರಾರಿಯಾಗಿದ್ದರು.'

'ಕೃತ್ಯದಿಂದ ಹೆದರಿದ್ದ ಸಮಯ ನಾಯ್ಕ, ಪೊಲೀಸ್ ಠಾಣೆಗೆ ಬಂದು ವಿಚಾರಿಸಿದ್ದರು. ಯಾವುದೇ ಪೊಲೀಸರು ತಮ್ಮ ಮನೆಗೆ ಬಂದಿಲ್ಲವೆಂಬುದು ಗೊತ್ತಾಗಿತ್ತು. ನಂತರವೇ ದೂರು ನೀಡಿದ್ದರು. ಪ್ರಕರಣ ದಾಖಲಾಗುತ್ತಿದ್ದಂತೆ ಕಾರ್ಯಾಚರಣೆ ನಡೆಸಿದ ಪೊಲೀಸರು, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ' ಎಂದೂ ಅಧಿಕಾರಿ ಹೇಳಿದರು.

ಮಂಗಳೂರಿನ ಕುದ್ರೋಳಿ ಬಳಿ ಫಲ್ಗುಣಿ ನದಿ ತೀರಕ್ಕೆ ತ್ಯಾಜ್ಯಗಳನ್ನು ತಂದು ಸುರಿದಿರುವ ದೃಶ್ಯ –ಪ್ರಜಾವಾಣಿ ಚಿತ್ರ

ಮಾಲಿನ್ಯದ ಲೇಪ; ಫಲ್ಗುಣಿಯ ಪರಿತಾಪ

• ಸಂಧ್ಯಾ ಹೆಗಡೆ

ಮಂಗಳೂರು: ಕೈಗಾರಿಕೆಗಳ ತವರಾಗಿರುವ ಬಂದರು ನಗರಿ ಮಂಗಳೂರಿನಲ್ಲಿ ಕಡಲ ತಡಿ ಮತ್ತು ನದಿಯ ದಡದ ಮೇಲಿರುವ ಕೈಗಾರಿಕೆಗಳಿಂದ ಜಲಮೂಲಗಳು ಮಲಿನಗೊಳ್ಳುತ್ತಿವೆ ಎಂಬ ದೂರು ಹೊಸತೇನಲ್ಲ. ಆದರೆ, ಇದರ ಗಂಭೀರ ಪರಿಣಾಮಗಳ ಬಗ್ಗೆ ಸಮಗ್ರ ಅಧ್ಯಯನ ನಡೆದಿಲ್ಲ ಎಂಬುದು ನಾಗರಿಕರ ಅಸಮಾಧಾನ.

ಕೈಗಾರಿಕಾ ನೆಲೆಯ ಅಕ್ಕಪಕ್ಕದಲ್ಲಿರುವ ಹಳ್ಳಗಳು, ನಂದಿನಿ, ನೇತ್ರಾವತಿ ನದಿಗಳು, ಉಪನದಿಗಳು ಬೆಂಕಿಯನ್ನು ಒಡಲಿಗೆ ಸೇರಿಸಿಕೊಂಡು ಫಲ್ಗುಣಿಯಷ್ಟೇ ನಿಸ್ತೇಜಗೊಂಡಿವೆ.

ನದಿ ಸೊರಗಿದಾಗ ನೀರು ಗಾಢ ಬಣ್ಣಕ್ಕೆ ತಿರುಗುವುದು ಕಾಣಿಸುತ್ತದೆ. ಕಳೆದ ಬೇಸಿಗೆಯಲ್ಲಿ ಪೆರ್ಮುದೆಯ ಬಳಿ ನದಿ ನೀರಿನಲ್ಲಿ ಅಸಂಖ್ಯ ಮೀನುಗಳು ತೇಲಿದ್ದವು ಎನ್ನುತ್ತಾರೆ ಮಾಲಿನ್ಯದ ವಿರುದ್ಧ ಧ್ವನಿ ಎತ್ತುತ್ತಿರುವ ಕೃಷಿಭೂಮಿ ಸಂರಕ್ಷಣಾ ಸಮಿತಿ ಪ್ರಮುಖರು.

ಕರಾವಳಿಗೆ ಬರುವ ಹಡಗುಗಳಿಂದ ಹೊರಚೆಲ್ಲುವ ತೈಲದ ಜಿಡ್ಡು, ಎಣ್ಣೆಮಿಶ್ರಿತ ರಾಸಾಯನಿಕಗಳು ಶುದ್ಧನೀರನ್ನು ಕದಡಿವೆ. ನಿಕ್ಕೆಲ್, ಪಾದರಸ, ತಾಮ್ರದಂತಹ ರಾಸಾಯನಿಕಯುಕ್ತ ತ್ಯಾಜ್ಯಗಳು ಪೈಪ್‌ಲೈನ್ ಮೂಲಕ ನೀರಿಗೆ ಸೇರುವುದರಿಂದ ಅದು ಮೀನಿನ ಹೊಟ್ಟೆಗೆ ನುಸುಳಿ, ಅದನ್ನು ಸೇವಿಸುವ ಮನುಷ್ಯನ ದೇಹದೊಳಗೆ ಸೇರುತ್ತದೆ. ಇದರಿಂದ ಹಾರ್ಮೋನ್‌ನಲ್ಲಿ ವ್ಯತ್ಯಾಸ, ಜೀರ್ಣಕ್ರಿಯೆಯಲ್ಲಿ ತೊಂದರೆ, ಕ್ಯಾನ್ಸರ್‌ನಂತಹ ಗಂಭೀರ ಕಾಯಿಲೆಗಳಿಗೆ ಕಾರಣವಾಗುತ್ತದೆ.

ಮಹಾನಗರ ಪಾಲಿಕೆಯ ಒಳಚರಂಡಿ ನೀರು, ಫಿಷ್ ಮೀಲ್ ತ್ಯಾಜ್ಯಗಳು ಸಮುದ್ರದ ಒಡಲು ಸೇರುವ ಪರಿಣಾಮ ನೀರಿನ ಬಣ್ಣ ಬದಲಾವಣೆ, ಎನ್‌ಪಿಕೆ ಮಟ್ಟ ಹೆಚ್ಚಳಕ್ಕೆ ಕಾರಣವಾಗುತ್ತ-ದೆ. ಈ ಬಗ್ಗೆ ಮೀನುಗಾರಿಕಾ ಕಾಲೇಜು ಎರಡು ವರ್ಷಗಳಿಂದ ಅಧ್ಯಯನ ನಡೆಸುತ್ತಿದೆ ಎನ್ನುತ್ತಾರೆ ಕಾಲೇಜಿನ ಡೀನ್ ಸೆಂಥಿಲ್‌ವೇಲ್.

ಇವೆಲ್ಲದರ ಪರಿಣಾಮ ಬೂತಾಯಿ, ಬಂಗುಡೆ ಇನ್ನೂ ಅನೇಕ ಜಾತಿಯ ಮೀನುಗಳ ಸಂತತಿ ಕಡಿಮೆಯಾಗಿದೆ. ಹವಾಮಾನ ಬದಲಾವಣೆ, ಹೆಚ್ಚುತ್ತಿರುವ ತಾಪಮಾನ ಕೂಡ ಸಮುದ್ರ ಮೀನುಗಳ ಅಳಿವಿಗೆ ಕಾಣಿಕೆ ನೀಡುತ್ತಿದೆ ಎಂದು ವಿವರಿಸಿದರು.

ನಾಡದೋಣಿ ಮೀನುಗಾರಿಕೆ, ತರಕಾರಿ ಕೃಷಿ, ಕಪ್ಪೆಚಿಪ್ಪು ಆಯುವ ಮೂಲಕ ಬದುಕು ಕಟ್ಟಿಕೊಂಡಿದ್ದ ತೋಕೂರಿನ ನೂರಾರು ಕುಟುಂಬಗಳು ತಮ್ಮ ಮೂಲ ವೃತ್ತಿ ಕಳೆದುಕೊಂಡಿವೆ. ಹಿನ್ನೀರಿನಲ್ಲಿ ಸಾಂಪ್ರದಾಯಿಕ ಮೀನುಗಾರಿಕೆ ಮಾಡಿ ದೋಣಿ ತುಂಬ ಮೀನು ತರುತ್ತಿದ್ದ ಬ್ಯಾರಿ, ಮೊಗವೀರ ಸಮುದಾಯದವರು ಈಗ ಬಹಳಷ್ಟು ದಿನ ಬರಿಗೈಯಲ್ಲಿ ಮರಳುವ ಸ್ಥಿತಿ ನಿರ್ಮಾಣವಾಗಿದೆ ಎನ್ನುತ್ತಾರೆ ಮೀನುಗಾರ ಅಬ್ದುಲ್ ರೆಹಮಾನ್.

'ಮಹಾನಗರ ಪಾಲಿಕೆಯ ತ್ಯಾಜ್ಯ ನೀರು ಮರವೂರಿನಲ್ಲಿ ನದಿಗೆ ಸೇರುತ್ತಿರುವ ಬಗ್ಗೆ ಗಂಭೀರ ಚರ್ಚೆ ನಡೆದು ಮಾಲಿನ್ಯ ನಿಯಂತ್ರಣ ಮಂಡಳಿಯು ಪಾಲಿಕೆ ವಿರುದ್ಧ ಆರೋಪ ಮಾಡಿತ್ತು. ಆದರೆ, ನಂತರದಲ್ಲಿ ಈ ವಿಷಯ ಮರೆಗೆ ಸರಿದಿದೆ. ಸಾಂದರ್ಭಿಕ ಆರೋಪ, ಚರ್ಚೆಗಳು ನಡೆಯುತ್ತವೆಯೇ ವಿನಾ ನೀರು ವಿಷವಾಗಿ ಭವಿಷ್ಯದಲ್ಲಿ ಸಮಸ್ಯೆ ಉಲ್ಬಣಾವಸ್ಥೆ ತಲುಪಬಹುದಾದ ಸಾಧ್ಯತೆಯ ಬಗ್ಗೆ ಸಮಗ್ರ ಅಧ್ಯಯನ ನಡೆಸಲು ಯಾರೂ ಮುಂದಾಗುತ್ತಿಲ್ಲ' ಎಂದು ಸಾಮಾಜಿಕ ಕಾರ್ಯಕರ್ತ ಮುನೀರ್ ಕಾಟಿಪಳ್ಳ ಆರೋಪಿಸುತ್ತಾರೆ.

ಬೈಕಂಪಾಡಿ ಕೈಗಾರಿಕಾ ಪ್ರದೇಶದ-ಲ್ಲಿರುವ ಹೆಚ್ಚಿನ ಉದ್ದಿಮೆಗಳು ಮಾಲಿನ್ಯ ನಿಯಂತ್ರಣ ನಿಯಮ ಪಾಲನೆಯಲ್ಲಿ ಎಡವಿವೆ. ರಾಸಾಯನಿಕಗಳು ನದಿ, ಸಮುದ್ರ ಸೇರುತ್ತಿವೆ. ಇದರ ಅಧ್ಯಯನಕ್ಕೆ ಸಮಿತಿ ರಚಿಸುವ ಪ್ರಸ್ತಾಪ ಆಗಿದ್ದರೂ, ಅದು ಅಷ್ಟಕ್ಕೇ ನಿಂತಿದೆ ಎಂದು ಪರಿಸರ ಕಾರ್ಯಕರ್ತ ಶಶಿಧರ ಶೆಟ್ಟಿ ದೂರುತ್ತಾರೆ.

ಘನತ್ಯಾಜ್ಯದ ಕಲುಷಿತ ನೀರು

ಫಲ್ಗುಣಿ ನದಿಗೆ ಕೈಗಾರಿಕಾ ತ್ಯಾಜ್ಯ ಮಾತ್ರವಲ್ಲ, ನಗರದ ಪಚ್ಚನಾಡಿ-ಯಲ್ಲಿರುವ ಮಹಾನಗರ ಪಾಲಿಕೆಯ ತ್ಯಾಜ್ಯ ಸಂಸ್ಕರಣಾ ಘಟಕದ ಕಲುಷಿತ ನೀರೂ ಸೇರುತ್ತಿದೆ. ಫಲ್ಗುಣಿ ನದಿಗೆ ಮರವೂರು ಬಳಿ ಅಣೆಕಟ್ಟೆ ನಿರ್ಮಿಸ-ಲಾಗಿದ್ದು, ಇಲ್ಲಿಂದ ಕುಡಿಯುವ ನೀರು ಸರಬರಾಜು ಮಾಡಲಾಗುತ್ತದೆ. ಈ ಅಣೆಕಟ್ಟೆಗೆ ತ್ಯಾಜ್ಯ ಘಟಕದ ಕಲುಷಿತ ನೀರು ಸೇರುತ್ತಿದೆ. ಪ್ರಕರಣವು ಹೈಕೋರ್ಟ್ ಮೆಟ್ಟಿಲೇರಿದೆ.

'ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ದಿನಕ್ಕೆ ಸಂಗ್ರಹವಾಗುವ 250-300 ಟನ್‌ಗಳಷ್ಟು ಘನತ್ಯಾ-ಜ್ಯವನ್ನು ಪಚ್ಚನಾಡಿ ಡಂಪಿಂಗ್ ಯಾರ್ಡ್‌ನಲ್ಲಿ ಸುರಿಯಲಾಗುತ್ತಿದೆ. ಈ ಕಸದ ರಾಶಿಯ ಕಲುಷಿತ ನೀರು, ಹತ್ತಿರದಲ್ಲಿಯೇ ಹರಿಯುವ ಫಲ್ಗುಣಿ ನದಿಗೆ ಸೇರಿ, ಮರವೂರು ಕುಡಿಯುವ ನೀರಿನ ಕಿಂಡಿ ಅಣೆಕಟ್ಟೆಯ ನೀರು ಮಲಿನಗೊಳ್ಳುತ್ತಿದೆ. ಇದನ್ನು ಕುಡಿಯುವ 15–20 ಗ್ರಾಮಗಳ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ' ಎಂದು ಮಹಾನಗರ ಪಾಲಿಕೆ ಸದಸ್ಯ ಎ.ಸಿ. ವಿನಯ್‌ರಾಜ್ ದೂರುತ್ತಾರೆ.

'ಪೈಪ್‌ಲೈನ್ ಅಳವಡಿಕೆಗೆ ಯೋಜನೆ'

'ಪಾಲಿಕೆಯ ಶುದ್ಧೀಕರಣ ಘಟಕದಲ್ಲಿ ಸಂಸ್ಕರಣೆ ಮಾಡಿದ ನೀರನ್ನು ನದಿಗೆ ಬಿಡಲಾಗುತ್ತದೆ. ಆದರೆ, ಸಾರ್ವಜನಿಕರ ಆರೋಪದ ಹಿನ್ನೆಲೆಯಲ್ಲಿ ಎನ್‌ಐಟಿಕೆ ಸುರತ್ಕಲ್‌ನಿಂದ ವರದಿ ಪಡೆಯಲಾಗಿದ್ದು, ಪೈಪ್‌ಲೈನ್ ಅಳವಡಿಸಿ ಆಳದಲ್ಲಿ ನೀರು ಬಿಡುವ ಸಂಬಂಧ ಯೋಜನೆ ರೂಪಿಸಲಾಗಿದೆ. ಶೇಖರ-ಣೆಯಾಗಿರುವ ಹಳೆಯ ತ್ಯಾಜ್ಯ ತೆರವುಗೊಳಿಸುವ ಪ್ರಸ್ತಾವವನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಲಾಗಿದೆ. ಅನುಮತಿ ದೊರೆತ ಕೂಡಲೇ ತೆರವುಗೊಳಿಸಿದರೆ, ನದಿಗೆ ಇಲ್ಲಿನ ನೀರು ಸೇರುತ್ತದೆ ಎಂಬ ಆರೋಪಕ್ಕೆ ಶಾಶ್ವತ ಪರಿಹಾರ ದೊರೆತಂತಾಗುತ್ತದೆ' ಎಂದು ಮಹಾನಗರ ಪಾಲಿಕೆ ಆಯುಕ್ತ ಅಕ್ಷಯ್ ಶ್ರೀಧರ್ ತಿಳಿಸಿದರು.

'ದೃಢಪಟ್ಟಲ್ಲಿ ಕ್ರಮ ನಿಶ್ಚಿತ'

ಎಂಆರ್‌ಪಿಎಲ್‌ನಿಂದ ಹೊರಬಿಡುತ್ತಿರುವ ಎಣ್ಣೆ ಮಿಶ್ರಿತ ತ್ಯಾಜ್ಯದಿಂದ ಜಲಮೂಲಗಳು ಕಲುಷಿತಗೊಳ್ಳುತ್ತಿರುವ ದೂರಿಗೆ ಸಂಬಂಧಿಸಿ ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ಎರಡು ಬಾರಿ ವಿಚಾರಣೆ ನಡೆದಿದೆ. ಮುಂದಿನ ವಾರ ಮೂರನೇ ಹಿಯರಿಂಗ್ ನಡೆಯಲಿದೆ.

ಎಂಆರ್‌ಪಿಎಲ್ ಆವರಣದೊಳಗೆ ಪರಿಶೀಲನೆ ನಡೆಸಿ, ವರದಿ ನೀಡುವಂತೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಜಿಲ್ಲಾಡಳಿತ ಈಗಾಗಲೇ ಸೂಚನೆ ನೀಡಿದೆ.

ಈ ಕುರಿತು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಅವರ ಗಮನ ಸೆಳೆದಾಗ, 'ಕಾರಣ ಹುಡುಕಿ ಶಾಶ್ವತ ಪರಿಹಾರ ಕಂಡುಕೊಳ್ಳುವ ತನಕ ಪ್ರಕರಣ ಮುಕ್ತಾಯಗೊಳಿಸುವ ಪ್ರಮೇಯವಿಲ್ಲ. ಯಾವ ಕೈಗಾರಿಕೆಯೂ ಪರಿಸರಕ್ಕೆ ಹಾನಿ ಮಾಡಬಾರದು. ಪರಿಸರ ಹಾನಿ-ಯಾಗುತ್ತಿರುವ ಸಂಗತಿ ದೃಢಪಟ್ಟಲ್ಲಿ ಪರಿಸರ ಕಾಯ್ದೆ ಪ್ರಕಾರ ಕ್ರಮ ಕೈಗೊಳ್ಳಬೇಕಾಗುತ್ತದೆ. ಅಗತ್ಯವಿದ್ದಲ್ಲಿ ಉನ್ನತ ಸಮಿತಿ ರಚಿಸಿ ತನಿಖೆ ನಡೆಸಲಾಗುವುದು' ಎಂದರು.

ಮಳೆಯಲ್ಲಿ ಕರಗುವ 'ಮಾಲಿನ್ಯ'

ಒಂದನೇ ಪುಟದಿಂದ

ಇದಾಗಿ ಒಂದು ವರ್ಷ ಕಳೆದಿದೆ. ಕಳೆದ ವರ್ಷ ಮಳೆಯ ಪ್ರಮಾಣವೂ ಅಧಿಕವಾಗಿದ್ದುದರಿಂದ ನದಿಗಳಲ್ಲಿ ಸಾಕಷ್ಟು ನೀರು ಹರಿದಿದೆ. 'ಫಲ್ಗುಣಿ ನದಿಯ ಜಲಾನಯನ ಪ್ರದೇಶದ ಮಾಲಿನ್ಯ ನಿಯಂತ್ರಣವಾಗಿದೆ, ಕೈಗಾರಿಕೆಗಳ ತ್ಯಾಜ್ಯ ನದಿಗೆ ಸೇರುತ್ತಿಲ್ಲ, ನೀರಿನಲ್ಲಿ ತೈಲದ ಅಂಶ ಇಲ್ಲ' ಎಂದೆಲ್ಲ ಅಧ್ಯಯನಗಳು, ವರದಿಗಳು ಹೇಳಿವೆ. ಆದರೆ ಇದನ್ನು ಒಪ್ಪಲು ಸ್ಥಳೀಯರು ತಯಾರಿಲ್ಲ. ಬದಲಿಗೆ, ಮೂಗಿಗೆ ಅಡರುವ ಕೆಟ್ಟ ವಾಸನೆ, ಬದಲಾಗಿರುವ ನೀರಿನ ಬಣ್ಣವನ್ನು ತೋರಿಸುತ್ತಾ ಅಧ್ಯಯನಗಳ ಸಾಚಾತನವನ್ನೇ ಅವರು ಪ್ರಶ್ನಿಸುತ್ತಾರೆ.

ಮೂಲ ಹುಡುಕುವುದೇ ಕಷ್ಟ: 16,200 ಹೆಕ್ಟೇರ್ ವ್ಯಾಪ್ತಿಯಲ್ಲಿ ಮಂಗಳೂರು ವಿಶೇಷ ಆರ್ಥಿಕ ವಲಯ (ಎಂಎಸ್‌ಇಝಡ್) ತಲೆ ಎತ್ತಿದ ಬಳಿಕ 'ಮಾಲಿನ್ಯ'ದ ಘಾಟು ಹೆಚ್ಚಾಗಿದೆ. ಸುಮಾರು 22 ಕಿ.ಮೀ. ವ್ಯಾಪ್ತಿಯಲ್ಲಿ ಹಬ್ಬಿರುವ ಪ್ರದೇಶದಲ್ಲಿ ಪೆಟ್ರೊಕೆಮಿಕಲ್ಸ್, ಫಿಶ್ ಮೀಲ್, ರಾಸಾಯನಿಕ ಗೊಬ್ಬರ ತಯಾರಿಕೆ, ತೈಲ ಸಂಸ್ಕರಣೆ, ಅನಿಲ, ಕೀಟನಾಶಕ ತಯಾರಿಕೆ ಸೇರಿದಂತೆ ನೂರಾರು ಬೃಹತ್ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳು ತಲೆಯೆತ್ತಿವೆ.

'ಎಂಆರ್‌ಪಿಎಲ್, ಅದಾನಿ ವಿಲ್ಮಾರ್, ರುಚಿ ಗೋಲ್ಡ್–ಹೀಗೆ ಹಲವು ಕೈಗಾರಿಕೆಗಳು ಈ ಪ್ರದೇಶದಲ್ಲಿವೆ. ನದಿ ದಂಡೆಗೆ ಒತ್ತಿಕೊಂಡಿರುವ ಬೈಕಂಪಾಡಿ ಕೈಗಾರಿಕಾ ವಲಯದಲ್ಲಿ ನೂರಾರು ಸಣ್ಣ ಕೈಗಾರಿಕೆಗಳಿವೆ. ಈ ಪ್ರದೇಶದಿಂದ ಬೃಹತ್ ಪ್ರಮಾಣದಲ್ಲಿ ಹರಿದು ಬರುವ ತ್ಯಾಜ್ಯದ ಮೂಲ ಹುಡುಕುವುದೇ ಈಗ ಸಮಸ್ಯೆಯಾಗಿಬಿಟ್ಟಿದೆ' ಎನ್ನುತ್ತಾರೆ ನಾಗರಿಕ ಹೋರಾಟ ಸಮಿತಿಯ ಮುಖಂಡ ಮುನೀರ್ ಕಾಟಿಪಳ್ಳ.

'ಭಾರಿ ಮಳೆ ಸುರಿಯುವ ಸಮಯವನ್ನು ಬಳಸಿಕೊಂಡು ಕಂಪನಿಗಳು ಜೋಕಟ್ಟೆ ಮತ್ತು ಸುತ್ತಲಿನ ಪ್ರದೇಶದ ಜಲ ಮೂಲಗಳಿಗೆ ಅಪಾಯಕಾರಿ ರಾಸಾಯನಿಕಯುಕ್ತ ತ್ಯಾಜ್ಯವನ್ನು ಹರಿಸುತ್ತವೆ. ಅವು, ತೋಡು, ಬಾವಿಗಳು ಸೇರಿದಂತೆ ಕುಡಿಯುವ ನೀರಿನ ಮೂಲಗಳನ್ನು ಸೇರುತ್ತಿವೆ. ಫಲ್ಗುಣಿ ನದಿಗೂ ಈ ಅಪಾಯಕಾರಿ ತ್ಯಾಜ್ಯ ಸೇರುತ್ತಿದೆ' ಎಂದು ಅವರು ಆರೋಪಿಸುತ್ತಾರೆ.

ಹದಗೆಡುತ್ತಿದೆ ಆರೋಗ್ಯ: 'ಸುಮಾರು 25 ವರ್ಷಗಳ ಹಿಂದೆ ಇದೆಲ್ಲ ಭರಪೂರ ಅಂತರ್ಜಲ ಮತ್ತು ಫಲವತ್ತಾದ ಮಣ್ಣು ಹೊಂದಿದ ಭೂಮಿಯಾಗಿತ್ತು. ಈಗ ನೀರು, ಗಾಳಿ ಎಲ್ಲವೂ ಕಲುಷಿತವಾಗಿದೆ. ಆರೋಗ್ಯ ಸಮಸ್ಯೆ ಆಗಾಗ ಕಾಡುತ್ತಿದೆ. ಪ್ರತೀ ಬಾರಿ ಅಧಿಕಾರಿಗಳು, ಜನಪ್ರತಿನಿಧಿಗಳು ಭರವಸೆ ನೀಡುತ್ತಾರೆ. ಆದರೆ, ಇಂಥ ಪರಿಸರದಲ್ಲಿ ಬದುಕು ದಿನೇ ದಿನೇ ಹದಗೆಡುತ್ತಿದೆ' ಎನ್ನುತ್ತಾರೆ ಜೋಕಟ್ಟೆಯ ನಿವಾಸಿ ಸಿಲ್ವಿಯಾ.

ಹೆಚ್ಚುತ್ತಿದೆ ಮಾಲಿನ್ಯ: 'ಅಧ್ಯಯನ ವರದಿಗಳು ಏನೇ ಇರಲಿ, ನೀರಿನಲ್ಲಿ ಕೋಕ್, ಸಲ್ಫರ್ ಪ್ರಮಾಣದ ಜತೆಗೆ ಪರಿಸರದಲ್ಲಿ ಕೆಟ್ಟ ವಾಸನೆ ಹೆಚ್ಚಾಗುತ್ತಿದೆಯೇ ಹೊರತು, ಯಾವುದೂ ಕಡಿಮೆಯಾಗಿಲ್ಲ. ಹೋರಾಟ ನಡೆಸುವುದೇ ನಮ್ಮ ಬದುಕಾಗಿದೆ. ನೀರಿಗೆ ಹಲವು ಬಾರಿ ತ್ಯಾಜ್ಯವನ್ನು ಬಿಟ್ಟಿದ್ದಾರೆ. ಸುತ್ತ ಬಫರ್ ವಲಯವನ್ನೂ ರಚಿಸಿಲ್ಲ' ಎನ್ನುತ್ತಾರೆ ಹೋರಾಟ ಸಮಿತಿಯ ಅಬೂಬಕರ್ ಬಾವಾ.

'ಮಾಲಿನ್ಯದ ಮೇಲೆ ಕಾಲಕಾಲಕ್ಕೆ ನಿಗಾ ಇರಿಸಿ ಎಚ್ಚರಿಸಬೇ-ಕಾದ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಜಿಲ್ಲಾಡಳಿತ, ಮಹಾನಗರ ಪಾಲಿಕೆ ಹಾಗೂ ಈ ಕುರಿತು ಅಧ್ಯಯನ ನಡೆಸಬೇಕಾದ ಸ್ಥಳೀಯ ಎನ್‌ಐಟಿಕೆ, ಮೀನುಗಾರಿಕಾ ಮಹಾವಿದ್ಯಾಲಯ ಮತ್ತಿತರ ಸಂಸ್ಥೆಗಳ ನಿರ್ಲಕ್ಷ್ಯವೂ ಮಾಲಿನ್ಯ ಹೆಚ್ಚಳಕ್ಕೆ ಕಾರಣ' ಎನ್ನುತ್ತಾರೆ ಪರಿಸರ ಹೋರಾಟಗಾರ್ತಿ ವಿದ್ಯಾ ದಿನಕರ್.

ಅಧ್ಯಯನ– ಎಚ್ಚರಿಕೆ

ಗುರುಪುರ ಭಾಗದಲ್ಲಿ ಫಲ್ಗುಣಿ ನದಿ ಅರಬ್ಬಿ ಸಮುದ್ರವನ್ನು ಸೇರುತ್ತದೆ. ಇದು ಸಮುದ್ರ ಹಿನ್ನೀರಿನ ಪ್ರದೇಶವೂ ಹೌದು. ಇದರ ಜಲಾನಯನ ಪ್ರದೇಶದಲ್ಲೇ ಕೈಗಾರಿಕೆಗಳು ವ್ಯಾಪಿಸಿಕೊಂಡಿವೆ.

'ಇದು ಶುದ್ಧ ನದಿ ನೀರಿನ ಪ್ರದೇಶವಲ್ಲ. ಅದು ಸಮುದ್ರದ ಹಿನ್ನೀರು. ಹೀಗಾಗಿ, ನದಿಯ ನೀರಿನ ಶುದ್ಧತೆಯ ಗುಣಮಟ್ಟದ ಜೊತೆ ಇಲ್ಲಿಯ ನೀರನ್ನು ಹೋಲಿಸಲು ಸಾಧ್ಯವಿಲ್ಲ. ಇಲ್ಲಿ ಸಮುದ್ರದ ಏರಿಳಿತಕ್ಕೆ ಅನುಗುಣವಾಗಿ ನೀರಿನ ಗುಣಮಟ್ಟದಲ್ಲಿ ವ್ಯತ್ಯಯ-ವಾಗುತ್ತದೆ' ಎನ್ನುತ್ತಾರೆ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ ಕೆ. ಕೀರ್ತಿಕುಮಾರ್.

ಈ ಭಾಗದ ನದಿ ನೀರಿನ ಗುಣಮಟ್ಟದ ಬಗ್ಗೆ ಹಿಂದೆ ಅಧ್ಯಯನ ನಡೆಸಿದ್ದ ಮಂಗಳೂರಿನ ಫ್ರಾನ್ಸಿಸ್ ಅಂದ್ರಾದೆ ಅವರು, 'ಭಾರಿ ಮಳೆ ಬೀಳುವ (ವಾರ್ಷಿಕ ವಾಡಿಕೆ 375–400 ಸೆಂ.ಮೀ.) ಕರಾವಳಿಯಲ್ಲಿ ಬೇಸಿಗೆ (ಮುಂಗಾರು ಪೂರ್ವ) ಮತ್ತು ಮಳೆಗಾಲದ-ದಲ್ಲಿ (ಮುಂಗಾರು) ನೀರಿನ ಗುಣಮಟ್ಟದಲ್ಲಿ ವ್ಯತ್ಯಾಸ ಇರುತ್ತದೆ. ಬೇಸಿಗೆಯಲ್ಲಿ ರಾಸಾಯನಿಕ ಅಥವಾ ಮಾಲಿನ್ಯ ಪ್ರಮಾಣ ಹೆಚ್ಚಿದ್ದರೂ, ಮಳೆ ನೀರಿನೊಂದಿಗೆ ಅದು ಸೇರಿಕೊಳ್ಳುತ್ತದೆ' ಎಂದು ದಾಖಲಿಸಿದ್ದಾರೆ.

ಈ ಪ್ರದೇಶದ ಜಲಗುಣಮಟ್ಟ ಬಗ್ಗೆ ಈ ಹಿಂದೆ ಅಧ್ಯಯನ ನಡೆಸಿದ್ದ ಪರಿಸರ ತಜ್ಞರಾದ ಫ್ರಾನ್ಸಿಸ್ ಅಂದ್ರಾದೆ, ಎಚ್.ಬಿ. ಅರವಿಂದ ಹಾಗೂ ಇ.ಟಿ. ಪುಟ್ಟಯ್ಯ ಅವರ ತಂಡವು, 'ವೇಗದ ಕೈಗಾರಿಕೀಕರಣ ಹಾಗೂ ಎಸ್‌ಇಝಡ್‌ನಿಂದಾಗಿ ಇಲ್ಲಿನ ನೀರಿನಲ್ಲಿರುವ ಭೌತ–ರಾಸಾಯನಿಕ ಗುಣಲಕ್ಷಣಗಳು ವ್ಯತ್ಯಯಗೊ-ಳ್ಳುತ್ತಿದ್ದು, ಕರಾವಳಿಯ ಜಲಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ತುರ್ತು ಹೆಜ್ಜೆಗಳನ್ನು ಇಡಬೇಕಾಗಿದೆ' ಎಂದು ಎಚ್ಚರಿಸಿದ್ದಾರೆ.

'ಮಾಲಿನ್ಯವು ಜಲಮೂಲಗಳನ್ನು ಸೇರುತ್ತಿದೆ. ವಿಶೇಷವಾಗಿ ಕೈಗಾರಿಕೆಗಳ ತೈಲ, ರಾಸಾಯನಿಕ, ಕೀಟನಾಶಕ, ಬೂದಿಯ ಅಂಶಗಳು ಸೇರುತ್ತಿವೆ. ಅದರೊಂದಿಗೆ ಮಹಾನಗರ ಪಾಲಿಕೆ ವ್ಯಾಪ್ತಿಯ ಒಳಚರಂಡಿ ತ್ಯಾಜ್ಯ, ಇತರ ತ್ಯಾಜ್ಯಗಳೂ ಸೇರುತ್ತಿವೆ. ಜೈವಿಕ ವಿಘಟನೀಯವಲ್ಲದ ವಸ್ತುಗಳೂ ಇವೆ ಎಂಬುದು ಅಧ್ಯಯನದಿಂದ ಕಂಡುಬಂದಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ವಿಶ್ವ ಆರೋಗ್ಯ ಸಂಸ್ಥೆ ರೂಪಿಸಿದ ಮಾನದಂಡಕ್ಕಿಂತ ಅಪಾಯಕಾರಿ ಮಟ್ಟದತ್ತ 'ಮಾಲಿನ್ಯ' ಹೆಜ್ಜೆ ಇಡುವುದು ಗಮನಿಸಬಹುದಾಗಿದೆ' ಎಂದು ಉಲ್ಲೇಖಿಸಿದ್ದಾರೆ.

ಹೋರಾಟದ ಹಾದಿ

- 2016ರ ಬೇಸಿಗೆಯಲ್ಲಿ ಫಲ್ಗುಣಿಗೆ ಸೇರುವ ತೋಕೂರು ಹಳ್ಳದಲ್ಲಿ ನೀರು ಮಲಿನಗೊಂಡಿತ್ತು. ಮರವೂರು ಅಣೆಕಟ್ಟೆಯ ತಳ ಭಾಗದಿಂದ ತೋಕೂರು ಪರಿಸರದವರೆಗೆ ನೀರು ಮಲಿನವಾಗಿರುವ ದೂರುಗಳು ಬಂದಿದ್ದವು. ಜಲಚರಗಳು ಸತ್ತು ದುರ್ನಾತ ಬೀರಿತ್ತು. ಸ್ಥಳೀಯರು 'ಫಲ್ಗುಣಿ ಉಳಿಸಿ' ಅಭಿಯಾನ ನಡೆಸಿದ್ದರು.
- 2017ರ ಬೇಸಿಗೆಯ ಕೊನೆಯ ದಿನಗಳಲ್ಲಿ ಫಲ್ಗುಣಿ ಮಲಿನವಾಗಿತ್ತು.
- 2018 ಆಗಸ್ಟ್‌ನಲ್ಲಿ ತೈಲ ಸಾಗಣೆ ಮಾಡುವ ಪೈಪ್‌ಲೈನ್‌ನಲ್ಲಿ ಸೋರಿಕೆಯಾದ ಆರೋಪಗಳು ಬಂದವು. ಹೋರಾಟಗಾರರು ಎಂಆರ್‌ಪಿಎಲ್‌ನತ್ತ ಬೆರಳು ತೋರಿಸಿದರು. 2020ರವರೆಗೂ ಸ್ಥಳೀಯರು ಆಗಾಗ ಹೋರಾಟ ಮಾಡುತ್ತಲೇ ಇದ್ದರು.
- ಟ್ಯಾಂಕ್ ಸ್ವಚ್ಛತೆ, ಆಕಸ್ಮಿಕವಾಗಿ ಹರಿದ ತ್ಯಾಜ್ಯ, ಹವಾಮಾನ ವ್ಯತ್ಯಯ ಕಾರಣ ತೈಲ ಹೊರಸೂಸುವಿಕೆ... ಎಂಬಿತ್ಯಾದಿ ಸಬೂಬುಗಳನ್ನು ಅಧಿಕಾರಿಗಳು ನೀಡುತ್ತಿದ್ದರು.
- 2021ರಲ್ಲಿ ನದಿಯ ಮಾಲಿನ್ಯ ಹಾಗೂ ಈ ಭಾಗದ ಜನರ ಸಮಸ್ಯೆಗಳನ್ನು ಕುರಿತ ವರದಿಗಳು ಮಾಧ್ಯಮಗಳಲ್ಲಿ ಪ್ರಕಟವಾದವು.
- ಮಾಧ್ಯಮ ವರದಿಗಳನ್ನು ಆಧರಿಸಿ, ಮತ್ತು ಜೋಕಟ್ಟೆಯಲ್ಲಿರುವ ಕೈಗಾರಿಕಾ ಸಂಸ್ಥೆಯಿಂದ ಸ್ಥಳೀಯ ಹೊಳೆ ಮತ್ತು ಫಲ್ಗುಣಿ ನದಿಗೆ ರಾಸಾಯನಿಕ ಮಿಶ್ರಿತ ತ್ಯಾಜ್ಯ ಸೇರುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಲೋಕಾಯುಕ್ತವು, 2021ರ ಅಕ್ಟೋಬರ್‌ನಲ್ಲಿ ಸ್ವಯಂಪ್ರೇರಿತ ದೂರು ದಾಖಲಿಸಿತು.
- ಜಲಮೂಲ ಕಲುಷಿತಗೊಳ್ಳುತ್ತಿರುವ ಬಗ್ಗೆ ವಸ್ತುಸ್ಥಿತಿಯ ವರದಿ ಮತ್ತು ಅದರ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮದ ಬಗ್ಗೆ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿ, ಮಹಾನಗರ ಪಾಲಿಕೆ ಆಯುಕ್ತರು, ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯ ಕಾರ್ಯದರ್ಶಿ, ಮಂಗಳೂರು ತಹಶೀಲ್ದಾರ್, ಕೆಎಸ್‌ಪಿಸಿಬಿಯ ಹಿರಿಯ ಪರಿಸರ ಅಧಿಕಾರಿ, ಎಂಆರ್‌ಪಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ನೋಟಿಸ್ ಜಾರಿಗೊಳಿಸಿತು.
- ಮಾಲಿನ್ಯ ಕುರಿತ ಸುಪ್ರೀಂ ಕೋರ್ಟ್ ತೀರ್ಪನ್ನು ಉಲ್ಲೇಖಿಸಿದ ಲೋಕಾಯುಕ್ತ ನ್ಯಾ. ವಿಶ್ವನಾಥ ಶೆಟ್ಟಿ ಅವರು, 'ಅಪಾಯಕಾರಿ ತ್ಯಾಜ್ಯವು ಜಲಮೂಲಗಳಿಗೆ ಸೇರದಂತೆ ನೋಡಿಕೊಳ್ಳುವುದು ಅಧಿಕಾರಿಗಳ ಜವಾಬ್ದಾರಿಯಾಗಿದೆ. ಹೀಗಾಗಿ, ಸುಮೋಟೊ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ನೋಟಿಸ್‌ನಲ್ಲಿ ತಿಳಿಸಿದರು.
- ನೋಟಿಸ್‌ಗೆ ಸ್ಪಂದಿಸಿದ ಕರ್ನಾಟಕ ರಾಜ್ಯ ಪರಿಸರ ನಿಯಂತ್ರಣ ಮಂಡಳಿಯ ಅಧಿಕಾರಿಗಳು, 'ಘಟನಾ ಸ್ಥಳಕ್ಕೆ ಕೆಲವು ಬಾರಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಡಿ.30ರಂದು ವರದಿ ನೀಡಿರುವ ಮಂಡಳಿಯು 'ಆ ಪ್ರದೇಶದಲ್ಲಿ ತೈಲ ಬಲೆ (oil trap) ಹಾಕಲಾಗಿದೆ, ನೀರಿನ ಹೊಂಡವನ್ನು ಸ್ವಚ್ಛಗೊಳಿಸಲಾಗಿದೆ. ನೀರಿನಲ್ಲಿ ತೈಲದ ಹಾಗೂ ಹಾನಿಕಾರಕ ಅಂಶ ಪತ್ತೆಯಾಗಿಲ್ಲ' ಎಂದು ಪ್ರಯೋಗಾಲಯದ ವರದಿ ಲಗತ್ತಿಸಿದೆ.

'ಕಿವಿ ಇಲ್ಲದವರ ಮುಂದೆ ಬೊಬ್ಬೆ ಹಾಕುತ್ತಿದ್ದೇವೆ...'

• ಪ್ರದೀಶ್ ಎಚ್. ಮರೋಡಿ

ಮಂಗಳೂರು: 'ಬಾಳಿನ ಮುಸ್ಸಂಜೆ ಯನ್ನು ನೆಮ್ಮದಿಯಿಂದ ಕಳೆಯಲು ಹಳ್ಳಿಗೆ ಬಂದೆ. ಹಸಿರು ಪರಿಸರವಾದ್ದರಿಂದ ಆರೋಗ್ಯಕ್ಕೂ ಅನುಕೂ-ಲವಾಗಬಹುದು ಎಂಬ ಲೆಕ್ಕಾಚಾರ ಹಾಕಿದ್ದೆ. ಬೃಹತ್ ಕೈಗಾರಿಕೆಗಳು ನಮ್ಮ ಹಳ್ಳಿಗೆ ಕಾಲಿಟ್ಟ ಬಳಿಕ ನೆಮ್ಮದಿಯೂ ಇಲ್ಲ, ಆರೋಗ್ಯವೂ ಹದಗೆಟ್ಟಿದೆ...'

ಇದು ಮಂಗಳೂರು ನಗರ ಹೊರವಲಯದ ಕುತ್ತೆತ್ತೂರಿನಲ್ಲಿ ಕೃಷಿಕರಾಗಿರುವ 74 ವರ್ಷದ ಗೋವಿಂದದಾಸ್ ಅವರ ಅಸಹಾಯಕ ನುಡಿ. ಸುತ್ತಮುತ್ತಲಿನ ಬಹುತೇಕ ಕೃಷಿಕರ ಅಳಲು ಇದೇ ಆಗಿದೆ.

'ನನಗೆ 25 ಎಕರೆ ಜಮೀನು ಇದೆ. 10 ಎಕರೆಯಲ್ಲಿ ಭತ್ತ ಬೇಸಾಯ ಮಾಡುತ್ತೇನೆ. ಈಗ ಕೃಷಿ ಚಟುವಟಿಕೆಗೆ ಕಾರ್ಮಿಕರು ಬರಲು ಹಿಂದೇಟು ಹಾಕುತ್ತಾರೆ. ಗದ್ದೆಗೆ ಇಳಿದರೆ ಕಾಲು ತುರಿಕೆ ಬರುತ್ತದೆ ಎಂಬುದು ಕಾರ್ಮಿಕರ ದೂರು. ಜಾನುವಾರುಗಳ ಕಾಲುಗಳಲ್ಲಿಯೂ ತುರಿಕೆ ಕಾಣಿಸಿಕೊಳ್ಳುತ್ತ-ದೆ. ಹೀಗಾಗಿ, ನಾನು ಗದ್ದೆಗೆ ಇಳಿಯುವುದಿಲ್ಲ. ಹೋದರೂ ತಕ್ಷಣ ಡೆಟಾಲ್ ಹಾಕಿ ಬಿಸಿನೀರಿನಿಂದ ತೊಳೆಯುತ್ತೇನೆ' ಎನ್ನುತ್ತಾರೆ ಗೋವಿಂದದಾಸ್.

'ಪೆರ್ಮುದೆಯಲ್ಲಿ ಹಳ್ಳವೊಂದಿದೆ. ಅದು ಕುತ್ತೆತ್ತೂರು ದಾಟಿ ಪಾವಂಜೆಯ ಬಳಿ ನದಿಯನ್ನು ಸೇರುತ್ತದೆ. ಈ ಹಳ್ಳಕ್ಕೆ ಹಲವು ಕಾರ್ಖಾನೆಗಳ ತ್ಯಾಜ್ಯ ನೀರು ಸೇರುತ್ತದೆ. ಅದಕ್ಕೆ ಸಾಕ್ಷಿಯೆಂಬಂತೆ ನೀರಿನ ಮೇಲಿನ ಪದರದಲ್ಲಿ ಜಿಡ್ಡಿನ ಪದಾರ್ಥ ಕಾಣಿಸುತ್ತದೆ. ಹಿಂದೆಲ್ಲಾ ಫೆಬ್ರುವರಿ ವೇಳೆಗೆ ಈ ಹಳ್ಳದಲ್ಲಿ ನೀರು ಬತ್ತುತ್ತಿತ್ತು. ಆದರೆ, ಈಚಿನ ಹಲವು ವರ್ಷಗಳಿಂದ ಹಳ್ಳ ಬತ್ತಿಲ್ಲ. ಇದೇ ನೀರನ್ನು ನಂಬಿಕೊಂಡು ಬಹುತೇಕ ರೈತರು ಕೃಷಿ ಮಾಡುತ್ತಾರೆ. ಆದರೆ, ತುರಿಕೆಯ ಬಾಧೆ ತಪ್ಪಿದಲ್ಲ' ಎನ್ನುತ್ತಾರೆ ಅವರು.

'ಕೆಲವೊಮ್ಮೆ ಮಧ್ಯರಾತ್ರಿ ವೇಳೆ ದುರ್ವಾಸನೆ ಇಡೀ ಪರಿಸರವನ್ನು ವ್ಯಾಪಿಸುತ್ತದೆ. ಘಾಟಿನಿಂದ ಉಸಿರಾಟಕ್ಕೆ ತೊಂದರೆಯಾಗಿದ್ದೂ ಇದೆ. ಕಾರ್ಖಾನೆಯವರು ಕದ್ದುಮುಚ್ಚಿ ತ್ಯಾಜ್ಯವನ್ನು ಹೊರಗೆ ಬಿಡುವುದು ಅದಕ್ಕೆ ಕಾರಣ ಎಂದು ತಡವಾಗಿ ತಿಳಿಯಿತು. ಸರ್ಕಾರದಿಂದ ನಾವು ಏನನ್ನೂ ಕೇಳುವುದಿಲ್ಲ, ನಮ್ಮ ಪಾಡಿಗೆ ಬದುಕಲು ಬಿಡಿ ಅಷ್ಟೇ ಸಾಕು' ಎಂಬುದು ಅವರ ಮನವಿ.

'ಕ್ಯಾನ್ಸರ್ ರೋಗಿಗಳ ಹೆಚ್ಚಳ': 'ಹಿಂದೆಲ್ಲ ನಮ್ಮ ಪರಿಸರದಲ್ಲಿ ಹೇರಳವಾಗಿದ್ದ ಜೇನುನೊಣಗ ಸಂತತಿ ಈಗ ಮಾಯವಾಗಿದೆ. ನಮ್ಮ ಪರಿಸರ ಎಷ್ಟು ಕಲುಷಿತಗೊಂಡಿದೆ ಎಂಬುದಕ್ಕೆ ಇದೇ ಉದಾಹರಣೆ. ಕಾರ್ಖಾನೆಗಳು ಹೊರಸೂಸುವ ಕಪ್ಪುಬಣ್ಣದ ದೂಳಿನ ಕಣಗಳು ವಾತಾವರಣ ಸೇರಿ ಹಲವರ ಆರೋಗ್ಯ ಮೇಲೆ ಪರಿಣಾಮ ಬೀರಿವೆ. ಒಂದು ದಶಕದಲ್ಲಿ ಕೈಗಾರಿಕಾ ವಲಯದ ಸುತ್ತಮುತ್ತಲಿನ ಪರಿಸರದಲ್ಲಿ ಶ್ವಾಸಕೋಶದ ಕ್ಯಾನ್ಸರ್ ರೋಗಿಗಳ ಸಂಖ್ಯೆ ಹೆಚ್ಚಳಗೊಂಡಿದೆ' ಎನ್ನುತ್ತಾರೆ ಕೃಷಿ ಭೂಮಿ ಸಂರಕ್ಷಣಾ ಸಮಿತಿ ಕಾರ್ಯದರ್ಶಿ ಲಾರೆನ್ಸ್ ಡಿಕುನ್ಹಾ.

'ಕೈಗಾರಿಕೀಕರಣದ ಹೆಸರಲ್ಲಿ ಹಳ್ಳಿಗಳನ್ನು ಕೊಳಚೆ ಮಾಡಲಾಗಿದೆ. ಹಿಂದೆ ನಗರದಲ್ಲಿದ್ದ ಸಂಬಂಧಿಕರು ವರ್ಷಕ್ಕೊಮ್ಮೆ ತೋಟಕ್ಕೆ ಬಂದು ಶುದ್ಧ ಪರಿಸರವನ್ನು ಆಸ್ವಾದಿಸುತ್ತಿದ್ದರು. ಈಗ ಅವರು ಬರುವುದು ಬಿಡಿ, ನಾವೇ ಅವರಲ್ಲಿ ಹೋಗಿ ಶುದ್ಧ ಗಾಳಿಯನ್ನು ತೆಗೆದುಕೊಳ್ಳಬೇ-ಕಾದ ಸ್ಥಿತಿ ಎದುರಾಗಿದೆ. ಹೋರಾಟ ಸಾಕಾಗಿದೆ. ಕಿವಿಯೇ ಇಲ್ಲದವರ ಮುಂದೆ ಬೊಬ್ಬೆ ಹಾಕಿ ಏನು ಪ್ರಯೋಜನ' ಎಂದು ಬೇಸರದಿಂದ ಹೇಳುತ್ತಾರೆ ಕೃಷಿ ಭೂಮಿ ಸಂರಕ್ಷಣಾ ಸಮಿತಿ ಉಪಾಧ್ಯಕ್ಷ, ಪೆರ್ಮುದೆಯ ವಿಲಿಯಂ ಡಿಸೋಜ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 16-1-1997

- **ಭವಿಷ್ಯದ ನಗರ ಸಾರಿಗೆ ರೈಲಿಗೆ ಅಂಕಿತ**

ಬೆಂಗಳೂರು, ಜ.15– ನಗರದಲ್ಲಿ ಎತ್ತರದಲ್ಲಿ ಹಾಕುವ ಹಳಿಗಳ ಮೇಲೆ ಸಂಚರಿಸುವ ರೈಲು ಭವಿಷ್ಯದ ವ್ಯವಸ್ಥೆಗೆ ಇಂದು ಅಂಕುರಾರ್ಪಣವಾಯಿತು.

2002 ರ ಹೊತ್ತಿಗೆ ಮೊದಲ ಹಂತ ಮುಗಿದು ಹಗುರ ರೈಲು ಸಂಚಾರ ಆರಂ-ಭವಾಗಲಿರುವ ಈ ಯೋಜನೆಗೆ ಪ್ರಸ್ತುತ 4200 ಕೋಟಿ ರೂಪಾಯಿ ವೆಚ್ಚ ಆಗುವ ಅಂದಾಜು ಮಾಡಲಾಗಿದೆ.

- **ರಾಮನಗರ, ಮೈಸೂರು ಕ್ಷೇತ್ರಕ್ಕೆ ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆ**

ನವದೆಹಲಿ, ಜ 15–ರಾಮನಗರ ವಿಧಾನಸಭೆ ಮತ್ತು ಮೈಸೂರು ಪದವೀಧರರ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ನಡೆಯಲಿರುವ ಉಪ ಚುನಾವಣೆಗಳಿಗೆ ಸಿ. ಎಂ ಲಿಂಗಪ್ಪ ಮತ್ತು ಎಚ್.ಎ. ವೆಂಕಟೇಶ್ ಅವರನ್ನು ಕಾಂಗ್ರೆಸ್ ಅಭ್ಯರ್ಥಿಗಳನ್ನಾಗಿ ಆರಿಸಲಾಗಿದೆ.

ಪಂಜಾಬ್ ವಿಧಾನಸಭೆ ಚುನಾವಣೆ ಮತ್ತು ಬೇರೆ ರಾಜ್ಯಗಳ ಚುನಾವಣೆಗೆ ಸಂಬಂಧಿಸಿದಂತೆ ಇಂದು ನಡೆದ ಕಾಂಗ್ರೆಸ್ ಕಾರ್ಯಕಾರಿಣಿ ಸಭೆಯಲ್ಲಿ ಭಾಗವಹಿಸಲು ಆಗಮಿಸಿದ್ದ ಕೆಪಿಸಿಸಿ ಅಧ್ಯಕ್ಷ ಧರ್ಮಸಿಂಗ್ ಅವರು ಈ ಇಬ್ಬರು ಅಭ್ಯರ್ಥಿಗಳ ಆಯ್ಕೆಗೆ ಪಕ್ಷದ ವರಿಷ್ಠ ಮಂಡಲಿಯ ಒಪ್ಪಿಗೆ ಪಡೆದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಜನವರಿ 16, 2022

16 ಜನವರಿ 2022 ಭಾನುವಾರ
ಶ್ರೀಪ್ಲವನಾಮ ಸಂವತ್ಸರ ಉತ್ತರಾಯಣ –ಹೇಮಂತ ಋತು ಮಕರ ಮಾಸದ 02 ನೇ ದಿನ
ತಿಥಿ: (ಪೌಷ ಶುಕ್ಲ) ಚತುರ್ದಶಿ ಗಂ. 27-19 **ನಕ್ಷತ್ರ:** ಆರ್ದ್ರಾ ಗಂ. 26-09 **ಯೋಗ:** ಐಂದ್ರ ಗಂ. 15-20, **ಕರಣ:** ಗರಜೆ ಗಂ. 14-11, ವಣಿಜ ಗಂ. 27-19. **ರಾಹುಕಾಲ :** ಸಾಯಂಕಾಲ 04:30 – 06:00 **ಸೂರ್ಯೋದಯ :** 07-01 **ಸೂರ್ಯಾಸ್ತ :** 06-19 **ಮುಸ್ಲಿಂ ದಿನಾಂಕ :** 21 ಜುಮಾದುಸ್ಸಾನಿ **ಅದೃಷ್ಟ ಸಂಖ್ಯೆ:** 9, 12

ಮೇಷ : ಮನಸ್ಸು ಸಿರಿತನದ ಜೀವನವನ್ನು ಇಷ್ಟ ಪಡಲಿದೆ. ಆದರೆ ಬುದ್ಧಿ ಸ್ಥಿಮಿತ-ದಲ್ಲಿರಲಿ. ಹಾಸಿಗೆ ಇದ್ದಷ್ಟೇ ಕಾಲು ಚಾಚಿ. ನಿನ್ನೆಯ ಕೆಲವು ಕಠಿಣ ಸನ್ನಿವೇಶಗಳು ಸಹಜ ಸ್ಥಿತಿಗೆ ಮರಳಲಿದ್ದು ಮನಸ್ಸು ನಿರಾಳವಾಗಲಿದೆ.

ವೃಷಭ: ಸಮಾಜದಲ್ಲಿ ಬೆರೆಯುವುದರಿಂದ ಅಥವಾ ಅಕ್ಕ-ಪಕ್ಕದವರಲ್ಲಿ ಮಾತ-ನಾಡುವುದರಿಂದ ಉದ್ಯೋಗಕ್ಕೆ ಸಂಬಂಧಿಸಿದಂತೆ ಅನುಕೂಲವಾಗುವುದು. ಸಂಘ ಸಂಸ್ಥೆಯ ಜವಾಬ್ದಾರಿಯಿಂದ ಸದ್ಯಕ್ಕೆ ವಿಮುಖರಾಗಬೇಡಿ.

ಮಿಥುನ : ಈ ದಿನದ ಪ್ರಮುಖ ಕೆಲಸವು ಸಂಗಡಿಗರ ಸಹಾಯದಿಂದ ಅನಾಯಾಸವಾಗಿ ಪೂರ್ಣಗೊಳ್ಳುವುದು. ಮನೆಯ ಜವಾಬ್ದಾರಿಗಳನ್ನು ಮಗನಿಗೆ ಕೊಡುವ ಬಗ್ಗೆ ಯೋಚಿಸಿ.

ಕರ್ಕಾಟಕ : ತಂದೆ-ತಾಯಿಯ ಅಥವಾ ಮನೆಯವರ ಮಾತಿನತ್ತ ವಿಶೇಷ ಗಮನ ಹರಿಸಬೇಕಾಗುವುದು. ವಾಣಿಜ್ಯ ಸಂಕೀರ್ಣ ನಿರ್ಮಿಸಲು ಪರವಾನಗಿ ಕೇಳಿದವರಿಗೆ ಶುಭ ಸಂಕೇತ ಸಿಗುವುದು.

ಸಿಂಹ: ಮನುಷ್ಯ ಪ್ರಯತ್ನದ ಜೊತೆಯಲ್ಲಿ ದೇವ ಬಲ ದೊರಕಿಸಿಕೊಂಡರೆ ಕನಸು ನನಸಾಗುವುದು. ಅತಿಯಾದ ಖರ್ಚು ಮಾಡುವ ಮನಸ್ಥಿತಿಯನ್ನು ಹೊಂದಿದ ನಿಮಗೆ ಹಣದ ಮೌಲ್ಯದ ಅರಿವಾಗುವುದು.

ಕನ್ಯಾ : ನಿಮ್ಮ ವೃತ್ತಿ ಮತ್ತು ಪ್ರವೃತ್ತಿಗಳಲ್ಲಿ ಸಮತೋಲನ ಕಾಯ್ದುಕೊಳ್ಳಿ. ಗೃಹದಲ್ಲಿ ಶುಭ, ಮಂಗಳ ಕಾರ್ಯಗಳ ಚಟುವಟಿಕೆಗಳು ತೋರಿ ಬರುವವು. ಖರ್ಚುಗಳು ಅಧಿಕವೆನಿಸಿದರೂ ಆರ್ಥಿಕವಾಗಿ ನಿಮ್ಮ ಆದಾಯ ಉತ್ತಮವಾಗಿರುವುದು.

ತುಲಾ: ವೃತ್ತಿಯಲ್ಲಿ ಹಿತಶತ್ರುಗಳ ಪೀಡೆಯು ಹೆಚ್ಚಾಗಿ ನಿಮ್ಮ ಗುರಿಯ ಮಾರ್ಗಕ್ಕೆ ಅಡ್ಡಗಲಾಗುವರು. ಅವಿವಾಹಿತರಿಗೆ ಕಂಕಣ ಬಲ ಸಂತಸ ತರಲಿದೆ. ಸರಕು ಸಾಗಾಣಿಕೆದಾರರಿಗೆ ಉತ್ತಮವಾದ ಪ್ರತಿಫಲ ದೊರೆಯಲಿದೆ.

ವೃಶ್ಚಿಕ: ಬಹಳ ಕಾಲದಿಂದ ಅಪೇಕ್ಷಿಸಿದ್ದ ವಸ್ತುವೊಂದು ಅಲ್ಪ ಶ್ರಮದಿಂದ ಈ ದಿನ ನಿಮಗೆ ದೊರಕಲಿದೆ. ನಿಮ್ಮೆಲ್ಲಾ ವ್ಯವಹಾರಗಳು ಬಹಿರಂಗವಾಗಿದ್ದರೆ ಒಳ್ಳೆಯದು. ವಿದ್ಯಾರ್ಥಿಗಳು ವ್ಯಾಸಾಂಗದಲ್ಲಿ ಪರಿಶ್ರಮ ವಹಿಸಬೇಕಾಗುವುದು.

ಧನು: ಉಳಿತಾಯದ ಹಣವನ್ನು ಮನೆಯ ನಿರ್ಮಾಣ ಕಾರ್ಯಗಳಿಗೆ ಬಳಸುವಿರಿ. ಕ್ರೀಡಾಪಟುಗಳಿಗೆ ಪುರಸ್ಕಾರ, ಗೌರವಾಭಿನಂದನೆಗಳು ಪ್ರಾಪ್ತಿಯಾಗಲಿದೆ.

ಮಕರ: ಆಸ್ತಿ ವ್ಯವಹಾರಗಳನ್ನು ನೋಡಿಕೊಳ್ಳಲು ಸಹೋದರರ ಉತ್ತಮ ಸಹಕಾರ ದೊರೆಯುವುದು. ಮನೆಯಲ್ಲಿ ವಿಶೇಷ ಪೂಜೆ ನಡೆಸಲು ತಯಾರಿ ಮಾಡುವಿರಿ. ಕಮಿಷನ್ ಏಜೆಂಟರಿಗೆ ಯಶಸ್ವಿ ಅವಕಾಶಗಳು ಒದಗುವುದು.

ಕುಂಭ : ಜಾಣತನದಿಂದ ನಿಮ್ಮ ಕೆಲಸವನ್ನು ಪೂರ್ಣಗೊಳಿಸುವಲ್ಲಿ ಯಶಸ್ವಿಯಾಗುವಿರಿ. ಬಟ್ಟೆಯ ವ್ಯಾಪಾರದಲ್ಲಿ ಹೆಚ್ಚಿನ ಬಂಡವಾಳವನ್ನು ತೊಡಗಿಸಬಹುದು.

ಮೀನ: ರೈತರು ಎಲ್ಲಾ ಉತ್ಪನ್ನಗಳಿಗೆ ಈ ದಿನ ಹೆಚ್ಚಿನ ಆದಾಯ ಕಾಣುವರು. ಗಣ್ಯ ವ್ಯಕ್ತಿಗಳ ವೈಯಕ್ತಿಕ ಭೇಟಿಯಿಂದಾಗಿ ಸಹಚರರಲ್ಲಿ ಭಿನ್ನಾಭಿಪ್ರಾಯ ಮೂಡಲಿದೆ. ಅನಿರೀಕ್ಷಿತ ಧನಾಗಮನದಿಂದ ಸಂತಸ ಮೂಡಲಿದೆ.

ಪದಬಂಧ 4840

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಯೋಗವಿದ್ದಾಗ ಪರೀಕ್ಷಿಸಿ ನೋಡುವಿಕೆ! (3)
6.ಹೊಣೆಗೇಡಿತನವಿದು (5)
7.ನೂಲುವ ರಾಟೆ (3)
10.ಒಣ ಹೆಮ್ಮೆಯಿಂದ ಕೂಡಿದವನು (5)
15.ಸಜ್ಜನನ್ನು ಹೀಗೂ ಕರೆವರು (3)
16.ಸಂಸಾರದ ಸೆರೆಯಿದು (5)
17. ಉಪಾಧ್ಯಾಯ ಏಕೋ ತಿರುಗಿ ನಿಂತಿದ್ದಾರಲ್ಲಾ? (3)

ಮೇಲಿಂದ ಕೆಳಕ್ಕೆ
1.ಉತ್ತಮವಾದ ಮಾತು (4)
2.ಗಣಿತವನ್ನು ಬಲ್ಲವನು (3)
3.ಬೇರಿಗೆ ನೀರುಣಿಸದಷ್ಟು ಆಲಸಿ! (3)
4.ಪ್ರತಿಯೊಂದು ಜೀವಿಯ ಶರೀರದಲ್ಲಿರುವ ಚೈತನ್ಯ ವಸ್ತು (3)
5.ಈ ಪರಿಯಾಗಿ ಬಂದಿರುವ ಕಾರ್ಯದ ಫಲ (4)
8. ನಯ ನಾಜೂಕಿಲ್ಲದವನು (3)
9.ಸಾಧಾರಣ ಮನುಷ್ಯ (3)
11.ನಡುವೆ ಲೋಭವನ್ನಿಟ್ಟು ಆಸೆ ಹುಟ್ಟಿಸುವುದು! (4)
12.ಪೂರ್ಣವಲ್ಲದ ಸಂಖ್ಯೆ (4)
13.ಬಂಧದಲ್ಲಿ ಕೊನೆಯಾದ ಬಾಂಧವ್ಯ (3)
14.ಜತೆಯಲ್ಲಿರುವ ಜನಸಮೂಹ! (3)
15.ಕಬ್ಬಿಣದ ಭಾರೀ ಪೆಟ್ಟಿಗೆ (3)



4839ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಲೋಹಚುಂಬಕ 3.ಪೊರಕೆ 5.ಪವನಪುತ್ರ 7.ಸಂತಸ 8.ಜಾಗರೂಕತೆ 10.ಕವಿತೆ 11.ಮೂಕಯಾತನೆ 14.ಲಿಲಾವು 15.ರಾವುಗನ್ನಡಿ 16. ಲಲಲಲಲಲ.
ಮೇಲಿಂದ ಕೆಳಕ್ಕೆ: 1.ಲೋಲುಪ 2.ಚುಂಬನ 4.ಕೆಲಸ 6.ಪುಲ್ಲಿಂಗ 7.ಸಂಹಿತೆ 8.ಜಾಗ್ರತೆ 9.ಕಳಂಕ 10.ಕಪಾಲಿ 12.ಯಾತ್ರಿಕ 13.ನೆಗಡಿ

ಸುಡೊಕು 5226

	4					8	2	
8		9						5
	6					3		7
	8			1			5	
9		3	5	2	8	4		6
	5			3			8	
5		4		8			7	
2	9		1		7	5		4
		6		4			9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5225 ಸುಡೊಕು

9	2	5	1	8	3	4	7	6
6	8	4	7	2	5	3	1	9
7	3	1	4	6	9	2	5	8
4	7	9	8	1	6	5	3	2
3	6	2	5	4	7	8	9	1
1	5	8	3	9	2	6	4	7
8	9	7	2	5	4	1	6	3
5	1	6	9	3	8	7	2	4
2	4	3	6	7	1	9	8	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹೋರಾಟದಿಂದ ಹಿಂದೆ ಸರಿಯದಿರಲು ಅತಿಥಿ ಉಪನ್ಯಾಸಕರ ತೀರ್ಮಾನ

‘ಕೇಳಿದ್ದು ಸೇವಾ ಭದ್ರತೆ, ಗೌರವಧನ ಹೆಚ್ಚಳವಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಳಿದ್ದು ಸೇವಾ ಭದ್ರತೆ, ಗೌರವಧನ ಹೆಚ್ಚಳವಲ್ಲ. ಈ ತೀರ್ಮಾನ ನಮ್ಮನ್ನು ಇನ್ನಷ್ಟು ಅಭದ್ರಗೊಳಿಸಲಿದೆ. ಸರ್ಕಾರ ಇನ್ನಷ್ಟು ಮಂದಿಯ ತಿಥಿ ಮಾಡಲು ಹೊರಟಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿರುವ ರಾಜ್ಯ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಒಕ್ಕೂಟ, ಸೇವಾ ಭದ್ರತೆಗೆ ಆಗ್ರಹಿಸಿ ನಡೆಸುತ್ತಿರುವ ಹೋರಾಟದಿಂದ ಹಿಂದೆ ಸರಿಯದಿರಲು ನಿರ್ಧರಿಸಿದೆ.

ಅಲ್ಲದೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಹುಬ್ಬಳ್ಳಿಯಲ್ಲಿರುವ ಮನೆಯ ಎದುರು ಪ್ರತಿಭಟನೆ ನಡೆಸಲು ಮುಂದಾಗಿದೆ.

ಪ್ರಥಮದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಗೌರವಧನವನ್ನು ಹೆಚ್ಚಿಸಿ ರಾಜ್ಯ ಸರ್ಕಾರ ಶುಕ್ರವಾರ ಆದೇಶ ಹೊರಡಿಸಿದೆ. ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವದ ಸಮಿತಿಯ ಶಿಫಾರಸ್ಸಿನಂತೆ ಸರ್ಕಾರ ಈ ಕ್ರಮ ತೆಗೆದುಕೊಂಡಿದೆ.

‘37 ದಿನಗಳ ನಮ್ಮ ಪ್ರತಿಭಟನೆಯ ಬಳಿಕ ರಾಜ್ಯ ಸರ್ಕಾರ ಗೌರವಧನ ಹೆಚ್ಚಿಸುವ ಘೋಷಣೆ ಮಾಡಿ, ಸಂಕ್ರಾಂತಿಯ ಸಿಹಿ ನೀಡಿರುವುದಾಗಿ ಹೇಳಿಕೊಂಡಿದೆ. ಗೌರವಧನ ಹೆಚ್ಚಿಸುವಂತೆ ನಾವು ಆಗ್ರಹಿಸಿಲ್ಲ. ಇದಕ್ಕಾಗಿ ಸಮಿತಿ ರಚಿಸುವ ಅಗತ್ಯವೂ ಇರಲಿಲ್ಲ. ಸರ್ಕಾರದ ಈ ತೀರ್ಮಾನದ ಸಾಧಕ ಬಾಧಕಗಳ ಬಗ್ಗೆ ಶಿಕ್ಷಕ ಮತ್ತು ಪದವೀಧರ ಕ್ಷೇತ್ರಗಳಿಂದ ವಿಧಾನ ಪರಿಷತ್‌ಗೆ ಆಯ್ಕೆಯಾದವರು ಚಕಾರ ಎತ್ತಿಲ್ಲ’ ಎಂದು ಒಕ್ಕೂಟದ ಅಧ್ಯಕ್ಷ ಹನುಮಂತಗೌಡ ಆರ್. ಕಲ್ಮನಿ ಅಸಮಾಧಾನ ವ್ಯಕ್ತಪಡಿಸಿದರು.

‘ಪ್ರಸಕ್ತ ಶೈಕ್ಷಣಿಕ ವರ್ಷ (2021-22) ಇನ್ನೂ ಮುಗಿದಿಲ್ಲ. ಆದಕ್ಕೂ ಮೊದಲೇ, ಇದೇ 17ರಿಂದ ಅತಿಥಿ ಉಪನ್ಯಾಸಕರ ನೇಮಕಕ್ಕೆ ಅರ್ಜಿ ಆಹ್ವಾನಿಸಲು ಉನ್ನತ ಶಿಕ್ಷಣ ಇಲಾಖೆ ನಿರ್ಧರಿಸಿದೆ. ಸರ್ಕಾರ ಗೌರವಧನ ಹೆಚ್ಚಿಸಿರುವ ತೀರ್ಮಾನಕ್ಕೆ ನಮ್ಮ ಅತೃಪ್ತಿಯನ್ನು ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಬಳಿ ವ್ಯಕ್ತಪಡಿಸಿದ್ದೇವೆ. ಅಲ್ಲದೆ, ಅರ್ಜಿ ಆಹ್ವಾನವನ್ನು ತಡೆಹಿಡಿಯುವಂತೆ ಮನವಿ ಮಾಡಿದ್ದೇವೆ. ಉನ್ನತ ಶಿಕ್ಷಣ ಸಚಿವರ ಜೊತೆ ಮಾತನಾಡುವುದಾಗಿ ಅವರು ಭರವಸೆ ನೀಡಿದ್ದಾರೆ. 2-3 ದಿನ ಕಾಯುತ್ತೇವೆ. ನಮ್ಮ ಬೇಡಿಕೆಗಳಿಗೆ ಸ್ಪಂದನೆ ಸಿಗದೇ ಇದ್ದರೆ ಹೋರಾಟದ ಮುಂದಿನ ದಾರಿ ನೋಡಿಕೊಳ್ಳುತ್ತೇವೆ’ ಎಂದು ಎಚ್ಚರಿಕೆ ನೀಡಿದರು.

‘ಸೇವಾ ಭದ್ರತೆ ನೀಡದಿದ್ದರೆ ಜೈಲು ಭರೊ ಚಳುವಳಿ ಹಮ್ಮಿಕೊಳ್ಳುತ್ತೇವೆ’ ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಶಿವಾನಂದ ಕಲ್ಲೂರು ಹೇಳಿದರು.

ಕೆಲಸ ನಷ್ಟದ ಆತಂಕ: ‘ಎಂಟು ಗಂಟೆಯ ಕಾರ್ಯಭಾರಕ್ಕೆ ನೀಡುತ್ತಿದ್ದ ಗೌರವಧನ ₹ 11 ಸಾವಿರದಿಂದ ₹ 13 ಸಾವಿರವನ್ನು ಹೊಸ ಆದೇಶದ ಪ್ರಕಾರ, 15 ಗಂಟೆ ಕಾರ್ಯಭಾರಕ್ಕೆ ₹ 30 ಸಾವಿರದಿಂದ ₹ 32 ಸಾವಿರಕ್ಕೆ ಹೆಚ್ಚಿಸಲಾಗಿದೆ. ಕಾರ್ಯಭಾರ ಹೆಚ್ಚಿಸುವ ವ್ಯವಸ್ಥೆಯಿಂದ ಸುಮಾರು 14,500 ಅತಿಥಿ ಉಪನ್ಯಾಸಕರಲ್ಲಿ ಅರ್ಧದಷ್ಟು ಮಂದಿ ಕೆಲಸ ಕಳೆದುಕೊಳ್ಳಲಿದ್ದಾರೆ. ಅರ್ಧದಷ್ಟು ಜನರನ್ನು ಮನೆಗೆ ಕಳುಹಿಸಿ, ಉಳಿದವರಿಗೆ ಅವರ ಗೌರವಧನವನ್ನು ಕೊಟ್ಟು ಯಾರು ಮಾಡದಿರುವ ಕೆಲಸ ಮಾಡಿದ್ದೇವೆ ಎಂದು ಸರ್ಕಾರ ಹೇಳುತ್ತಿದೆ. 15- 20 ವರ್ಷ ಸೇವೆ ಸಲ್ಲಿಸಿದವರಿಗೆ ಸೇವಾ ಭದ್ರತೆಯ ವಿಚಾರದಲ್ಲಿ ಸರ್ಕಾರ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ. ಯುಜಿಸಿಯ ಎಲ್ಲ ಅರ್ಹತೆ ಇದ್ದು, ವಯೋಮಿತಿ ಮೀರುತ್ತಿರುವವರ ಬಗ್ಗೆಯೂ ಪ್ರಸ್ತಾಪ ಇಲ್ಲ’ ಎಂದು ದಾವಣಗೆರೆಯ ಅತಿಥಿ ಉಪನ್ಯಾಸಕ ಶಿವಕುಮಾರ್ ಯರಗಟ್ಟಹಳ್ಳಿ ಆಕ್ಷೇಪಿಸಿದರು.

ಪ್ರತಿವರ್ಷ ಶೇ 3ರಷ್ಟು ಹೆಚ್ಚಿಸಲು ಅಸಮ್ಮತಿ

ಗೌರವಧನವನ್ನು ಪ್ರತಿವರ್ಷ ಶೇ 3ರಷ್ಟು ಹೆಚ್ಚಿಸಬೇಕು ಎಂದು ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಪರಿಶೀಲಿಸಿ ವರದಿ ನೀಡಲು ರಚಿಸಿದ್ದ ಸಮಿತಿ ಶಿಫಾರಸು ಮಾಡಿದೆ. ಆದರೆ, ಈ ಶಿಫಾರಸನ್ನು ಆರ್ಥಿಕ ಇಲಾಖೆ ಒಪ್ಪಿಲ್ಲ. ಸಮಿತಿ ಮೂರು ಬಾರಿ ಸಭೆ ಸೇರಿ (ಡಿ. 28, ಜ. 5 ಮತ್ತು 12), ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶ, ದೆಹಲಿ, ಹರಿಯಾಣ ರಾಜ್ಯಗಳಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿ ವಿಧಾನ, ಗೌರವಧನ, ಸೇವಾಭದ್ರತೆ ವಿಷಯಗಳನ್ನು ಚರ್ಚಿಸಿದ ಬಳಿಕ ಎಲ್ಲ ಶಿಫಾರಸುಗಳನ್ನು ಮಾಡಲಾಗಿದೆ’ ಎಂದು ಉನ್ನತ ಶಿಕ್ಷಣ ಇಲಾಖೆ ಮೂಲಗಳು ತಿಳಿಸಿವೆ.

‘ಮುಷ್ಕರ ಬಿಟ್ಟು ಬೋಧನೆಗೆ ಹಿಂದಿರುಗಿ’

ಅಶ್ವತ್ಥ ನಾರಾಯಣ

‘ಅತಿಥಿ ಉಪನ್ಯಾಸಕರ ಸಮಸ್ಯೆಗಳನ್ನು ಸಹಾನುಭೂತಿಯಿಂದ ಸರ್ಕಾರ ಪರಿಶೀಲಿಸಿದೆ. ವೇತನವನ್ನು ಎರಡು ಪಟ್ಟಿಗೂ ಹೆಚ್ಚು ಏರಿಸಲಾಗಿದೆ. ಮುಷ್ಕರ ಮುಂದುವರಿಸದೆ ಸೇವೆಗೆ ಮರಳಬೇಕು’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಕೋರಿದ್ದಾರೆ.

‘ಅತಿಥಿ ಉಪನ್ಯಾಸಕರಿಗೆ ಅತ್ಯುತ್ತಮವಾದ ಪ್ಯಾಕೇಜ್ ನೀಡಲಾಗಿದೆ. ವಿದ್ಯಾರ್ಥಿ ಸಮುದಾಯದ ಹಿತವನ್ನೂ ಅತಿಥಿ ಉಪನ್ಯಾಸಕರು ಪರಿಗಣಿಸಬೇಕು’ ಎಂದಿದ್ದಾರೆ.

‘2022-23ರ ಶೈಕ್ಷಣಿಕ ವರ್ಷಕ್ಕೆ ಅತಿಥಿ ಉಪನ್ಯಾಸಕರ ನೇಮಕ ಪ್ರಕ್ರಿಯೆ ಸೋಮವಾರ (ಜ.17) ಆರಂಭವಾಗಲಿದೆ. ಇದಕ್ಕಾಗಿ ಆನ್‌-ಲೈನ್ ಪೋರ್ಟಲ್‌ನಲ್ಲಿ ಅರ್ಜಿ ಹಾಕಬೇಕು. ಅರ್ಜಿ ಸಲ್ಲಿಸಲು ಒಂದು ವಾರ ಸಮಯವಿದೆ. ಅಭ್ಯರ್ಥಿಗಳು ತಮ್ಮ ಇಷ್ಟದ ಐದು ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಬಹುದು’ ಎಂದೂ ಹೇಳಿದ್ದಾರೆ.

ಸರ್ಕಾರದ ಈ ತೀರ್ಮಾನದಿಂದ ಅತಿಥಿ ಉಪನ್ಯಾಸಕರ ದುಗುಡ, ಆತಂಕ ಹೆಚ್ಚಿದೆ. ಕಾರ್ಯಭಾರ ಅವಧಿ ಹೆಚ್ಚಿಸಿದ್ದರಿಂದ ಕೆಲಸ ಕಳೆದುಕೊಳ್ಳುವ ಅಪಾಯ ಎದುರಾಗಿದೆ

ಹನುಮಂತಗೌಡ ಆರ್. ಕಲ್ಮನಿ, ಅತಿಥಿ ಉಪನ್ಯಾಸಕರ ಒಕ್ಕೂಟ ರಾಜ್ಯ ಘಟಕದ ಅಧ್ಯಕ್ಷ

‘ಹಾಲಿನ ದರ ಏರಿಕೆ: ಸಿಎಂ ಜೊತೆ ಚರ್ಚಿಸಿ ನಿರ್ಧಾರ’

ಬೆಂಗಳೂರು: ‘ನಂದಿನಿ’ ಹಾಲಿನ ದರ ಏರಿಕೆ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜೊತೆ ಚರ್ಚಿಸಿ ನಿರ್ಧರಿಸಲಾಗುವುದು’ ಎಂದು ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಹೇಳಿದರು.

ಬಾಲಚಂದ್ರ ಜಾರಕಿಹೊಳಿ

ಕೆಎಂಎಫ್ 2020-21ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ‘ಹಾಲಿನ ದರ ಪ್ರತಿ ಲೀಟರ್‌ಗೆ ₹ 3 ಹೆಚ್ಚಿಸಲು ಎಲ್ಲ ಜಿಲ್ಲಾ ಹಾಲು ಒಕ್ಕೂಟಗಳ ಅಧ್ಯಕ್ಷರು ಕೋರಿದ್ದಾರೆ’ ಎಂದು ತಿಳಿಸಿದರು.

‘ಹೆಚ್ಚಿಸಿದರೆ ಲೀಟರ್ ಹಾಲಿಗೆ ಈಗಿರುವ ₹ 37ರಿಂದ ₹ 40 ದರ ಆಗಲಿದೆ. ಇತರೆ ರಾಜ್ಯಗಳಿಗೆ ಹೋಲಿಸಿದರೆ ದರ ಅತಿ ಕಡಿಮೆ ಇದೆ. ದರ ಹೆಚ್ಚಿಸಿದರೆ ಆ ಹಣವನ್ನು (₹ 3) ರೈತರಿಗೆ ನೀಡಲಾಗುವುದು’ ಎಂದೂ ಹೇಳಿದರು.

‘ಪ್ರಸಕ್ತ ವರ್ಷ (2021-22) ಕೆಎಂಎಫ್‌ನ 5 ಪಶು ಆಹಾರ ಘಟಕಗಳಿಂದ 7.28 ಲಕ್ಷ ಟನ್ ಪಶು ಆಹಾರ ಉತ್ಪಾದಿಸಿ ಮಾರಾಟ ಮಾಡುವ ಗುರಿ ಇದೆ. ಅಂದಾಜು ₹1,017 ಕೋಟಿ ವಹಿವಾಟು ನಿರೀಕ್ಷೆ ಇದೆ’ ಎಂದರು.

‘ಬೆಳಗಾವಿಯಲ್ಲಿ ನಂದಿನಿ ಮೆಗಾ ಫುಡ್ ಪಾರ್ಕ್ ಆರಂಭಿಸುವ ಕಾರ್ಯ ಪ್ರಗತಿಯಲ್ಲಿದೆ. ಹೊರರಾಜ್ಯಗಳಲ್ಲಿ ನಂದಿನಿ ಉತ್ಪನ್ನಗಳ ಮಾರಾಟಕ್ಕೆ ಸಮಗ್ರ ಮಾರುಕಟ್ಟೆ ಅಭಿವೃದ್ಧಿ ಯೋಜನೆ- 2022-2026 ರೂಪಿಸಲಾಗಿದೆ’ ಎಂದರು.

‘ಹಾಸನ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿತ್ಯ 5 ಲಕ್ಷ ಪೆಟ್ ಬಾಟಲ್ ಉತ್ಪಾದಿಸುವ ಪೆಟ್ ಬಾಟಲ್ ಘಟಕ ಅಳವಡಿಸಿದೆ. ಈ ಘಟಕ ಸುಮಾರು 15 ಹೊಸ ಉತ್ಪನ್ನಗಳನ್ನು ಉತ್ಪಾದಿಸಲಿದೆ’ ಎಂದೂ ತಿಳಿಸಿದರು. ರಾಜ್ಯದ ಎಲ್ಲ 14 ಹಾಲು ಒಕ್ಕೂಟಗಳ ಅಧ್ಯಕ್ಷರು, ಪ್ರತಿನಿಧಿಗಳು ಇದ್ದರು.

ನಷ್ಟ, ಬಾಕಿ ಸರಿದೂಗಿಸಿಕೊಳ್ಳಲು ವಿದ್ಯುತ್ ದರ ಏರಿಕೆಗೆ ಮನವಿ

₹462 ಕೋಟಿ ಬಾಕಿ: ಹೆಸ್ಕಾಂಗೆ ಸಂಕಷ್ಟ

● ಬಸವರಾಜ ಹವಾಲ್ದಾರ

ಪ್ರಜಾವಾಣಿ ವಿಶೇಷ

ಹುಬ್ಬಳ್ಳಿ: ಗ್ರಾಮೀಣ ಹಾಗೂ ನಗರ ಸ್ಥಳೀಯ ಸಂಸ್ಥೆಗಳು, ಸಣ್ಣ ನೀರಾವರಿ ಇಲಾಖೆ, ಕರ್ನಾಟಕ ನೀರಾವರಿ ನಿಗಮ ಸೇರಿದಂತೆ ಹಲವು ಇಲಾಖೆಗಳು ₹462 ಕೋಟಿ ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡಿರುವುದರಿಂದ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯು (ಹೆಸ್ಕಾಂ) ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ.

ಹೊರೆ ಸರಿದೂಗಿಸಿಕೊಳ್ಳಲು ಕೋವಿಡ್ ಸ್ಥಿತಿಯಲ್ಲಿಯೂ ವಿದ್ಯುತ್ ದರ ಏರಿಕೆಗೆ ಹೆಸ್ಕಾಂ ಮುಂದಾಗಿದ್ದು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಮನವಿ ಸಲ್ಲಿಸಿದೆ. ಸರ್ಕಾರಿ ಇಲಾಖೆಗಳ ಬಾಕಿ ಪಾವತಿ, ವಿದ್ಯುತ್ ಸರಬರಾಜಿನಲ್ಲಿನ ನಷ್ಟ ಮುಂತಾದವುಗಳ ಹೊರೆಯನ್ನು ಗ್ರಾಹಕರು ಹೊರಬೇಕಾಗಿದೆ.

‘ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ, ಮಹಾನಗರ ಪಾಲಿಕೆ, ಗ್ರಾಮ ಪಂಚಾಯ್ತಿಗಳಿಗೆ ಬಾಕಿ ಹಣ ಪಾವತಿಗೆ ಸೂಚಿಸಿ ನೋಟಿಸ್ ನೀಡಲಾಗುತ್ತಿದೆ. ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆ ₹46 ಕೋಟಿ, ಬೆಳಗಾವಿ ಮಹಾನಗರ ಪಾಲಿಕೆ ₹49.10 ಕೋಟಿ ಬಾಕಿ ಉಳಿಸಿಕೊಂಡಿವೆ’ ಎಂದು ಹೆಸ್ಕಾಂ ವ್ಯವಸ್ಥಾಪಕ ನಿರ್ದೇಶಕಿ ಡಿ.ಭಾರತಿ ‘ಪ್ರಜಾವಾಣಿ’ಗೆ ತಿಳಿಸಿದರು.

ಕುಡಿಯುವ ನೀರು ಹಾಗೂ ಬೀದಿ ದೀಪಗಳಿಗೆ ಬಳಸುವ ವಿದ್ಯುತ್ ಬಿಲ್ ಬಾಕಿ ಪ್ರತಿ ವರ್ಷ ಹೆಚ್ಚುತ್ತಿದೆ. ಹೆಸ್ಕಾಂ ವ್ಯಾಪ್ತಿಯ ಏಳು ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳು ₹129 ಕೋಟಿ ಹಾಗೂ ಗ್ರಾಮ ಪಂಚಾಯ್ತಿಗಳು ₹300 ಕೋಟಿ ಬಾಕಿ ಉಳಿಸಿಕೊಂಡಿವೆ.

ಉಳಿದಂತೆ, ಸಣ್ಣ ನೀರಾವರಿ ಇಲಾಖೆ ₹17.02 ಕೋಟಿ, ಕರ್ನಾಟಕ ನೀರಾವರಿ ನಿಗಮ ₹32.66 ಕೋಟಿ, ಕೃಷ್ಣಾ ಭಾಗ್ಯ ಜಲನಿಗಮ ₹7 ಕೋಟಿ ಹಾಗೂ ಕೆಎನ್‌ಎನ್‌ಎಲ್ (ತುಂಗಾ ಮೇಲ್ದಂಡೆ ಯೋಜನೆ) ₹2.31 ಕೋಟಿ ವಿದ್ಯುತ್ ಬಿಲ್ ಪಾವತಿಸಬೇಕಿದೆ.

ಕರ್ನಾಟಕ ನೀರಾವರಿ ನಿಗಮ ಸೇರಿ ಹಲವು ಇಲಾಖೆಗಳಿಗೆ ನೋಟಿಸ್ ಜಾರಿಯಾಗಿದೆ. ಏಳು ದಿನಗಳಲ್ಲಿ ಬಾಕಿ ಪಾವತಿಸದಿದ್ದರೆ, ವಿದ್ಯುತ್ ಕಡಿತ ಮಾಡಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ ಎಂದು ಅವರು ಹೇಳಿದರು.

ಬಾಕಿ ವಿವರ (₹ಕೋಟಿಗಳಲ್ಲಿ)

ಜಿಲ್ಲೆ	ನಗರ ಸ್ಥಳೀಯ ಸಂಸ್ಥೆ	ಗ್ರಾಮೀಣ ಸ್ಥಳೀಯ ಸಂಸ್ಥೆ
ಧಾರವಾಡ	53.46	41.91
ಗದಗ	10.45	21.66
ಉತ್ತರ ಕನ್ನಡ	1.15	0.82
ಹಾವೇರಿ	5.27	1.23
ಬೆಳಗಾವಿ	49.07	42.73
ವಿಜಯಪುರ	2.00	28.83
ಬಾಗಲಕೋಟೆ	7.69	41.42

ಕೋವಿಡ್‌ನಿಂದಾಗಿ ಉದ್ಯಮಗಳು ಸರಿಯಾಗಿ ನಡೆಯುತ್ತಿಲ್ಲ. ಜನರೂ ಆರ್ಥಿಕ ಸಂಕಷ್ಟದಲ್ಲಿದ್ದಾರೆ. ವಿದ್ಯುತ್ ದರ ಏರಿಸದಂತೆ ಆಕ್ಷೇಪಣೆ ಸಲ್ಲಿಸಲಾಗಿದೆ.

ವಿನಯ ಜವಳಿ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ, ಹುಬ್ಬಳ್ಳಿ

ಹೊಸಪೇಟೆಯ ಸೆಕ್ರೆಡ್ ಹಾರ್ಟ್ ಚರ್ಚ್ ಆವರಣದಲ್ಲಿ ಕ್ರೈಸ್ತರು ಶನಿವಾರ ಸಂಕ್ರಾಂತಿ ಆಚರಿಸಿದರು. ಧರ್ಮಗುರು ಆರೋಗ್ಯನಾಥನ್ ಅವರು ಇದ್ದರು.

ಭೀಕರ ಅಪಘಾತ: ನಾಲ್ವರ ಸಾವು

ರಟ್ಟೀಹಳ್ಳಿ (ಹಾವೇರಿ ಜಿಲ್ಲೆ): ತಾಲ್ಲೂಕಿನ ಕಡೂರ ಗ್ರಾಮದ ಬಳಿ ದಾಸನಹಳ್ಳದ ತಿರುವಿನಲ್ಲಿ ಕಾರು-ಲಾರಿ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ್ದು, ಕಾರಿನಲ್ಲಿದ್ದ ಇಬ್ಬರು ಸ್ಥಳದಲ್ಲಿಯೇ, ಇಬ್ಬರು ಮಕ್ಕಳು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯದಲ್ಲಿ ಅಸುನೀಗಿದರು.

ಶಿಕಾರಿಪುರ ತಾಲ್ಲೂಕಿನ ಮಟ್ಟಿಕೋಟೆ ಗ್ರಾಮದ ಶಂಕರಗೌಡ ನಾಗಪ್ಪನವರ (40), ಶಾಂತಾ ಹೊಟ್ಟೀಗೌಡ್ರ (30), ರಘು ಹೊಟ್ಟಿಗೌಡ್ರ (12), ಪುನೀತ (12) ಮೃತಪಟ್ಟವರು.6 ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಆಂಬುಲೆನ್ಸ್ ಮೂಲಕ ರಟ್ಟೀಹಳ್ಳಿ ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಯಿತು. ನಂತರ ದಾವಣಗೆರೆಗೆ ಕರೆದೊಯ್ಯಲಾಯಿತು.

‘ಪಿಎಂ ಆವಾಸ್: 25 ಲಕ್ಷ ಫಲಾನುಭವಿಗಳ ಸೇರ್ಪಡೆ’

ಬೆಂಗಳೂರು: ರಾಜ್ಯ ಸರ್ಕಾರದ ಕೋರಿಕೆಗೆ ಸ್ಪಂದಿಸಿ ಪ್ರಧಾನಿ ನರೇಂದ್ರ ಮೋದಿ ಅವರು, ರಾಜ್ಯದ 25.40 ಲಕ್ಷ ಕುಟುಂಬಗಳನ್ನು ಪ್ರಧಾನಮಂತ್ರಿ ಆವಾಸ್ ಯೋಜನೆಯ ಫಲಾನುಭವಿಗಳ ಅರ್ಹತಾ ಪಟ್ಟಿಗೆ ಸೇರಿಸಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

‘ರಾಜ್ಯದ ಗ್ರಾಮೀಣ ಪ್ರದೇಶದ 18.78 ಲಕ್ಷ ವಸತಿರಹಿತ ಬಡ ಕುಟುಂಬಗಳು ಮತ್ತು 6.61 ಲಕ್ಷ ನಿವೇಶನರಹಿತ ಬಡ ಕುಟುಂಬಗಳನ್ನು ಈ ಯೋಜನೆ ವ್ಯಾಪ್ತಿಗೆ ಸೇರಿಸುವ ಬೇಡಿಕೆಗೆ ಪ್ರಧಾನಿ ಅನುಮೋದನೆ ನೀಡಿದ್ದಾರೆ’ ಎಂದು ಅವರು ಶನಿವಾರ ಟ್ವೀಟ್ ಮಾಡಿದ್ದಾರೆ.

ಸಂತ ಸೇವಾಲಾಲ್ ಜಯಂತಿ ರದ್ದು

ದಾವಣಗೆರೆ: ಇಲ್ಲಿನ ಸೂರಗೊಂಡನಕೊಪ್ಪದ ಭಾಯಾಗಡ್‌ನಲ್ಲಿ ಫೆ.14ರಿಂದ ಎರಡು ದಿನ ನಡೆಯಬೇಕಿದ್ದ ಸಂತ ಸೇವಾಲಾಲರ 283ನೇ ಜಯಂತಿ ಕಾರ್ಯಕ್ರಮ ಕೊರೊನಾ ಕಾರಣಕ್ಕೆ ರದ್ದಾಗಿದೆ.

ಕೃಷ್ಣಮಠದಲ್ಲಿ ಹಗಲು ಬ್ರಹ್ಮರಥೋತ್ಸವ

ಉಡುಪಿ: ಕೃಷ್ಣಮಠದಲ್ಲಿ ಶನಿವಾರ ವಾರ್ಷಿಕ ಚೂರ್ಣೋತ್ಸವ, ಹಗಲು ಬ್ರಹ್ಮರಥೋತ್ಸವ ಹಾಗೂ ಅವಭೃತ ಸ್ನಾನ ನೆರವೇರಿತು. ಅಷ್ಟಮಠಾಧೀಶರು ಹಾಗೂ ಭಕ್ತರು ಬ್ರಹ್ಮ ರಥ ಎಳೆದು ಭಕ್ತಿ ಸಮರ್ಪಿಸಿದರು. ಕೋವಿಡ್ ಲೆಕ್ಕಿಸದೆ ನೂರಾರು ಭಕ್ತರು ಉತ್ಸವದಲ್ಲಿ ಪಾಲ್ಗೊಂಡಿದ್ದರು.

ಮೊದಲಿಗೆ ಕೃಷ್ಣ ಮುಖ್ಯಪ್ರಾಣ ಉತ್ಸವ ಮೂರ್ತಿಯನ್ನು ಚಿನ್ನದ ಪಲಕ್ಕಿಯಲ್ಲಿ ತಂದು ಬ್ರಹ್ಮರಥದಲ್ಲಿ ಪ್ರತಿಷ್ಠಾಪಿಸಲಾಯಿತು. ಪರ್ಯಾಯ ಅದಮಾರು ಮಠದ ಈಶಪ್ರಿಯ ತೀರ್ಥರು ಮಧ್ವಮಂಟಪದಲ್ಲಿ ತೊಟ್ಟಿಲು ಪೂಜೆ ನೆರವೇರಿಸಿ, ಅಷ್ಟ ಮಠಾಧೀಶರಿಗೆ ಗಂಧಾದ್ಯುಪಚಾರ ಮಾಡಿ ಗೌರವಿಸಿದರು.

ಪೂಜೆ, ನೈವೇದ್ಯ, ಮಹಾ ಮಂಗಳಾರತಿ ಬಳಿಕ ರಥೋತ್ಸವ ಆರಂಭವಾಗಿ, ರಥಬೀದಿಯ ಸುತ್ತಲೂ ಸಾಗಿಬಂತು. ಬಿರುದಾವಳಿ, ಡೋಲು, ಚಂಡೆ ಉತ್ಸವದ ಕಳೆ ಹೆಚ್ಚಿಸಿತ್ತು. ಚೂರ್ಣೋತ್ಸವದ ಬಳಿಕ ಮಧ್ವ ಸರೋವರದಲ್ಲಿ ಕೃಷ್ಣ ಮುಖ್ಯಪ್ರಾಣ, ಹಾಗೂ ಉತ್ಸವ ಮೂರ್ತಿಗಳಿಗೆ ಅವಭೃತ ಸ್ನಾನ ನಡೆಯಿತು.

ಭಾವಿ ಪರ್ಯಾಯ ಮಠಾಧೀಶರಾದ ವಿದ್ಯಾಸಾಗರ ತೀರ್ಥರು, ಪರ್ಯಾಯ ಅದಮಾರು ಮಠಾಧೀಶರಾದ ಈಶಪ್ರಿಯ ತೀರ್ಥ ಸ್ವಾಮೀಜಿ, ವಿಶ್ವಪ್ರಿಯತೀರ್ಥ ಸ್ವಾಮೀಜಿ, ಪಲಿಮಾರು ಮಠದ ವಿದ್ಯಾಧೀಶ ತೀರ್ಥ ಸ್ವಾಮೀಜಿ, ಪೇಜಾವರ ಮಠಾಧೀಶರಾದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಸೇರಿ ವಿವಿಧ ಮಠಾಧೀಶರು ಇದ್ದರು.

ಉಡುಪಿಯ ಕೃಷ್ಣಮಠದಲ್ಲಿ ಶನಿವಾರ ವಾರ್ಷಿಕ ಚೂರ್ಣೋತ್ಸವ, ಹಗಲು ಬ್ರಹ್ಮರಥೋತ್ಸವ ನೆರವೇರಿತು.

ವಿಜಯಕ್ಕೆ ತಾಂತ್ರಿಕ ಅಂಶವೇ ಆಧಾರ – ಕಾನೂನು ತಜ್ಞರ ಅಭಿಮತ

ರಾಘವೇಶ್ವರ ಶ್ರೀಗಳ ವಿರುದ್ಧದ ಅರ್ಜಿಗಳ ವಜಾ

● ಬಿ.ಎಸ್.ಷಣ್ಮುಖಪ್ಪ

ಮುಖ್ಯಾಂಶಗಳು

- ಸಂತ್ರಸ್ತೆ ಮತ್ತು ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಕ್ರಿಮಿನಲ್ ಪುನರ್ ಪರಿಶೀಲನಾ ಅರ್ಜಿಗಳು
- ಸೆಷನ್ಸ್ ಕೋರ್ಟ್ ಆದೇಶ ಎತ್ತಿಹಿಡಿದ ಏಕಸದಸ್ಯ ನ್ಯಾಯಪೀಠ

ಬೆಂಗಳೂರು: ’ಹೊಸನಗರದ ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತೀ ಸ್ವಾಮೀಜಿಯನ್ನು ಅತ್ಯಾಚಾರ ಆರೋಪದಿಂದ ಕೈಬಿಟ್ಟ, ಸೆಷನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಿ ಸಂತ್ರಸ್ತೆ ರಾಮಕಥಾ ಗಾಯಕಿ ಮತ್ತು ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಕ್ರಿಮಿನಲ್ ಪುನರ್ ಪರಿಶೀಲನಾ ಅರ್ಜಿಗಳನ್ನು ವಜಾಗೊಳಿಸಿದ ಹೈಕೋರ್ಟ್ ತೀರ್ಪಿನಲ್ಲಿ ತಾಂತ್ರಿಕ ಅಂಶಗಳೇ ಮೇಲುಗೈ ಪಡೆದಿವೆಯೇ...? ಹೌದು ಎನ್ನುತ್ತಾರೆ ಕಾನೂನು ತಜ್ಞರು.

ರಾಘವೇಶ್ವರ ಸ್ವಾಮೀಜಿ

ನಾಡಿನಾದ್ಯಂತ ತೀವ್ರ ಸಂಚಲನ ಉಂಟು ಮಾಡಿದ್ದ ಈ ಪ್ರಕರಣದಲ್ಲಿ ಇತ್ತೀಚೆಗೆ ಹೈಕೋರ್ಟ್ ನೀಡಿದ ತೀರ್ಪನ್ನು ವಿಶ್ಲೇಷಿಸಿರುವ ಹಿರಿಯ ವಕೀಲ ಸಿ.ಎಚ್.ಹನುಮಂತರಾಯ ಅವರು, ‘ಹೈಕೋರ್ಟ್‌ನ ಪೂರ್ವ ನಿದರ್ಶನಗಳು ಹಾಗೂ ಸುಪ್ರೀಂ ಕೋರ್ಟ್ ತೀರ್ಪುಗಳಲ್ಲಿ ತಾಂತ್ರಿಕ ಅಂಶಗಳಿಗೇ ದಕ್ಕಿದ್ದ ಜಯ ಈ ಪ್ರಕರಣಕ್ಕೂ ಆನೆಬಲ ತುಂಬಿತು. ಹೀಗಾಗಿ, ಪುನರ್ ಪರಿಶೀಲನಾ ಅರ್ಜಿಗಳು ವಜಾಗೊಂಡಿವೆ‘ ಎಂದು ವಿವರಿಸಿದ್ದಾರೆ.

ಘಟನಾವಳಿ: ’ನನ್ನ ತಾಯಿಯ ಮೇಲೆ ಸ್ವಾಮೀಜಿಯಿಂದ ಅತ್ಯಾಚಾರ ನಡೆದಿದೆ‘ ಎಂದು ಆರೋಪಿಸಿ ರಾಮಕಥಾ ಗಾಯಕಿ ಪ್ರೇಮಲತಾ ದಿವಾಕರ ಶಾಸ್ತ್ರಿ ಪುತ್ರಿ ಅಂಶುಮತಿ ಅವರು ರಾಘವೇಶ್ವರ ಭಾರತೀ ಶ್ರೀಗಳ ವಿರುದ್ಧ ಬೆಂಗಳೂರಿನ ಬನಶಂಕರಿ ಪೊಲೀಸ್ ಠಾಣೆಯಲ್ಲಿ 2014ರ ಆಗಸ್ಟ್ 26ರಂದು ದೂರು ಸಲ್ಲಿಸಿದ್ದರು. ಭಾರತೀಯ ದಂಡ ಸಂಹಿತೆ-1860 (ಐಪಿಸಿ) ಕಲಂ 354 ಎ ಹಾಗೂ 506ರ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ನಂತರ ಅದನ್ನು ಬೆಂಗಳೂರಿನ ಗಿರಿನಗರ ಠಾಣೆಗೆ ವರ್ಗಾಯಿಸಿದ್ದರು.

ಗಿರಿನಗರ ಠಾಣೆಯ ಪೊಲೀಸರು ಐಪಿಸಿ ಕಲಂ 376(2) (ಎಫ್) ಅಡಿಯಲ್ಲಿ ತನಿಖೆ ನಡೆಸಿದ್ದರು. ಬಳಿಕ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಲಾಗಿತ್ತು. ತನಿಖೆ ಪೂರ್ಣಗೊಳಿಸಿದ್ದ ಸಿಐಡಿ, ಆರೋಪಿಯ ವಿರುದ್ಧ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಅಂತಿಮ ವರದಿ ಸಲ್ಲಿಸಿತ್ತು. ಈ ವರದಿಯ ಆಧಾರದ ಮೇಲೆ ಮ್ಯಾಜಿಸ್ಟ್ರೇಟ್ ಕೋರ್ಟ್, ’ಪ್ರಕರಣವು ಸೆಷನ್ಸ್ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತದೆ’ ಎಂದು ತೀರ್ಮಾನಿಸಿತ್ತು. ಇದರಿಂದ ಪ್ರಕರಣ ಸೆಷನ್ಸ್ ನ್ಯಾಯಾಲಯಕ್ಕೆ ವರ್ಗಾವಣೆಯಾಗಿತ್ತು.

‘ಅಧಿಕಾರವೇ ಇಲ್ಲದ ಅಧಿಕಾರಿ ಸಲ್ಲಿಸಿದ ವರದಿ’

‘ಸಿಆರ್‌ಪಿಸಿ ಕಲಂ 173ರ ಅಡಿಯಲ್ಲಿ ಸಿಐಡಿ ಸಿದ್ಧಪಡಿಸಿದ ಅಂತಿಮ ವರದಿಯನ್ನು ಠಾಣೆಯ ಪ್ರಭಾರ ಅಧಿಕಾರಿ ಮಾತ್ರವೇ ನ್ಯಾಯಾಲಯಕ್ಕೆ ಸಲ್ಲಿಸಬೇಕು. ಆದರೆ, ಈ ಪ್ರಕರಣದಲ್ಲಿ, ಸಿಐಡಿ ಅಧಿಕಾರಿಯೇ ನೇರವಾಗಿ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ಹಾಗಾಗಿ, ಅಧಿಕಾರವೇ ಇಲ್ಲದ ಅಧಿಕಾರಿಯು ಸಲ್ಲಿಸಿರುವ ಅಂತಿಮ ವರದಿಗೆ ಯಾವುದೇ ಮಾನ್ಯತೆ ಇರುವುದಿಲ್ಲ’ ಎನ್ನುವ ಅಂಶವನ್ನು ಹೈಕೋರ್ಟ್ ಮಾನ್ಯ ಮಾಡುವ ಮೂಲಕ ಕ್ರಿಮಿನಲ್ ಪುನರ್ ಪರಿಶೀಲನಾ ಅರ್ಜಿಗಳನ್ನು ವಜಾಗೊಳಿಸಿದೆ‘ ಎನ್ನುತ್ತಾರೆ ಹನುಮಂತರಾಯ.

ಅತ್ಯಾಚಾರ ಆರೋಪಕ್ಕೆ ಸಂಬಂಧಿಸಿದಂತೆ ಸೆಷನ್ಸ್ ನ್ಯಾಯಾಲಯ ದೋಷಾರೋಪ ಹೊರಿಸುವ ಮುನ್ನವೇ, ಆರೋಪಿ ಸ್ವಾಮೀಜಿಯು ದಂಡ ಪ್ರಕ್ರಿಯಾ ಸಂಹಿತೆ-1973ರ (ಸಿಆರ್‌ಪಿಸಿ) ಕಲಂ 227ರ ಅಡಿಯಲ್ಲಿ ಅರ್ಜಿ ಸಲ್ಲಿಸಿ, ’ದೋಷಾರೋಪಣೆಗೆ ಗುರಿಪಡಿಸುವ ಮುನ್ನವೇ ನನ್ನನ್ನು ಬಿಡುಗಡೆ ಮಾಡಬೇಕು. ಅದಕ್ಕಾಗಿ ನಾನು ಸಲ್ಲಿಸಿರುವ ಅರ್ಜಿಯ ಮೇಲಿನ ವಾದ ಮಂಡನೆಗೆ ಅವಕಾಶ ನೀಡಬೇಕು‘ ಎಂದು ಕೋರಿದ್ದರು. ಈ ಅರ್ಜಿಗೆ ಪ್ರಾಸಿಕ್ಯೂಷನ್ ತಕರಾರು ಸಲ್ಲಿಸಿತು.

ಈ ಹಂತದಲ್ಲಿ ಸ್ವಾಮೀಜಿ ಸೆಷನ್ಸ್ ನ್ಯಾಯಾಲಯದ ಮುಂದೆ ಸಲ್ಲಿಸಿದ್ದ ಅರ್ಜಿಯನ್ನು ಪ್ರಶ್ನಿಸಿ ಸಂತ್ರಸ್ತೆ ಹೈಕೋರ್ಟ್ ಮೆಟ್ಟಿಲೇರಿದರು. ಸಂತ್ರಸ್ತೆಯ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತು. ಹೈಕೋರ್ಟ್ ಆದೇಶವನ್ನು ಸಂತ್ರಸ್ತೆ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದರು. ಆದರೆ, ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿರಲಿಲ್ಲ. ಇದರಿಂದಾಗಿ ಅರ್ಜಿ ವಿಚಾರಣೆಗೆ ಬಾಕಿ ಇದ್ದಂತೆಯೇ 54ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಜಿ.ಬಿ.ಮುದಿಗೌಡರ್, ’ಪ್ರಕರಣದ ವಿಚಾರಣೆಗೆ ಯಾವುದೇ ತಡೆಯಾಜ್ಞೆ ಇಲ್ಲ’ ಎಂಬ ಕಾರಣಕ್ಕೆ ಆರೋಪಿ ಸಲ್ಲಿಸಿದ್ದ ಅರ್ಜಿಯ ಮೇಲಿನ ವಾದವನ್ನು ಆಲಿಸಿದರು. ಪ್ರಾಸಿಕ್ಯೂಷನ್ ತಕರಾರನ್ನು ಪರಿಗಣಿಸದೆ 2016ರ ಮಾರ್ಚ್ 31ರಂದು ಆದೇಶ ನೀಡಿ, ಸ್ವಾಮೀಜಿ ವಿರುದ್ಧ ಅಂತಿಮ ವರದಿಯಲ್ಲಿ ಹೊರಿಸಲಾಗಿದ್ದ ಆರೋಪದಿಂದ ಬಿಡುಗಡೆಗೊಳಿಸಿದ್ದರು.

ಸ್ವಾಮೀಜಿಯನ್ನು ಬಿಡುಗಡೆಗೊಳಿಸಿದ ಸೆಷನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಿ ಸಂತ್ರಸ್ತೆ ಮತ್ತು ಪ್ರಾಸಿಕ್ಯೂಷನ್, ಹೈಕೋರ್ಟ್‌ನಲ್ಲಿ ಪ್ರತ್ಯೇಕ ಕ್ರಿಮಿನಲ್ ಪುನರ್ ಪರಿಶೀಲನಾ ಅರ್ಜಿಗಳನ್ನು ಸಲ್ಲಿಸಿದರು. ಈ ಅರ್ಜಿಗಳನ್ನು ಸಂಯೋಜಿಸಿ ವಿಚಾರಣೆ ನಡೆಸಿದ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠದ ನ್ಯಾಯಮೂರ್ತಿ ವಿ.ಶ್ರೀಶಾನಂದ, 2021ರ ಡಿಸೆಂಬರ್ 29ರಂದು ತೀರ್ಪು ಪ್ರಕಟಿಸಿ, ಈ ಎರಡೂ ಕ್ರಿಮಿನಲ್ ಪುನರ್ ಪರಿಶೀಲನಾ ಅರ್ಜಿಗಳನ್ನು ವಜಾಗೊಳಿಸಿದ್ದಾರೆ.

ವಾದ: ಹೈಕೋರ್ಟ್‌ನಲ್ಲಿ ಸಂತ್ರಸ್ತೆಯ ಪರ ಹಿರಿಯ ವಕೀಲ ಎಂ.ಟಿ. ನಾಣಯ್ಯ, ’ಸೆಷನ್ಸ್ ನ್ಯಾಯಾಧೀಶರು ಆರೋಪಿಯನ್ನು ದೋಷಾರೋಪಣೆ ಹೊರಿಸುವ ಹಂತದ ಪೂರ್ವದಲ್ಲಿಯೇ ಕೈ ಬಿಟ್ಟಿದ್ದಾರೆ. ಸಾಕ್ಷಿಗಳ ಹೇಳಿಕೆ ಮತ್ತು ವೈಜ್ಞಾನಿಕ ವರದಿಗಳನ್ನು ಆಳವಾಗಿ ಪರಿಗಣಿಸಿಲ್ಲ. ಅಪರಾಧ ನಿರೂಪಿಸಲು ಪ್ರಾಸಿಕ್ಯೂಷನ್‌ಗೆ ಮುಕ್ತ ಅವಕಾಶ ನೀಡಿಲ್ಲ. ಸ್ವಾಮೀಜಿಯನ್ನು ನಿರ್ದೋಷಿ ಎಂದು ಸಾರಿರುವ ಸೆಷನ್ಸ್ ನ್ಯಾಯಾಧೀಶರ ಆದೇಶ ಕಾನೂನಿಗೆ ಸಂಪೂರ್ಣ ವಿರುದ್ಧವಾಗಿದೆ‘ ಎಂದು ವಾದ ಮಂಡಿಸಿದ್ದರು.

ಪ್ರಾಸಿಕ್ಯೂಷನ್ ಪರ ವಕೀಲರು, ’ಸಿಆರ್‌ಪಿಸಿ ಕಲಂ 227ರ, ಅಡಿಯಲ್ಲಿ ಸ್ವಾಮೀಜಿಯ ಅರ್ಜಿಯನ್ನು ಇತ್ಯರ್ಥಗೊಳಿಸುವಾಗ ನ್ಯಾಯಾಧೀಶರು, ಸಿಐಡಿ ನೀಡಿದ ಅಂತಿಮ ವರದಿಯಲ್ಲಿ ಮೇಲ್ನೋಟಕ್ಕೆ ಆರೋಪಿ ವಿರುದ್ಧ ಮಾಡಲಾದ ಆರೋಪಗಳು ನಿಜವೆಂದು ಸಾಬೀತುಪಡಿಸುವ ಅಂಶಗಳು ಲಭ್ಯ ಇವೆಯೇ ಎಂಬುದನ್ನು ಮಾತ್ರ ನೋಡಬೇಕಿತ್ತು. ಆದರೆ, ಈ ಕ್ರಮವನ್ನು ಕೈಬಿಟ್ಟು, ಅವರು ಪ್ರಕರಣದ ’ಕಿರು ವಿಚಾರಣೆ’ (ಮಿನಿ ಟ್ರಯಲ್) ನಡೆಸಿದ್ದಾರೆ. ಸಂತ್ರಸ್ತೆಯ ಹೇಳಿಕೆಯನ್ನು ಕಡೆಗಣಿಸಿ ಪ್ರಾಸಿಕ್ಯೂಷನ್‌ಗೆ ಧಕ್ಕೆಯಾಗುವಂತಹ ತೀರ್ಮಾನ ಪ್ರಕಟಿಸಿದ್ದಾರೆ. ಅತ್ಯಾಚಾರದಂತಹ ಗುರುತರ ಆರೋಪ ಎದುರಿಸುತ್ತಿದ್ದ ಪ್ರತಿಷ್ಠಿತ ಮಠದ ಸ್ವಾಮೀಜಿಯನ್ನು ಪ್ರಕರಣದಿಂದ ಕೈಬಿಡಬಾರದಿತ್ತು‘ ಎಂದು ಪ್ರತಿಪಾದಿಸಿದ್ದರು.

ಪ್ರತಿವಾದ: ಇದಕ್ಕೆ ಪ್ರತಿಯಾಗಿ ಸ್ವಾಮೀಜಿ ಪರ ವಾದಿಸಿದ್ದ ಹಿರಿಯ ವಕೀಲ ಸಿ.ವಿ.ನಾಗೇಶ್, ’ಇದು ಸಂತ್ರಸ್ತೆಯ ಮಗಳು ಸಲ್ಲಿಸಿದ್ದ ದೂರು. ಈ ದೂರಿನ ಆಧಾರದಲ್ಲಿ ಪ್ರಕರಣ ಸೆಷನ್ಸ್ ನ್ಯಾಯಾಲಯದಲ್ಲಿತ್ತು. ಹೀಗಾಗಿ ಇದು ಮೂರನೇ ವ್ಯಕ್ತಿಯಿಂದ ಸಲ್ಲಿಸಲಾದ ದೂರು ಎಂದೇ ಪರಿಗಣಿತವಾಗತಕ್ಕದ್ದು. ಅಂತೆಯೇ, ಸಿಐಡಿಗೆ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ನೇರವಾಗಿ ಸಲ್ಲಿಸುವ ಅಧಿಕಾರವಿಲ್ಲ. ವಿಚಾರಣಾ ನ್ಯಾಯಾಲಯದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವ ಅಧಿಕಾರವನ್ನೂ ಪ್ರಾಸಿಕ್ಯೂಷನ್ ಹೊಂದಿರುವುದಿಲ್ಲ. ಇವೆಲ್ಲಾ ಸಿಆರ್‌ಪಿಸಿ ಅಡಿಯಲ್ಲಿ ಕಾನೂನಿಗೆ ವಿರುದ್ಧವಾದ ಅಂಶಗಳು‘ ಎಂದು ಬಲವಾಗಿ ಪ್ರತಿವಾದ ಮಂಡಿಸಿದ್ದರು.

’ದೂರುದಾರ ಸಂತ್ರಸ್ತೆಗೆ ಸೆಷನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಿ ಹೈಕೋರ್ಟ್‌ಗೆ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಲು ಕಾನೂನಿನ ಅಡಿಯಲ್ಲಿ ಅವಕಾಶವೇ ಇರುವುದಿಲ್ಲ. ಸಿಆರ್‌ಪಿಸಿ ಕಲಂ 301 ಹಾಗೂ 302ರ ಅನುಸಾರ ವಿಚಾರಣೆಯಲ್ಲಿ ಪ್ರಾಸಿಕ್ಯೂಷನ್ ಫಿರ್ಯಾದಿಗೆ ಸಹಕಾರ ನೀಡುತ್ತದೆ. ಅಂತೆಯೇ, ಮ್ಯಾಜಿಸ್ಟ್ರೇಟ್ ಮುಂದೆ ನಡೆಯುವ ಪ್ರಕರಣಗಳಲ್ಲಿ ಪ್ರಾಸಿಕ್ಯೂಷನ್‌ಗೆ ಸಹಾಯ ಮಾಡಲು ವಕೀಲರನ್ನು ನೇಮಿಸಿಕೊಳ್ಳುವ ಅಧಿಕಾರವನ್ನು ಕಲ್ಪಿಸುತ್ತದೆ. ಇದರ ಹೊರತು ಸೆಷನ್ಸ್ ನ್ಯಾಯಾಧೀಶರು ಹೊರಡಿಸುವ ಆದೇಶಗಳನ್ನು ಪ್ರಶ್ನಿಸಿ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸುವ ಅಧಿಕಾರ ನೀಡುವುದಿಲ್ಲ‘ ಎಂದು ನಾಗೇಶ್ ವಿವರಿಸಿದ್ದರು.

ಪ್ರಜಾವಾಣಿ ಫೋನ್-ಇನ್ ಕಾರ್ಯಕ್ರಮ

ಕಾಲ್ ಮಾಡಿ ಸಮಸ್ಯೆ ಹೇಳ್ಕೊಳ್ಳಿ

- ಮೂರನೆ ಅಲೆ ಎದುರಿಸಲು ಸಿದ್ಧತೆ ಏನು?
- ಬೂಸ್ಟರ್ ಡೋಸ್ ಲಸಿಕೆ ಎಲ್ಲರಿಗೂ ಸಿಗುವುದು ಯಾವಾಗ?
- ರಾತ್ರಿ ಕರ್ಫ್ಯೂ, ವಾರಾಂತ್ಯ ಕರ್ಫ್ಯೂ ಅಗತ್ಯ ಇತ್ತೆ?
- ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ, ಔಷಧೋಪಚಾರ ತೊಂದರೆ ಆಗಿದೆಯೇ?
- ವೈದ್ಯಕೀಯ ಕಾಲೇಜುಗಳಲ್ಲಿ ಸಮಸ್ಯೆಗಳಿವೆಯೆ?

ನಿಮ್ಮ ಪ್ರಶ್ನೆಗಳಿಗೆ ಉತ್ತರಿಸಲಿದ್ದಾರೆ **ಡಾ.ಕೆ. ಸುಧಾಕರ್,** ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ

17.01.2022, ಸೋಮವಾರ

ಸಮಯ: ಮಧ್ಯಾಹ್ನ 12ರಿಂದ ಮಧ್ಯಾಹ್ನ 1ರವರೆಗೆ

ದೂರವಾಣಿ ಸಂಖ್ಯೆ **08045557230**

facebook LIVE facebook.com/prajavani.net

ಕೋವಿಡ್: ಪೊಲೀಸರ ಸೂಚನೆ ಕಡೆಗಣಿಸಿ ಭಕ್ತರ ಪಾದಯಾತ್ರೆ

ಇಳಕಲ್ : ಬಾದಾಮಿಯ ಬನಶಂಕರಿ ದೇವಿ ಜಾತ್ರೆಗೆ ಪಾದಯಾತ್ರೆ ಮೂಲಕ ತೆರಳುತ್ತಿದ್ದ ನೂರಾರು ಭಕ್ತರನ್ನು ತಡೆಯಲು ಶನಿವಾರ ಪೊಲೀಸರು ಇಡೀ ದಿನ ಕಷ್ಟಪಟ್ಟರು.

ಪ್ರತಿವರ್ಷ ಇಳಕಲ್‌ದಿಂದ 10ಸಾವಿರಕ್ಕೂ ಅಧಿಕ ಭಕ್ತರು ಬನಶಂಕರಿ ದರ್ಶನಕ್ಕೆ ಹೋಗುತ್ತಿದ್ದರು. ಈಗ ಕೋವಿಡ್ ಕಾರಣ ಪಾದಯಾತ್ರೆಗೆ ನಿರ್ಬಂಧ ಹೇರಿದೆ. ಪೊಲೀಸರು ತಡೆದರೂ ಹೊಲ, ಕಾಲುದಾರಿ ಮೂಲಕ ಸಾಗುತ್ತಿದ್ದುದು ಕಂಡುಬಂದಿತು. ಅಲ್ಲಿಯೂ ತಡೆಯುವ ಪೊಲೀಸರ ಯತ್ನ ಫಲನೀಡಲಿಲ್ಲ.

21ರವರೆಗೆ ಶಾಲೆಗೆ ರಜೆ (ಕಾರವಾರ ವರದಿ): ಕಾರವಾರ ನಗರ, ಹೊನ್ನಾವರ ಪಟ್ಟಣದ ಪ್ರಾಥಮಿಕ ಶಾಲೆಗಳಿಗೆ (1ರಿಂದ 8ನೇ ತರಗತಿ) ಜ.17ರಿಂದ 21ರವರೆಗೆ ರಜೆ ಘೋಷಿಸಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ.

28 ವಿದ್ಯಾರ್ಥಿನಿಯರಿಗೆ ಕೋವಿಡ್ (ಅಂಕೋಲಾ ವರದಿ): ತಾಲ್ಲೂಕಿನಲ್ಲಿ ಶನಿವಾರ 38 ಹೊಸ ಕೋವಿಡ್ ಪ್ರಕರಣಗಳು ದಾಖಲಾಗಿವೆ. ಪಟ್ಟಣದ ಕೆಎಲ್‌ಇ ವಸತಿಗೃಹದ 28 ನರ್ಸಿಂಗ್ ವಿದ್ಯಾರ್ಥಿನಿಯರನ್ನು ಕೋವಿಡ್ ಆರೈಕೆ ಕೇಂದ್ರಕ್ಕೆ ದಾಖಲಿಸಲಾಗಿದೆ. ನರ್ಸಿಂಗ್ ಕಾಲೇಜಿಗೆ ಜ.20ರವರೆಗೆ ರಜೆ ಘೋಷಿಸಲಾಗಿದೆ.

16 ವಿದ್ಯಾರ್ಥಿಗಳಿಗೆ ಕೋವಿಡ್ (ಹುಮನಾಬಾದ್ ಸುದ್ದಿ): ಬೀದರ್ ಜಿಲ್ಲೆಯ ಹುಮನಾಬಾದ್‌ನ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ 16 ವಿದ್ಯಾರ್ಥಿಗಳಿಗೆ ಶನಿವಾರ ಕೋವಿಡ್ ದೃಢಪಟ್ಟಿದೆ.

ರಾಯಚೂರು ಜಿಲ್ಲೆಯ ಮಸ್ಕಿಯ ಅಂಬೇಡ್ಕರ್ ವಸತಿ ಶಾಲೆಯ ಇಬ್ಬರು, ಅಡವಿಭಾವಿಯ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಒಬ್ಬರು ಮತ್ತು ಕವಿತಾಳದ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ ಇಬ್ಬರು ವಿದ್ಯಾರ್ಥಿನಿಯರಿಗೆ ಕೋವಿಡ್ ದೃಢಪಟ್ಟಿದೆ.

ಶಿವಮೊಗ್ಗ ವರದಿ: ಕುವೆಂಪು ವಿಶ್ವವಿದ್ಯಾಲಯದ 20 ವಿದ್ಯಾರ್ಥಿಗಳು ಮತ್ತು ಚಿತ್ರದುರ್ಗದ ಬಿಎಂಸಿಎಚ್ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ 7 ವಿದ್ಯಾರ್ಥಿಗಳಲ್ಲಿ ಕೊರೊನಾ ಸೋಂಕು ದೃಢಪಟ್ಟಿದೆ.

ಪ್ರಿಯಾಂಕ್ ಖರ್ಗೆ, ರುದ್ರೇಗೌಡರಿಗೆ ಕೋವಿಡ್ ದೃಢ

ಕಲಬುರಗಿ: ಶಾಸಕ, ಕೆಪಿಸಿಸಿ ವಕ್ತಾರ ಪ್ರಿಯಾಂಕ್ ಖರ್ಗೆ ಅವರಿಗೆ ಶನಿವಾರ ಕೋವಿಡ್ ದೃಢಪಟ್ಟಿದೆ. ಈ ಬಗ್ಗೆ ಟ್ವೀಟ್ ಮಾಡಿದ್ದು, ‘ಬೆಂಗಳೂರಿನ ನಿವಾಸದಲ್ಲಿ ಹೋಂ ಐಸೋಲೇಷನ್ ಆಗಿದ್ದೇನೆ’ ಎಂದು ತಿಳಿಸಿದ್ದಾರೆ.

ಶಿವಮೊಗ್ಗ ವರದಿ: ವಿಧಾನಪರಿಷತ್ ಸದಸ್ಯ ಎಸ್. ರುದ್ರೇಗೌಡರಿಗೆ ಸೋಂಕು ದೃಢಪಟ್ಟಿದ್ದು, ಕ್ವಾರಂಟೈನ್ ಆಗಿದ್ದಾರೆ. ‘ಆರೋಗ್ಯವಾಗಿದ್ದೇನೆ. ನನ್ನ ಸಂಪರ್ಕಕ್ಕೆ ಬಂದವರು ಪರೀಕ್ಷೆ ಮಾಡಿಸಿಕೊಳ್ಳಿ’ ಎಂದು ತಿಳಿಸಿದ್ದಾರೆ.

ರಾಜ್ಯ ಕೋವಿಡ್ ಅಂಕಿ–ಅಂಶ

31,86,040 ▲ ಒಟ್ಟು ಸೋಂಕಿತರು (31,53,247 ನಿನ್ನೆಯ ವಿವರ)

1,69,850 ▲ ಸಕ್ರಿಯ ಪ್ರಕರಣಗಳು

29,77,743 ▲ ಗುಣಮುಖರಾದವರು

38,418 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	32,793	▲
ಗುಣಮುಖ	4,273	▲
ಸಾವು	7	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

‘ತುರ್ತು ಅಲ್ಲದ ಚಿಕಿತ್ಸೆ ಮುಂದೂಡಿ’

ಬೆಂಗಳೂರು: ಕೋವಿಡ್ ಪ್ರಕರಣ ಹೆಚ್ಚುತ್ತಿರುವ ಕಾರಣ ಹೊರರೋಗಿ ಚಿಕಿತ್ಸೆ, ದಂತ ಚಿಕಿತ್ಸೆ ಸೇರಿದಂತೆ ತುರ್ತು ಅಲ್ಲದ ಚಿಕಿತ್ಸೆಗಳನ್ನು ಮುಂದೂಡಿ ಎಂದು ಆರೋಗ್ಯ ಇಲಾಖೆ ಮನವಿ ಮಾಡಿಕೊಂಡಿದೆ.

ತೀವ್ರ ಅಸ್ವಸ್ಥರು, ತುರ್ತು ಚಿಕಿತ್ಸೆ ಅಗತ್ಯವಿರುವವರು ಆಸ್ಪತ್ರೆಗಳಿಗೆ ಭೇಟಿ ನೀಡಬೇಕು. ಉಳಿದವರು ಎರಡು ವಾರ ಚಿಕಿತ್ಸೆಗಳನ್ನು ಮುಂದೂಡಬೇಕು. ಖಾಸಗಿ ಆಸ್ಪತ್ರೆಗಳು ದಟ್ಟಣೆ ಆಗದಂತೆ ಕ್ರಮವಹಿಸಬೇಕು ಎಂದು ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್ ಸೂಚಿಸಿದ್ದಾರೆ.

SAINIK SCHOOL KODAGU
(Under Ministry of Defence, Govt. of India)
PO Kudige Dist: Kodagu, Karnataka PIN: 571232

Applications are invited for the following post at Sainik School Kodagu and the details are as follows:-

Name of the Post	No. of Posts Type of Post	Age as on 01 APR 2022	Category
PGT (Chemistry)	01 (Regular)	21-40 Years	SC / ST

How to Apply. For detailed Notification including reservation criteria, pay & perks and Application Form, visit School website www.sainikschoolkodagu.edu.in. The School administration reserves the right to cancel the vacancy due to administrative reasons. Last date of receipt of filled in applications is **07 February 2022 (Monday).**

PRINCIPAL

CENTRAL UNIVERSITY OF KARNATAKA
(Established by an Act of the Parliament in 2009)
Kadaganchi, Aland Road, Kalaburagi -585 367.
Phone: (08477) – 226743
Website: www.cuk.ac.in, Email: registrar@cuk.ac.in

NOTIFICATION NO. 27/2022

The University invites applications through online mode from eligible candidates for appointment to the following posts through direct recruitment/deputation basis:

Name of the post	No. of post	Mode of recruitment
Registrar	(01-UR)	Direct recruitment / Deputation Basis
Controller of Examinations	(01-UR)	Direct recruitment / Deputation Basis
Internal Audit Officer	(01-UR)	Deputation Basis

Interested candidates may please visit: www.cuk.ac.in for more details. The last date to receive the application forms completed in all respects is **17.02.2022** up to 5:00 p.m.

Place: Kalaburagi
Date: 11/01/2022

Sd/-
REGISTRAR

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹470
12 ಮೊಟ್ಟೆಗೆ	₹63

ಮೈಸೂರು

100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1330 (1330)
ಸೋಯಾ (ರಿಫೈನ್ಡ್)	₹1205 (1205)
ಸೂರ್ಯಕಾಂತಿ (ರಿಫೈನ್ಡ್)	₹1230 (1235)
ಪಾಮೋಲಿನ್	₹1161 (1162)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	450-500
ನಡುಗೋಲು	550-600
ರಾಶಿ	650-700
ರಾಶಿ ಉತ್ತಮ	800-850
ಜರಡಿ	900-950
ಹೆರಕಿದ್ದು	1100-1200
ಹಸಿರು ಸಾಧಾರಣ	750-800
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1450
ಕಾಳು ಮೆಣಸು	500

ರಾಮನಗರ ರೇಷ್ಮೆ

ಮಿಶ್ರತಳಿ	455-569
ದ್ವಿತಳಿ	400-712

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15500	15700	237 ಸೆಂಟ್ಸ್
ಎಸಿ	---	7000	7000	
ಆರ್‌ಪಿ	---	6900	7100	ಲಂಡನ್
ಆರ್‌ಸಿ	---	3900	3900	2237 ಡಾಲರ್ಸ್

ಮಾರುತಿ ವಾಹನಗಳ ಬೆಲೆ ಶೇ 4.3ರವರೆಗೆ ಹೆಚ್ಚಳ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ತಕ್ಷಣದಿಂದಲೇ ಜಾರಿಗೆ ಬರುವಂತೆ ತನ್ನೆಲ್ಲಾ ಮಾದರಿಗಳ ಬೆಲೆಯನ್ನು ಶೇ 4.3ರವರೆಗೆ ಏರಿಕೆ ಮಾಡಿದೆ.

ತಯಾರಿಕಾ ವೆಚ್ಚ ಹೆಚ್ಚಳವನ್ನು ಸರಿದೂಗಿಸುವ ಸಲುವಾಗಿ ಶೇ 0.1 ರಿಂದ ಶೇ 4.3ರವರೆಗೆ ಬೆಲೆ ಹೆಚ್ಚಿಸುವ ನಿರ್ಧಾರ ಮಾಡಲಾಗಿದೆ ಎಂದು ಕಂಪನಿಯು ಶನಿವಾರ ತಿಳಿಸಿದೆ. ದೆಹಲಿಯಲ್ಲಿ ಎಲ್ಲಾ ಮಾದರಿಗಳ ಎಕ್ಸ್ ಷೋರೂಂ ಬೆಲೆಯು ಸರಾಸರಿ ಶೇ 1.7ರಷ್ಟು ಏರಿಕೆ ಆಗಲಿದೆ. ಹೊಸ ದರವು ಶನಿವಾರದಿಂದಲೇ ಜಾರಿಯಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಕಂಪನಿಯು ಕಳೆದ ವರ್ಷ ಮೂರು ಬಾರಿ ದರ ಏರಿಕೆ ಮಾಡಿದೆ. 2021ರ ಜನವರಿಯಲ್ಲಿ ಶೇ 1.4ರಷ್ಟು, ಏಪ್ರಿಲ್‌ನಲ್ಲಿ ಶೇ 1.6ರಷ್ಟು ಮತ್ತು ಸೆಪ್ಟೆಂಬರ್‌ನಲ್ಲಿ ಶೇ 1.9ರಷ್ಟು ಬೆಲೆ ಹೆಚ್ಚಿಸಿದೆ. ಇದರಿಂದಾಗಿ 2021ರಲ್ಲಿ ಒಟ್ಟಾರೆ ಬೆಲೆ ಹೆಚ್ಚಳವು ಶೇ 4.9ರಷ್ಟಾಗಿದೆ.

ಉಕ್ಕು, ಅಲ್ಯುಮಿನಿಯಂ, ತಾಮ್ರ, ಪ್ಲಾಸ್ಟಿಕ್ ಮತ್ತು ಇತರೆ ಲೋಹಗಳನ್ನೂ ಒಳಗೊಂಡು ಅಗತ್ಯ ವಸ್ತುಗಳ ಬೆಲೆಯು ಒಂದು ವರ್ಷದಿಂದಲೂ ಏರಿಕೆ ಆಗುತ್ತಿದೆ. ಹೀಗಾಗಿ ಬೆಲೆ ಏರಿಕೆ ಮಾಡುವ ಅನಿವಾರ್ಯತೆ ಎದುರಾಗಿದೆ ಎಂದು ಕಂಪನಿಯು ಡಿಸೆಂಬರ್‌ನಲ್ಲಿ ಹೇಳಿತ್ತು.

ಪರಿಸರ ಸ್ನೇಹಿ ವಾಹನ ಬಳಕೆ ಉತ್ತೇಜಿಸಲು ಕ್ರಮ

ಇ.ವಿ. ಚಾರ್ಜಿಂಗ್ ಕೇಂದ್ರ ಸ್ಥಾಪನೆ ನಿಯಮ ಸಡಿಲ

ನವದೆಹಲಿ (ಪಿಟಿಐ): ದೇಶದಲ್ಲಿ ವಿದ್ಯುತ್ ಚಾಲಿತ ವಾಹನಗಳಿಗೆ (ಇ.ವಿ.) ಚಾರ್ಜಿಂಗ್ ಮೂಲಸೌಕರ್ಯ ಕಲ್ಪಿಸಲು ಅನುಕೂಲ ಆಗುವಂತೆ ಇಂಧನ ಸಚಿವಾಲಯವು ನಿಯಮಗಳಲ್ಲಿ ಬದಲಾವಣೆ ತಂದಿದೆ.

ಪರಿಷ್ಕೃತ ಮಾರ್ಗಸೂಚಿಯ ಪ್ರಕಾರ, ಇ.ವಿ. ಹೊಂದಿರುವವರು ತಮ್ಮ ಮನೆ ಅಥವಾ ಕಚೇರಿಯಲ್ಲಿ ಹಾಲಿ ಇರುವ ವಿದ್ಯುತ್ ಸಂಪರ್ಕವನ್ನೇ ಬಳಸಿಕೊಂಡು ವಾಹನವನ್ನು ಚಾರ್ಜ್ ಮಾಡಬಹುದು. ಪರವಾನಗಿ ಇಲ್ಲದಿದ್ದರೂ ಚಾರ್ಜಿಂಗ್ ಮೂಲಸೌಕರ್ಯ ಸ್ಥಾಪನೆಗೆ ಅವಕಾಶ ಕಲ್ಪಿಸಲಾಗಿದೆ.

ಯಾವುದೇ ವ್ಯಕ್ತಿ/ಸಂಸ್ಥೆಯು ಪರವಾನಗಿ ಇಲ್ಲದೇ ಸಾರ್ವಜನಿಕ ಬಳಕೆಗೆ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಬಹುದು. ಆದರೆ ಅಂತಹ ಕೇಂದ್ರಗಳು ತಾಂತ್ರಿಕ, ಸುರಕ್ಷತೆ ಮತ್ತು ಕಾರ್ಯಕ್ಷಮತೆಯ ಗುಣಮಟ್ಟ ಮತ್ತು ನಿಯಮಗಳನ್ನು ಅನುಸರಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಮನೆ ಬಳಕೆಗೆ ಪಾವತಿಸುವ ವಿದ್ಯುತ್ ಶುಲ್ಕವೇ ವಾಹನವನ್ನು ಚಾರ್ಜ್ ಮಾಡುವುದಕ್ಕೂ ಅನ್ವಯವಾಗಲಿದೆ.

ಸರ್ಕಾರ/ಸಾರ್ವಜನಿಕ ಸಂಸ್ಥೆಗಳ ಬಳಿ ಲಭ್ಯವಿರುವ ಜಾಗವನ್ನು ಚಾರ್ಜಿಂಗ್ ಕೇಂದ್ರ ಸ್ಥಾಪನೆಗೆ ಆದಾಯ ಹಂಚಿಕೆಯ ಆಧಾರದ ಮೇಲೆ ನೀಡಬಹುದು. ಚಾರ್ಜಿಂಗ್ ಕೇಂದ್ರ ಸ್ಥಾಪಿಸುವ ಕಂಪನಿಯು ಜಾಗದ ಮಾಲೀಕರಿಗೆ ಪ್ರತಿ ಕಿಲೋವಾಟ್‌ಗೆ ₹ 1 ರಂತೆ ಮೂರು ತಿಂಗಳಿಗೊಮ್ಮೆ ಹಣವನ್ನು ಪಾವತಿಸಬೇಕು. ಆದಾಯ ಹಂಚಿಕೆ ಒಪ್ಪಂದವನ್ನು ಆರಂಭಿಕ ಹಂತದಲ್ಲಿ 10 ವರ್ಷಗಳ ಅವಧಿಗೆ ಮಾಡಿಕೊಳ್ಳಬಹುದು.

ಇಂತಹ ಚಾರ್ಜಿಂಗ್ ಕೇಂದ್ರಗಳಿಗೆ ಮಹಾ ನಗರಗಳಲ್ಲಿ ಏಳು ದಿನಗಳಲ್ಲಿ, ಇತರ ನಗರ ಸ್ಥಳೀಯಾಡಳಿತ ಸಂಸ್ಥೆ ವ್ಯಾಪ್ತಿಯಲ್ಲಿ ಹದಿನೈದು ದಿನಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಮೂವತ್ತು ದಿನಗಳಲ್ಲಿ ವಿದ್ಯುತ್ ಸಂಪರ್ಕವನ್ನು ಒದಗಿಸಲಾಗುತ್ತದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು | Log on to : https://homages.deccanherald.com or Scan QR code to access booking form

ಎಚ್‌ಡಿಎಫ್‌ಸಿ ಬ್ಯಾಂಕ್ ಲಾಭ ಶೇ 18ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಖಾಸಗಿ ವಲಯದ ಎಚ್‌ಡಿಎಫ್‌ಸಿ ಬ್ಯಾಂಕ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ₹ 10,342 ಕೋಟಿಗಳಷ್ಟಾಗಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಆಗಿದ್ದ ₹ 8,758 ಕೋಟಿಗೆ ಹೋಲಿಸಿದರೆ ಈ ಬಾರಿ ಲಾಭದಲ್ಲಿ ಶೇ 18.1ರಷ್ಟು ಏರಿಕೆ ಕಂಡುಬಂದಿದೆ.

ವರಮಾನವು ₹ 37,522 ಕೋಟಿಗಳಿಂದ ₹ 40,651 ಕೋಟಿಗಳಿಗೆ ಏರಿಕೆ ಆಗಿದೆ ಎಂದು ಷೇರುಪೇಟೆಗೆ ಶನಿವಾರ ಮಾಹಿತಿ ನೀಡಿದೆ. ಬಡ್ಡಿಯೇತರ ವರಮಾನವು ಶೇ 31ರಷ್ಟು ಹೆಚ್ಚಾಗಿದ್ದು ₹ 8,181 ಕೋಟಿಗಳಿಗೆ ತಲುಪಿದೆ. ನಿವ್ವಳ ಬಡ್ಡಿ ವರಮಾನವು ಶೇ 13ರಷ್ಟು ಹೆಚ್ಚಾಗಿದ್ದು ₹ 16,317 ಕೋಟಿಗಳಷ್ಟಾಗಿದೆ.

ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣವು ಶೇ 0.81 ರಿಂದ ಶೇ 1.26ಕ್ಕೆ ಏರಿಕೆ ಆಗಿದೆ. ನಿವ್ವಳ ಎನ್‌ಪಿಎ ಶೇ 0.09ರಿಂದ ಶೇ 0.37ಕ್ಕೆ ಏರಿಕೆ ಆಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233

Jerry : 9731810277 | Ravichandra : 9901641752

Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

IN FOND REMEMBRANCE

8th Death Anniversary

H.KARIYAPPA, B.E

(Electronics)

Addnl. Gen Manager (Rtd) BEL

Founder Trustee & Chairman of Triveni Group of Educational Institutions, Bangalore

Ex. President of BEL Employees House Building Co-operative Society.

Left for Heavenly abode on 16-01-2014

"Time may pass, but you will remain in our hearts. We stand for fulfilling your dreams"

By: B. Savithramma (Wife), Monika (Daughter), Manjunath (Son) & family Members

ಮುಂಬೈ ಧಾರಣೆ

ಶೇಂಗಾ

15-1-2022

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10450-10500
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	9000-9050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1340 (1340)
ಒಂದು ವಾರದ ಡೆಲಿವರಿ	1335 (1335)
ಸೋಯಾ ಕಚ್ಚಾ	1142 (1150)
ಪಾಮ್ ವಾರದ ಡೆಲಿವರಿ	1159 (1160)
ಸೂರ್ಯಕಾಂತಿ ಎಣ್ಣೆ ಕಚ್ಚಾ	1175 (1175)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,850 (47,975)
ಬೆಳ್ಳಿ ಕೆ.ಜಿ	61,500 (61,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಂಕ್ಷಿಪ್ತ ಸುದ್ದಿ

ಜಿಎಐಎಲ್ ನಿರ್ದೇಶಕ ವಿರುದ್ಧ ಪ್ರಕರಣ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರಿ ಸ್ವಾಮ್ಯದ 'ಜಿಎಐಎಲ್' ಕಂಪನಿಯ ನಿರ್ದೇಶಕ (ಮಾರ್ಕೆಟಿಂಗ್) ಇ.ಎಸ್. ರಂಗನಾಥನ್ ಮತ್ತು ಇತರರ ವಿರುದ್ಧ ಲಂಚ ಆರೋಪಕ್ಕೆ ಸಂಬಂಧಿಸಿದಂತೆ ಸಿಬಿಐ ಪ್ರಕರಣ ದಾಖಲಿಸಿದೆ.

ಪ್ರಕರಣ ದಾಖಲಿಸಿದ ಬೆನ್ನಲ್ಲೇ ಸಿಬಿಐ ತಂಡಗಳು ರಂಗನಾಥನ್ ಅವರ ನಿವಾಸ ಸೇರಿದಂತೆ ದೆಹಲಿ ಎನ್‌ಸಿಆರ್ ವ್ಯಾಪ್ತಿಯ ಹಲವು ಸ್ಥಳಗಳಲ್ಲಿ ಶೋಧ ನಡೆಸಿವೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

'ಅನುಮತಿಯಿಲ್ಲದೆ ಕುಲಪತಿಗಳ ನೇಮಕ'

ಕೋಲ್ಕತ್ತ (ಪಿಟಿಐ): ಕುಲಾಧಿಪತಿಯಾಗಿರುವ ತಮ್ಮ ಅನುಮತಿಯಿಲ್ಲದೆ ರಾಜ್ಯದ 25 ವಿಶ್ವವಿದ್ಯಾಲಯಗಳ ಕುಲಪತಿಗಳನ್ನು ನೇಮಕ ಮಾಡಲಾಗಿದೆ ಎಂದು ಪಶ್ಚಿಮ ಬಂಗಾಳದ ರಾಜ್ಯಪಾಲ ಜಗದೀಪ್ ಧನಕರ್ ಶನಿವಾರ ಆರೋಪಿಸಿದ್ದಾರೆ.

ಡೈಮಂಡ್ ಹಾರ್ಬರ್ ಮಹಿಳಾ ವಿಶ್ವವಿದ್ಯಾಲಯಕ್ಕೆ ನೂತನ ಕುಲಪತಿಯಾಗಿ ಪ್ರೊ.ಸೋಮ ಬಂಡೋಪಾಧ್ಯಾಯ ಅವರನ್ನು ಮಮತಾ ಬ್ಯಾನರ್ಜಿ ನೇಮಿಸಿದ 24 ಗಂಟೆಯಲ್ಲಿ ರಾಜ್ಯಪಾಲರು ಈ ಆರೋಪ ಮಾಡಿದ್ದಾರೆ.

ಇದಕ್ಕೂ ಮುನ್ನ ದಿನಕರ್ ಅವರು ವಿಶ್ವವಿದ್ಯಾಲಯಕ್ಕೆ ಅಲ್ಲಿನ ಕಲಾ ವಿಭಾಗದ ಡೀನ್ ಆಗಿದ್ದ ಪ್ರೊ. ತಾಪಸ್ ಮೊಂಡಾಲ್ ಅವರನ್ನು ಕುಲಪತಿಯಾಗಿ ನೇಮಿಸಿದ್ದರು. ಆದರೆ ವೈಯಕ್ತಿಕ ಕಾರಣಗಳಿಂದ ತಾಪಸ್ ಹುದ್ದೆ ನಿರಾಕರಿಸಿದ್ದರು.

ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ತನ್ನ ನಿರ್ಧಾರ ಸಮರ್ಥಿಸಿಕೊಂಡಿದೆ. ಶೋಧನಾ ಸಮಿತಿಯಿಂದ ಆಯ್ಕೆಯಾದ ಕುಲಪತಿಗಳ ಹೆಸರನ್ನು ರಾಜ್ಯಪಾಲರು ಅನುಮೋದಿಸಬೇಕಾಗಿತ್ತು, ಅವರು ನಿರಾಕರಿಸಿದರೆ ಶಿಕ್ಷಣ ಇಲಾಖೆ ತನ್ನ ನಿರ್ಧಾರದ ಮೂಲಕ ಮುಂದುವರೆಯುವ ಅಧಿಕಾರ ಹೊಂದಿದೆ ಎಂದು ಪ್ರತಿಪಾದಿಸಿದೆ.

ಜಲ್ಲಿಕಟ್ಟು

ಪೊಂಗಲ್ ಹಬ್ಬದ ಪ್ರಯುಕ್ತ ತಮಿಳುನಾಡಿನ ತಿರುಚಿರಾಪಳ್ಳಿಯಲ್ಲಿ ಶನಿವಾರ ನಡೆದ ಜಲ್ಲಿಕಟ್ಟು ಕ್ರೀಡೆಯ ವೇಳೆ ಹೋರಿಯನ್ನು ಹಿಡಿಯಲು ಯುವಕರು ಪ್ರಯತ್ನಿಸಿದರು –ಪಿಟಿಐ ಚಿತ್ರ

'ಮೃತಪಟ್ಟವ 'ಹೆಲ್ಪರ್' ಎಂಬ ಕಾರಣಕ್ಕೆ ವಿಮಾ ರಕ್ಷಣೆಯಿಂದ ವಂಚಿಸುವಂತಿಲ್ಲ'

ನವದೆಹಲಿ (ಪಿಟಿಐ): 'ಹೆಲ್ಪರ್' ಆಗಿ ಕೆಲಸ ಮಾಡುತ್ತಿರುವ ವ್ಯಕ್ತಿಗೆ ವಿಮಾ ರಕ್ಷಣೆಯನ್ನು ನಿರಾಕರಿಸಿದ ರಾಜಸ್ಥಾನ ಹೈಕೋರ್ಟ್ ತೀರ್ಪು ನ್ಯಾಯಸಮ್ಮತವಲ್ಲ ಎಂದು ಅಭಿಪ್ರಾಯಪಟ್ಟಿರುವ ಸುಪ್ರೀಂ ಕೋರ್ಟ್, ಹೈಕೋರ್ಟ್ ತೀರ್ಪನ್ನು ಬದಿಗಿರಿಸಿದೆ.

ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತಾ ಮತ್ತು ವಿ.ರಾಮಸುಬ್ರಮಣಿಯನ್ ಅವರ ಪೀಠವು 'ಹೆಲ್ಪರ್' ಮತ್ತು 'ಕ್ಲೀನರ್' ಕರ್ತವ್ಯಗಳ ಬಗ್ಗೆ ಸ್ಪಷ್ಟವಾದ ಗಡಿರೇಖೆಯಿಲ್ಲ ಎಂದು ಹೇಳಿದೆ.

ಪ್ರಕರಣದ ವಿವರ: ಕೊಳವೆ ಬಾವಿ ಕೊರೆಯುವ ವಾಹನದಲ್ಲಿ 'ಹೆಲ್ಪರ್' ಆಗಿದ್ದ ತೇಜ್ ಸಿಂಗ್ ಎಂಬುವವರು, ಬಾವಿಯ ಮಣ್ಣಿನ ಕುಸಿತದ ಸಂದರ್ಭದಲ್ಲಿ ಮೃತಪಟ್ಟಿದ್ದರು. ಈ ಪ್ರಕರಣದಲ್ಲಿ ಪರಿಹಾರಕ್ಕೆ ಸಂಬಂಧಿಸಿದಂತೆ ದಾಖಲಾದ ಅರ್ಜಿಯ ವಿಚಾರಣೆ ನಡೆಸಿದ ಕಾರ್ಮಿಕರ ಆಯುಕ್ತರು, ₹3,27,555 ಪರಿಹಾರ ಹಾಗೂ ಅಂತ್ಯ ಸಂಸ್ಕಾರದ ವೆಚ್ಚವಾಗಿ ₹2,500 ಪಾವತಿಸುವಂತೆ ಆದೇಶಿಸಿದರು. ಅಪಘಾತದ ದಿನಾಂಕದಿಂದ ಶೇ 18ರಷ್ಟು ಬಡ್ಡಿಯನ್ನು ಮೃತರ ಕಾನೂನು ಬದ್ಧ ವಾರಸುದಾರರಿಗೆ ನೀಡುವಂತೆ ಆದೇಶಿಸಲಾಗಿತ್ತು. ಇದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ ವಿಮಾ ಕಂಪನಿಯು ಅಪಘಾತದಲ್ಲಿ ಮೃತಪಟ್ಟವರು 'ಹೆಲ್ಪರ್' ಆಗಿದ್ದಾರೆ, ಆದರೆ ವಿಮಾ ರಕ್ಷಣೆ ಇರುವುದು 'ಕ್ಲೀನರ್'ಗೆ ಎಂದು ವಾದಿಸಿತ್ತು. ಕಂಪನಿಯ ವಾದವನ್ನು ಹೈಕೋರ್ಟ್ ಎತ್ತಿ ಹಿಡಿದಿತ್ತು.

ಅರಣ್ಯ ಜಮೀನು ಬಳಕೆಗೆ ಪರಿಸರಾಸಕ್ತರ ವಿರೋಧ

'ಜೋಗದಲ್ಲಿ ಪಂಚತಾರಾ ಹೋಟೆಲ್: ಮರು ಪರಿಶೀಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೋಗ ಜಲಪಾತದ ಬಳಿಯ ಅರಣ್ಯ ಜಮೀನಿನಲ್ಲಿ ಪಂಚತಾರಾ ಹೋಟೆಲ್ ನಿರ್ಮಿಸುವ ಯೋಜನೆಗೆ ಅರಣ್ಯ ಇಲಾಖೆಯ ಅನುಮತಿ ಕೋರಿರುವ ಪ್ರಸ್ತಾವವನ್ನು ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮರುಪರಿಶೀಲನೆಗಾಗಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ರವಾನಿಸಿದ್ದಾರೆ.

ಇನ್ನೊಂದೆಡೆ ರಾಷ್ಟ್ರೀಯ ಮತ್ತು ರಾಜ್ಯ ವನ್ಯಜೀವಿ ಮಂಡಳಿಗಳ ಒಪ್ಪಿಗೆಯನ್ನೂ ಪಡೆಯುವಂತೆ ಸೂಚಿಸಲಾಗಿದೆ.

ಸಾಗರ ತಾಲ್ಲೂಕಿನ ನಡವಾಡ ತಲಕಳಲೆ ಗ್ರಾಮದ ಸರ್ವೆ ನಂಬರ್ 151ರಲ್ಲಿ 0.8536 ಹೆಕ್ಟೇರ್ ಅರಣ್ಯ ಜಮೀನಿನಲ್ಲಿ ₹ 116 ಕೋಟಿ ವೆಚ್ಚದಲ್ಲಿ ಪಂಚತಾರಾ ಹೋಟೆಲ್ ಮತ್ತು ರೋಪ್ ವೇ ನಿರ್ಮಿಸುವ ಪ್ರಸ್ತಾವಕ್ಕೆ ಜನವರಿ 6ರಂದು ನಡೆದ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಯೋಜನೆ ಜಾರಿಗೆ ಮತ್ತೆ ಪ್ರಯತ್ನ ಆರಂಭ ಆಗಿರುವುದನ್ನು ಅರಿತಿದ್ದ ಪರಿಸರವಾದಿ ಗಿರಿಧರ್ ಕುಲಕರ್ಣಿ, ಕೇಂದ್ರ ಮತ್ತು ರಾಜ್ಯಗಳ ಪರಿಸರ ಮತ್ತು ಅರಣ್ಯ ಇಲಾಖೆಗಳಿಗೆ ತಕರಾರು ಸಲ್ಲಿಸಿದ್ದರು.

ಗಿರಿಧರ್ ಅವರ ದೂರನ್ನು ಆಧರಿಸಿ ರಾಜ್ಯದ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ (ಪಿಸಿಸಿಎಫ್) 2021ರ ಆಗಸ್ಟ್ 9ರಂದು ಪತ್ರ ಬರೆದಿದ್ದ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯ, ಪರಿಸರ ಮತ್ತು ಅರಣ್ಯ ಸಂರಕ್ಷಣಾ ಕಾಯ್ದೆಗಳ ಅಡಿಯಲ್ಲಿ ನಿಯಮಾನುಸಾರ ಒಪ್ಪಿಗೆ ಪಡೆಯಲು ಪ್ರಸ್ತಾವ ಸಲ್ಲಿಸುವಂತೆ ಸೂಚಿಸಿತ್ತು.

ಈ ಬೆಳವಣಿಗೆಯ ಬಳಿಕ ಅರಣ್ಯ ಜಮೀನನ್ನು ಅನ್ಯ ಉದ್ದೇಶಕ್ಕೆ ಬಳಸಲು ಅನುಮತಿ ಕೋರಿದ್ದ ಪ್ರಸ್ತಾವದ ಕುರಿತು ಮರುಪರಿಶೀಲನೆ ನಡೆಸಿ ವರದಿ ನೀಡುವಂತೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸೆಪ್ಟೆಂಬರ್ 24ರಂದು ಪಿಸಿಸಿಎಫ್‌ಗೆ ಪತ್ರ ಬರೆದಿದ್ದರು. 2021ರ ಅಕ್ಟೋಬರ್ 4ರಂದು ಶಿವಮೊಗ್ಗ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಸಾಗರ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಪತ್ರ ಬರೆದಿರುವ ಪಿಸಿಸಿಎಫ್, ಆಕ್ಷೇಪಣೆಯಲ್ಲಿರುವ ಅಂಶಗಳನ್ನು ನಿಯಮಾನುಸಾರ ಪರಿಶೀಲಿಸಿ ವರದಿ ನೀಡುವಂತೆ ಸೂಚಿಸಿದ್ದಾರೆ.

ವನ್ಯಜೀವಿ ಮಂಡಳಿ ಒಪ್ಪಿಗೆಯೂ ಬೇಕು: 'ಪಂಚತಾರಾ ಹೋಟೆಲ್ ನಿರ್ಮಿಸಲು ಗುರುತಿಸಿರುವ ಜಮೀನು ಜೋಗ ರಾಜ್ಯ ಅರಣ್ಯ ಪ್ರದೇಶದಲ್ಲಿದೆ. ಅದು ಶರಾವತಿ ಸಿಂಗಳೀಕ ವನ್ಯಧಾಮದ ಗಡಿಯಿಂದ 27 ಕಿ.ಮೀ. ದೂರದಲ್ಲಿದೆ. ಆದ್ದರಿಂದ ಯೋಜನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ಮತ್ತು ರಾಜ್ಯ ವನ್ಯಜೀವಿ ಮಂಡಳಿಯ ಒಪ್ಪಿಗೆ ಅಗತ್ಯ' ಎಂದು ಗಿರಿಧರ್ ರಾಜ್ಯದ ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಪ್ರತ್ಯೇಕ ಆಕ್ಷೇಪಣೆ ಸಲ್ಲಿಸಿದ್ದರು.

ಈ ಆಕ್ಷೇಪಣೆಯನ್ನೂ ಪುರಸ್ಕರಿಸಿರುವ ಮುಖ್ಯ ವನ್ಯಜೀವಿ ಪರಿಪಾಲಕರು, 'ಹೋಟೆಲ್ ನಿರ್ಮಾಣಕ್ಕೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ಮತ್ತು ರಾಜ್ಯ ವನ್ಯಜೀವಿ ಮಂಡಳಿಗಳ ಅನುಮೋದನೆ ಪಡೆಯಲು ಅರ್ಜಿ ಸಲ್ಲಿಸುವಂತೆ ಉಪಯೋಗಿ ಸಂಸ್ಥೆಗೆ (ಪ್ರವಾಸೋದ್ಯಮ ಇಲಾಖೆ) ಸೂಚಿಸಿ' ಎಂದು 2021ರ ಅಕ್ಟೋಬರ್ 29ರಂದು ಶಿವಮೊಗ್ಗ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಬರೆದ ಪತ್ರದಲ್ಲಿ ನಿರ್ದೇಶನ ನೀಡಿದ್ದಾರೆ.

2014ರಲ್ಲೇ ತಿರಸ್ಕೃತಗೊಂಡಿದ್ದ ಯೋಜನೆ

ಸಾಗರ ತಾಲ್ಲೂಕಿನ ನಡವಾಡ ತಲಕಳಲೆ ಗ್ರಾಮದ ಸರ್ವೆ ನಂಬರ್ 151ರಲ್ಲಿನ 0.4046 ಹೆಕ್ಟೇರ್ ಅರಣ್ಯ ಜಮೀನನ್ನು ಪಂಚತಾರಾ ಹೋಟೆಲ್ ನಿರ್ಮಾಣಕ್ಕೆ ಬಳಸುವ ಪ್ರಸ್ತಾವವನ್ನು 2014ರ ಡಿಸೆಂಬರ್ 19ರಂದೇ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯ ತಿರಸ್ಕರಿಸಿತ್ತು.

ಪ್ರಸ್ತಾವ ತಿರಸ್ಕರಿಸಿದ್ದ ಆದೇಶವನ್ನು ಆಕ್ಷೇಪಣೆ ಜೊತೆಗೆ ಲಗತ್ತಿಸಿರುವ ಗಿರಿಧರ್ ಕುಲಕರ್ಣಿ, ಈಗ ಅದೇ ಸರ್ವೆ ನಂಬರ್‌ನಲ್ಲಿ 0.8536 ಹೆಕ್ಟೇರ್ ಅರಣ್ಯ ಜಮೀನನ್ನು ಬಳಸಲು ಅನುಮತಿ ಕೋರಿರುವ ಪ್ರಸ್ತಾವವನ್ನೂ ತಿರಸ್ಕರಿಸುವಂತೆ ಆಗ್ರಹಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

ವ್ಯಾಪಾರ

Business Offers

Business For Sale

ಹಾಲಿ ಪ್ರಾವಿಷನ್ ಸ್ಟೋರ್ ಮಾರಾಟಕ್ಕಿದೆ. ಬೆಂಗಳೂರಿನ ಶ್ರೀ ರಾಮಾಂಜನೇಯ ಮುಖ್ಯರಸ್ತೆ, ಹನುಮಂತನಗರ, ಬೆಲೆ ರೂ. 3,20,000. ಸಂಪರ್ಕಿಸಿ : 9008151027

Machinery & Tools

Leading Gear Box Mfrs. Company

JOB ORDER REQUIRED

Steel casting foundry with 1kg to 200kg capacity WCB-MS-SSpre machining WMC turning HMC all conversion hardening grinding, with assembling facility is inviting job orders

Contact

97886 20747

94430 17339

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್, ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಭವಿಷ್ಯ

Astrology

★॥ಶ್ರೀಹುಲಿಗೆಮ್ಮ ಚೌಡೇಶ್ವರಿದೇವಿ॥★ ಆರಾಧನೆಯಿಂದ ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ, ಸಾಲದಬಾಧೆ,ಶತ್ರುನಾಶ ಇನ್ನಯಾವುದೇ ಘೋರ,ನಿಗೂಢ ಗುಪ್ತ,ಕಠಿಣ ಸಮಸ್ಯೆಗಳಿದ್ದರೂ 24ಗಂಟೆಗಳಲ್ಲಿ ಶಾಶ್ವತಪರಿಹಾರ. ವಶಿಕರಣ ಸ್ಪೆಷಲಿಸ್ಟ್ ಶ್ರೀದೇವಿಭಟ್ 9606735267

★ಅಂಬಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

ಜನ್ಮಾಂತರ ಸಮ್ಮೋಹಿನಿ ಚಿಕಿತ್ಸೆ: ಎಲ್ಲಾ ರೀತಿಯ ದೈಹಿಕ, ಮಾನಸಿಕ ಕಾಯಿಲೆಗಳು, ನಿಮ್ಮೆಲ್ಲಾ ರೀತಿಯ ಪರಿಹಾರವಾಗದ ಸಮಸ್ಯೆಗಳು, ಜನ್ಮಜನ್ಮಾಂತರ ದೋಷಗಳ ನಿವಾರಣೆಗೆ ಕೂಡಲೇ ಸಂಪರ್ಕಿಸಿ: 7676750280

ಸ್ತ್ರೀವಶೀಕರಣ, ಪುರುಷ ವಶೀಕರಣ, ಪ್ರೀತಿ ಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11 ಗಂಟೆಗಳಲ್ಲಿ, ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ 9845544363 .

★॥ಶ್ರೀಆದಿಶಕ್ತಿಕಾಳಿಕಾದೇವಿ॥★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್ ಕಚೇರಿ, ಸಾಲಬಾಧೆ, ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತ ಪರಿಹಾರ. 9591588881

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಶ್ರೀ ಲಕ್ಷ್ಮಿ ಗಣಪತಿ ಜ್ಯೋತಿಷ್ಯ ಮಂದಿರ ನಿಮ್ಮೆಲ್ಲಾ ಸರ್ವ ಸಮಸ್ಯೆಗಳಿಗೆ 2ದಿನದಲ್ಲಿ ಫೋನಿನ ಮೂಲಕ ಪರಿಹಾರ ಲಕ್ಷ್ಮಿಕಾಂತ ಭಟ್7760909072 ಗಾಣಗಾಪುರ

ಉದ್ಯೋಗಾವಕಾಶ

Wanted

ಅಂಬಿ 1 ನ್ಯೂಸ್

ಬೇಕಾಗಿದ್ದಾರೆ: •ಪತ್ರಿಕೋದ್ಯಮದ ಪದವಿ •ಕನ್ನಡ ಟೈಪಿಂಗ್. ಡಿ.ಟಿ.ಪಿ •ವಿಡಿಯೋ ಎಡಿಟಿಂಗ್ •ಮ್ಯಾನೇಜರ್ (ವ್ಯವಸ್ಥಾಪಕರು) •ವಿಡಿಯೋ ಕ್ಯಾಮರಮೆನ್ •ನಿರೂಪಕಿಯರು •ಡ್ರೈವರ್‌ಗಳು

ಕರ್ನಾಟಕ ರಾಜ್ಯದ ಎಲ್ಲಾ ಮಹಾನಗರ ಮತ್ತು ಜಿಲ್ಲೆಗಳಲ್ಲಿ ಮತ್ತು ತಾಲ್ಲೂಕುಗಳಲ್ಲಿ ವರದಿಗಾರರು ಬೇಕಾಗಿದ್ದಾರೆ

60/41 ನೇ ಮಹಡಿ ಪದ್ಮ ಗುಂಡಪ್ಪ ಕಾಂಪ್ಲೆಕ್ಸ್, ಮರಿಯಪ್ಪನ ಪಾಳ್ಯ, ಜ್ಞಾನಭಾರತಿ ಪೋಸ್ಟ್, ಬೆಂಗಳೂರು–560056

E-mail: prabhudevask51@gmal.com www.ambi1news.com

Mob: 9900682009, 9740436972, 6362343916

REQUIRED, TEAM Leader & Field executive For Banking Loan Collections. 8951450742, 7019700755, 080 - 41155671.

Teachers/ Professors

ಸುವರ್ಣಮುಖಿ ಸಂಸ್ಕೃತಿಧಾಮ, ವಡೇರಹಳ್ಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಸುವರ್ಣಮುಖಿ ಹಿರಿಯ ಪ್ರಾಥಮಿಕ ಪ್ರೌಢ ವಸತಿಶಾಲೆಗೆ (ಅನುದಾನ ರಹಿತ) ಕೆಳಕಂಡ ಅನುಭವಿ ಶಿಕ್ಷಕರು ಬೇಕಾಗಿದ್ದಾರೆ: 1. ಇಂಗ್ಲೀಷ್ ಶಿಕ್ಷಕರು (ಮೇಜರ್ ಇಂಗ್ಲೀಷ್,ಬಿಎಡ್) 2. ವಿಜ್ಞಾನ ಶಿಕ್ಷಕರು: (ಪಿಸಿಎಂ,ಬಿಎಡ್) 3.ಸಂಸ್ಕೃತ ವಿದ್ವಾನ್. 4. ಅನುಭವಿ ಅಕೌಂಟೆಂಟ್ (Income Tax Filing ನಲ್ಲಿ ಅನುಭವವುಳ್ಳವರು) 5. ಅನುಭವಿ ಅಡುಗೆಯವರು.ಸಂಬಳ, ಇಲ್ಲೇ ಉಳಿದುಕೊಳ್ಳುವವರಿಗೆ (ಸಿಂಗಲ್), ಊಟ,ವಸತಿ ಕೊಡಲಾಗುವುದು. ಕೆಲಸಕ್ಕೆ ಸೇರಲು ಇಚ್ಛಿಸುವವರು ಕೆಳಕಂಡ ವಿಳಾಸಕ್ಕೆ ತಮ್ಮ ಬಯೋಡೇಟಾವನ್ನು ಕಳಿಸಬಹುದು. Email: suvarnamukhisamskritidhama@gmail.com ಮಾಹಿತಿಗಾಗಿ ಸಂಪರ್ಕಿಸಿ: ಚಂದ್ರಶೇಖರ್: 9972970502. ಮಹದೇವಯ್ಯ: 9886128699.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Cook

ಅಡುಗೆಯವರು ಬೇಕಾಗಿದ್ದಾರೆ. ಮನೆಗೆ, ದಕ್ಷಿಣ ಭಾರತದ ಅಡುಗೆ ಪುರುಷರು ಮಾತ್ರ. ಕನ್ನಡ ಭಾಷೆ, ಸ್ಥಳ ತಾತಗುಣಿ, ಬೆಂಗಳೂರು ದಕ್ಷಿಣ ಸಂಬಳ : 20,000/- ತಿಂಗಳಿಗೆ ಮೊ. 9606956502

General

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಆಫೀಸ್‌ಗಳಿಗೆ 7th,SSLC,PUC, ಡಿಗ್ರಿಯಾದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ ESI/PF ನೊಂದಿಗೆ 16,800-32000/- 9742260055, 9538133533

ಪ್ರವಾಸ

Travel

21-1-2022 ಕಾಶಿ, ಗಯಾ, ಅಯೋಧ್ಯ 8ದಿನ. 2-2-2022 ಕಾಶಿ, ಆಗ್ರ, ದೆಹಲಿ 13ದಿನ. 25-3-2022 ಗ್ಯಾಂಗ್ಟಾಕ್, ಡಾರ್ಜಿಲಿಂಗ್, ಕಲ್ಕತ್ತಾ, ಭುವನೇಶ್ವರ 12ದಿನ. ನಂದಿನಿ ಟೂರಿಸ್ಟ್ 9916574089.

For Online Classified Booking

Name Change / Education / Property / Job / Services and many more contact

9880856233

9886213331

dhclassifieds.com

DH ಪ್ರಜಾವಾಣಿ

BOOK YOUR REAL ESTATE

Classified Advertisement In Deccan Herald & Prajavani

SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

condition apply*

For More Details Contact:

Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331

dhclassifieds@deccanherald.co.in www.dhclassifieds.com

ಏಳು ವರ್ಷ ತಂಡವನ್ನು ಮುನ್ನಡೆಸಿದ ಯಶಸ್ವಿ ಆಟಗಾರ; ಮೈಲುಗಲ್ಲುಗಳ ಸರದಾರ

ಅಚ್ಚರಿ ಮೂಡಿಸಿದ ವಿದಾಯ

ಬೆಂಗಳೂರು (ರಾಯಿಟರ್ಸ್): ಭಾರತ ಕ್ರಿಕೆಟ್ ತಂಡ ಕಂಡ ಯಶಸ್ವಿ ನಾಯಕರಲ್ಲಿ ಒಬ್ಬರಾಗಿರುವ ವಿರಾಟ್ ಕೊಹ್ಲಿ ಶನಿವಾರ ರಾತ್ರಿ ಕ್ರೀಡಾಪ್ರಿಯರನ್ನು ಅಚ್ಚರಿಗೊಳಿಸಿದ್ದಾರೆ. ಟೆಸ್ಟ್ ಕ್ರಿಕೆಟ್‌ನಲ್ಲಿ ತಂಡ ಅನೇಕ ಮೈಲುಗಲ್ಲುಗಳನ್ನು ದಾಟುವಂತೆ ಮಾಡಿರುವ ಅವರು ನಾಯಕತ್ವಕ್ಕೆ ವಿದಾಯ ಹೇಳಿದ್ದಾರೆ.

2014ರಲ್ಲಿ ನಾಯಕನಾಗಿ ನೇಮಕವಾದ ಕೊಹ್ಲಿ ಒಟ್ಟು 68 ಪಂದ್ಯಗಳಲ್ಲಿ ತಂಡವನ್ನು ಮುನ್ನಡೆಸಿದ್ದು 40ರಲ್ಲಿ ಗೆಲುವು ಸಾಧಿಸಿದ್ದಾರೆ. 17 ಪಂದ್ಯಗಳಲ್ಲಿ ತಂಡ ಸೋತಿದೆ. ಕಳೆದ ಸೆಪ್ಟೆಂಬರ್‌ನಲ್ಲಿ ಟ್ವೆಂಟಿ20 ತಂಡದ ನಾಯಕತ್ವ ತೊರೆದಿದ್ದ ಅವರನ್ನು ನಂತರ ಏಕದಿನ ತಂಡದ ನಾಯಕತ್ವದಿಂದ ಕೆಳಗಿಳಿಸಲಾಗಿತ್ತು. ದಕ್ಷಿಣ ಆಫ್ರಿಕಾದಲ್ಲಿ ನಡೆದ ಮೂರು ಪಂದ್ಯಗಳ ಸರಣಿಯ ಮೊದಲ ಪಂದ್ಯವನ್ನು ಗೆಲ್ಲಿಸಿಕೊಟ್ಟ ಅವರು ಸೆಂಚುರಿಯನ್‌ನಲ್ಲಿ ತಂಡ ಇತಿಹಾಸ ಬರೆಯುವಂತೆ ಮಾಡಿದ್ದರು. ಆದರೆ ಎರಡನೇ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಿರುಗೇಟು ನೀಡಿತ್ತು. ಆ ಪಂದ್ಯದಲ್ಲಿ ಭಾರತದ ಬ್ಯಾಟಿಂಗ್ ಮತ್ತು ಬೌಲಿಂಗ್ ವಿಭಾಗಗಳೆರಡೂ ಸವಾಲು ಎದುರಿಸಿದ್ದವು. ಈ ಪಂದ್ಯದಲ್ಲಿ ವಿರಾಟ್ ಆಡಿರಲಿಲ್ಲ.

ಮೂರನೇ ಪಂದ್ಯದಲ್ಲಿ ಗೆದ್ದು ದಕ್ಷಿಣ ಆಫ್ರಿಕಾ ನೆಲದಲ್ಲಿ ಮೊದಲ ಬಾರಿ ಸರಣಿ ಗೆದ್ದ ಸಾಧನೆ ಮಾಡುವ ಅವಕಾಶ ಭಾರತಕ್ಕೆ ಇತ್ತು. ಆದರೆ ಮತ್ತೊಮ್ಮೆ ವೈಫಲ್ಯ ಕಂಡ ತಂಡ ನಾಲ್ಕನೇ ದಿನದಲ್ಲೇ ಎದುರಾಳಿಗಳಿಗೆ ಮಣಿದಿತ್ತು. ಈ ಪಂದ್ಯ ಮುಗಿದ ಮರುದಿನವೇ ವಿರಾಟ್ ಕೊಹ್ಲಿ ನಾಯಕತ್ವ ತ್ಯಜಿಸಲು ನಿರ್ಧರಿಸಿದ್ದಾರೆ. ಕಳೆದ ವರ್ಷ ನಡೆದ ಟ್ವೆಂಟಿ20 ವಿಶ್ವಕಪ್‌ನ ನಂತರ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಜೊತೆ ಅವರ ಸಂಬಂಧ ಚೆನ್ನಾಗಿರಲಿಲ್ಲ. ಆ ಮುಸುಕಿನ ಗುದ್ದಾಟಕ್ಕೆ ಈಗ ತಾತ್ಕಾಲಿಕ ತೆರೆ ಬಿದ್ದಂತಾಗಿದೆ.

ನಾಯಕತ್ವ ತೊರೆಯುವ ಕೊಹ್ಲಿ ಅವರ ನಿರ್ಧಾರದ ನಂತರ ಟ್ವೀಟ್ ಮಾಡಿರುವ ಬಿಸಿಸಿಐ 'ವಿರಾಟ್ ಕೊಹ್ಲಿ ಅವರ ಅಪ್ರತಿಮ ನಾಯಕತ್ವವನ್ನು ಮಂಡಳಿಯು ಅಭಿನಂದಿಸುತ್ತದೆ. ಅವರ ಅವಧಿಯಲ್ಲಿ ಭಾರತ ಟೆಸ್ಟ್ ತಂಡ ಅತ್ಯುನ್ನತ ಮಟ್ಟಕ್ಕೆ ಏರಿದೆ' ಎಂದು ಹೇಳಿದೆ.

ಬಿಸಿಸಿಐ ಕಾರ್ಯದರ್ಶಿ ಜಯ ಶಾ 'ನಾಯಕತ್ವವನ್ನು ಅತ್ಯಂತ ಚೆನ್ನಾಗಿ ನಿಭಾಯಿಸಿದ ವಿರಾಟ್ ಕೊಹ್ಲಿ ಅವರಿಗೆ ಅಭಿನಂದನೆಗಳು. ಅವರು ತಂಡವನ್ನು ಬಲಿಷ್ಠವಾಗಿ ರೂಪಿಸಿದ್ದರು. ತವರಿನಲ್ಲೂ ವಿದೇಶಿ ನೆಲಗಳಲ್ಲೂ ತಂಡ ಅಮೋಘ ಸಾಧನೆ ಮಾಡುವಲ್ಲಿ ಅವರ ಶ್ರಮ ಬಹಳಷ್ಟು ಇದೆ. ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್‌ನಲ್ಲಿ ಜಯ ಗಳಿಸಿಕೊಟ್ಟ ಅವರ ಸಾಮರ್ಥ್ಯವನ್ನು ಮರೆಯಲು ಸಾಧ್ಯವಿಲ್ಲ' ಎಂದಿದ್ದಾರೆ.

ಇವರು ಹೀಗೆಂದರು

ಭಾರತ ತಂಡದ ನಾಯಕನಾಗಿ ಮಾಡಿರುವ ಅಮೋಘ ಸಾಧನೆಗೆ ಅಭಿನಂದನೆಗಳು. ಕ್ರಿಕೆಟ್ ಜಗತ್ತಿನಲ್ಲಿ ಅತ್ಯುತ್ತಮ ನಾಯಕರ ಕುರಿತು ಪ್ರಸ್ತಾಪಿಸುವಾಗಲೆಲ್ಲ ನಿಮ್ಮ ಹೆಸರು ಮುನ್ನೆಲೆಗೆ ಬರುವುದರಲ್ಲಿ ಸಂದೇಹ ಇಲ್ಲ.

ವಿವಿಯನ್ ರಿಚರ್ಡ್ಸ್
ವೆಸ್ಟ್ ಇಂಡೀಸ್‌ನ ಮಾಜಿ ಕ್ರಿಕೆಟಿಗ

ನಾಯಕನಾಗಿ ತಂಡವನ್ನು ಯಶಸ್ವಿಯಾಗಿ ಮುನ್ನಡೆಸಿದ್ದಕ್ಕೆ ಹೃತ್ಪೂರ್ವಕ ಅಭಿನಂದನೆಗಳು. ಅಂಕಿ ಅಂಶಗಳು ನಿಮ್ಮ ಸಾಧನೆಯ ಕೈಗನ್ನಡಿಯಾಗಲಿವೆ. ನೀವು ಭಾರತದ ಯಶಸ್ವಿ ನಾಯಕ ಮಾತ್ರವಲ್ಲ, ವಿಶ್ವದ ಅತ್ಯುತ್ತಮ ಕ್ರಿಕೆಟಿಗ ಕೂಡ ಆಗಿದ್ದೀರಿ.

ವೀರೇಂದ್ರ ಸೆಹ್ವಾಗ್
ಭಾರತದ ಮಾಜಿ ಬ್ಯಾಟರ್

ನಿಮ್ಮಂತೆ ಸಾಧನೆ ಮಾಡಲು ಅಪರೂಪದ ಕೆಲವರಿಗೆ ಮಾತ್ರ ಸಾಧ್ಯ. ತ್ಯಾಗ ಮನೋಭಾವದಿಂದ ನೀವು ತಂಡಕ್ಕಾಗಿ ಆಡಿದ್ದೀರಿ. ನೀವೇ ನಿಜವಾದ ಚಾಂಪಿಯನ್

ಯುವರಾಜ್ ಸಿಂಗ್, ಭಾರತದ ಮಾಜಿ ಆಲ್‌ರೌಂಡರ್

ವಿರಾಟ್ ಕೊಹ್ಲಿ ಅವರ ದಿಢೀರ್ ನಿರ್ಧಾರ ಅಚ್ಚರಿ ತಂದಿದೆ. ಅವರು ತಂಡಕ್ಕಾಗಿ ನೀಡಿದ ಕಾಣಿಕೆಯನ್ನು ಶ್ಲಾಘಿಸಲೇಬೇಕಾಗಿದೆ. ಭಾರತ ಕಂಡ ಸಮರ್ಥ ನಾಯಕನೂ ಅತ್ಯಂತ ಫಿಟ್ ಆಗಿದ್ದ ಆಟಗಾರನೂ ಆಗಿದ್ದಾರೆ ಅವರು. ಆಟಗಾರನಾಗಿ ತಂಡದಲ್ಲಿ ಮುಂದುವರಿಯುವರೆಂಬ ಭರವಸೆ ಇದೆ.

ಸುರೇಶ್ ರೈನಾ
ಭಾರತ ತಂಡದ ಮಾಜಿ ಆಟಗಾರ

ಭಾರತ ಟೆಸ್ಟ್ ತಂಡದ ನಾಯಕರ ಬಗ್ಗೆ ಮಾತು ಬಂದಾಗಲೆಲ್ಲ ವಿರಾಟ್ ಕೊಹ್ಲಿ ಅವರನ್ನು ಕ್ರಿಕೆಟ್ ಜಗತ್ತು ನೆನಪಿಸಿಕೊಳ್ಳಲಿದೆ. ತಂಡ ಗಳಿಸಿದ ಯಶಸ್ಸಿನ ಹಿನ್ನೆಲೆಯಲ್ಲಿ ಮಾತ್ರವಲ್ಲ, ಅವರು ತಂಡದ ಮೇಲೆ ಬೀರಿರುವ ಪ್ರಭಾವದ ಹಿನ್ನೆಲೆಯಲ್ಲೂ ಅವರನ್ನು ಮರೆಯಲು ಸಾಧ್ಯವೇ ಇಲ್ಲ.

ಇರ್ಫಾನ್ ಪಠಾಣ್
ಭಾರತ ತಂಡದ ಮಾಜಿ ವೇಗಿ

ಪೀಟರ್ಸನ್ ಆಟದಲ್ಲಿ ವಿಶ್ವನಾಥ್ ಶೈಲಿ: ರವಿಶಾಸ್ತ್ರಿ

ದಕ್ಷಿಣ ಆಫ್ರಿಕಾದ ಯುವ ಬ್ಯಾಟರ್ ಬಗ್ಗೆ ಮೆಚ್ಚುಗೆ

ನವದೆಹಲಿ (ಪಿಟಿಐ): ದಕ್ಷಿಣ ಆಫ್ರಿಕಾದ ಯುವ ಬ್ಯಾಟರ್ ಕೀಗನ್ ಪೀಟರ್ಸನ್ ಅವರ ಆಟವನ್ನು ಭಾರತ ಕ್ರಿಕೆಟ್ ತಂಡದ ಮಾಜಿ ಕೋಚ್ ರವಿಶಾಸ್ತ್ರಿ ಕೊಂಡಾಡಿದ್ದಾರೆ. ಪೀಟರ್ಸನ್ ಅವರ ಬ್ಯಾಟಿಂಗ್ ಭಾರತದ ಮಾಜಿ ಆಟಗಾರ ಗುಂಡಪ್ಪ ವಿಶ್ವನಾಥ್ ಅವರ ಆಟವನ್ನು ನೆನಪಿಸುವಂತೆ ಇದೆ ಎಂದು ರವಿಶಾಸ್ತ್ರಿ ಶನಿವಾರ ಟ್ವೀಟ್ ಮಾಡಿದ್ದಾರೆ.

ಶುಕ್ರವಾರ ಮುಕ್ತಾಯಗೊಂಡ ಟೆಸ್ಟ್ ಸರಣಿಯನ್ನು ದಕ್ಷಿಣ ಆಫ್ರಿಕಾ 2–1ರಲ್ಲಿ ತನ್ನದಾಗಿಸಿಕೊಂಡಿತ್ತು. ಮೂರೂ ಪಂದ್ಯಗಳಲ್ಲಿ ಕೀಗನ್ ಪೀಟರ್ಸನ್ ಅವರು ಅಮೋಘ ಬ್ಯಾಟಿಂಗ್ ಮೂಲಕ ಮಿಂಚಿದ್ದರು. ಆರು ಇನಿಂಗ್ಸ್‌ಗಳಲ್ಲಿ ಮೂರು ಅರ್ಧಶತಕಗಳು ಒಳಗೊಂಡ ಒಟ್ಟು 276 ರನ ಕಲೆ ಹಾಕಿದ್ದಾರೆ. ಕೊನೆಯ ಪಂದ್ಯದ ಎರಡೂ ಇನಿಂಗ್ಸ್‌ಗಳಲ್ಲಿ ಅರ್ಧಶತಕ ಸಿಡಿಸಿ ಪಂದ್ಯಶ್ರೇಷ್ಠ ಪ್ರಶಸ್ತಿ ಗಳಿಸಿದ್ದಾರೆ. ಸರಣಿಯ ಶ್ರೇಷ್ಠ ಆಟಗಾರ ಪ್ರಶಸ್ತಿಯೂ ಅವರ ಪಾಲಾಗಿದೆ.

'ಕೀಗನ್ ಪೀಟರ್ಸನ್ ಅವರ ಆಟ ಅತ್ಯಪೂರ್ವ. ಅವರು ವಿಶ್ವದ ಅತ್ಯುತ್ತಮ ಬ್ಯಾಟರ್ ಆಗುವತ್ತ ಹೆಜ್ಜೆ ಇರಿಸಿದ್ದಾರೆ. ಅವರ ಆಟ ನೋಡುತ್ತಿದ್ದರೆ ನಾವೆಲ್ಲ ಬಾಲ್ಯದಲ್ಲಿ ಗೌರವದಿಂದ ಕಾಣುತ್ತಿದ್ದ ಗುಂಡಪ್ಪ ವಿಶ್ವನಾಥ್ ಅವರ ನೆನಪಾಗುತ್ತದೆ' ಎಂದು ರವಿಶಾಸ್ತ್ರಿ ಟ್ವೀಟ್ ಮಾಡಿದ್ದಾರೆ.

ಮಣಿಗಂಟನ್ನು ಸೊಗಸಾಗಿ ಬಳಸುತ್ತಿದ್ದ ಗುಂಡಪ್ಪ ವಿಶ್ವನಾಥ್ ಅವರು ಮೋಹಕ ಸ್ಕ್ವೇರ್ ಕಟ್‌ಗಳಿಗೆ ಖ್ಯಾತಿ ಗಳಿಸಿದ್ದರು. 28 ವರ್ಷದ ಕೀಗನ್ ಪೀಟರ್ಸನ್ ಕೂಡ ಅದೇ ಶೈಲಿಯ ಮೂಲಕ ಕ್ರಿಕೆಟ್ ಜಗತ್ತಿನ ಗಮನ ಸೆಳೆದಿದ್ದಾರೆ. ವಿಶ್ವನಾಥ್ ಅವರು ಭಾರತಕ್ಕಾಗಿ 91 ಟೆಸ್ಟ್ ಮತ್ತು 25 ಏಕದಿನ ಪಂದ್ಯಗಳನ್ನು ಆಡಿದ್ದಾರೆ.

ಕೀಗನ್ ಪೀಟರ್ಸನ್ (ಕೆಪಿ) ಅವರು ಇಂಗ್ಲೆಂಡ್‌ನ ಮಾಜಿ ಆಟಗಾರ ಕೆವಿನ್ ಪೀಟರ್ಸ್ (ಕೆಪಿ) ಅವರಂತೆ ಆಕ್ರಮಣಕಾರಿ ಆಟದ ಮೂಲಕ ಮುದ ನೀಡುತ್ತಿದ್ದಾರೆ ಎಂದು ಕೂಡ ರವಿಶಾಸ್ತ್ರಿ ಅಭಿಪ್ರಾಯಪಟ್ಟಿದ್ದಾರೆ.

ಕೀಗನ್ ಪೀಟರ್ಸನ್ – ರಾಯಿಟರ್ಸ್ ಚಿತ್ರ

ಭಾರತದ ವಿರುದ್ಧ ಟೆಸ್ಟ್‌ನಲ್ಲಿ ಪೀಟರ್ಸನ್ ಸಾಧನೆ

	ಮೊದಲ ಟೆಸ್ಟ್	ಎರಡನೇ ಟೆಸ್ಟ್	ಮೂರನೇ ಟೆಸ್ಟ್
ಮೊದಲ ಇನಿಂಗ್ಸ್	15	62	72
ಎರಡನೇ ಇನಿಂಗ್ಸ್	17	28	82

ಟೆಸ್ಟ್‌ನಲ್ಲಿ ಪೀಟರ್ಸನ್ ಸಾಧನೆ

ಪಂದ್ಯ	ಇನಿಂಗ್ಸ್	ರನ್	ಗರಿಷ್ಠ	ಸ್ಟ್ರೈಕ್ ರೇಟ್	ಅರ್ಧಶತ	ಬೌಂಡರಿ
5	9	320	82	54.42	3	42

ರ‍್ಯಾಂಕಿಂಗ್‌ನಲ್ಲಿ ಕುಸಿತ ಕಂಡ ಭಾರತ

ನ್ಯೂಲ್ಯಾಂಡ್ಸ್‌ನಲ್ಲಿ ನಡೆದ ದಕ್ಷಿಣ ಆಫ್ರಿಕಾ ಎದುರಿನ ಮೂರನೇ ಮತ್ತು ಅಂತಿಮ ಟೆಸ್ಟ್‌ನಲ್ಲಿ ಸೋಲುವುದರರೊಂದಿಗೆ ಭಾರತ ತಂಡ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ರೇಟಿಂಗ್‌ನಲ್ಲಿ 5ನೇ ಸ್ಥಾನಕ್ಕೆ ಕುಸಿದಿದೆ. ಚಾಂಪಿಯನ್‌ಷಿಪ್‌ನಲ್ಲಿ ಹಾಲಿ ರನ್ನರ್ ಅಪ್ ಆಗಿರುವ ಭಾರತ ಎರಡನೇ ಆವೃತ್ತಿಯಲ್ಲಿ ಈ ವರೆಗೆ ಒಟ್ಟು 9 ಪಂದ್ಯಗಳನ್ನು ಆಡಿದ್ದು ನಾಲ್ಕರಲ್ಲಿ ಗೆದ್ದು ಎರಡನ್ನು ಡ್ರಾ ಮಾಡಿಕೊಂಡಿದೆ. ಮೂರು ಪಂದ್ಯಗಳಲ್ಲಿ ಸೋತಿದೆ.

ಎರಡನೇ ಪಂದ್ಯದ ಮುಕ್ತಾಯದ ನಂತರ ಭಾರತ 4ನೇ ಸ್ಥಾನದಲ್ಲಿತ್ತು. ಆಗ ದಕ್ಷಿಣ ಆಫ್ರಿಕಾ ನಾಲ್ಕನೇ ಸ್ಥಾನದಲ್ಲಿತ್ತು. ನ್ಯೂಲ್ಯಾಂಡ್ಸ್‌ನಲ್ಲಿ ನಡೆದ ಕೊನೆಯ ಪಂದ್ಯದಲ್ಲಿ ಗೆದ್ದ ದಕ್ಷಿಣ ಆಫ್ರಿಕಾ ನಾಲ್ಕನೇ ಸ್ಥಾನಕ್ಕೇರಿದೆ.

ಸದ್ಯ ಪಟ್ಟಿಯ ಅಗ್ರಸ್ಥಾನದಲ್ಲಿ ಶ್ರೀಲಂಕಾ ಇದ್ದು ಎರಡನೇ ಸ್ಥಾನದಲ್ಲಿ ಆಸ್ಟ್ರೇಲಿಯಾ ಮತ್ತು ಮೂರನೇ ಸ್ಥಾನದಲ್ಲಿ ಪಾಕಿಸ್ತಾನ ಇದೆ. ತವರು ನೆಲದಲ್ಲಿ ಈಚೆಗೆ ನಡೆದ ಎರಡು ಪಂದ್ಯಗಳ ಸರಣಿಯನ್ನು ಡ್ರಾ ಮಾಡಿಕೊಂಡಿದ್ದ ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ಆರನೇ ಸ್ಥಾನಕ್ಕೆ ಕುಸಿದಿದೆ.

ಆ್ಯಷಸ್: ಮಿಂಚಿದ ಪ್ಯಾಟ್ ಕಮಿನ್ಸ್

ಹೋಬರ್ಟ್ (ರಾಯಿಟರ್ಸ್): ಒಟ್ಟು 17 ವಿಕೆಟ್‌ಗಳು ಉರುಳಿದ ಆ್ಯಷಸ್ ಸರಣಿಯ ಐದನೇ ಪಂದ್ಯದ ಎರಡನೇ ದಿನ ಆತಿಥೇಯ ಆಸ್ಟ್ರೇಲಿಯಾ ಮತ್ತು ಪ್ರವಾಸಿ ಇಂಗ್ಲೆಂಡ್ ತಂಡಗಳು ಏಟು–ತಿರುಗೇಟಿನ ಮೂಲಕ ಮಿಂಚಿದವು. ಆಸ್ಟ್ರೇಲಿಯಾ ಮೊದಲ ಇನಿಂಗ್ಸ್‌ನಲ್ಲಿ 303 ರನ್‌ಗಳಿಗೆ ಆಲೌಟ್ ಆದರೆ ವೇಗದ ದಾಳಿಗೆ ಕಂಗೆಟ್ಟ ಇಂಗ್ಲೆಂಡ್ 188 ರನ್‌ಗಳಿಗೆ ಪತನ ಕಂಡಿತು. ಎರಡನೇ ಇನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾ 37 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದೆ.

ಮೊದಲ ದಿನ ಆರು ವಿಕೆಟ್ ಕಳೆದುಕೊಂಡು 241 ರನ್ ಗಳಿಸಿದ್ದ ಆಸ್ಟ್ರೇಲಿಯಾದ ಇನಿಂಗ್ಸ್‌ಗೆ ಬೇಗನೇ ತೆರೆ ಎಳೆಯುವಲ್ಲಿ ಇಂಗ್ಲೆಂಡ್ ಬೌಲರ್‌ಗಳು ಯಶಸ್ವಿಯಾದರು. ಆದರೆ ಮೊದಲ ಇನಿಂಗ್ಸ್‌ನ ಆರಂಭದಲ್ಲೇ ಇಂಗ್ಲೆಂಡ್ ಆಘಾತ ಕಂಡಿತು. ಎರಡನೇ ಓವರ್‌ನಲ್ಲಿ ರೋರಿ ಬರ್ನ್ಸ್ ರನೌಟ್ ಆಗುವುದರೊಂದಿಗೆ ತಂಡದ ಸಂಕಷ್ಟ ಆರಂಭವಾಯಿತು. ಆಗ ತಂಡದ ಮೊತ್ತ ಎರಡು ರನ್ ಆಗಿತ್ತು. 29 ರನ್ ಆಗುವಷ್ಟರಲ್ಲಿ ಜಾಕ್ ಕ್ರಾವ್ಲಿ ಕೂಡ ವಾಪಸಾದರು.

ಜೋ ರೂಟ್ ವಿಕೆಟ್ ಗಳಿಸಿದ ಪ್ಯಾಟ್ ಕಮಿನ್ಸ್ ಸಂಭ್ರಮ –ರಾಯಿಟರ್ಸ್

ಡೇವಿಡ್ ಮಲಾನ್ ಮತ್ತು ನಾಯಕ ಜೋ ರೂಟ್ ಇನಿಂಗ್ಸ್ ಕಟ್ಟಲು ಪ್ರಯತ್ನಿಸಿದರು. ಆದರೆ ಅವರ ಜೊತೆಯಾಟ 49 ರನ್‌ಗಳಿಗೆ ಕೊನೆಗೊಂಡಿತು. ಮೂರು ರನ್‌ಗಳ ಅಂತರದಲ್ಲಿ ಇವರಿಬ್ಬರೂ ವಾಪಸಾದರು. ಎರಡು ಬಾರಿ ಜೀವದಾನ ಪಡೆದ ಕ್ರಿಸ್ ವೋಕ್ಸ್ 36 ರನ್ ಗಳಿಸಿ ತಂಡದ ಮೊತ್ತ ಹೆಚ್ಚಿಸಲು ಪ್ರಯತ್ನಿಸಿದರು. ಸ್ಯಾಮ್ ಬಿಲಿಂಗ್ಸ್ ಕೂಡ ತಮ್ಮಿಂದಾದ ಕಾಣಿಕೆ ನೀಡಿದರು. ಆದರೆ ಮಿಚೆಲ್ ಸ್ಟಾರ್ಕ್ ಮತ್ತು ಪ್ಯಾಟ್ ಕಮಿನ್ಸ್ ಅವರ ಪ್ರಬಲ ದಾಳಿಗೆ ತಂಡ ನಲುಗಿತು.100ಕ್ಕೂ ಹೆಚ್ಚು ರನ್‌ಗಳ ಮುನ್ನಡೆಯ ಭರವಸೆಯೊಂದಿಗೆ ಎರಡನೇ ಇನಿಂಗ್ಸ್ ಆಡಲು ಇಳಿದ ಆಸ್ಟ್ರೇಲಿಯ ಕೂಡ ವೇಗದ ಬೌಲಿಂಗ್‌ನ ಬಿಸಿ ಅನುಭವಿಸಿತು. ಖಾತೆ ತೆರೆಯುವ ಮೊದಲೇ ಡೇವಿಡ್ ವಾರ್ನರ್ ವಾಪಸಾದರೆ ತಂಡ 33 ರನ್ ಗಳಿಸುವಷ್ಟರಲ್ಲಿ ಮಾರ್ನಸ್ ಲಾಬುಶೇನ್ ಮತ್ತು ಉಸ್ಮಾನ್ ಖ್ವಾಜಾ ಔಟಾದರು. ನಂತರ ಸ್ಟೀವನ್ ಸ್ಮಿತ್ ಮತ್ತು ಸ್ಕಾಟ್ ಬೊಲ್ಯಾಂಡ್ ತಂಡಕ್ಕೆ ಆಸರೆಯಾದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: ಮೊದಲ ಇನಿಂಗ್ಸ್: 75.4 ಓವರ್‌ಗಳಲ್ಲಿ 303 (ನೇಥನ್ ಲಯನ್ 31; ಸ್ಟುವರ್ಟ್ ಬ್ರಾಡ್ 59ಕ್ಕೆ3, ಒಲಿ ರಾಬಿನ್ಸನ್ 24ಕ್ಕೆ2, ಮಾರ್ಕ್ ವುಡ್ 115ಕ್ಕೆ3, ಕ್ರಿಸ್ ವೋಕ್ಸ್ 64ಕ್ಕೆ2); ಇಂಗ್ಲೆಂಡ್: ಮೊದಲ ಇನಿಂಗ್ಸ್: 47.4 ಓವರ್‌ಗಳಲ್ಲಿ 188 (ಜೋ ರೂಟ್ 34, ಸ್ಯಾಮ್ ಬಿಲಿಂಗ್ಸ್ 29, ಕ್ರಿಸ್ ವೋಕ್ಸ್ 36, ಮಿಚೆಲ್ ಸ್ಟಾರ್ಕ್ 53ಕ್ಕೆ3, ಪ್ಯಾಟ್ ಕಮಿನ್ಸ್ 45ಕ್ಕೆ4, ಸ್ಕಾಟ್ ಬೊಲ್ಯಾಂಡ್ 33ಕ್ಕೆ1); ಆಸ್ಟ್ರೇಲಿಯಾ: ಎರಡನೇ ಇನಿಂಗ್ಸ್: 19 ಓವರ್‌ಗಳಲ್ಲಿ 3ಕ್ಕೆ 37 (ಸ್ಟೀವ್ ಸ್ಮಿತ್ ಬ್ಯಾಟಿಂಗ್ 17, ಸ್ಕಾಟ್ ಬೊಲ್ಯಾಂಡ್ ಬ್ಯಾಟಿಂಗ್ 3; ಸ್ಟುವರ್ಟ್ ಬ್ರಾಡ್ 9ಕ್ಕೆ1, ಕ್ರಿಸ್ ವೋಕ್ಸ್ 13ಕ್ಕೆ1, ಮಾರ್ಕ್ ವುಡ್ 9ಕ್ಕೆ1).

ಕಬಡ್ಡಿ: ಡೆಲ್ಲಿ, ಯುಪಿ ಜಯಭೇರಿ

ಬೆಂಗಳೂರು: ಕೊನೆಯ ನಿಮಿಷದಲ್ಲಿ ವಿಜಯ್ ಕುಮಾರ್ ಅವರ ವೀರೋಚಿತ ಆಟವು ದಬಂಗ್ ಡೆಲ್ಲಿ ತಂಡಕ್ಕೆ ರೋಚಕ ಜಯ ತಂದುಕೊಟ್ಟಿತು. ವೈಟ್‌ಫೀಲ್ಡ್‌ನ ಹೋಟೆಲ್ ಶೆರಟಾನ್ ಗ್ರ್ಯಾಂಡ್‌ನಲ್ಲಿ ಶನಿವಾರ ರಾತ್ರಿ ನಡೆದ ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ದಬಂಗ್ ಡೆಲ್ಲಿ 28–25ರಲ್ಲಿ ಹರಿಯಾಣ ಸ್ಟೀಲರ್ಸ್ ವಿರುದ್ಧ ಜಯ ಗಳಿಸಿತು.

ಮತ್ತೊಂದು ಪಂದ್ಯದಲ್ಲಿ ಪ್ರದೀಪ್ ನರ್ವಾಲ್ 'ಸೂಪರ್ ಟೆನ್' ನೆರವಿನಿಂದ ಯು.ಪಿ.ಯೋಧಾ 39–33ರಲ್ಲಿ ತೆಲುಗು ಟೈಟನ್ಸ್ ವಿರುದ್ಧ ಜಯಿಸಿತು.

ತಂಡದ ಕಳೆದ ಪಂದ್ಯದಲ್ಲಿ ಕಣಕ್ಕೆ ಇಳಿಯದೇ ಇದ್ದ ಎಕ್ಸ್‌ಪ್ರೆಸ್ ಖ್ಯಾತಿಯ ನವೀನ್ ಕುಮಾರ್ ಈ ಪಂದ್ಯದಲ್ಲೂ ದ್ವಿತೀಯಾರ್ಧದಲ್ಲಿ ಗಾಯಗೊಂಡು ವಿಶ್ರಾಂತಿ ಪಡೆದರು. ಆದರೂ ದಿಟ್ಟತನ ಮೆರೆದ ತಂಡ ಕೊನೆಯ ವರೆಗೂ ಕಾದಾಡಿ ಗೆಲುವು ತನ್ನದಾಗಿಸಿಕೊಂಡಿತು. ವಿಜಯ್ ಪಂದ್ಯದಲ್ಲಿ ಒಟ್ಟು 11 ಪಾಯಿಂಟ್ ಕಲೆ ಹಾಕಿದರು. ಈ ಪೈಕಿ ಐದು ಪಾಯಿಂಟ್‌ಗಳು ಕೊನೆಯ ಎರಡು ರೇಡ್‌ಗಳಲ್ಲಿ ಲಭಿಸಿದವು. ಇದು, ತಂಡದ ಗೆಲುವಿಗೆ ಸಹಕಾರಿಯಾಯಿತು.

ಪಂದ್ಯದ ಮೊದಲಾರ್ಧದಲ್ಲಿ ನವೀನ್ ಅವರನ್ನು ನಾಲ್ಕು ಬಾರಿ ಹೊರಹಾಕುವಲ್ಲಿ ಹರಿಯಾಣ ಸ್ಟೀಲರ್ಸ್ ಯಶಸ್ವಿಯಾಯಿತು. ಮೊದಲಾ ರ್ಧದ ಮುಕ್ತಾಯಕ್ಕೆ ಉಭಯ ತಂಡಗಳು 11–11ರ ಸಮಬಲ ಸಾಧಿಸಿದವು. ದ್ವಿತೀಯಾರ್ಧದ ಮೊದಲ 10 ನಿಮಿಷವೂ ನೀರಸವಾಗಿತ್ತು. ನಂತರ ಪಂದ್ಯ ಕಳೆಗಟ್ಟಿತು. ಕೊನೆಯ ಐದು ನಿಮಿಷಗಳು ಬಾಕಿ ಇದ್ದಾಗ ಸ್ಕೋರು 21–21ರಲ್ಲಿ ಸಮ ಆಗಿತ್ತು. ಕೊನೆಯ ಎರಡು ರೇಡ್‌ಗಳ ಪೈಕಿ ಒಂದಲ್ಲಿ ಎರಡು ಪಾಯಿಂಟ್ ಗಳಿಸಿದ ನವೀನ್ ಮತ್ತೆ ಮಿಂಚಿದರು. ತೆಲುಗು ಟೈಟನ್ಸ್ ಎದುರಿನ ಪಂದ್ಯದಲ್ಲಿ ಯು.ಪಿ. ಯೋಧಾದ ಪ್ರದೀಪ್ ನರ್ವಾಲ್ 10 ಪಾಯಿಂಟ್ ಗಳಿಸಿದರೆ ಶ್ರೀಕಾಂತ್ ಯಾದವ್, ಸುರೇಂದರ್ ಗಿಲ್ ಮತ್ತು ನಿತೇಶ್ ಕುಮಾರ್ ತಲಾ 7 ಪಾಯಿಂಟ್ ಕಲೆ ಹಾಕಿದರು. ಟೈಟನ್ಸ್‌ಗಾಗಿ ಅಂಕಿತ್ ಬೇನಿವಾಲ್ ಮತ್ತು ರಜನೀಶ್ ತಲಾ 9 ಪಾಯಿಂಟ್ ಗಳಿಸಿದರು.

ಯು ಮುಂಬಾ ಮತ್ತು ಬೆಂಗಾಲ್ ವಾರಿಯರ್ಸ್ ನಡುವಿನ ಪಂದ್ಯ 32–32ರಲ್ಲಿ ಟೈ ಆಯಿತು. ಮಣಿಂದರ್ ಸಿಂಗ್ (17 ಪಾಯಿಂಟ್) ಅವರ ಪ್ರಭಾವಿ ಆಟದ ನೆರವಿನಿಂದ ಬೆಂಗಾಲ್ ಆಧಿಪತ್ಯ ಸ್ಥಾಪಿಸಿತ್ತು. ಆದರೆ ಕೊನೆಯ ಹಂತದಲ್ಲಿ ಮುಂಬಾ ಪುಟಿದೆದ್ದು ಸಮಬಲ ಸಾಧಿಸುವಲ್ಲಿ ಯಶಸ್ವಿಯಾಯಿತು. ತಂಡದ ಪರ ಅಭಿಷೇಕ್ ಸಿಂಗ್ 13 ಪಾಯಿಂಟ್ ಗಳಿಸಿದರು.

ಹರಿಯಾಣ ಸ್ಟೀಲರ್ಸ್‌ನ ಮೀತು ಅವರು ಪಾಯಿಂಟ್ ಗಳಿಸಲು ಪ್ರಯತ್ನಿಸಿದರು

ಇಂದಿನ ಪಂದ್ಯ (ರಾತ್ರಿ)

ತಮಿಳ್ ತಲೈವಾಸ್– ಜೈಪುರ Vs ಪಿಂಕ್ ಪ್ಯಾಂಥರ್ಸ್ 7.30

ಪಟ್ನಾ ಪೈರೇಟ್ಸ್ ಬೆಂಗಳೂರು ಬುಲ್ಸ್ 8.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಬೆಂಗಳೂರು ಬುಲ್ಸ್	10	7	2	1	38
ದಬಂಗ್ ಡೆಲ್ಲಿ	10	6	2	2	37
ಪಟ್ನಾ ಪೈರೇಟ್ಸ್	9	6	2	1	34
ಯುಪಿ ಯೋಧಾ	10	3	4	3	28
ಜೈಪುರ್ ಪಿಂಕ್ ಪ್ಯಾಂಥರ್ಸ್	9	5	4	-	28
ಯು ಮುಂಬಾ	10	3	3	4	28
ತಮಿಳ್ ತಲೈವಾಸ್	9	3	2	4	27
ಬೆಂಗಾಲ್ ವಾರಿಯರ್ಸ್	10	4	5	1	25
ಹರಿಯಾಣ ಸ್ಟೀಲರ್ಸ್	10	3	5	2	24
ಪುಣೇರಿ ಪಲ್ಟನ್	9	4	5	-	21
ಗುಜರಾತ್ ಜೈಂಟ್ಸ್	9	2	5	2	20
ತೆಲುಗು ಟೈಟನ್ಸ್	9	-	7	2	11

(ಶನಿವಾರದ ಪಂದ್ಯಗಳ ಅಂತ್ಯಕ್ಕೆ)

ಬಿಎಫ್‌ಸಿ ಎಟಿಕೆಎಂಬಿ ಪಂದ್ಯ ಮುಂದಕ್ಕೆ

ಫತೋರ್ಡ: ಆಟಗಾರರಲ್ಲಿ ಕೋವಿಡ್ ಸೋಂಕು ಕಂಡು ಬಂದಿರುವ ಹಿನ್ನೆಲೆಯಲ್ಲಿ ಎಟಿಕೆ ಮೋಹನ್ ಬಾಗನ್ ಮತ್ತು ಬೆಂಗಳೂರು ಎಫ್‌ಸಿ ನಡುವಿನ ಪಂದ್ಯವನ್ನು ಮುಂದೂಡಲಾಗಿದೆ. ಪಂದ್ಯ ಶನಿವಾರ ನಿಗದಿಯಾಗಿತ್ತು. ಎಟಿಕೆಎಂಬಿ ಆಟಗಾರರಲ್ಲಿ ಕಾಣಿಸಿಕೊಂಡಿದ್ದ ಸೋಂಕು ಕಡಿಮೆಯಾಗದ ಕಾರಣ ಪಂದ್ಯವನ್ನು ಮುಂದೂಡಿರುವುದಾಗಿ ಐಎಸ್‌ಎಲ್ ಆಡಳಿತ ಶನಿವಾರ ಮಧ್ಯಾಹ್ನ ತಿಳಿಸಿದೆ.

ತಂಡದ ನಾಲ್ವರು ಆಟಗಾರರಲ್ಲಿ ಸೋಂಕು ಇರುವುದರಿಂದ ತಂಡದ ಅಭ್ಯಾಸಕ್ಕೆ ಅನುಮತಿ ನೀಡಲಾಗಿಲ್ಲ.

ಇಂದಿನ ಪಂದ್ಯ: ಕೇರಳ ಬ್ಲಾಸ್ಟರ್ಸ್–ಮುಂಬೈ ಸಿಟಿ ಎಫ್‌ಸಿ ಸ್ಥಳ: ತಿಲಕ್ ಮೈದಾನ್ ಕ್ರೀಡಾಂಗಣ

ಸಮಯ: ರಾತ್ರಿ 7.30. ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಕ್ರಿಕೆಟ್: ಯಶ್ ಧುಳ್ ಅರ್ಧಶತಕ

ಗಯಾನ (ಪಿಟಿಐ): ನಾಯಕ ಯಶ್ ಧುಳ್ (82; 100 ಎಸೆತ, 11 ಬೌಂಡರಿ) ಅವರ ಅರ್ಧಶತಕದ ನೆರವಿನಿಂದ ಭಾರತ ತಂಡ 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಸವಾಲಿನ ಮೊತ್ತ ಸೇರಿಸಿದೆ. ಟಾಸ್ ಸೋತು ಬ್ಯಾಟಿಂಗ್ ಮಾಡಿದ ಭಾರತ 46.5 ಓವರ್‌ಗಳಲ್ಲಿ 232 ರನ್‌ಗಳಿಗೆ ಆಲೌಟಾಯಿತು.

ಶೇಕ್ ರಶೀದ್ ಮತ್ತು ಯಶ್ 71 ರನ್‌ಗಳ ಜೊತೆಯಾಟವಾಡಿದರು. ನಿಶಾಂತ್ ಸಿಂಧು ಮತ್ತು ಕಶಾಲ್ ತಾಂಬೆ ಕೂಡ ಸೂಕ್ತ ಕಾಣಿಕೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಭಾರತ: 46.5 ಓವರ್‌ಗಳಲ್ಲಿ 232 (ಶೇಕ್ ರಶೀದ್ 31, ಯಶ್ ಧೂಲ್ 82, ನಿಶಾಂತ್ ಸಿಂಧು 27, ಕುಶಾಲ್ ತಾಂಬೆ 32; ಮ್ಯಾಥ್ಯೂ ಬೋಸ್ಟ್ 40ಕ್ಕೆ3, ಅಫಿ ಮಿನ್ಯಾಂಡ 29ಕ್ಕೆ2, ಲಿಯಾಮ್ ಅಲ್ದರ್ 40ಕ್ಕೆ1, ಮೈಕೆಲ್ ಕೋಪ್ಲ್ಯಾಂಡ್ 44ಕ್ಕೆ1, ದೆವಾಲ್ಡ್ ಬ್ರೀವಿಸ್ 43ಕ್ಕೆ2).

ಗಾಲ್ಫ್: ಚಿಕ್ಕರಂಗಪ್ಪ 3ನೇ ಸ್ಥಾನದಲ್ಲಿ

ಸಿಂಗಪುರ (ಪಿಟಿಐ): ಕ್ಲಿಷ್ಟಕರ ಪರಿಸ್ಥಿತಿಯಲ್ಲೂ ಎದೆಗುಂದದೆ ಆಡಿದ ಭಾರತದ ಎಸ್.ಚಿಕ್ಕರಂಗಪ್ಪ ಸಿಂಗಪುರ ಇಂಟರ್‌ನ್ಯಾಷನಲ್ ಗಾಲ್ಫ್ ಟೂರ್ನಿಯ ಮೂರನೇ ಸುತ್ತಿನ ಮುಕ್ತಾಯಕ್ಕೆ ಮೂರನೇ ಸ್ಥಾನಕ್ಕೇರಿದ್ದಾರೆ.

ಭಾರತದ ಮತ್ತೊಬ್ಬ ಆಟಗಾರ ಖಲಿನ್ ಜೋಶಿ ನಾಲ್ಕನೇ ಸ್ಥಾನಕ್ಕೆ ಕುಸಿದಿದ್ದಾರೆ. ತಾಯ್ಲೆಂಡ್‌ನ ರಟನಾನ್ ಅಗ್ರ ಸ್ಥಾನವನ್ನು ಉಳಿಸಿಕೊಂಡಿದ್ದರು ಏಷ್ಯನ್ ಟೂರ್‌ನ ಎರಡನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದಾರೆ.

ಆಸ್ಟ್ರೇಲಿಯನ್ ಓಪನ್ ಟೆನಿಸ್: ನೊವಾಕ್ ಭವಿಷ್ಯ ಇಂದು ನಿರ್ಧಾರ

ಮೆಲ್ಬರ್ನ್ (ಎಪಿ): ಎರಡನೇ ಬಾರಿ ವಿಸಾ ರದ್ದು ಮಾಡಿದ ಆಸ್ಟ್ರೇಲಿಯಾ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಿರುವ ಸರ್ಬಿಯಾದ ನೊವಾಕ್ ಜೊಕೊವಿಚ್ ಈ ಹಿಂದೆ ತಮ್ಮನ್ನು ವಶಪಡಿಸಿ ಇರಿಸಲಾಗಿದ್ದ ಹೋಟೆಲ್‌ಗೆ ಶನಿವಾರ ಮರಳಿದ್ದಾರೆ. ಅವರ ಅರ್ಜಿಯನ್ನು ಉನ್ನತ ನ್ಯಾಯಾಲಯದ ಮೂವರು ನ್ಯಾಯಾಧೀಶರು ಭಾನುವಾರ ವಿಚಾರಣೆಗೆ ಕೈಗೆತ್ತಿಕೊಳ್ಳಲಿದ್ದಾರೆ ಎಂದು ತಿಳಿದುಬಂದಿದೆ.

ಲಸಿಕೆ ಹಾಕಿಸಿಕೊಳ್ಳದೆ ದೇಶ ಪ್ರವೇಶಿಸಿದ್ದ ಜೊಕೊವಿಚ್ ಅವರನ್ನು ವಶಕ್ಕೆ ಪಡೆದಿದ್ದ ಅಧಿಕಾರಿಗಳು ಹೋಟೆಲ್‌ನಲ್ಲಿರಿಸಿದ್ದರು. ಅವರು ಅಲ್ಲಿಂದಲೇ ನ್ಯಾಯಾಲಯದ ಮೊರೆ ಹೋಗಿದ್ದರು. ನ್ಯಾಯಾಧೀಶರ ಆದೇಶದ ನಂತರ ಬಿಡುಗಡೆ ಮಾಡಲಾಗಿತ್ತು. ಹೀಗಾಗಿ ಅವರು ಟೂರ್ನಿಗಾಗಿ ಅಭ್ಯಾಸ ಮಾಡಿದ್ದರು. ಆದರೆ ಶುಕ್ರವಾರ ಅವರ ವಿಸಾವನ್ನು ಎರಡನೇ ಬಾರಿ ರದ್ದು ಮಾಡಲಾಗಿತ್ತು. ಇದೀಗ ಅವರಿಗೆ ಟೂರ್ನಿಯಲ್ಲಿ ಅಡಲು ಸಾಧ್ಯವಾಗುವುದೋ ಇಲ್ಲವೋ ಎಂಬ ವಿಷಯ ಭಾನುವಾರದ ತೀರ್ಪಿನ ನಂತರವಷ್ಟೇ ನಿರ್ಧಾರವಾಗಲಿದೆ.



ನೊವಾಕ್ ಜೊಕೊವಿಚ್

ವಿಗ್ರಹ ಪತ್ತೆ: ಭಾರತಕ್ಕೆ ಹಸ್ತಾಂತರ

ಲಂಡನ್ (ಪಿಟಿಐ): ಭಾರತದಿಂದ ಕಾಣೆಯಾಗಿದ್ದ 10ನೇ ಶತಮಾನದ ಬೆಲೆಬಾಳುವ ವಿಗ್ರಹ ಇಂಗ್ಲೆಂಡ್‌ನಲ್ಲಿ ಪತ್ತೆಯಾಗಿದ್ದು, ಅದನ್ನು ಮಕರ ಸಂಕ್ರಾಂತಿಯ ಹಬ್ಬದಂದು ಭಾರತಕ್ಕೆ ಹಸ್ತಾಂತರಿಸಲಾಗಿದೆ.

40 ವರ್ಷಗಳ ಹಿಂದೆ ಉತ್ತರ ಪ್ರದೇಶದ ಲೋಖಾರಿ ದೇವಸ್ಥಾನದಿಂದ ಕಾಣೆಯಾಗಿದ್ದ ಮೇಕೆ ಮುಖದ ಯೋಗಿನಿ ವಿಗ್ರಹವು ಇಂಗ್ಲೆಂಡ್‌ನ ಉದ್ಯಾನದಲ್ಲಿ ಪತ್ತೆಯಾಗಿತ್ತು. ಬ್ರಿಟನ್‌ನಲ್ಲಿರುವ ಭಾರತೀಯ ಹೈಕಮಿಷನರ್ ಗಾಯತ್ರಿ ಇಸ್ಸಾರ್ ಕುಮಾರ್ ಅವರಿಗೆ ಯೋಗಿನಿ ವಿಗ್ರಹವನ್ನು ಆರ್ಟ್ ರಿಕವರಿ ಇಂಟರ್‌ನ್ಯಾಷನಲ್‌ನ ಕ್ರಿಸ್ ಮರಿನೆಲ್ಲೊ ಹಸ್ತಾಂತರಿಸಿದರು. 1980ರ ದಶಕದಲ್ಲಿ ಉತ್ತರ ಪ್ರದೇಶದ ಬಂದಾ ಜಿಲ್ಲೆಯ ಲೋಖಾರಿ ಗ್ರಾಮದ ದೇವಸ್ಥಾನದಿಂದ ಈ ಅಪರೂಪದ ವಿಗ್ರಹ ಕಾಣೆಯಾಗಿತ್ತು. 2021 ಅಕ್ಟೋಬರ್‌ನಲ್ಲಿ ವಿಗ್ರಹ ಪತ್ತೆಯಾದ ಕುರಿತು ಮಾಹಿತಿ ಲಭಿಸಿತ್ತು.

ಸಿಖ್ ಚಾಲಕನ ಮೇಲೆ ಹಲ್ಲೆ ಪ್ರಕರಣ: ಆರೋಪಿ ಬಂಧನ

ನ್ಯೂಯಾರ್ಕ್ (ಪಿಟಿಐ): ಇಲ್ಲಿನ ಜಾನ್ ಎಫ್ ಕೆನಡಿ (ಜೆಎಫ್‌ಕೆ) ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭಾರತೀಯ ಮೂಲದ ಸಿಖ್ ಟ್ಯಾಕ್ಸಿ ಚಾಲಕನೊಬ್ಬನ ಮೇಲೆ ಹಲ್ಲೆ ನಡೆಸಿ ಆತನ ಮುಂಡಾಸನ್ನು ಕಿತ್ತೆಸೆದ ಆರೋಪದಲ್ಲಿ ವ್ಯಕ್ತಿಯೊಬ್ಬನನ್ನು ಅಮೆರಿಕದ ಅಧಿಕಾರಿಗಳು ಬಂಧಿಸಿದ್ದು, ದ್ವೇಷ ಹಿಂಸಾಚಾರದ ಪ್ರಕರಣ ದಾಖಲಿಸಿದ್ದಾರೆ.

ಸಿಖ್ ಚಾಲಕನ ಮೇಲೆ ಮುಗಿಬಿದ್ದ ವ್ಯಕ್ತಿ 'ರುಮಾಲಿನ ಜನರೇ, ನಿಮ್ಮ ದೇಶಕ್ಕೆ ಹಿಂತಿರುಗಿ' ಎನ್ನುತ್ತಾ ಹಲ್ಲೆ ನಡೆಸಿದ್ದಾನೆ ಎನ್ನಲಾಗಿದೆ.

ಜನವರಿ 3 ರಂದು ಘಟನೆ ನಡೆದಿದ್ದು ಗುರುವಾರ ಆರೋಪಿ ಮೊಹಮ್ಮದ್ ಹಸನೈನ್ ಅನ್ನು ಬಂಧಿಸಲಾಗಿದೆ. ಸಿಖ್ ವ್ಯಕ್ತಿಯ ಮನವಿ ಮೇರೆಗೆ ಆತನ ಹೆಸರನ್ನು ಗೋಪ್ಯವಾಗಿಡಲಾಗಿದೆ.

ಆರೋಪಿ ಹಸನೈನ್ ಬಂಧನವನ್ನು ನ್ಯೂಯಾರ್ಕ್‌ನ ಪೋರ್ಟ್ ಆಡಳಿತ ಮತ್ತು ನ್ಯೂಜೆರ್ಸಿ ಪೊಲೀಸ್ ಇಲಾಖೆ (ಪಿಎಪಿಡಿ) ಶುಕ್ರವಾರ ಖಚಿತಪಡಿಸಿವೆ ಎಂದು ಸಮುದಾಯ-ಆಧಾರಿತ ನಾಗರಿಕ ಮತ್ತು ಮಾನವ ಹಕ್ಕುಗಳ ಸಂಸ್ಥೆ ಸಿಖ್ ಒಕ್ಕೂಟ ತಿಳಿಸಿದೆ.

ಆರೋಪಿ ಹಸನೈನ್ ಚಾಲಕನನ್ನು ಎಳೆದಾಡುವಾಗ ಪದೇ ಪದೇ ಆತನಿಗೆ 'ನಿಮ್ಮ ದೇಶಕ್ಕೆ ಹಿಂತಿರುಗಿ', 'ರುಮಾಲಿನ ಜನ' ಎಂದು ಅವಹೇಳನಕಾರಿಯಾಗಿ ಮಾತನಾಡಿದ್ದಾನೆ. ಆದ್ದರಿಂದ ಇದೊಂದು ದ್ವೇಷಪೂರಿತ ಹಿಂಸಾಚಾರ ಎಂದು ಪರಿಗಣಿಸಲಾಗಿದೆ. ಹಸನೈನ್ ವಿರುದ್ಧ ದ್ವೇಷ ಅಪರಾಧ, ಕಿರುಕುಳದ ಪ್ರಕರಣ ದಾಖಲಿಸಲಾಗಿದೆ.

ಯುಎಇ ಅಧಿಕಾರಿಗಳಿಂದ ವರದಿ ಕೇಳಿದ ಡಿಜಿಸಿಎ

ತಪ್ಪಿದ ವಿಮಾನ ಅವಘಡ: ತನಿಖೆ ಆರಂಭ

ದುಬೈ/ನವದೆಹಲಿ (ರಾಯಿಟರ್ಸ್/ಪಿಟಿಐ): ಭಾರತದತ್ತ ಹೊರಟಿದ್ದ ಎರಡು ಎಮಿರೇಟ್ಸ್ ವಿಮಾನಗಳ ನಡುವೆ ದುಬೈ ವಿಮಾನನಿಲ್ದಾಣದ ರನ್‌ವೇನಲ್ಲಿ ಅಪಘಾತ ಸಂಭವಿಸುವುದು ಸ್ವಲ್ಪದರಲ್ಲಿ ತಪ್ಪಿದ ಘಟನೆ ಕುರಿತು ಯುಎಇ ವಿಮಾನ ಪ್ರಾಧಿಕಾರವು ತನಿಖೆ ಆರಂಭಿಸಿದೆ.

ಭಾರತ ವಿಮಾನಯಾನ ನಿಯಂತ್ರಣ ಸಂಸ್ಥೆಯಾದ ಡಿಜಿಸಿಎಯು, ಈ ಘಟನೆಗೆ ಸಂಬಂಧಿಸಿದಂತೆ ತನಿಖಾ ವರದಿಯನ್ನು ನೀಡುವಂತೆ ಕೋರಿದ ಬೆನ್ನಲ್ಲೇ ಯುಎಇಯ ವಿಮಾನಯಾನ ಪ್ರಾಧಿಕಾರ ತನಿಖೆ ಕೈಗೊಂಡಿದೆ. ಜ. 9ರಂದು ದುಬೈ ವಿಮಾನನಿಲ್ದಾಣದಲ್ಲಿ ದುಬೈ- ಹೈದರಾಬಾದ್ ಮತ್ತು ದುಬೈ-ಬೆಂಗಳೂರು ನಡುವಣ ಪ್ರಯಾಣಿಕರ ವಿಮಾನಗಳ ನಡುವೆ ಅಪಘಾತ ಸಂಭವಿಸುವುದು ಸ್ವಲ್ಪದರಲ್ಲಿಯೇ ತಪ್ಪಿತ್ತು.

ದುಬೈ ವಿಮಾನ ನಿಲ್ದಾಣದ ಸಂಗ್ರಹ ಚಿತ್ರ

ಹೈದರಾಬಾದ್ ವಿಮಾನ ಗಗನಕ್ಕೆ ಚಿಮ್ಮುವ ವೇಳೆಗೆ ಅದೇ ರನ್‌ವೇನಲ್ಲಿಯೇ ಬೆಂಗಳೂರು ವಿಮಾನವು ಬಂದಿತ್ತು. ಇದು ಗೊತ್ತಾದ ಕೂಡಲೇ ವಿಮಾನನಿಲ್ದಾಣದ ನಿಯಂತ್ರಕರು ದುಬೈ–ಹೈದರಾಬಾದ್ ವಿಮಾನಕ್ಕೆ ಗಗನಕ್ಕೆ ಚಿಮ್ಮಲು (ಟೇಕ್ ಆಫ್) ಅವಕಾಶ ನಿರಾಕರಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಡಿಜಿಸಿಎ ಮುಖ್ಯಸ್ಥ ಅರುಣ್‌ಕುಮಾರ್ ಅವರು, ಐಸಿಎಒ (ಅಂತರರಾಷ್ಟ್ರೀಯ ವಿಮಾನಯಾನ ಸಂಸ್ಥೆ) ಅನುಸಾರ ಎರಡೂ ವಿಮಾನಗಳು ನಿಖರ ಸಮಯವನ್ನು ಪಾಲನೆ ಮಾಡಿದ್ದವು. ಈ ಬಗ್ಗೆ ಅದು ತನಿಖೆ ನಡೆಸಲಿದೆ ಎಂದರು.

ಯುಎಇ ವಕ್ತಾರರು ಈ ಕುರಿತ ಹೇಳಿಕೆಯಲ್ಲಿ, ಒಂದೇ ರನ್‌ವೇನಲ್ಲಿ ವಿಮಾನ ಬರುತ್ತಿರುವುದು ಗೊತ್ತಾದಂತೆ ವಿಮಾನಯಾನ ನಿಯಂತ್ರಕರು ಟೇಕ್ ಆಫ್‌ಗೆ ಅನುಮತಿ ನಿರಾಕರಿಸಿದರು. ಯಾವುದೇ ವಿಮಾನ ಸ್ವಲ್ಪವು ಜಖಂಗೊಂಡಿಲ್ಲ, ಯಾರಿಗೂ ಹಾನಿಯಾಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಸುರಕ್ಷತೆಗೆ ಎಂದಿಗೂ ಮೊದಲ ಆದ್ಯತೆ ನೀಡಲಿದ್ದು, ಈ ಬಗ್ಗೆ ಆಂತರಿಕವಾಗಿ ಪರಿಶೀಲನೆ ನಡೆದಿದೆ. ಘಟನೆ ಕುರಿತು ತನಿಖೆ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಜ್ವಾಲಾಮುಖಿ ಸ್ಫೋಟ, ಸುನಾಮಿ ಎಚ್ಚರಿಕೆ

ವೆಲ್ಲಿಂಗ್ಟನ್, ನ್ಯೂಜಿಲೆಂಡ್ (ಎಪಿ): ಸಮುದ್ರದೊಳಗೆ ಜ್ವಾಲಾಮುಖಿ ಸ್ಫೋಟಗೊಂಡ ಹಿನ್ನೆಲೆಯಲ್ಲಿ ಪೆಸಿಫಿಕ್ ರಾಷ್ಟ್ರ ಟೊಂಗಾ ಶನಿವಾರ ಸುನಾಮಿಯ ಎಚ್ಚರಿಕೆ ನೀಡಿದೆ. ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಹರಿಬಿಟ್ಟಿರುವ ವಿಡಿಯೊದಲ್ಲಿ ಸಮುದ್ರದ ತಟಗಳತ್ತ ದೈತ್ಯ ಅಲೆಗಳು ನುಗ್ಗಿ ಬರುತ್ತಿರುವುದು ಸೆರೆಯಾಗಿದೆ.

ಟೊಂಗಾದ ಎಲ್ಲಾ ಪ್ರಜೆಗಳಿಗೆ ಸುನಾಮಿಯ ಎಚ್ಚರಿಕೆ ನೀಡಲಾಗಿದೆ ಎಂದು ಟೊಂಗಾ ಹವಾಮಾನ ಸೇವೆಗಳ ಸಂಸ್ಥೆಯು ತಿಳಿಸಿದೆ. ಈ ಬಗ್ಗೆ ನೆರೆಯ ಫಿಜಿ ರಾಷ್ಟ್ರದ ಅಧಿಕಾರಿಗಳಿಗೂ ಎಚ್ಚರಿಕೆಯೊಂದನ್ನು ನೀಡಲಾಗಿದ್ದು ಭಾರಿ ಪ್ರವಾಹ ಮತ್ತು ಅಪಾಯಕಾರಿ ಅಲೆಗಳ ಭೀತಿ ಇರುವುದರಿಂದ ಜನರಿಗೆ ಕಡಲ ತೀರವನ್ನು ತೊರೆಯುವಂತೆ ಸೂಚಿಸಿದೆ.

ಸುನಾಮಿ ಎಚ್ಚರಿಕೆ ಹಿನ್ನೆಲೆ ಸಮುದ್ರ ತೀರದ ಅರಮನೆಯಲ್ಲಿನ ಟೊಂಗಾದ ರಾಜ 6ನೇ ಟುಪೌ ಅವರನ್ನು ಪೊಲೀಸ್ ಮತ್ತು ಮಿಲಿಟರಿ ಪಡೆಯ ಬೆಂಗಾವಲು ಸಿಬ್ಬಂದಿ ಸ್ಥಳಾಂತರಿಸಿದ್ದಾರೆ.

ಉತ್ತರ ಕೊರಿಯಾ: ರೈಲು ಮೇಲಿಂದ ಕ್ಷಿಪಣಿ ಪರೀಕ್ಷೆ

ಸೋಲ್ (ಎಪಿ): ಅಮೆರಿಕದ ಬೈಡನ್ ಆಡಳಿತವು ವಿಧಿಸಿರುವ ಹೊಸ ನಿರ್ಬಂಧಗಳಿಗೆ ವಿರೋಧವಾಗಿ ತಾನು ರೈಲೊಂದರ ಮೇಲಿಂದ ಕ್ಷಿಪಣಿ ಪರೀಕ್ಷೆ ನಡೆಸಿರುವುದಾಗಿ ಉತ್ತರ ಕೊರಿಯಾ ಶನಿವಾರ ಹೇಳಿದೆ.

ಉತ್ತರ ಕೊರಿಯಾ ಈ ತಿಂಗಳು ಸಮುದ್ರದಲ್ಲಿ ಎರಡು ಕ್ಷಿಪಣಿಗಳನ್ನು ಉಡಾವಣೆ ಮಾಡಿದೆ ಎಂದು ದಕ್ಷಿಣ ಕೊರಿಯಾ ಸೇನೆಯು ಹೇಳಿದ ಒಂದು ದಿನದ ನಂತರ ಉತ್ತರ ಕೊರಿಯಾ ಈ ಹೇಳಿಕೆ ನೀಡಿದೆ.

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 16 ಜನವರಿ 2022

ಈ ಥಳಕು, ಬೆಳಕು ಈಗೆಲ್ಲಿ?

ಚಿತ್ರ: ಭರತ್ ಕಂದಕೂರ

ಜನಮುಖಿ ಜಾತ್ರೆ

ಪ್ರತಿವರ್ಷ ಜನವರಿಯಲ್ಲಿ ಉತ್ತರ ಕರ್ನಾಟಕದ ತುಂಬಾ ಕೊಪ್ಪಳದ ಗವಿಸಿದ್ಧಪ್ಪಜ್ಜನ ಜಾತ್ರೆಯ ಸಂಭ್ರಮ. ಎರಡು ವರ್ಷಗಳಿಂದ ಕೊರೊನಾ ಜಾತ್ರೆಯ ಸಂಭ್ರಮಕ್ಕೆ ಬ್ರೇಕ್ ಹಾಕಿದೆ. ಈ ಸಲವೂ ರಥೋತ್ಸವ ಸರಳವಾಗಿ (ಜ. 19) ನಡೆಯಲಿದೆ. ಆದರೆ, ಗತಕಾಲದ ಸಡಗರವನ್ನು ಮೆಲುಕು ಹಾಕಲು ಕೊರೊನಾ ಏನೂ ಅಡ್ಡಗಾಲು ಹಾಕಲು ಸಾಧ್ಯವಿಲ್ಲವಲ್ಲ?!

ಆನಂದತೀರ್ಥ ಪ್ಯಾಟಿ

ದೀಪಾವಳಿ ಹಬ್ಬ ಮುಗಿಯುತ್ತಲೇ ದೂರದೂರಿನಿಂದ ಚಕ್ಕಡಿ, ಟ್ರ್ಯಾಕ್ಟರುಗಳಲ್ಲಿ ಅಕ್ಕಿ, ಬೇಳೆಕಾಳು, ಜೋಳದಂಥ ಧಾನ್ಯಗಳು ಕೊಪ್ಪಳದತ್ತ ಹೊರಡಲು ಶುರು. ಮುಂಗಾರು ಕೊಯ್ಲು ಸಂಭ್ರಮ ಮುಗಿಸಿ, '...ಗವಿಸಿದ್ಧಪ್ಪಜ್ಜಂಗ ಇದು' ಎಂದು ಧಾನ್ಯದ ಒಂದು ಭಾಗವನ್ನು ಅದಾಗಲೇ ತೆಗೆದಿಟ್ಟವರು, ತಮ್ಮೂರಿನಿಂದ ಗವಿಮಠದ ಜಾತ್ರೆಗೆ ಹೊರಡುವ ಟ್ರ್ಯಾಕ್ಟರುಗಳಿಗೆ ಹೇರುತ್ತಾರೆ. ವಾರಗಟ್ಟಲೇ ಅವಧಿಯುದ್ದಕ್ಕೂ ಜತನದಿಂದ ಕಡೆದ ಬೆಣ್ಣೆಯನ್ನು ತುಪ್ಪವನ್ನಾಗಿಸಿ, ದೊಡ್ಡ ದೊಡ್ಡ ಕ್ಯಾನುಗಳಲ್ಲಿ ತುಂಬಿ ಗಾಡಿಯಲ್ಲಿ ಒಟ್ಟುವವರು ಹಲವರು. ತರಹೇವಾರಿ ಆಹಾರ ಪದಾರ್ಥ ಹೊತ್ತ ಚಕ್ಕಡಿ, ವ್ಯಾನು, ಟ್ರ್ಯಾಕ್ಟರು, ಟಂಟಂ ಇತರೆ ಗಾಡಿಗಳು ಕೊಪ್ಪಳದ ಗವಿಮಠದ ಎದುರಿಗೆ ಬಂದಾಗ ಪದಾರ್ಥ ಇಳಿಸಿ ಹಗುರಾಗುವ ಜನರ ಹೃದಯದಲ್ಲಿ ತುಂಬುವುದು ಧನ್ಯತಾಭಾವ. ಗವಿಸಿದ್ಧಪ್ಪಜ್ಜನ ಜಾತ್ರೆಯ ಆಸುಪಾಸು ಇಂಥ ನೋಟ ಸಾಮಾನ್ಯ.

ಜಾತ್ರೆ ಎಂದರೆ ಬಾಲ್ಯಕ್ಕೆ ಮರಳುವ ಸಂಭ್ರಮ. ಅದನ್ನು ಹೊರತುಪಡಿಸಿಯೂ ಭಕ್ತಿ-ಭಾವ, ಮನರಂಜನೆ, ಭರಪೂರ ತಿನಿಸು, ಅಲೆದಾಟ, ವಿರಾಮಕ್ಕೊಂದು ಪ್ರಶಸ್ತ ತಾಣವೆಂದರೆ ಅದು ಜಾತ್ರೆಯಲ್ಲದೇ ಮತ್ತೇನು? ಧಾರ್ಮಿಕ ಕಾರ್ಯಕ್ರಮದ ನೆಪದಲ್ಲಿ ಆಸಕ್ತರು ಸೇರಲೊಂದು ಸಕಾರಣವನ್ನು ಜಾತ್ರೆ-ರಥೋತ್ಸವಗಳು ಸೃಷ್ಟಿಸಿಕೊಡುತ್ತವೆ. ಊರು ಬಿಟ್ಟು ದೂರ ಹೋದವರನ್ನು ತವರೂರಿನ ಜಾತ್ರೆಗಳು ವರ್ಷವರ್ಷ ಕರೆಯುತ್ತವೆ. ಹಳೆಯ ಸ್ನೇಹಿತರು, ಬಂಧುಬಾಂಧವರ ಜತೆ ನಲಿಯಲು ಜಾತ್ರೆಯೂ ಒಂದು ನೆಪ.

ಪೂಜೆ ಪುನಸ್ಕಾರಗಳ ರೀತಿ ಬೇರೆಯಾದರೂ ಜಾತ್ರೆಗಳ ಒಟ್ಟಾರೆ ಸ್ವರೂಪ ಬಹುತೇಕ ಒಂದೇ ಥರ. ಆದರೆ ಆ 'ಮೆಗಾ ಇವೆಂಟ್' ನಡೆಯುವ ಬಗೆಯೇ ನಮ್ಮಲ್ಲಿ ಸೋಜಿಗ ಮೂಡಿಸುತ್ತದೆ. ಆರೆಂಟು ಜನರು ದಿಢೀರ್ ಬಂದಿಳಿದಾಗ ಕುಟುಂಬದ ಹಿರಿಯರು ತುಸು ದಿಕ್ಕೆಡುತ್ತಾರೆ. ಮತ್ತೇನಿಲ್ಲ- ಅವರ ಊಟೋಪಚಾರಕ್ಕೆ, ಅಷ್ಟೆ. ಹಾಗಿದ್ದ ಮೇಲೆ, ಲಕ್ಷಾಂತರ ಜನ ಸೇರುವ ಜಾತ್ರಾ ಮಹೋತ್ಸವದ ಆಯೋಜಕರ ಸ್ಥೈರ್ಯ ಹೇಗಿದ್ದೀತು?

'ಅದೆಲ್ಲ ಏನೂ ಇಲ್ಲ. ನಮ್ಮ ಜಾತ್ರೆಯಲ್ಲಿ ಕಾಣುವುದೆಲ್ಲ ಭಕ್ತಿಭಾವದ ಪ್ರತಿಫಲನ' ಎನ್ನುತ್ತಾರೆ, ಕೊಪ್ಪಳದ ಗವಿಮಠದ ಜಾತ್ರಾ ಸಂಘಟಕರು. ಹೌದು. ದಕ್ಷಿಣ ಭಾರತದ ಪ್ರಮುಖ ಧಾರ್ಮಿಕ ಕ್ಷೇತ್ರವಾದ ಗವಿಮಠದ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವ ದೇಶದ ಇತರ ಭಾಗದವರ ಗಮನ ಸೆಳೆಯುತ್ತಿದೆ. ಲಕ್ಷಗಟ್ಟಲೇ ಭಕ್ತರು ಶ್ರದ್ಧಾಭಕ್ತಿಯಿಂದ ಇಲ್ಲಿಗೆ ಬಂದರೆ, ಅವರ ಸೇವೆಗೆ ನಿಸ್ವಾರ್ಥ ಮನೋಭಾವದಿಂದ ಸಾವಿರಾರು ಜನ ಸಾಲುಗಟ್ಟಿ ನಿಂತಿರುತ್ತಾರೆ. ಮೂರು ವರುಷಗಳ ಹಿಂದೆ ಸುಮಾರು ಆರು ಲಕ್ಷಕ್ಕೂ ಹೆಚ್ಚು ಜನ ಗವಿಮಠದ ಜಾತ್ರಾ ಮಹೋತ್ಸವಕ್ಕೆ ಸಾಕ್ಷಿಯಾಗಿದ್ದರು. ಜನಸಮೂಹದ ಚಿತ್ರಣವನ್ನು ಕ್ಯಾಮೆರಾದ ಒಂದೇ ಫ್ರೇಮಿನಲ್ಲಿ ಸೆರೆಹಿಡಿಯಲು ಡ್ರೋನ್‌ಗಳು ಎಷ್ಟೊಂದು ಸೆಣಸಾಡಿದ್ದವು!

ಅಸಲಿಗೆ ಗವಿಸಿದ್ದಪ್ಪಜ್ಜನ ಜಾತ್ರೆಗೆ ಪರೋಕ್ಷ ತಯಾರಿ ಶುರುವಾಗುವುದೇ ದೀಪಾವಳಿ ಆಸುಪಾಸು. ಮುಂಗಾರು ಕಟಾವಿನ ಬೆಳೆಯ ಮೊದಲ ಚೀಲವನ್ನು 'ಅಜ್ಜನಿಗೆ ಇದು' ಎಂದು ತೆಗೆದಿಟ್ಟ ಬಳಿಕವೇ ಉಳಿದ ಉತ್ಪನ್ನ ಮಾರುಕಟ್ಟೆಗೆ ಹೋಗುತ್ತದೆ. ಆ ಧಾನ್ಯದ ಬಗೆಯಾದರೂ ಏನೇನು? ಬೇಳೆ, ಅಕ್ಕಿ, ಈರುಳ್ಳಿ, ಜೋಳ, ಗೋಧಿ, ಮಡಿಕೆ, ಹೆಸರು... ಒಂದೊಂದು ಊರಿನ ನೂರಾರು ಮನೆಗಳಲ್ಲಿ ಹೀಗೆ ಮೀಸಲಿಟ್ಟ ದವಸ ಧಾನ್ಯಗಳು, ಗಾಡಿಗಳನ್ನೇರಿ ಜಾತ್ರೆಗೆ ವಾರದ ಹಿಂದೆ ಬಂದು ಸೇರುತ್ತವೆ. ಇದರ ಜತೆಗೆಯೇ ಕ್ವಿಂಟಲ್‌ಗಟ್ಟಲೇ ತುಪ್ಪ, ಒಣದ್ರಾಕ್ಷಿ, ಬೆಲ್ಲವೂ ಬರುತ್ತದೆ. ರಥೋತ್ಸವದ ದಿನದಂದು ಶುರುವಾಗುವ ದಾಸೋಹ ಅಖಂಡ ಹದಿನೈದು ದಿನಗಳ ಕಾಲ ನಡೆಯುತ್ತಲೇ ಇರುವುದರಿಂದ, ತರಕಾರಿ-ಸೊಪ್ಪುಗಳು ನಿತ್ಯವೂ ರಾಶಿರಾಶಿಯಾಗಿ ಬರುತ್ತಲೇ ಇರುತ್ತದೆ. ಉತ್ತರ ಕರ್ನಾಟಕದ ಊಟ ಅಂದಮೇಲೆ ರೊಟ್ಟಿ ಇರದೇ ಹೋದರೆ ಹೇಗೆ? ನೂರಾರು ಹಳ್ಳಿಗಳಲ್ಲಿ ಮನೆಮನೆಯಲ್ಲೂ ರೊಟ್ಟಿ ತಯಾರಾಗಿ ಒಂದೆಡೆ ಸಂಗ್ರಹವಾಗಿ ಬಳಿಕ ಲಾರಿ, ಟ್ರ್ಯಾಕ್ಟರುಗಳಲ್ಲಿ ಬರುತ್ತವೆ. ತೀರಾ ಅಚ್ಚುಕಟ್ಟಾಗಿ ನಿರ್ವಹಿಸುವ ಪಾಕಶಾಲೆಯಲ್ಲಿ ಒಂದೆಡೆ ರೊಟ್ಟಿಯ ಪರ್ವತ ಕಂಡರೆ, ಇನ್ನೊಂದೆಡೆ ಅನ್ನದ ಬೆಟ್ಟ. ಸಾಂಬರ್? ಅದು ತಯಾರಾಗುವ ಕಡಾಯಿಗಳನ್ನು ನೋಡಿಯೇ ತಿಳಿಯಬೇಕು! ದಿನಕ್ಕೊಂದು ಹಳ್ಳಿಯವರಂತೆ ಸರದಿಯಲ್ಲಿ ಬಾಣಸಿಗರು ಸೇವೆ ಸಲ್ಲಿಸುತ್ತಾರೆ. ದಾಸೋಹಕ್ಕೆ ಭಕ್ತರ ಕೊಡುಗೆ ಎಷ್ಟೆಂದು ಹೇಳಲು ಅಸಾಧ್ಯವಾದರೂ ಈ ಪಟ್ಟಿಯನ್ನು ಸುಮ್ಮನೇ ಗಮನಿಸಬಹುದು: 15 ಲಕ್ಷ ರೊಟ್ಟಿ, 600 ಕ್ವಿಂಟಲ್ ಅಕ್ಕಿ, 700 ಕ್ವಿಂಟಲ್ ಸಿಹಿತಿನಿಸು, 10 ಕ್ವಿಂಟಲ್ ತುಪ್ಪ, 50 ಕ್ವಿಂಟಲ್ ಉಪ್ಪಿನಕಾಯಿ, 200 ಕ್ವಿಂಟಲ್ ತರಕಾರಿ...



ಸ್ವಾಮೀಜಿಯೇ ಹೀಗೆ ಕಸ ಆಯಲು ನಿಂತಮೇಲೆ ಸ್ವಚ್ಛತೆಗೆ ಬೇರೆ ಪಾಠ ಬೇಕೆ? ಚಿತ್ರ: ಪ್ರಕಾಶ ಕಂದಕೂರ

ಪಾಕಶಾಲೆಯಿಂದ ಆಚೆ ಬಂದರೆ ಕಾಣಿಸುವ ಗವಿಸಿದ್ದಪ್ಪಜ್ಜನ ದಾಸೋಹ ತಾಣದ ವೈಭವ ಇನ್ನೊಂದು ಬಗೆ. ಶಿಸ್ತುಬದ್ಧವಾದ ಸಾಲುಗಳಲ್ಲಿ ಬರುವವರಿಗೆ ಅಷ್ಟೇ ಕಾಳಜಿಯಿಂದ ಊಟ ಬಡಿಸುವ ತಂಡ. ಎಲ್ಲೂ ಧಾವಂತವಿಲ್ಲ. ತುರ್ತು ಇಲ್ಲವೇ ಇಲ್ಲ. ರೊಟ್ಟಿ, ಬಗೆಬಗೆಯ ಪಲ್ಯ, ಅನ್ನ, ಸಾಂಬಾರ್, ಮಾದಲಿಯಂಥ ಸಿಹಿ ತಿಂಡಿ, ತುಪ್ಪ, ಚಟ್ನಿ, ಉಪ್ಪಿನಕಾಯಿ- ಪಟ್ಟಿ ಬೆಳೆಯುತ್ತದೆ. ಕೆಲವು ಸಲ ಇಲ್ಲಿಗೆ ಬರುವ ಗವಿಮಠದ ಶ್ರೀಗಳು ಖುದ್ದಾಗಿ ಒಲೆ ಮುಂದೆ ಕೂತು ಮಿರ್ಚಿ ಭಜಿ ಕರಿದು, ಭಕ್ತರ ತಟ್ಟೆಗೆ ಹಾಕುವುದೂ ಇದೆ. ಜಾತ್ರೆಯ ಅಂಗವಾಗಿ ಬೆಳಿಗ್ಗೆ ಹನ್ನೊಂದು ಗಂಟೆ ಸುಮಾರಿಗೆ ಶುರುವಾಗುವ ಅನ್ನ ದಾಸೋಹ ಮುಕ್ತಾಯವಾಗುವುದು ಎಷ್ಟಕ್ಕೆ?

ಉತ್ತರ: ಅವತ್ತಿನ ಕೊನೇ ಭಕ್ತನ ಊಟ ಆಗುವವರೆಗೆ!

ಅರಿವು - ಮನರಂಜನೆ

ಜಾತ್ರೆ ಅಂದರೆ ಮನಕ್ಕೆ ವಿರಾಮ ಕೊಡುವ ತಾಣವೂ ಹೌದಷ್ಟೆ. ಅದಕ್ಕಾಗಿಯೇ ಮನರಂಜನೆಯ ಔತಣವೂ ಇಲ್ಲಿರುತ್ತದೆ. ತರಹೇವಾರಿ ರುಚಿಕಟ್ಟಾದ ಮಿಠಾಯಿ, ಬೆಂಡು- ಬತ್ತಾಸು, ಪೇಢಾ, ಕರದಂಟು, ಮಂಡಕ್ಕಿ ಕಾರ, ಮಿರ್ಚಿ, ಬದನೇಕಾಯಿ ಬೋಂಡಾ ಏನೆಲ್ಲ ತಿಂಡಿಗಳು ಮಿಠಾಯಿ ಮಳಿಗೆಯಲ್ಲಿ ಇದ್ದರೆ, ಪಕ್ಕದಲ್ಲೇ ವ್ಯಾಪಾರಿ ಮಳಿಗೆಗಳ ಸಾಲು. ಗವಿಮಠದ ಜಾತ್ರೆಯ ವಿಶೇಷವೆಂದರೆ, ಕಲಸು ಮೇಲೋಗರದಂತಿಲ್ಲದೇ ಮಳಿಗೆಗಳ ಪ್ರತ್ಯೇಕ ಸಂಯೋಜನೆ.

9ನೇ ಪುಟಕ್ಕೆ...

ಸುಕ್ರಜ್ಜಿಯ ಪದಗಳ ಹದದೊಳಗೆ

ರಶ್ಮಿ ಎಸ್.

'ಎಂತ ಹೇಳ್ತಿ? ನಮ್ಮನೇಲಿ ಸಾವು... ಅವರ ಮನೇಲಿ, ಇವರ ಮನೇಲಿನೂ ಹಂಗೆ ಆಗಕೂಡದು. ನಾನು ಮಗನ್ನ ಕಳಕೊಂಡೆ. ಉಳಿದವರ ಮನೇಲೂ ಕಳಕೊಬೇಕಾ? ನನ್ನ ಸೊಸೆ ವಿಧವೆಯಾದ್ಲು. ಮೊಮ್ಮಕ್ಕಳು ಅಪ್ಪನ ಕಳಕೊಂಡ್ರು. ಕಣ್ಬಿಟ್ಟರೆ ಇವರ ಕಣ್ಣೀರು... ಇನ್ನಿಂಥ ಸಂಕಟ ಉಳಿದವರು ಅನುಭವಿಸಬಾರದು ಅಂತನಿಸಿತು. ಎದ್ನಿಂತೆ. ಕಳ್ಳಬಟ್ಟಿ ಸಾರಾಯಿ ಊರ ಸಮೀಪ ಬೇಡವೆಂದರೆ ಬೇಡ ಅಂತ ಹಟ ಹಿಡಿದೆ'

83 ವರ್ಷದ ಸುಕ್ರಜ್ಜಿ ಕಣ್ಣಲ್ಲಿ ಹೊಳಪು ತುಂಬಿಕೊಂಡು, ಧ್ವನಿಯಲ್ಲಿ ಜೋಷ್ ತುಂಬಿಕೊಂಡು ತಮ್ಮ ಹೋರಾಟದ ದಿನಗಳ ಕತೆ ಹೇಳುತ್ತಿದ್ದರೆ ನಾವು ಕಿವಿಯಾಗಿದ್ವಿ. ಮೈಯೆಲ್ಲ ಕಿವಿಯಾಗಿದ್ವಿ.

ಸುಕ್ರಿ ಬೊಮ್ಮಗೌಡ. ಉತ್ತರ ಕನ್ನಡ ಜಿಲ್ಲೆಯ ಅಂಕೋಲೆಯ ಬಡಿಗೇರಿಯಲ್ಲಿರುವ ಅವರ ಮನೆಗೆ ಹೋದಾಗ ಎದುರಾದದ್ದೇ ಬಾಗಿಲಿಗೆ ಇಳಿಬಿಟ್ಟಿದ್ದ ಮುತ್ತಿನ ಸರಗಳ ಸ್ವಾಗತ.

ಮಂಚದ ಮೇಲೆ ಹಗುರವಾಗಿ ಅಡ್ಡವಾಗಿದ್ದ ಸುಕ್ರಜ್ಜಿ, ಹುಬ್ಬಳ್ಳಿಯಿಂದ ಬಂದ್ವಿ ಅಂತ ಕೇಳುತ್ತಲೇ ಉಪಚರಿಸಿದರು. ಅವರ ಪಕ್ಕದಲ್ಲಿದ್ದ ನೆಬ್ಯುಲೈಸರ್‌ನ ಮಾಸ್ಕ್ ಅನ್ನು ದಿಂಬಿನ ಪಕ್ಕ ಜರುಗಿಸಿದರು. ನಗುನಗುತ್ತಲೇ ಮಾತನಾಡಲು ಆರಂಭಿಸಿದರು.

ಪ್ರಯಾಣದಿಂದಾಗಿ ಸುಸ್ತಾದಂತಿದ್ದ ಮಗಳು ಅರ್ನಿ ಅಲ್ಲಿರುವ ಕುರ್ಚಿಗೆ ತಲೆಯಾನಿಸಿ ನಿದ್ದೆಗಿಳಿದಾಗ, 'ಕಣ್ಣಾರಲೆ, ಬಾಲೆ, ಮಲಗಿ ನಿದ್ರಿಸು, ಬಾನಿನಡಿಯ ತಾರೆ, ಈ ಬಾಲೆ ಕಣ್ಮುಚ್ಚಿ ಮಲಗು' ಅಂತ ಎರಡು ಸಾಲು ಹೆಣೆದು ಹಾಡಿಯೇ ಬಿಟ್ಟರು.

ಆ ಪದದೊಳಗಿನ ಹದವನ್ನು ಅರಿಯುವಾಗಲೇ, ತಮ್ಮ ಜೀವನಕ್ಕಿಳಿದರು. ಹೆಣ್ಮಕ್ಕಳ ಬದುಕು ಯಾವತ್ತಿದ್ದರೂ ಸಂಘರ್ಷದ್ದು.

ಸುಕ್ರಜ್ಜಿಯ ಒಂದು ಮಂದಹಾಸ ಚಿತ್ರ: ಗೋವಿಂದರಾಜ್ ಜವಳಿ

ನನ್ನ ಯಜಮಾನರು ತೀರಿ ಹೋದಾಗ ನನ್ನ ಮಗ ಸಣ್ಣವಿದ್ದ. ನನ್ನ ಮಗ ತೀರಿದಾಗ, ಅವನ ಮಕ್ಕಳೂ ಸಣ್ಣವರು. ಇದಕ್ಕೆಲ್ಲ ಮೂಲ ಸಾರಾಯಿ ಅಂತಲೇ ಅದನ್ನು ನಿರ್ಮೂಲನೆ ಮಾಡಬೇಕು ಅಂತ ಹಟ ತೊಟ್ಟೆ.

ಹಗಲನ್ನಲಿಲ್ಲ, ರಾತ್ರಿಯೆನ್ನಲಿಲ್ಲ ಹೋರಾಟಕ್ಕೆ ನಿಂತೆ. ಜಗಳ ಮಾಡಿದೆ. ದೆಹಲಿಗೂ ಹೋಗಿಬಂದೆ. ಹೆಬ್ಬಾರ್ ಅವರು ನಮ್ಮೊಟ್ಟಿಗೆ ಹೋರಾಟಕ್ಕೆ ಇಳಿದ್ರು. ಒಂದು ಶಕ್ತಿ ಬಂತು. ಸಾರಾಯಿ ಮಾಡುವುದು, ಮಾರಾಟ ಮಾಡುವುದು ಎರಡೂ ನಿಂತು ಹೋಯಿತು.

ಸಾರಾಯಿ ಕುಡಿದವರೆಲ್ಲ ಮನೆಯ ಹೆಣ್ಣುಮಕ್ಕಳಿಗೆ ಹೊಡೀತಿದ್ರು, ಬಡೀತಿದ್ರು. ಬಾಯಲಿ ಅನ್ನಕಾಗ್ದು ಅಂತ ಬೈಗುಳ ಬೈತಿದ್ರು. ನೀವೆಲ್ಲ ಓದಿದೋರು, ಅವನ್ನೆಲ್ಲ ಕೇಳಿ ಗೊತ್ತಿದೆಯೋ ಇಲ್ವೋ? ಬಾಯ್ಬಿಟ್ಟರೆ ನಾವು ಬೈಗುಳ ತಿಂದು ಬದುಕುವಂತಾಗಿತ್ತು. ನಮ್ದು ಜೀವನ ಅಲ್ವಾ? ಜೀವ ಅಲ್ವಾ? ಹೆಣ್ಮಕ್ಕಳಿಗೆ ಮರ್ಯಾದಿ ಕೊಡಬೇಕು ಕಣವ್ವಾ. ಕೂಸಿನ್ನ ಹೆರಂಗಿಲ್ಲೇನು? ದೇವರ ಕೆಲಸ ಅಲ್ಲೇನದು? ಪೊರೆಯುವುದಿಲ್ಲೇನು? ಗದ್ದೆ, ಕಾನು, ಎರಡೂ ಕಡೆ ಹೋಗುದಿಲ್ಲೇನು? ಈ ಬುದ್ಧಿ ಹೇಳಬೇಕಿತ್ತು... ಅನ್ನುತ್ತಲೇ ಶಿವ, ಶಿವೆಯ ಹಾಡು ಹೇಳಿದರು.

9ನೇ ಪುಟಕ್ಕೆ...

ನೋವದೆಂತಹುದೊ...

ನೋವು ಅನುಭವಿಸದ ಜೀವವೇ ಇಲ್ಲ. ನೋವಿಲ್ಲದ ಜಗತ್ತಿಲ್ಲ. ಹಲವು ನೋವುಗಳನ್ನು ಉಪಶಮನ ಮಾಡುವ ಶಕ್ತಿಯನ್ನು ಮನುಷ್ಯ ಕಂಡುಕೊಂಡಿದ್ದಾನೆ ನಿಜ. ಆದರೆ ಎಷ್ಟೋ ನೋವುಗಳಿಗೆ ಯಾವುದೇ ಪರಿಹಾರವಿಲ್ಲ. ಅನುಭವಿಸುವುದು ಮಾತ್ರ ಅದರ ಬಿಡುಗಡೆಗೆ ಇರುವ ಏಕೈಕ ಮಾರ್ಗ. ನೋವು ನುಂಗುವುದನ್ನು ಕಲಿಯಬೇಕು ಎಂದು ಹಿರಿಯರು ಹೇಳುವುದು ಆ ಕಾರಣಕ್ಕಾಗಿಯೇ ಇರಬೇಕು. ಆದರೆ ಮಾತ್ರೆ ನುಂಗಿದಷ್ಟು ಸುಲಭವಾಗಿ ನೋವು ನುಂಗಲು ಆಗುವುದಿಲ್ಲ!

ವಸುಧೇಂದ್ರ

'ನೋವನರಿಯದವರೆತ್ತ ಬಲ್ಲರು?' ಎಂಬ ಮಾತನ್ನು ಕ್ಲೀಷೆ ಎನ್ನುವಷ್ಟರ ಮಟ್ಟಿಗೆ ಕನ್ನಡ ಸಾರಸ್ವತ ಲೋಕದಲ್ಲಿ ಕೇಳುತ್ತಿರುತ್ತೇವೆ. ಅದೇ ಹೆಸರಿನ ಹಲವು ಕತೆ, ಕವನ, ಪುಸ್ತಕಗಳೂ ಪ್ರಕಟವಾಗಿವೆ. ಆದರೆ, ಬಹುತೇಕವಾಗಿ ಇದನ್ನು ನಾವು ಬಡತನ-ಸಿರಿತನದ ವ್ಯತ್ಯಾಸವನ್ನಷ್ಟೇ ಮನಸ್ಸಿನಲ್ಲಿಟ್ಟುಕೊಂಡು ಹೇಳುತ್ತಿರುತ್ತೇವೆ. ಆದರೆ, 'ನೋವು' ಎನ್ನುವುದು ಅಷ್ಟು ಸಂಕುಚಿತ ಅರ್ಥದಲ್ಲಿ ಈ ನಾಣ್ಣುಡಿಯಲ್ಲಿ ಬಳಕೆಯಾಗಿಲ್ಲ ಎನ್ನಿಸುತ್ತದೆ. ಹಲವು ಬಗೆಯ ನೋವುಗಳನ್ನು ಮನುಷ್ಯ ಅನುಭವಿಸುತ್ತಾನೆ. ದೈಹಿಕ, ಮಾನಸಿಕ, ಆರ್ಥಿಕ, ಸಾಮಾಜಿಕ, ಲೈಂಗಿಕ, ಭಿನ್ನಲಿಂಗ - ಇತ್ಯಾದಿಗಳೆಲ್ಲವೂ ಇದ್ದೇ ಇವೆ. ಆದರೆ ಇವೆಲ್ಲವೂ ಕೊನೆಗೂ ದೈಹಿಕ ಅಥವಾ ಮಾನಸಿಕ ನೋವಿನಲ್ಲಿ ಕೊನೆಗಾಣುತ್ತವೆ. ದೈಹಿಕ ನೋವಿಗೆ ಕೊಟ್ಟ ಮಹತ್ವವನ್ನು ಮಾನಸಿಕ ನೋವಿಗೆ ನಾವು ಕೊಟ್ಟಿಲ್ಲವೆನ್ನಿಸುತ್ತದೆ.

'ನೋವು' ಎನ್ನುವುದು ಸಾಪೇಕ್ಷವೆ ಅಥವಾ ನಿರಪೇಕ್ಷವೆ? ಇದು ಮೂಲಭೂತ ಪ್ರಶ್ನೆ. ಅಂದರೆ ಒಂದು ನೋವನ್ನು ಮತ್ತೊಂದು ನೋವಿನೊಡನೆ ಹೋಲಿಸಿ, ಯಾವುದು ಹೆಚ್ಚು ಅಥವಾ ಯಾವುದು ಕಡಿಮೆ ಎಂದು ಹೇಳಬಹುದೆ? ಬಹುಶಃ ಅದು ಸಾಧ್ಯವಾಗುವುದು ಎರಡೂ ನೋವನ್ನು ಅನುಭವಿಸಿದ ಅಥವಾ ಅನುಭವಿಸದೆ ಕೇವಲ ಊಹಿಸುವ ಮೂರನೆಯ ವ್ಯಕ್ತಿಯಿಂದ ಮಾತ್ರ. ಆದರೆ, ನೋವನ್ನು ಅನುಭವಿಸುತ್ತಿರುವವರಿಗೆ ತಮ್ಮದೇ ಅತ್ಯಂತ ದೊಡ್ಡ ನೋವಾಗಿರುತ್ತದೆ. ಆದ್ದರಿಂದ 'ನೋವು' ಎನ್ನುವುದು ಎಂದಿಗೂ ಸಾಪೇಕ್ಷವೇ ಆಗಿರುತ್ತದೆ ಮತ್ತು ಅನನ್ಯವಾಗಿರುತ್ತದೆ. ಒಂದು ಉದಾಹರಣೆಯನ್ನು ಗಮನಿಸಿದರೆ ಅದನ್ನು ಅರ್ಥ ಮಾಡಿಕೊಳ್ಳುವುದು ಸಾಧ್ಯ.

ಸಮಾಜದಲ್ಲಿ ಅತ್ಯಂತ ಶೋಷಣೆಗೆ ಒಳಗಾದ ದಲಿತ ಸಮುದಾಯ ಮತ್ತು ಲೈಂಗಿಕ ಅಲ್ಪಸಂಖ್ಯಾತರನ್ನು ಪರಿಗಣಿಸೋಣ. ದಲಿತರ ಮೇಲೆ ನಡೆದ ದೌರ್ಜನ್ಯ, ಅವಮಾನ, ಬಡತನ - ಎಲ್ಲವನ್ನೂ ನಾವು ಕಂಡಿದ್ದೇವೆ ಮತ್ತು ಚರಿತ್ರೆಯ ಮೂಲಕ ಅದರ ತೀವ್ರತೆಯನ್ನು ತಿಳಿದುಕೊಂಡಿದ್ದೇವೆ. ಅದೇ ರೀತಿ ಲೈಂಗಿಕ ಅಲ್ಪಸಂಖ್ಯಾತರ ಉದಾಹರಣೆಯನ್ನು ತೆಗೆದುಕೊಳ್ಳೋಣ. ಇವರೂ ಅಸಮಾನತೆ, ಅವಮಾನ, ದೌರ್ಜನ್ಯ ಎದುರಿಸಿದವರೇ ಆಗಿರುತ್ತಾರೆ. ಇವರು ಬಡವರೂ ಆಗಿರಬಹುದು, ಶ್ರೀಮಂತರೂ ಆಗಿರಬಹುದು, ಮೇಲ್ಜಾತಿಯವರೂ ಆಗಬಹುದು, ಕೆಳಜಾತಿಯವರೂ ಆಗಬಹುದು. ಎಲ್ಲ ದೇಶ-ಕಾಲದಲ್ಲೂ ಇವರು ಕಂಡು ಬರುತ್ತಾರೆ. ಆದರೆ ಇವರಿಬ್ಬರಲ್ಲಿ ಒಂದು ವ್ಯತ್ಯಾಸ ಸ್ಪಷ್ಟವಾಗಿ ಕಾಣುತ್ತದೆ. ದಲಿತ ವ್ಯಕ್ತಿಗೆ ತನ್ನದೇ ಆದ ಸಮುದಾಯವಿರುತ್ತದೆ.

ಅಂದರೆ ದಲಿತ ಮಗುವಿನ ತಂದೆ-ತಾಯಿ, ಅಕ್ಕ-ತಮ್ಮ, ನೆರೆ-ಹೊರೆ - ಎಲ್ಲರೂ ದಲಿತರೇ ಆಗಿರುವುದರಿಂದ ಇಲ್ಲಿ ಎಷ್ಟೇ ಶೋಷಣೆ ನಡೆದರೂ ಮಾನಸಿಕ ಧೈರ್ಯವಿರುತ್ತದೆ. ಇತ್ತೀಚೆಗೆ ಬಿಡುಗಡೆಯಾದ ಧನುಷ್ ನಟಿಸಿದ ತಮಿಳು ಸಿನಿಮಾ 'ಅಸುರನ್' ಅನ್ನು ಉದಾಹರಣೆಯಾಗಿ ತೆಗೆದುಕೊಳ್ಳಿ. ತನ್ನ ಮಗ ತಿಳಿಗೇಡಿಯಾಗಿ ಮಾಡಿದ ಅಪರಾಧವನ್ನೇ ದೊಡ್ಡದು ಮಾಡಿಕೊಂಡ ಮೇಲ್ಜಾತಿಯವರ ದೌರ್ಜನ್ಯವನ್ನು ಅವರಪ್ಪ ಎದುರಿಸುತ್ತಾನೆ. ಇಡೀ ಕುಟುಂಬವೇ ಮಗುವನ್ನು ಕಾಪಾಡಲು ನಿಲ್ಲುತ್ತದೆ. ಆದರೆ ಲೈಂಗಿಕ ಅಲ್ಪಸಂಖ್ಯಾತರಲ್ಲಿ ಬಹುತೇಕ ಹಾಗಾಗುವುದೇ ಇಲ್ಲ. ಏಕೆಂದರೆ ಬಹುತೇಕರು ತಮ್ಮ ಭಿನ್ನ ಲೈಂಗಿಕತೆಯನ್ನು ಬಚ್ಚಿಡುತ್ತಾರೆ. ಏಕೆಂದರೆ ಅವರ ಅಪ್ಪ-ಅಮ್ಮ, ಅಕ್ಕ-ತಮ್ಮ, ನೆರೆ-ಹೊರೆ - ಯಾರೂ ಭಿನ್ನ ಲೈಂಗಿಕರಾಗಿರುವ ಸಾಧ್ಯತೆ ಕಡಿಮೆ. ಒಂದು ವೇಳೆ ಅಂತಹವರು ಇದ್ದರೂ ಎಲ್ಲವೂ ಗೌಪ್ಯ, ಹೇಳಿಕೊಳ್ಳುವುದಿಲ್ಲ. ಒಂದು ವೇಳೆ ತನ್ನ ಪರಿಸ್ಥಿತಿಯನ್ನು ಹೇಳಿಕೊಂಡರೂ ಕಾಪಾಡಲು ಬರುವ 'ಧನುಷ್' ನಂತಹ ತಂದೆ-ಕುಟುಂಬ ಅಪರೂಪ. ಈ ವ್ಯಕ್ತಿ ಶ್ರೀಮಂತನೇ ಆಗಲಿ, ಬಡವನೇ ಆಗಲಿ - ಏಕಾಂಗಿಯಾಗಿ ನೋವಿನಲ್ಲಿ ನರಳುತ್ತಾನೆ. ದೈಹಿಕ, ಆರ್ಥಿಕ, ಸಾಮಾಜಿಕ - ಎಲ್ಲದರಲ್ಲೂ ಮೇಲಿನ ಸ್ತರದಲ್ಲಿದ್ದರೂ ಏಕಾಂಗಿಯಾಗಿ ನೋಯುವುದು ಸುಲಭವಲ್ಲ. ಹಾಗಿದ್ದರೆ ಇಲ್ಲಿ ಯಾರ ನೋವು ದೊಡ್ಡದು? ಯಾರದು ಚಿಕ್ಕದು?

ಈ ಪ್ರಶ್ನೆಗೆ ಉತ್ತರವಿಲ್ಲ. ಯಾಕೆಂದರೆ ನೋವೆನ್ನುವುದು ನಿರಪೇಕ್ಷವಾದ ಸಂಗತಿ. ಹೋಲಿಕೆಗೆ ದಕ್ಕದ, ಅಳತೆಗೋಲಿಂದ ಅಳೆಯಲಾಗದ ಸ್ಥಿತಿ. ಸಮಾಜದ ಸಂಗತಿಗಳನ್ನು ಅರ್ಥ ಮಾಡಿಕೊಂಡ ಮೂರನೆಯವರು ಯಾರಾದರೂ ಇವೆರಡನ್ನೂ ತುಲನೆ ಮಾಡಲು ಪ್ರಯತ್ನಿಸಬಹುದು. ಆದರೆ ಅನುಭವಿಸುವ ಇಬ್ಬರಿಗೂ ಅವರ ನೋವೇ ದೊಡ್ಡದಾಗಿರುತ್ತದೆ. ಈ ಮಾತು ಎಲ್ಲ ಬಗೆಯ ನೋವುಗಳಿಗೂ ಸಲ್ಲುತ್ತದೆ.

ಹಾಗಿದ್ದರೆ 'ನೋವು' ಎಂದರೇನು? ಇದು ಹೋಲಿಕೆಯಿಂದ ಹುಟ್ಟುವಂತಹದ್ದಾಗಿದೆ. ಒಂದು ಸಾಮ್ರಾಜ್ಯದಲ್ಲಿ ಇರುವವರೆಲ್ಲರೂ ಒಕ್ಕಣ್ಣರಾಗಿದ್ದರೆ, ಅಲ್ಲಿ ನೋವಿಗೆ ಆಸ್ಪದವಿರುವುದಿಲ್ಲ. ಆದರೆ ಎರಡು ಕಣ್ಣುಳ್ಳ ವ್ಯಕ್ತಿ ಅಕಸ್ಮಾತ್ತಾಗಿ ಆ ಸಾಮ್ರಾಜ್ಯಕ್ಕೆ ಭೇಟಿ ಕೊಟ್ಟು, ಅವನ ಸುಖವನ್ನು ಜನರೆಲ್ಲಾ ಗಮನಿಸಿದರೆಂದರೆ ತೀರಿತು. ನೋವಿನ ಚಿಲುಮೆ ಉಕ್ಕುತ್ತದೆ. ಶ್ರೀಮಂತ ಕಣ್ಣೆದುರು ಕಾಣುವುದರಿಂದಲೇ ನಮ್ಮ ಬಡತನ ನೋವು ನೀಡುತ್ತದೆ. ಆರೋಗ್ಯವಂಥ ವ್ಯಕ್ತಿಯನ್ನು ಕಂಡಾಗಲೇ ನಮ್ಮ ಅನಾರೋಗ್ಯ ಹೆಚ್ಚು ನೋವು ನೀಡುತ್ತದೆ. ಇದನ್ನು ಮತ್ತೊಂದು ರೀತಿಯಲ್ಲಿಯೂ ಹೇಳಬಹುದು.

10ನೇ ಪುಟಕ್ಕೆ...

ನೂತ್ತಿ ಪೂ ರಂಡು ರುಬಾ...!

ಡಾ. ಕೆ.ಎಸ್. ಪವಿತ್ರ

ನಾನು ಹುಟ್ಟಾ ಕನ್ನಡಿಗಳು. ನಮ್ಮ ಮನೆ ಮಾತಂತೂ 'ಹಳಗನ್ನಡ'ವೆಂದೇ ಭಾಸವಾಗುವ ಹವ್ಯಕ ಕನ್ನಡ. ಕನ್ನಡದಲ್ಲಿಯೇ ಓದಿ-ಬರೆದು-ಮಾತನಾಡಿದರೂ 7ನೇ ತರಗತಿಯವರೆಗೆ ಕನ್ನಡ ಮಾಧ್ಯಮಕ್ಕೆ ಕಚ್ಚಿಕೊಂಡರೂ ನನಗೆ ಭಾಷೆಗಳ ಬಗ್ಗೆ ಮೊದಲಿಂದ ಅದೇನೋ ಕುತೂಹಲ. ಅದರಲ್ಲಿಯೂ ತಮಿಳೆಂದರೆ ಕನ್ನಡದ್ದೇ ಇನ್ನೊಂದು ಅವತಾರ ಎಂಬಂತೆ ಆಕರ್ಷಣೆ. ಬಾಲ್ಯದಲ್ಲಿ ನೃತ್ಯ ಕಲಿಯುವಾಗ ಆಗ ಪ್ರಚಲಿತವಿದ್ದ ತಮಿಳು ಪದಂಗಳು, 'ವರ್ಣಂ'ಗಳು ಇವೆಲ್ಲವೂ ಅದಕ್ಕೆ ಕಾರಣವಿರಬಹುದೇನೋ. ನೃತ್ಯದಿಂದ ತಮಿಳಿನ ಪ್ರೀತಿ ಬೆಳೆಯಿತೋ ಅಥವಾ ತಮಿಳಿನ ಬಗ್ಗೆ ಬೆಳೆದ ಕುತೂಹಲದಿಂದ ನೃತ್ಯದ ಪ್ರೀತಿ ಹೆಚ್ಚಾಯಿತೋ ಹೇಳಲು ಸಾಧ್ಯವಿಲ್ಲ.

ಬಿ.ಜಿ.ಎಲ್. ಸ್ವಾಮಿಯವರ 'ತಮಿಳು ತಲೆಗಳ ನಡುವೆ', 'ಹಸುರು ಹೊನ್ನು', 'ಬೆಳದಿಂಗಳಲ್ಲಿ ಅರಳಿದ ಮೊಲ್ಲೆ ಮತ್ತು ಇತರ ಪ್ರಬಂಧಗಳು' ಈ ಮೂರೂ ಪುಸ್ತಕಗಳನ್ನು ಓದುವಾಗಲೂ ಅಷ್ಟೆ. ತಮಿಳರ ಅತಿ ಸ್ವಾಭಿಮಾನ, ಭಾಷಾ ಪ್ರೀತಿ, ಸ್ವಲ್ಪ ಹೆಡ್ಡತನ ಇವುಗಳನ್ನು ಓದಿ ನಗುವುದರ ಜೊತೆಗೆ ನಮ್ಮ ಕನ್ನಡಿಗರಲ್ಲಿ ಹಾಗಿಲ್ಲವಲ್ಲ ಎಂದು ಅಸೂಯೆ, ಸ್ವಲ್ಪ ಸಮಾಧಾನಗಳೆರಡೂ ಮೂಡಿದ್ದವು. ಆದರೆ 'ತಮಿಳು' ಪ್ರೀತಿ ಕಡಿಮೆಯಾಗಲಿಲ್ಲ! ತಮಿಳು ಸಂಸ್ಕೃತಿಯನ್ನು ಇಷ್ಟು ಸೊಗಸಾಗಿ ಪರಿಚಯಿಸಿದ ಸಸ್ಯಶಾಸ್ತ್ರ, ತಮಿಳು ಕಾವ್ಯ, ಸಂಶೋಧನೆಗಳ ಜೊತೆಗೆ ಒಂದು ಭಾಷೆಯ ಬಗ್ಗೆ ಇಷ್ಟೆಲ್ಲಾ ಆಯಾಮಗಳನ್ನು ತೆರೆದಿಟ್ಟ ಬಿ.ಜಿ.ಎಲ್. ಸ್ವಾಮಿಯವರ ಖಾಯಂ ಅಭಿಮಾನಿಯಾಗಿಬಿಟ್ಟೆ.

> ತಮಿಳನ್ನು 'ಭಾಷೆ-ಸಂಸ್ಕೃತಿ'ಯಾಗಿ ಕುತೂಹಲದಿಂದ ಗಮನಿಸುವಂತೆ ಮಾಡಿದ್ದು ಮಾತ್ರ ಮದ್ರಾಸಲ್ಲ! 'ತೂಂಗಾ ನಗರಿ' - ನಿದ್ರೆ ಮಾಡದ ನಗರ ಎಂಬ ಬಿರುದಿರದ, ಮೀನಾಕ್ಷಿ ದೇವಿಯ ಮಧುರೆ. ಮದ್ರಾಸ್‌ಗಿಂತ ಬಹು ಭಿನ್ನವಾದ ನಗರ ಇದು. ಇಲ್ಲಿಯ ಮೀನಾಕ್ಷಿ ದೇವಾಲಯದ ವೈಭವವೇ ಬೇರೆ.

ಈಗಲೂ 'ಮದ್ರಾಸ್'ಗೆ ನೃತ್ಯದ ವಿವಿಧ ಕಾರ್ಯಗಳಿಗಾಗಿ, ವೈದ್ಯಕೀಯ ಸಮ್ಮೇಳನಗಳಿಗಾಗಿ ಹೋಗುವುದು ನನಗೆ ಪ್ರಿಯ ಚಟುವಟಿಕೆಗಳಲ್ಲೊಂದು. ಈಗ ತಮಿಳರು ಕರೆಯುವಂತೆ 'ಚೆನ್ನೈ' ಅಷ್ಟು ಸುಲಭವಾಗಿ ಬಾಯಿಗೆ ಬರದಿದ್ದರೂ ಬಿಸಿಲಿನ ಝಳ ಎಂದಿಗೂ ಜೋರಾಗಿಯೇ ಇದ್ದರೂ 'ಚೆನ್ನೈ' ಚೆನ್ನಾದ ನಗರವೆಂದೇ ನನಗನ್ನಿಸುತ್ತದೆ. ಚೆನ್ನೈನ ಮೈಲಾಪೂರ ಎಂಬ ಭಾಗದ ಸುತ್ತಮುತ್ತ ಸುತ್ತಾಡುವುದು ಬೇರೆಯವರಿಗೆ ತಲೆನೋವು ತರಿಸಬಹುದು. ಆದರೆ, ನನಗೆ ಅದು ಕುಣಿದಾಡುವಷ್ಟು ಹರ್ಷ ತರುವ ಕೆಲಸ. ಸಾಲಾಗಿ ಟೆಂಪಲ್ ಆಭರಣಗಳನ್ನು ಮಾರುವ ಅಂಗಡಿಗಳು, ಯಾವ ವೇಷಭೂಷಣ/ನೃತ್ಯಕ್ಕೆ ಸಂಬಂಧಿಸಿದ ಏನನ್ನೂ ಹೋಲ್‌ಸೇಲ್ ರೇಟಿಗೆ ಮಾರುವ ದೊಡ್ಡ ಅಂಗಡಿಗಳು, ಕೆಲವೇ ಗಂಟೆಗಳಲ್ಲಿ ಡ್ರೆಸ್ ಹೊಲಿದುಕೊಡುವ ಟೈಲರ್‌ಗಳು, ಇವುಗಳ ಜೊತೆಗೆ ಅಲ್ಲೇ ಇರುವ ಕಪಾಲೀಶ್ವರ ದೇವಸ್ಥಾನ. ನಟರಾಜನಿಗೆ ಕೈ ಮುಗಿದು ಹೊರಬಂದು ಸ್ವಲ್ಪ ದೂರ ನಡೆದರೆ, ಅಲ್ಲೇ ಇರುವ ಕರ್ಪಗಂಬಾಳ ಮೆಸ್, ಕೀರವಡಾ, ಕಾಫಿ, ಪುಡಿ ದೋಸಾ ತಿನ್ನುವಾಗ ನಿಮ್ಮ ಪಕ್ಕದ ಟೇಬಲ್‌ನಲ್ಲಿ ಯಾವ ವಿಶ್ವವಿಖ್ಯಾತ ಸಂಗೀತಗಾರರೂ ಇರಬಹುದು! ನಿಮಗೆ ಗುರುತಿಸುವ ಪರಿಣತಿ ಇರಬೇಕಷ್ಟೆ.

ತಮಿಳರ ಬಟ್ಟೆಗಳ ವ್ಯಾಪಾರದ ಜಾಣತನ ಎಂಥ ಶಾಪಿಂಗ್ ನಿರಾಸಕ್ತರನ್ನೂ ಆಕರ್ಷಿಸದಿರಲು ಸಾಧ್ಯವೇ ಇಲ್ಲ. ಈಗ ಎಲ್ಲೆಡೆ ಬಟ್ಟೆಯ ಅಂಗಡಿಗಳೂ ಆನ್‌ಲೈನ್ ತಾಣಗಳೂ ಇರಬಹುದು. ಆದರೆ ಮದ್ರಾಸಿನ ಟಿ. ನಗರದ ಜನಜಂಗುಳಿ, ಬಟ್ಟೆಯ ಅಂಗಡಿಯ ವಿವಿಧ ತಂತ್ರಗಳು, ವರ್ಣಮಯ ಜಗತ್ತನ್ನು ಅನುಭವಿಸಬೇಕೆಂದರೆ ಮದ್ರಾಸ್‌ಗೆ ಹೋಗೇ ನೋಡಬೇಕು. ಟಿ. ನಗರದ ದೊಡ್ಡ ಬಟ್ಟೆ ಅಂಗಡಿಗಳಿಂದ ಸೆಟ್ ಖರೀದಿಸಿ ಎದುರಿನ ಬೀದಿಗಳನ್ನು ಹೊಕ್ಕರೆ, ಬ್ಲೌಸ್ /ಚೂಡಿದಾರ ಹೊಲಿದು ಕೊಡುವವರ ತಂಡಗಳೇ ನಮ್ಮ ಮೇಲೆ ಹಾರಿ ಬೀಳುತ್ತವೆ. ಗಂಟೆಗಳೊಳಗೆ ಹೊಲಿದೂ ಕೊಡುತ್ತಾರೆ. ಅದೂ ಬೇರೆಡೆ ಹೊಲಿಯುವ ಅರ್ಧರೇಟಿಗೆ.

ಇವೆಲ್ಲಾ ತಮಿಳಿನ ಬಗ್ಗೆ ನನ್ನ ಆಕರ್ಷಣೆ ಹೆಚ್ಚಿಸಲು ಭಾಗಶಃ ಕಾರಣಗಳಾದರೂ ನಾನು ಕುತೂಹಲದಿಂದ ತಮಿಳನ್ನು 'ಭಾಷೆ-ಸಂಸ್ಕೃತಿ'ಯಾಗಿ ಗಮನಿಸುವಂತೆ ಮಾಡಿದ್ದು ಮಾತ್ರ ಮದ್ರಾಸಲ್ಲ! 'ತೂಂಗಾ ನಗರಿ' - ನಿದ್ರೆ ಮಾಡದ ನಗರ ಎಂಬ ಬಿರುದಿರದ, ಮೀನಾಕ್ಷಿ ದೇವಿಯ ಮಧುರೆ. ಮದ್ರಾಸ್‌ಗಿಂತ ಬಹು ಭಿನ್ನವಾದ ನಗರ ಇದು. ಇಲ್ಲಿಯ ಮೀನಾಕ್ಷಿ ದೇವಾಲಯದ ವೈಭವವೇ ಬೇರೆ. ಊರ ತುಂಬ ಇರುವ ಇತರ 'ಕೋಯಿಲ್'ಗಳೆಲ್ಲವೂ ಮೀನಾಕ್ಷಿ ದೇವಾಲಯದ ಭಾಗಗಳೇ ಎಂಬಂತೆ ನನಗನ್ನಿಸುತ್ತದೆ. ದೇವಾಲಯದ ದೊಡ್ಡ ಪ್ರಾಂಗಣ, ನಾಲ್ಕು ದಿಕ್ಕುಗಳ ದ್ವಾರಗಳು, ಪುರೋಹಿತರು ಕೈಯಲ್ಲಿ ಹಿಡಿದು ಮೀನಾಕ್ಷಿಯ ಎದುರಿಗೆ, ಸುಂದರೇಶನ ಎದುರಿಗೆ ಆಶೀರ್ವಾದ ಮಾಡುವಾಗ ಹಾಕುವ ದಪ್ಪ ಗುಲಾಬಿಯ ಹಾರ ಎಲ್ಲವೂ ಮೀನಾಕ್ಷಿ-ಸುಂದರೇಶರ ಭವ್ಯತೆಯನ್ನು ಮನಸ್ಸಿನಲ್ಲಿ ಮೂಡಿಸುತ್ತವೆ. ಮೀನಾಕ್ಷಿಯಾದರೂ ಅಷ್ಟೆ, ಸ್ತ್ರೀಸಬಲತೆಯ ರೂಪವಾಗಿ, ತಂದೆ ಮಲಯಧ್ವಜನ ತರಬೇತಿಯಲ್ಲಿ ಯುದ್ಧಕಲೆಯನ್ನು ಕಲಿತವಳು. ಜಗತ್ತನ್ನೇ ಗೆದ್ದು, ನಂತರ ಸುಂದರೇಶ ರೂಪಿಯಾದ ಶಿವನನ್ನು ವರಿಸಿ, ಜಗನ್ಮಾತೆಯಾದವಳು. ಇದು ಪುರಾಣದ ಕಥೆ.



ಚೆನ್ನೈನ ಪ್ರಮುಖ ಮಾರುಕಟ್ಟೆಯಲ್ಲಿ ಗಿಜಿಗುಡುವ ಜನ

ಮಧುರೆಯಲ್ಲಿ ಹೂವು ಕೊಂಡವರಿಗಷ್ಟೇ ಗೊತ್ತು, ಅದರ ಘಮಲು, ಹರ್ಷದ ಹೊನಲು

ನನಗೆ ಮಧುರೆಯ ಇನ್ನೊಂದು ಪ್ರಮುಖ ಕೊಂಡಿಯೆಂದರೆ ಇತಿಹಾಸದ ಕಥೆಯಾದ ತಮಿಳು ಕಾವ್ಯ 'ಶಿಲಪ್ಪದಿಕಾರಂ'ನ 'ಕನ್ನಗಿ'ಯದು. ಕಾಲ್ಬಳೆಯ ಕಥೆಯಾಗಿ, ನೃತ್ಯಕ್ಕೆ ಹತ್ತಿರವಾದಂತಹ ತಮಿಳು ಮಹಾಕಾವ್ಯವಿದು. ಕೋವಲನ್ ಎಂಬ ತರುಣ, ಪತ್ನಿ ಕನ್ನಗಿಯನ್ನು ಬಿಟ್ಟು, ಮಾಧವಿ ಎಂಬ ನರ್ತಕಿಯಲ್ಲಿ ಮೋಹಿತನಾಗಿ, ಎಲ್ಲವನ್ನೂ ಕಳೆದು, ಕನ್ನಗಿಯ ಬಳಿಗೆ ವಾಪಸ್ಸಾಗುತ್ತಾನೆ. ಕನ್ನಗಿ-ಕೋವಲನ್ ತಮ್ಮ ಊರಾದ ಕಾವೇರಿ ಪಟ್ಟಣಂನಿಂದ ಮಧುರೆಗೆ ಬರುತ್ತಾರೆ. ಒಂದೂ ಕಾಸಿರದ ಕೋವಲನ್‌ಗೆ ವಜ್ರಗಳಿರುವ ತನ್ನ ಕಾಲ್ಬಳೆಯನ್ನು ಕನ್ನಗಿ ಮಾರಲು ನೀಡುತ್ತಾಳೆ. ಮಾರಲು ಹೋದ ಕೋವಲನ್ ರಾಜಪರಿವಾರದ ಆಭರಣ ಕದ್ದಿರಬಹುದು ಎಂಬ ಸಂಶಯಕ್ಕೆ ಒಳಗಾಗಿ, ಬಂಧಿತನಾಗಿ ಮರಣದಂಡನೆಗೊಳಗಾಗುತ್ತಾನೆ. ಸುದ್ದಿ ಕೇಳಿ ಕನ್ನಗಿ ರಾಜನ ಮುಂದೆ ಹೋಗಿ ನ್ಯಾಯ ಬೇಡುತ್ತಾಳೆ. ಮುತ್ತುಗಳಿರುವ ರಾಣಿಯ ಕಾಲ್ಬಳೆಯನ್ನೂ, ವಜ್ರಗಳಿರುವ ತನ್ನ ಕಾಲ್ಬಳೆಯನ್ನೂ ರಾಜನ ಮುಂದೆ ಎತ್ತಿ ಹಿಡಿಯುತ್ತಾಳೆ. ಪಶ್ಚಾತ್ತಾಪದಿಂದ ರಾಜ ಪರಿತಪಿಸುತ್ತಾ ಪ್ರಾಣ ತ್ಯಜಿಸುತ್ತಾನೆ. ತನ್ನ ನೈತಿಕತೆಯ ಬಲದಿಂದ ಕನ್ನಗಿ ಇಡೀ ಮಧುರೆಯನ್ನು ಹೊತ್ತಿ ಉರಿಯುವಂತೆ ಮಾಡುತ್ತಾಳೆ.

ಕುತೂಹಲಕರ ಅಂಶವೆಂದರೆ ಪುರಾಣ-ಇತಿಹಾಸದ ಈ ಎರಡೂ ಕಥೆಗಳಲ್ಲಿ 'ಸ್ತ್ರೀಸ್ತನ' ಒಂದು ಪ್ರಮುಖ ಅಂಶವಾಗಿರುವುದು. ಮೀನಾಕ್ಷಿ ಮಗುವಾಗಿ ಯಜ್ಞದಲ್ಲಿ ಮಲಯಧ್ವಜನಿಗೆ ದೊರಕಿದಾಗ ಅವಳಿಗೆ ಮೂರು ಸ್ತನಗಳಿರುತ್ತವೆ. ಅವುಗಳಲ್ಲಿ ಒಂದು ಆಕೆ ಮದುವೆಯಾಗುವ ಶಿವ ಎದುರಿಗೆ ಬಂದಾಗ ಮಾಯವಾಗುತ್ತದೆ ಎನ್ನುತ್ತದೆ ಅಶರೀರವಾಣಿ. ಅದೇ ಕನ್ನಗಿಯ ಕಥೆಯಲ್ಲಿ, ಪತಿಯ ಸಾವಿನಿಂದ, ಆತನಿಗಾದ ಅನ್ಯಾಯದಿಂದ ನೊಂದ ಕನ್ನಗಿ ಸ್ವತಃ ತನ್ನ ಒಂದು ಸ್ತನವನ್ನು ಕತ್ತರಿಸಿ ಮಧುರೆಯ ಮೇಲೆ ಎಸೆಯುತ್ತಾಳೆ. ಅದರಿಂದ ಮಧುರೆ ಹೊತ್ತಿ ಉರಿಯುತ್ತದೆ. ಸ್ತನ ಎಂಬುದು ಸ್ತ್ರೀತ್ವದ ಗುರುತಾಗಿರುವಂತೆಯೇ, ತಾಯ್ತನದ ಸಂಕೇತವೂ ಹೌದು. ಮಧುರೆಯ ಮೀನಾಕ್ಷಿ ದೇವಾಲಯದ ಸುತ್ತ ಕಮಲದಳಗಳಂತೆ ಹರಡಿಕೊಂಡಿರುವ ಇಡೀ ನಗರಿ ಪ್ರತಿಬಾರಿ ಹೋದಾಗ ನನಗೆ ಸ್ತ್ರೀತ್ವದ ಸಬಲತೆ-ಉಗ್ರತೆ-ತಾಯ್ತನದ ಮೃದುತ್ವಗಳನ್ನು ಏಕಕಾಲದಲ್ಲಿ ನೆನಪಿಸುತ್ತದೆ.

ಯಾವುದೇ ಭಾಷೆಯನ್ನು, ದೇಶದಂತೆ ಸ್ತ್ರೀಲಿಂಗದಿಂದ, ತಾಯಿ ಎಂಬಂತೆ ಭಾವಿಸಿಯೇ ಸಂಬೋಧಿಸುವುದು ವಾಡಿಕೆ. ಹಾಗಾಗಿಯೇ ದ್ರಾವಿಡ ಭಾಷೆಗಳನ್ನು ಅಕ್ಕ-ತಂಗಿ ಎಂದು ಕರೆದರೆ ಅದು ಸರಿಯೇ. ಚೆನ್ನೈನ ಕೆಲವು ಹೋಟೆಲುಗಳಲ್ಲಿ ಊಟಕ್ಕೆ ಹೋದರೆ ಹೊರಗೆ ಒಂದು ಸಾಂಪ್ರದಾಯಿಕ ಮಾದರಿಯ ಕುಟೀರದಲ್ಲಿ ಪಾಟ್ಟಿಯೊಬ್ಬಳು ತಿಂಡಿಗಳನ್ನು ಮಾಡುತ್ತ ಕುಳಿತಿರುತ್ತಾಳೆ. ಅವಳು ಮಾಡುವ ರುಚಿಯಾದ ತಿಂಡಿಗಳು, ನಮ್ಮ ಮಲೆನಾಡಿನ ಮನೆಗಳನ್ನು ನೆನಪಿಗೆ ತರುತ್ತವೆ. ಮಧುರೆಯ ದೇವಸ್ಥಾನಗಳಲ್ಲಿ 10 ರೂಪಾಯಿಗೊಂದರಂತೆ ದೊರೆಯುವ ದೊನ್ನೆಗಳ ಚಕ್ರ ಪೊಂಗಲ್, ಖಾರ ಪೊಂಗಲ್, ಮೆದುವಡಾ, ಪುಳಿಯೋಗರೆಗಳ ಪ್ರಸಾದ ನಮಗೂ ರುಚಿಯೆನಿಸುತ್ತದೆ. ಗಮನವಿಟ್ಟು ಆಲಿಸಿದರೆ, ತಮಿಳು ನುಡಿಗಳೆಲ್ಲವನ್ನೂ ಕನ್ನಡವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಿದೆ! ಕನ್ನಡದ 'ಬೀಡು' ತಮಿಳಿನ 'ವೀಟ್ಟು', ಕನ್ನಡದ 'ಬಳಕೆ', ತಮಿಳಿನ 'ಪಳಕಂ' ಹೀಗೆ ಕನ್ನಡ-ತಮಿಳು ಜೊತೆ ಜೊತೆಯಾಗಿ ಮುನ್ನಡೆಯುತ್ತವೆ.

ಮಧುರೆಯ ದೇವಾಲಯದ ಸುತ್ತಮುತ್ತ ಓಡಾಡುವಾಗ, ತುಂಬು ಬಿಳಿಗೂದಲ ಹಿರಿಯ ಮಹಿಳೆ ಬಂದು ಮತ್ತೆ ಮತ್ತೆ 'ನೂತ್ತಿ ಪೂ ರಂಡು ರುಬಾ' (ನೂರು ಹೂವು ಎರಡು ರೂಪಾಯಿ) ಎಂದು ಬೆನ್ನು ಹತ್ತುತ್ತಾಳೆ. ಪರಿಮಳ ಬೀರುವ 'ಮಲ್ಲಿ ಪೂ' ಮಾಲೆಯನ್ನು, ತಾನೇ ಬುಟ್ಟಿಯಿಂದ ತೆಗೆದ ಹೇರ್ ಪಿನ್ನು ತೆಗೆದು ತಲೆಗೆ ಸಿಕ್ಕಿಸಿಯೇ ನಕ್ಕು, ಕಾಸು ತಾನಾಗಿ ಕೇಳದೆ, ಸುಮ್ಮನೇ ನಿಲ್ಲುತ್ತಾಳೆ. 'ನೂತ್ತಿ ಪೂ, ರಂಡು ರುಬಾ' ಅನುರಣಿಸುವ ಆ ಕ್ಷಣಗಳಲ್ಲಿ ನಮ್ಮ ಕನ್ನಡಮ್ಮ, ತಮಿಳು ತಂಗಚ್ಚಿ, ಕನ್ನಗಿ, ಮೀನಾಕ್ಷಿ, ಕರ್ಪಗಂಬಾಳ್ ನಮ್ಮದೇ ಮುಖಗಳಾಗಿ ಮನಸ್ಸಿನಲ್ಲಿ ಮಿಂಚಿ ಮಾಯವಾಗುತ್ತಾರೆ! 'ಭಾಷೆ' 'ಸಂಸ್ಕೃತಿ' ಎಂಬ ಸ್ತ್ರೀಮುಖಗಳನ್ನು ಮತ್ತೆ ಮತ್ತೆ ನೆನಪಿಸುತ್ತಾರೆ!

ಜನಮುಖಿ ಜಾತ್ರೆ

8ನೇ ಪುಟದಿಂದ...

ಅಂದರೆ, ಬಳೆಗಳ ಅಂಗಡಿಗಳು ಒಂದೆಡೆಯಿದ್ದರೆ, ಆಟಿಕೆ ಸಾಮಗ್ರಿ ಇನ್ನೊಂದೆಡೆ. ಸಿಹಿತಿನಿಸುಗಳು ಮತ್ತೊಂದೆಡೆ. ಮನರಂಜನೆಯ ಆಟಗಳಿಗೆ ವಿಶಾಲ ಆವರಣ. ಅನತಿ ದೂರದಲ್ಲಿ ಕಂಪನಿ ನಾಟಕಗಳ ದರ್ಬಾರು! ಇಷ್ಟೇ ಇದ್ದರೆ ಅದೊಂದು ಸ್ವಾಭಾವಿಕ ಜಾತ್ರೆ. ಆದರೆ, ಇಲ್ಲಿಗೆ ಬರುವ ರೈತಾಪಿ ಜನರಿಗೆ ವ್ಯವಸಾಯದ ಮಾಹಿತಿ ನೀಡುವ ಪ್ರದರ್ಶನಾ ಮಳಿಗೆಯೂ ಸಾಕಷ್ಟು ವಿಶಾಲವೇ ಆಗಿರುತ್ತದೆ. ಕೃಷಿಗೆ ಸಂಬಂಧಿಸಿದಂತೆ ದಿನನಿತ್ಯ ಒಂದಿಲ್ಲೊಂದು ಗೋಷ್ಠಿ, ಮಾತುಕತೆ, ಚರ್ಚೆಗಳು ನಡೆಯುತ್ತವೆ.

ಗವಿಮಠ ಜಾತ್ರೆಯ ವೈಶಿಷ್ಟ್ಯ ಇರುವುದು, ಇಲ್ಲಿ ಇಳಿಸಂಜೆಯಿಂದ ತಡರಾತ್ರಿಯವರೆಗೆ ನಡೆಯುವ ಗೋಷ್ಠಿಗಳಲ್ಲಿ. ವಿಷಯ ವಿಸ್ತಾರದ ಹರಿವು ಅನನ್ಯ. ಧರ್ಮ, ಮಾನವೀಯ ಮೌಲ್ಯ, ಸಮಾಜಸೇವೆ, ಸಾಧಕರ ಜತೆ ಸಂವಾದ, ಹಾಸ್ಯಸಂಜೆ, ಸ್ಫೂರ್ತಿ ನೀಡುವ ಉಪನ್ಯಾಸ, ಶಿಕ್ಷಣ, ಅನ್ನ ಬೆಳೆಯುವ ರೈತನ ಅನುಭವ, ಪರಿಸರ ಸಂರಕ್ಷಣೆ, ಜಲಸಾಕ್ಷರತೆ – ಎಲ್ಲದಕ್ಕೂ ಇಲ್ಲಿ ಆದ್ಯತೆ. ಗವಿಮಠದ ಕೆರೆತಟದಲ್ಲಿನ ನಯನಮನೋಹರ ವೇದಿಕೆಯಲ್ಲಿ ಮೂಡಿಬರುವ ವೈವಿಧ್ಯಮಯ ಕಾರ್ಯಕ್ರಮಗಳನ್ನು ಎದುರಿನ ಕಲ್ಲುಹಾಸಿನ ಮೇಲೆ ಕುಳಿತು ಸಾವಿರಾರು ಜನರು ವೀಕ್ಷಿಸುತ್ತಾರೆ.

ಗವಿಮಠದ ಶ್ರೀಗಳಿಗೆ ಪರಿಸರ, ಕೃಷಿ ಹಾಗೂ ಜಲಸಂರಕ್ಷಣೆಯತ್ತ ಸಾಕಷ್ಟು ಕಾಳಜಿ. ಜಾತ್ರಾ ಮಹೋತ್ಸವದ ಕಾರ್ಯಕ್ರಮಗಳಲ್ಲಿ ಆ ವಿಚಾರಗಳಿಗೂ ಆದ್ಯತೆ ಇರುತ್ತದೆ. ಪದೇ ಪದೇ ನಡೆದ ಚಿಂತನೆಗಳ ಪರಿಣಾಮವಾಗಿ, 26 ಕಿ.ಮೀ ಉದ್ದದ ಹಿರೇಹಳ್ಳ (ಇದು ತುಂಗಭದ್ರೆಯ ಉಪನದಿ) ಪುನಶ್ಚೇತನದ ಕನಸು ಮೂಡಿತು. ಕೊಪ್ಪಳ ಜಿಲ್ಲೆಯಲ್ಲಿ ಹರಿಯುವ ಈ ಕಿರುನದಿಗೆ ಸಿಕ್ಕಾಪಟ್ಟೆ ಅಡ್ಡಿ ಆತಂಕ. ಹಿರೇಹಳ್ಳ ಮತ್ತೆ ಹರಿಯುವಂತೆ ಮಾಡುವ ಕನಸನ್ನು ನನಸು ಮಾಡಲು ಖುದ್ದಾಗಿ ಶ್ರೀಗಳೇ ನಿಂತರು. ನದಿಪಾತ್ರದ ಹಳ್ಳಿಗಳ ಜನರನ್ನು ಒಗ್ಗೂಡಿಸಿ, ಶ್ರಮದಾನ ವ್ಯವಸ್ಥೆ ರೂಪಿಸಿದರು. ದಾನಿಗಳು ಜೆಸಿಬಿ, ಟ್ರಾಕ್ಟರ್, ಟಿಪ್ಪರ್ ನೆರವು ನೀಡಿದರೆ, ಶ್ರಮದಾನ ಮಾಡುವವರಿಗೆ ಮಠದಿಂದ ಊಟ-ಉಪಾಹಾರದ ವ್ಯವಸ್ಥೆ ಮಾಡಲಾಯಿತು.

ಹಿರೇಹಳ್ಳದ ಪುನಶ್ಚೇತನವು ನಿಡಶೇಸಿ ಕೆರೆ ಪುನರುಜ್ಜೀವನಕ್ಕೆ ದಿಕ್ಕು ತೋರಿದರೆ, ಆ ಕೆರೆಯಿಂದ ಕಲಭಾವಿ, ಇಂದರಗಿ, ಹೊಸಳ್ಳಿ ಕೆರೆ ಸೇರಿದಂತೆ 14 ಕೆರೆಗಳ ಪುನಶ್ಚೇತನ ಸಾಧ್ಯವಾಯಿತು. ಗ್ರಾಮಸ್ಥರು, ಉದ್ಯಮಿಗಳು, ಸರ್ಕಾರದ ಇಲಾಖೆಗಳು ಧನಸಹಾಯ ಒದಗಿಸಿದರೆ, ಇದಕ್ಕೆ ಸ್ಫೂರ್ತಿ ನೀಡಿ, ಬೆಂಬಲ ಕೊಟ್ಟಿದ್ದು ಸ್ವಾಮೀಜಿಯವರೇ. ಕಳೆದ ವರ್ಷದ ಜಾತ್ರೆಯು ಕೊರೊನಾ ದೆಸೆಯಿಂದಾಗಿ ರದ್ದುಗೊಂಡಾಗ, ಶ್ರೀಗಳು ಆ ಮಹೋತ್ಸವದ ನೆನಪಿನಲ್ಲಿ 300 ಎಕರೆ ವಿಸ್ತೀರ್ಣದ ಗಿಣಗೇರಿ ಕೆರೆ ಪುನರುಜ್ಜೀವನ ಮಾಡಿದ್ದಂತೂ ಮಾದರಿ ಕಾರ್ಯ ಎನಿಸಿದೆ. ಅದರ ಜತೆ, ಕುಗ್ರಾಮ ಅಡವಿಹಳ್ಳಿಯನ್ನು ದತ್ತು ಸ್ವೀಕರಿಸಿ ಪ್ರಗತಿಯತ್ತ ಕೊಂಡೊಯ್ಯುವ ಯತ್ನ ನಡೆಯುತ್ತಿದ್ದರೆ, ದಿನದ 24 ತಾಸು ಕಾರ್ಯನಿರ್ವಹಿಸುವ ಸುಸಜ್ಜಿತ ಗ್ರಂಥಾಲಯ ಲೋಕಾರ್ಪಣೆಯಾಗಿದೆ.

ಸಮಾಜಮುಖಿ

ಲಕ್ಷಾಂತರ ಜನ ಸೇರುವ ತಾಣದಲ್ಲಿ ಒಂದಿನಿತೂ ಆಚೀಚೆಯಾಗದಂತೆ ಶಿಸ್ತು ನಿರ್ವಹಿಸುವ ಸ್ವಯಂಸೇವಕರ ಪಡೆ ಇಲ್ಲಿದೆ. ಬಾಣಸಿಗರಿಂದ ಹಿಡಿದು, ಶೌಚಾಲಯಗಳ ಸ್ವಚ್ಛತೆಯವರೆಗಿನ ಎಲ್ಲ ಕೆಲಸವನ್ನೂ ಸ್ವಯಂಸೇವಕರು ಮಾಡುತ್ತಾರೆ. ಜಾತ್ರೆ ಎಂದರೆ ದಿನವೂ ಕಸ, ತ್ಯಾಜ್ಯದ ರಾಶಿ. ಆದರೆ ಗವಿಮಠದ ಜಾತ್ರೆಯ ಆವರಣ ನಿತ್ಯವೂ ಚೊಕ್ಕಟ. ಕೆಲವೊಮ್ಮೆ ಖುದ್ದಾಗಿ ಶ್ರೀಗಳೇ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ನೋಟ ಕಾಣಿಸುತ್ತದೆ.

ಜಾತ್ರೆ ಎಂದರೆ ಬರೀ ಜನರ ಗುಂಪು ಸೇರುವ ಸಮಾರಂಭವಲ್ಲ; ಬದಲಾಗಿ ಸಮಾಜಕ್ಕೆ ಉಪಯುಕ್ತವಾಗುವ ಕಾರ್ಯಗಳ ಸಂಗಮ ಎಂಬ ಮಾತನ್ನು ಗವಿಮಠವು ಸಾಬೀತುಪಡಿಸುತ್ತಿದೆ. ಜಾತ್ರೆಯ ಅಂಗವಾಗಿ ಪ್ರತಿ ವರ್ಷವೂ ಒಂದೊಂದು ಸಮಾಜಮುಖಿ ಚಟುವಟಿಕೆ ಹಮ್ಮಿಕೊಳ್ಳುತ್ತಿದೆ. ಈವರೆಗೆ ರಕ್ತದಾನ ಶಿಬಿರ, ಜಲದೀಕ್ಷೆ (ನೀರಿನ ಸಂರಕ್ಷಣೆ), ಕೃಪಾದೃಷ್ಟಿ (ನೇತ್ರದಾನ), ಲಕ್ಷ ವೃಕ್ಷೋತ್ಸವ (ಒಂದು ಲಕ್ಷ ಸಸಿ ವಿತರಣೆ) ನಡೆದಿರುವುದು ಜಾತ್ರೆಯ ಹಿನ್ನೆಲೆಯಲ್ಲಿಯೇ.

ಮೊದಲೆಲ್ಲ ಧಾರ್ಮಿಕ ಸಂಭ್ರಮದ ನೆಲೆಯಾಗಿದ್ದ ಗವಿಮಠ ಜಾತ್ರೆ ಈಗ ಬಹುಮುಖಿ, ಸಮಾಜಮುಖಿ. ಜನಪ್ರವಾಹಕ್ಕೆ ಸರಿಯಾದ ದಿಕ್ಕು ತೋರಿಸುವ ಪ್ರಯತ್ನ ಗವಿಮಠದ್ದು. ಅದಕ್ಕೆ ಜಾತ್ರೆಯೊಂದು ನೆಪ. ಕೆಲವು ವರ್ಷಗಳ ಹಿಂದೆ ಜಾತ್ರಾ ಮಹೋತ್ಸವದ ಉದ್ಘಾಟನೆಗೆ ಬಂದಿದ್ದ ವಿಜ್ಞಾನಿ ಡಾ. ಸಿ.ಎನ್.ಆರ್. ರಾವ್ 'ಇದು ಮಹಾ ಜನಸಾಗರ; ಮಹಾ ಜನಸಾಗರ; ಜನಜಾತ್ರೆ. ಎಲ್ಲ ಜಾತ್ರೆಗಳನ್ನೂ ಮೀರಿಸುವಂತಿದೆ ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಜಾತ್ರೆ' ಎಂದು ಉದ್ಗರಿಸಿದ್ದರು.

ಇಂಥ ಜನಸಾಗರದ ಮಹಾಸಂಗಮಕ್ಕೆ ಈಗ 'ಕೊರೊನಾ' ಕಾರ್ಮೋಡದ ನೆರಳು ಕವಿದಿದೆ. ಕಳೆದ ವರ್ಷದಂತೆಯೇ ಈ ಸಲದ ಮಹೋತ್ಸವವೂ (ಜ. 19) ಸರಳ ರೀತಿಯಲ್ಲಿಯೇ ನಡೆಯಲಿದೆ. ಎರಡು ವಾರಗಳುದ್ದಕ್ಕೂ ಕಾಣುತ್ತಿದ್ದ ಅಬ್ಬರ, ಭರಾಟೆ, ಸಂಭ್ರಮಕ್ಕೆ ಅವಕಾಶವಿಲ್ಲ. ವ್ಯಾಪಾರ-ವಹಿವಾಟು ಮೂಲಕ ಒಂದಷ್ಟು ಆದಾಯ ಗಳಿಸುವ ಸಾವಿರಾರು ಜನರಿಗೆ ಇದು ತಂದೊಡ್ಡಿದ ಕಷ್ಟ ಲೆಕ್ಕಕ್ಕೆ ಸಿಗದು. ಜಾತ್ರೆಯೊಂದಿಗೆ ಭಕ್ತಿ ಭಾವನಾತ್ಮಕ ನಂಟು ಬೆಸೆದುಕೊಂಡು, ದಿನಗಟ್ಟಲೇ ಜಾತ್ರೆಯ ಸಂಭ್ರಮ ಸವಿದವರ ಎದುರಿಗೆ ಇರುವುದು- 'ಇದಕ್ಕೆ ಕೊನೆ ಯಾವಾಗ' ಎಂಬ ಉತ್ತರವಿಲ್ಲದ ಪ್ರಶ್ನೆ!

ರೊಟ್ಟಿಯ ಗುಡ್ಡ ಹ್ಯಾಂಗ ಬಿದ್ದೈತಿ ನೋಡ್ರಿ ಸಾಹೇಬ್ರ... ಚಿತ್ರ: ಭರತ್ ಕಂದಕೂರ

ಸುಕ್ರಜ್ಜಿಯ...

8ನೇ ಪುಟದಿಂದ...

ಕ್ಯಾಮೆರಾ ಆಚೆ ಬಂದೊಡನೆ, ಮಣಿ ಸರ ಹಾಕಿಕೊಂಡರು. ಹಾಲಕ್ಕಿ ಹಾಡುಗಳನ್ನು ಸಂಗ್ರಹಿಸಿದ, ಆಕಾಶವಾಣಿಯಲ್ಲಿ ಹಾಡಿದ ಅನುಭವ ಹಂಚಿಕೊಂಡ್ರು. ಸುಕ್ರಜ್ಜಿ, ಹುಷಾರಿಲ್ದಾಗ ಎಂತ ಹಟ ಮಾಡಿ, ಆಸ್ಪತ್ರೆ ವಾಸ ಬ್ಯಾಡಂದ್ರಿ ಅಂತ ಕೇಳಿದೆವು.

'ಹೋಗುವ ಟೈಮು ಬಂದ್ರೆ, ಒಂದರೆ ಗಳಿಗೆ ನಿಲ್ಲಕಾಗ್ದು. ಇರೂವರೆಗೂ ನಮ್ಮ ನಮ್ಮ ಕೆಲಸ ಮಾಡ್ಕೊಂಡು, ಹಾಡ್ಕೊಂಡು ಬದುಕಬೇಕು. ಇನ್ನೊಬ್ಬರ ಕೈ ಆಳಾಗಿ ಬದುಕಬಾರದು. ಅಲ್ಲೆಂತ ಮಾಡೂದು? ಮಲಗೂದೆಯಾ... ಹಂಗೆ ಮಲಗೂದು ಒಮ್ಮೆನೆ. ಇರುವವರೆಗೂ ಎಚ್ಚರವಾಗಿರಬೇಕು ಅಂತ್ಹೇಳಿ ಮಗುವಿನಂತೆ ನಕ್ಕರು.

ಕೋಳಿಮರಿ ಬೇಕೇನ.. ಹಾಡು ಕಲೀತಿಯೇನ? ಶಾಲೇಲಿ ಹಾಡು ಕಲಿಸ್ತಾರೇನ? ಅಂತೆಲ್ಲ ಅರ್ನಿಗೆ ಕೇಳಿದ್ರು. ಗದ್ದೇಲಿ ಕೆಲಸ ಮಾಡಬೇಕು. ಬೆಳೀಬೇಕು. ಕಾನೊಳಗೆ ಇರಬೇಕು ಎಲ್ಲ ಮುಗಿದಾಗ ಮಲಗಬೇಕು. ಅಲ್ಲಾ... ಅಂದ್ರು.

ಹಾಲಕ್ಕಿ ಸಮುದಾಯದ ಸಾಂಸ್ಕೃತಿಕ ಕೊಂಡಿ ಒಂದು ತನ್ನ ಬದುಕಿನ ಹದವನ್ನೆಲ್ಲ ಪದಕಟ್ಟಿ ಹಾಡು ಹಾಡಿ, ಇಳಿಸಂಜೆಯೊಳಗೂ ಎಚ್ಚರ ಇರುವ ಮಾತಾಡಿದಾಗ ಕಣ್ತುಂಬಿ ಬಂದಿದ್ದವು. ಮನೆಯಲ್ಲಿ ತೊಟ್ಟಿಲ ತುಂಬ ಗಂಧದ ಹೂವಿನ ಹಾರಗಳಿದ್ದವು. ಈ ಗಂಧದಂತಹ ಜೀವ, ತನ್ನ ಸುತ್ತ ಆ ಮಾಧುರ್ಯ ಹರಡಿತ್ತು.

ಬರುವಾಗ ಸುಕ್ರಜ್ಜಿಯ ಸರ, ಮಣಿಸಾಲು, ಆ ಮಣಿಸಾಲಿನೊಳಗಿರುವ ಹೋರಾಟದ ಕತೆಗಳು, ಸಂಘರ್ಷದ ಕವಿತೆಗಳು, ಸಮಾನತೆಯ ತತ್ವಗಳು ಎಲ್ಲವೂ ಒಂದಕ್ಕೊಂದು ಪೇರಿಸಿದಂತಿದ್ದವು. ಸುಕ್ರಜ್ಜಿ ನೂರು ದೀವಳಿಗೆಯ ದೀಪ ಬೆಳಗಲಿ. ಆ ಅರಿವಿನ ಕುಡಿ ಎಲ್ಲರೊಳಗೂ ಮೂಡಲಿ ಅಂತನಿಸಿದ್ದು ಸುಳ್ಳಲ್ಲ.

ಮುನ್ನೋಟ 16-01-2022 ರಿಂದ 22-01-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ರಾಜಕೀಯ ಕ್ಷೇತ್ರದಲ್ಲಿರುವವರಿಗೆ ನಿರೀಕ್ಷಿತ ಕೆಲಸಗಳು ಉತ್ತಮ ಫಲವನ್ನು ನೀಡುತ್ತವೆ. ಸ್ವಲ್ಪ ಮಟ್ಟಿನ ಧನಸಂಗ್ರಹ ಆಗುತ್ತದೆ. ಕಳ್ಳಕಾಕರ ಹಾವಳಿ ಸುಳಿವು ಇರುವುದರಿಂದ ನಿಮ್ಮ ವಸ್ತುಗಳನ್ನು ಹೆಚ್ಚು ಜೋಪಾನವಾಗಿ ನೋಡಿಕೊಳ್ಳಿರಿ. ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಗತಿಯನ್ನು ಮಾಡುವ ಕಾಲ. ಈ ಹಿಂದೆ ಅರ್ಜಿ ಸಲ್ಲಿಸಿದ ಸರ್ಕಾರಿ ಸವಲತ್ತುಗಳು ಈಗ ದೊರಕುತ್ತವೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಕೃಷಿ ಕ್ಷೇತ್ರದಲ್ಲಿ ದುಡಿಯುವವರಿಗೆ ಉತ್ತಮ ಸಹಕಾರ ದೊರೆತು ಆದಾಯ ಹೆಚ್ಚುತ್ತದೆ. ನೀವು ಮಾಡಿದ ಕಾರ್ಯದಿಂದ ನಿಮ್ಮ ಸಂಸ್ಥೆಗೆ ಲಾಭವಾಗಿ ಎಲ್ಲರೂ ಪ್ರಶಂಸಿಸುವರು. ಹಣದ ಒಳಹರಿವು ಚೇತರಿಕೆಯನ್ನು ಕಾಣುತ್ತದೆ. ಮಹಿಳೆಯರ ಆರೋಗ್ಯದಲ್ಲಿ ವ್ಯತ್ಯಾಸವನ್ನು ಕಾಣಬಹುದು. ಉಪಾಧ್ಯಾಯ ವೃತ್ತಿಯನ್ನು ಮಾಡುವವರಿಗೆ ಏಳಿಗೆ ಇರುತ್ತದೆ. ಪ್ರೀತಿ ಪ್ರೇಮದಲ್ಲಿ ಸಿಲುಕಿರುವವರಿಗೆ ಶುಭ ಫಲವಿರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಹೈನುಗಾರಿಕೆಯಲ್ಲಿ ತೊಡಗಿಕೊಂಡಿರುವವರಿಗೆ ಆದಾಯ ಹೆಚ್ಚುತ್ತದೆ. ನಿಮಗೆ ಬರಬೇಕಾಗಿದ್ದ ಬಾಕಿ ಹಣ ಈಗ ಬರುವ ಸಾಧ್ಯತೆ ಇದೆ. ಸರ್ಕಾರಿ ಕಚೇರಿಗಳ ವ್ಯವಹಾರಗಳು ಸುಗಮವಾಗಿ ಆಗುತ್ತವೆ. ಹಿರಿಯರ ಅನಾರೋಗ್ಯದಿಂದ ಹೆಚ್ಚು ಖರ್ಚು ಆಗಬಹುದು. ನಿಮ್ಮ ವ್ಯವಹಾರದಲ್ಲಿ ಸಾಮಾನ್ಯವಾದ ಬೆಳವಣಿಗೆಯನ್ನು ಕಾಣಬಹುದು. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ವ್ಯಾಪಾರದ ಒಳ ಗುಟ್ಟುಗಳನ್ನು ಕರಗತ ಮಾಡಿಕೊಳ್ಳುವಿರಿ. ಆರ್ಥಿಕ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವತ್ತ ಗಮನ ಹರಿಸುವಿರಿ. ಹಣದ ಒಳಹರಿವು ನಿರೀಕ್ಷೆಯ ಮಟ್ಟದಲ್ಲಿ ಇದ್ದೇ ಇರುತ್ತದೆ. ಕೆಲಸದಲ್ಲಿ ಹೆಚ್ಚು ಜಾಗರೂಕರಾಗಿರುವುದು ಬಹಳ ಉತ್ತಮ. ಆಧ್ಯಾತ್ಮಿಕ ವಿಷಯಗಳಲ್ಲಿ ತೊಡಗಿಸಿಕೊಂಡಿರುವವರಿಗೆ ಪ್ರಗತಿ ಇರುತ್ತದೆ. ದಾಂಪತ್ಯದ ಸಮಸ್ಯೆಗಳು ನಿವಾರಣೆಯಾಗಿ ಮನಸ್ಸಿಗೆ ಸಂತೋಷವೆನಿಸುತ್ತದೆ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ವಿದ್ಯಾರ್ಥಿಗಳಿಗೆ ಉತ್ತಮ ಪ್ರಗತಿ ಇರಲಿದೆ. ಮಕ್ಕಳಿಂದ ನಿಮಗೆ ಧನಸಹಾಯ ದೊರೆಯುವ ಸಾಧ್ಯತೆ ಇದೆ. ಜನಪ್ರತಿನಿಧಿಗಳಿಗೆ ಸಮೂಹದಲ್ಲಿ ಮುಜುಗರ ಉಂಟಾಗುವ ಸಂದರ್ಭಗಳು ಎದುರಾಗಬಹುದು. ದೂರ ಪ್ರಯಾಣದಿಂದ ಆರೋಗ್ಯ ಸಮಸ್ಯೆ ಕಾಣಿಸಬಹುದು. ಒಂದೆಡೆ ಸಾಲ ಪಡೆದು ಉಳಿದ ಕೈ ಸಾಲ ತೀರಿಸಬಹುದು. ಕಚೇರಿ ಕೆಲಸದ ಮೇಲೆ ವಿದೇಶ ಪ್ರಯಾಣ ಬರಬಹುದು.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನೆರೆಹೊರೆಯವರೊಂದಿಗೆ ಬಾಂಧವ್ಯವನ್ನು ವೃದ್ಧಿಮಾಡಿಕೊಳ್ಳುವಿರಿ. ವ್ಯವಹಾರಗಳಲ್ಲಿ ತಕ್ಕಮಟ್ಟಿನ ಚೇತರಿಕೆಯನ್ನು ಕಾಣಬಹುದು. ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗದ ಬಗ್ಗೆ ಗೊಂದಲ ಮೂಡಬಹುದು. ವಾಹನ ವಿಷಯದಲ್ಲಿ ಜಾಗರೂಕರಾಗಿರುವುದು ಒಳ್ಳೆಯದು. ದೂರದಲ್ಲಿರುವ ಮಿತ್ರರಿಂದ ನಿಮಗೆ ಸಹಾಯ ದೊರೆಯುತ್ತದೆ. ಅನವಶ್ಯಕ ವ್ಯವಹಾರಗಳಿಗೆ ತಲೆ ಹಾಕದಿರುವುದು ಒಳ್ಳೆಯದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖ 1,2,3

ನಿಮ್ಮ ಕೆಲಸ ಕಾರ್ಯಗಳು ನಿರೀಕ್ಷೆಯಂತೆ ನಡೆಯದೆ ಸ್ವಲ್ಪ ಬೇಸರವಾಗಬಹುದು. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಧನಸಹಾಯ ಒದಗಿಬರುತ್ತದೆ. ಸಂಗಾತಿಯ ಮನರಂಜನೆಗಾಗಿ ಹೆಚ್ಚಿನ ವೆಚ್ಚವನ್ನು ಮಾಡಬೇಕಾಗಬಹುದು. ಶತ್ರುಗಳ ಯೋಜನೆಗಳನ್ನು ಧ್ವಂಸ ಮಾಡುವಂತಹ ತಂತ್ರಗಳನ್ನು ರೂಪಿಸುವಿರಿ. ವಿಶೇಷ ವ್ಯಕ್ತಿಯ ಭೇಟಿಯ ಕಾಲವು ಮುಂದೂಡಲ್ಪಡುತ್ತದೆ.

ವೃಶ್ಚಿಕ — ವಿಶಾಖ 4 ಅನೂರಾಧ, ಜ್ಯೇಷ್ಠ

ಉದ್ಯೋಗದಲ್ಲಿ ಒಳ್ಳೆಯ ಹೆಸರನ್ನು ಪಡೆಯುವಿರಿ. ಮನೆ ನಿರ್ಮಾಣಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಅಭಿವೃದ್ಧಿಯನ್ನು ಕಾಣುವಿರಿ. ನಿಮ್ಮ ನಡೆ-ನುಡಿಯಿಂದ ಜನರಿಂದ ಗೌರವ ಪಡೆಯುವಿರಿ. ಕೆಲವು ಮಹಿಳೆಯರಿಗೆ ವಸ್ತ್ರಾಭರಣಗಳನ್ನು ಖರೀದಿ ಮಾಡುವ ಯೋಗವಿದೆ. ಹಳೆಯ ಸಾಲಗಳಿಂದ ವಿಮುಕ್ತಿ ಪಡೆಯುವಿರಿ. ರಾಜಕಾರಣಿಗಳಿಗೆ ಯಶಸ್ಸಿನ ವಾರವಾಗಿರುತ್ತದೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1

ನಿಮ್ಮ ಪಾಲಿನ ಕೆಲಸವನ್ನು ಸರಾಗವಾಗಿ ಮಾಡಿ ಮುಗಿಸುತ್ತೀರಿ. ದೂರದೂರುಗಳಿಗೆ ಪ್ರಯಾಣ ಮಾಡುವ ಸಾಧ್ಯತೆಗಳಿವೆ. ಹಣದ ಒಳಹರಿವು ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ಬೇರೆಯವರ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡುವಿರಿ. ಖರ್ಚುಗಳು ಅನಿರೀಕ್ಷಿತವಾಗಿ ಎದುರಾಗಬಹುದು. ವ್ಯವಹಾರದ ಕೆಲವೊಂದು ವಿಚಾರಗಳನ್ನು ಯಾರಿಗೂ ಹೇಳದಿರುವುದು ಬಹಳ ಉತ್ತಮ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಮಕ್ಕಳಿಂದ ಆಗುತ್ತಿದ್ದ ಸಮಸ್ಯೆಗಳು ಕಡಿಮೆಯಾಗುತ್ತವೆ. ಅಧಿಕಾರಸ್ಥ ಮಹಿಳೆಯರಿಗೆ ನೆಮ್ಮದಿ ಕದಡುವ ಸಂದರ್ಭವಿದೆ. ವ್ಯಾಪಾರ-ವ್ಯವಹಾರದಲ್ಲಿ ಸಾಮಾನ್ಯ ಲಾಭ ಇರುತ್ತದೆ. ಔಷಧಿ ವ್ಯಾಪಾರ ಮಾಡುವವರಿಗೆ ವ್ಯಾಪಾರದಲ್ಲಿ ಹೆಚ್ಚಳವಾಗುತ್ತದೆ. ಪ್ರಸೂತಿ ವೈದ್ಯರಿಗೆ ಬೇಡಿಕೆ ಹೆಚ್ಚಾಗುವ ಸಾಧ್ಯತೆಗಳಿವೆ. ಸಹೋದರರಿಂದ ನಿಮ್ಮ ಕೆಲಸಗಳಿಗೆ ಹೆಚ್ಚಿನ ಸಹಕಾರ ದೊರೆಯುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ವೈಯಕ್ತಿಕ ಬದುಕಿನಲ್ಲಿ ಸಾಕಷ್ಟು ಹಿತಕರ ಬದಲಾವಣೆಯನ್ನು ಕಾಣಬಹುದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ಹುಮ್ಮಸ್ಸು ತರುವ ವಾರವಾಗಿರುತ್ತದೆ. ಚಿನ್ನ, ಬೆಳ್ಳಿ ವ್ಯಾಪಾರಸ್ಥರಿಗೆ ವ್ಯಾಪಾರ ಹೆಚ್ಚಾಗಿ ಲಾಭ ಬರುತ್ತದೆ. ಸ್ವಂತ ಉದ್ಯೋಗ ಮಾಡುವವರಿಗೆ ಬೇಕಾದ ಸಾಲ ಸೌಲಭ್ಯಗಳು ದೊರೆಯುತ್ತವೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಅವಕಾಶ ಒದಗುತ್ತದೆ. ಹಿರಿಯರ ಸಹಕಾರದಿಂದ ನಿಮ್ಮ ವ್ಯವಹಾರಗಳಲ್ಲಿ ಯಶಸ್ಸನ್ನು ಕಾಣಬಹುದು. ಬೇರೆಯವರ ಪಾಲಾಗಿದ್ದ ನಿಮ್ಮ ಪೂರ್ವಿಕರ ಆಸ್ತಿಯನ್ನು ಖರೀದಿ ಮಾಡಲು ತಯಾರಿ ನಡೆಸುವಿರಿ. ಆಸ್ತಿ ದಾಖಲೆಗಳಲ್ಲಿದ್ದ ವ್ಯತ್ಯಾಸಗಳು ಸರಿಯಾಗುತ್ತವೆ. ಮಗಳ ವಿದ್ಯಾಭ್ಯಾಸದಲ್ಲಿ ಪ್ರಗತಿ ಇರುತ್ತದೆ. ಆರೋಗ್ಯದ ಬಗ್ಗೆ ವಿಶೇಷ ಕಾಳಜಿಯನ್ನು ತೆಗೆದುಕೊಳ್ಳಿರಿ.

ಪದಬಂಧ 2722



ಮೇಲಿನಿಂದ ಕೆಳಕ್ಕೆ

1. ಮೇಲ್ನೋಟಕ್ಕಷ್ಟೆ ಸೀಮಿತವಾದದ್ದು 3
2. ವಿದ್ಯುಚ್ಛಕ್ತಿಯ ಆಂಗ್ಲ ಪದ ಕನ್ನಡದಲ್ಲಿ 3
3. ಹರಡುತ್ತಾ ವ್ಯಾಪಿಸಿದೆ 4
4. ಪತ್ರಿಕೆ, ಪುಸ್ತಕ ಪ್ರಕಟಣೆಯಲ್ಲಿ ತಪ್ಪಾದಾಗ ನೀಡುವ ಕರೆಕ್ಷನ್ 4
7. ಜಲಗಜದ ಕನ್ನಡ ಹೆಸರು 3
8. ಸುತ್ತಿಬರುವ ದೂರದ ಮಾರ್ಗ 5
9. ಗುಡು ಗುಡು ಹೊಗೆಯನ್ನು ಎಳೆದು ಬಿಡುವ ತಂಬಾಕು ದಾನಿ 4
10. ವ್ರೋಟಿಗೆ ಬಲೆ ಬೀಸಿದರೆ ಸಿಗುವ ಧರ್ಮದ ಕೊಡುಗೆ 4
12. ಬೆಟ್ಟದಿಂದ ಧುಮ್ಮಿಕ್ಕಿ ಹರಿಯುವ ನೀರಿನಂತೆ ಮಾತು ಹರಿದಾಗ 3
13. ತಾಯನ್ನು ಅತಿ ಪ್ರೀತಿ ಗೌರವಗಳಿಂದ ನೋಡುವವ 4
14. ಶ್ರೇಷ್ಠ ಗುಲಾಮನಂತಹ ಮಹಾ ಭಕ್ತ 4
15. ಕಿವಿಯಿಂದ ಹುಟ್ಟಿ ಬಂದವ 3
16. ನಗರದಲ್ಲಿ ಬಾರಿಸುವ ಡೊಳ್ಳು ವಾದ್ಯ 3

ಎಡದಿಂದ ಬಲಕ್ಕೆ

1. ದಾರಿ ತೋರಿಸುವ ಬೆಳಕು 4
3. ಸೂರ್ಯಮಂಡಲದಲ್ಲಾಗುವ ಸಂಪೂರ್ಣ ಕ್ರಾಂತಿಗೆ ಎಳ್ಳುಬೆಲ್ಲದ ಸಡಗರ 3
5. ನಯ ನಾಜೂಕುಗಳಿಲ್ಲದ ಗುಣ ವಕಾರ ಪ್ರಿಯನ ಬಾಯಲ್ಲಿ ಹೀಗೆ ಹೊರಳುತ್ತದೆ 6
6. ಕಲುಷಿತ ಜಲ 4
8. ಬೆಂಗಳೂರಿನ ದಕ್ಷಿಣ ಭಾಗದಲ್ಲಿರುವ ವೃಷಭ ಮಂಟಪ 6
10. ಗೃಹದ ಮುಂದೆ ಬೃಂದಾವನ ಮತ್ತು ರಂಗವಲ್ಲಿಯ ಆವರಣ 5
11. ಈ ಹಳೆಯ ಊರಿಂದ ಹಾಗಕ್ಕೆ ಎಮ್ಮೆ ಗಿಮ್ಮೆ ತಂದರೆ ಗಿಂದ್ರೆ ... ಎಂಬ ಸರಿಜಗಳ 5
13. ಮನುಷ್ಯನ ಹಿತಾಸಕ್ತಿ ಕಾಪಾಡುವ ಸೈದ್ಧಾಂತಿಕ 6
15. ಆಫ್ರಿಕಾ ಜನರಿಗೆ ಬಿಳಿಯರು ಇಟ್ಟ ಹೆಸರು 4
17. ಕೊಡುವುದರಲ್ಲಿ ಕಲಿಯಾಗಿ ಕಿವಿಯಿಂದ ಕಿವಿಗೆ ಖ್ಯಾತಿಪಡೆದವ 6
18. ಮುಟ್ಟಿದ್ದನ್ನು ಚಿನ್ನವಾಗಿಸುವ ವರ ಪಡೆದು ಮರುಗಿ ನೊಂದವ 3
19. ಕನ್ನಡಿಗರು ಗೆಲುವಿಗೆ ಭಾರಿಸುವ ಘೋಷದ ಡಂಕಾ 4

ಪದಬಂಧ ಉತ್ತರ -2721

ಮೇಲಿಂದ ಕೆಳಕ್ಕೆ

1. ಕಾತುರ 2.ಮನೋಕಾರಕ 3.ಕಪಾಲಿ 4.ಮಧುವನ 5.ಜಾತಿಬಲ 6. ಜನಪದನಾಟಕ 8.ಕಾವೇರಿಜಲಾಶಯ 13.ನವಪ 14.ಜನಮನ 16.ದಮನಕಾರಿ 18.ಕವಿರಾಜ 21.ರುಜಿನ 23.ವಸಂತಿ

ಎಡದಿಂದ ಬಲಕ್ಕೆ

1. ಕಾರ್ಯಕ್ರಮ 3.ಕಲಿಭೀಮ 5.ಜಾರಜ 7.ಕಾವ್ಯಮಾಲಿಕಾ 9.ನಗರ 10.ವೇಮನ 11.ಬಳಪ 12.ಕನಕಾಂಬರಿ 15.ನಾದಸಂಪದ 17.ಲಾಲನ 18.ಕಪಟ 19.ಮಹೇಶ 20.ಕರುಣಾಮನ 22.ಯವನ 24.ಜಯಗಾನ 25.ರಿಯಾಯಿತಿ

ಯಾರಿಗೂ ಕಾಣದ್ದು ಕವಿಗೆ ಕಾಣುವುದು

ರಘುನಾಥ ಚ.ಹ.

ವಿಮರ್ಶೆ

ಎದೆ ಹಾಲಿನ ಪಾಳಿ
ಲೇ: ಆರಿಫ್ ರಾಜಾ
ಪ್ರ: ಸಂಗಾತ ಪುಸ್ತಕ
ಸಂ: 9341757653
ಪು: 160 ₹150

ಕವಿತೆಯ ಹೊರತು ಬೇರೇನನ್ನೂ ಬರೆಯದಿರುವ ಹಾಗೂ ಬರೆದುದೆಲ್ಲವನ್ನೂ ಕವಿತೆಯಾಗಿಸುವ ಹಟ ತೊಟ್ಟವರಂತೆ ಕಾವ್ಯಧ್ಯಾನದಲ್ಲಿ ಮುಳುಗಿರುವ ಆರಿಫ್ ರಾಜಾ ಅವರ ಹೊಸ ಕವನ ಸಂಕಲನ 'ಎದೆ ಹಾಲಿನ ಪಾಳಿ.' ಮೊದಲ ಸಂಕಲನದ ಕವಿಗಳೇ ಹೆಚ್ಚಾಗಿರುವ ಕನ್ನಡ ಕಾವ್ಯಸಂದರ್ಭದಲ್ಲಿ, ಐದನೇ ಸಂಕಲನದ ವೇಳೆಗೂ ಸಹೃದಯರ ಮನಸ್ಸಿನಲ್ಲಿ ಕಾವ್ಯದಲೆಗಳನ್ನು ಮೂಡಿಸುವ ಕಸುವು ಉಳಿಸಿಕೊಂಡಿರುವುದು ಹಾಗೂ ಕಸುಬುದಾರಿಕೆಯನ್ನು ಸತತವಾಗಿ ನಿಶಿತಗೊಳಿಸಿಕೊಳ್ಳುತ್ತಿರುವುದು ಕವಿಯಾಗಿ ಆರಿಫ್‌ರ ಬಹುದೊಡ್ಡ ಸಾಧನೆ. ಅವರ ಓರಗೆಯ ಕವಿಗಳು ಕಾವ್ಯಪಯಣದಲ್ಲಿ ಈಗ ಎಲ್ಲಿ ನಿಂತಿದ್ದಾರೆ ಎನ್ನುವುದನ್ನು ಗಮನಿಸಿದರೆ ಆರಿಫ್‌ರ ಸಾಧನೆ ನಿಚ್ಚಳವಾಗುತ್ತದೆ.

'ಒಂದು ಮುತ್ತಿನ ಭಾಷೆ' ಹೆಸರಿನ ಕವಿತೆ ಕೊನೆಗೊಳ್ಳುವುದು ಹೀಗೆ: 'ನನಗೆ ಗೊತ್ತಿರುವುದಿಷ್ಟೆ / ಒಂದು ಮುತ್ತಿನ ಭಾಷೆ / ಒಂದು ತುತ್ತಿನ ಭಾಷೆ / ಒಂದು ಹೊತ್ತಿನ ಭಾಷೆ'. ಈ ಸಾಲುಗಳೊಂದಿಗೆ 'ಕಾವ್ಯ ನನ್ನ ಹೊರಗಿನ ಗದ್ದಲವಲ್ಲ, ನನ್ನೊಳಗಿನ ಗದ್ದಲವೂ ಹೌದು' ಎನ್ನುವ ಕವಿಯ ಮಾತನ್ನೂ ನೆನಪಿಸಿಕೊಂಡರೆ, ಆರಿಫ್‌ರ ಕಾವ್ಯದ ಪ್ರವೇಶಕ್ಕೊಂದು ದಾರಿ ದೊರೆಯುತ್ತದೆ. ಮುತ್ತು, ತುತ್ತು ಹಾಗೂ ಹೊತ್ತು – ಇವೆಲ್ಲವೂ ಹಸಿವಿನ ಬೇರೆ ಬೇರೆ ರೂಪಗಳಷ್ಟೆ. ಈ ಬಹುರೂಪಿ ಹಸಿವಿನ ಧ್ಯಾನ ವರ್ತಮಾನದೊಂದಿಗಿನ ಅನುಸಂಧಾನವಲ್ಲದೆ ಬೇರೇನಲ್ಲ. ಈ ಅನುಸಂಧಾನ ಯಾವ ಬಗೆಯದೆನ್ನುವುದಕ್ಕೆ ಪ್ರಾತಿನಿಧಿಕವಾಗಿ 'ಈ ನೆತ್ತರು ಎಷ್ಟೊಂದು ಹರಾಮಿ', 'ಶಾಪ' ಹಾಗೂ 'ಲೈವ್ ಷೋ' ಕವಿತೆಗಳನ್ನು ಗಮನಿಸಬಹುದು.

'ಲೈವ್ ಷೋ' ಕವಿತೆ ಮೂರು ದೃಶ್ಯಗಳ ಶಬ್ದಚಿತ್ರ. ಮೊದಲ ದೃಶ್ಯದಲ್ಲಿ ವ್ಯಕ್ತಿಯೊಬ್ಬನನ್ನು ಬೆಡ್‌ರೂಮಿನಿಂದ ಬಯಲಿನ ಚೌಕಕ್ಕೆ ಎಳೆತಂದು ಕೈಗಳ ಕಟ್ಟಿ, ಹಿಂಬದಿಯಿಂದ ಗುಂಡು ಹಾರಿಸುವ ಘಟನೆ ಟೀವಿಯಲ್ಲಿ ಬಿತ್ತರಗೊಳ್ಳುತ್ತಿದೆ. ಆ ದೃಶ್ಯದ ಬೆನ್ನಿಗೇ ಫೇರ್ ಆ್ಯಂಡ್ ಲವ್ಲಿ, ಸೋಪು, ಶಾಂಪು, ಪರ್‌ಫ್ಯೂಮ್‌ಗಳ ಜಾಹೀರಾತು. ನಂತರದ ದೃಶ್ಯದಲ್ಲಿ ಕ್ಯಾಮೆರಾ ಎದುರು ನಿಂತಿರುವ ಗುಂಡು ಹಾರಿಸಿದ ಸಮವಸ್ತ್ರಧಾರಿಗಳು – 'ನಾವು ನಮ್ಮ ಕರ್ತವ್ಯ ಮಾಡಿದ್ದೇವೆ ಅಷ್ಟೇ' ಎಂದು ನಿರ್ಲಿಪ್ತವಾಗಿ ಹೇಳುತ್ತಿದ್ದಾರೆ. ಏನನ್ನು ಬಿಡಿಸಿ ಹೇಳುವುದು, ದೇಶಪ್ರೇಮದ ಧರ್ಮನಿಷ್ಠೆಯ ಈ ಜಗತ್ತಿನಲ್ಲಿ ಎಲ್ಲರೂ ಮಾಡುತ್ತಿರುವುದು ಅವರವರ ಕರ್ತವ್ಯಗಳನ್ನಷ್ಟೇ.

ಎದುರಾಳಿಯ ಎರಡು ಕಣ್ಣು ಹೋಗುವುದಾದರೆ ನನ್ನ ಒಂದು ಕಣ್ಣು ಹೋದರೂ ಪರವಾಗಿಲ್ಲ ಎನ್ನುವ ಎಲ್ಲ ಕಾಲದ ಮನೋಭಾವ ಆಧುನಿಕ ಸಂದರ್ಭದಲ್ಲಿ ಮತ್ತಷ್ಟು ತೀವ್ರಗೊಂಡಿರುವುದನ್ನು 'ಶಾಪ' ಕವಿತೆ ತಣ್ಣಗೆ ಕಟ್ಟಿಕೊಡುತ್ತದೆ. ನನಗಾಗುವ ನೋವು ಅವನನ್ನು ಗಾಯಗೊಳಿಸುವುದೆನ್ನುವ ಗುಟ್ಟು ತಿಳಿದ ಅವನು, 'ತನಗೆ ತಾನೇ ಹಿಂಸಿಸಿಕೊಂಡು / ದಿನಾ ರಾತ್ರಿ / ನನಗೆ ನೋವುಣಿಸುತ್ತಿದ್ದಾನೆ.' ಹಿಂಸೆಯೆನ್ನುವುದು ಜೀವನವಿಧಾನವೇ ಆಗಿರುವ ಸಂದರ್ಭ ಶಾಪವಲ್ಲದೆ ಮತ್ತಿನ್ನೇನು? ಈ 'ಶಾಪ'ವನ್ನು ಚಿತ್ರಿಸಲಿಕ್ಕೆ ಕವಿಗೆ ಬೇಕಾಗಿರುವುದು ಇಪ್ಪತ್ತಾರು ಶಬ್ದಗಳಷ್ಟೇ ಎನ್ನುವುದು ಕಾವ್ಯಕ್ಕಿರುವ ಶಕ್ತಿಯನ್ನೂ ಕವಿಯ ಶಕ್ತಿಯನ್ನೂ ಸೂಚಿಸುವಂತಿದೆ.

ಸರಿ, ಹಿಂಸೆಯೇ ಸುಖವೆನ್ನಿಸುತ್ತಿರುವುದಕ್ಕೆ ಕಾರಣವೇನಿರಬಹುದು? ಈ ಪ್ರಶ್ನೆಗೆ ಉತ್ತರವನ್ನು 'ಈ ನೆತ್ತರು ಎಷ್ಟೊಂದು ಹರಾಮಿ' ಕವಿತೆಯಲ್ಲಿ ಹುಡುಕಬಹುದು. 'ನನ್ನ ಗರ್ಭದಿಂದ ಚಿಮ್ಮಿದ / ಮೊತ್ತ ಮೊದಲ ನೆತ್ತರ ಹನಿ / ಈ ನೆಲಕ್ಕೆ ಬಿದ್ದು ಗೊಬ್ಬರವಾಯಿತು ಗೆಳೆಯಾ' ಎಂದು ಆರಂಭವಾಗುವ ನೆತ್ತರ ಕವಿತೆ, 'ಎಲೆ ಮಿತ್ರಾ / ನೆತ್ತರಿನಿಂದ ದೂರವೆಂದರೆ / ಏನೆಂದು ಗೊತ್ತಾ ನಿನಗೆ? / ನೆತ್ತರಿಗೆ ಹತ್ತಿರವೆಂದರೆ / ಎಷ್ಟೊಂದು ಹತ್ತಿರ ಗೊತ್ತಾ ಕೊನೆಗೆ?' ಎಂದು ಕೊನೆಗೊಳ್ಳುತ್ತದೆ. ವರ್ತಮಾನದ ದಂದುಗಗಳಿಗೆ ಬೆನ್ನುಹಾಕಿ – ಹಸಿವು, ಬಡತನ, ಶೋಷಣೆಯನ್ನೂ ರಮ್ಯವಾಗಿ ಚಿತ್ರಿಸುವ ಸೌಂದರ್ಯೋಪಾಸಕರು, ರಸತಜ್ಞರನ್ನು ತಿವಿಯುವಂತಿರುವ ಈ ಕವಿತೆ, ವ್ಯಕ್ತಿ ಹಾಗೂ ಸಮಷ್ಟಿಯ ಪ್ರತಿ ಹಂತದಲ್ಲೂ ನೆತ್ತರ ಕಲೆ ಇರುವುದನ್ನು ಕಾಣಿಸುತ್ತದೆ. ಈ ರಕ್ತ ಎಷ್ಟೊಂದು ಬಗೆಯದು: ಮಗುವಿನ ರಕ್ತ, ವೃದ್ಧೆಯ ರಕ್ತ, ಲಂಗ ದಾವಣಿಗಂಟಿದ ಹುಡುಗಿಯ ಚೀರುರಕ್ತ, ಕಂಬನಿಯ ಸೋಗಿನಲಿ ಜಿನುಗುವ ರಕ್ತ, ಬರಿಗಾಲಲಿ ನಡೆದೂ ನಡೆದೂ ದಾಸವಾಳದ ದಳಗಳಾದ ಕೊರೊನಾ ಯಾತ್ರಿಗಳ ಕಡುಗೆಂಪು ರಕ್ತ, ಬರಗಾಲದ ಕೆರೆಯಂತಹ ಹಿಮ್ಮಡಿಯಲಿ ಹಸಿಬಿಸಿಯಾಗಿ ಹೆಪ್ಪುಗಟ್ಟಿದ ರಕ್ತ... ಹೀಗೆ ಎಲ್ಲೆಡೆ ರಕ್ತವೇ ಇದ್ದರೂ, ರಕ್ತವೆಂದರೆ ಹಿಂಜರಿಯುವವರನ್ನು ಕವಿತೆ ಆಶ್ಚರ್ಯದಿಂದ ಪ್ರಶ್ನಿಸುತ್ತದೆ: 'ನಿನ್ನ ತಾಯಿಯ ತೊಡೆಸಂದಿಯಿಂದ ಬರುವಾಗಲೇ / ನೆತ್ತರ ಸ್ನಾನ ಮಾಡಿ ಬಂದವ ನೀನು / ಈಗ ಬೀದಿಯಲ್ಲಿ ಬಿದ್ದ ರಕ್ತವ ನೋಡಿ / ಮಾರು ದೂರ ಸರಿದು ನಿಲ್ಲುತ್ತೀಯಾ!'

ತುದಿಮೊದಲಿಲ್ಲದ ಸಂಕಟಗಳ ಕುರಿತು ಹಾಡಿದರೂ, 'ಮುರಿದ ಆಟಿಕೆಯೊಂದಿಗೆ ಮಗು / ಹೇಗೆ ತಿಳಿಸಿ ಹೇಳುವುದು ಶಿವನೆ / ಮುರಿಯುವುದು ಮಾತ್ರ ಮನುಷ್ಯರ ಕೆಲಸ / ಜೋಡಿಸುವುದಲ್ಲ' ಎನ್ನುವ ವಿಷಾದವಿದ್ದರೂ ಆರಿಫ್‌ರ ಕಾವ್ಯ ಜೀವಕಾರುಣ್ಯದ ಬಗ್ಗೆ ಭರವಸೆ ಕಳೆದುಕೊಳ್ಳುವುದಿಲ್ಲ. 'ಕೊಲ್ಲುವುದಕ್ಕೆಂದೇ ಬಂದವರು ನೀವು / ಕೊಂದಾದ ಮೇಲೆ ಏನು ಮಾಡುವಿರಿ?' (ಎದೆ ಹಾಲಿನ ಪಾಳಿ) ಎಂದು ಹಿಂಸೆ-ಸಾವಿನ ನಿರರ್ಥಕತೆಯತ್ತ ಗಮನಸೆಳೆಯುವ ಕವಿ, ಈ ಕ್ಷೋಭೆಯ ಕೊನೆಗೆ ಜಗತ್ತು ತಾಯಿಯ ಮೊಲೆ ಹಾಲಿನತ್ತ ಮೊಗ ಹೊರಳಿಸಬೇಕಾದುದು ಅನಿವಾರ್ಯ ಎಂದು ನಂಬಿದ್ದಾರೆ. 'ಯಾರೇನ ಹೇಳಲಿ / ಇದು ಎದೆ ಹಾಲಿನ ಪಾಳಿ / ನೆತ್ತರೋ ಹಾಲೊ / ಕೆಚ್ಚಲಿಗೆ ಬಾಯಿ ಹಚ್ಚಿದವರೇ ಎಲ್ಲಾ' ಎನ್ನುವ ದರ್ಶನ ಇಲ್ಲಿದೆ.

ಶಬ್ದ ಸದ್ದಾಗಿಯಷ್ಟೇ ಕೊನೆಗೊಳ್ಳುವ ಉದಾಹರಣೆಗಳೇ ಹೆಚ್ಚಾಗಿರುವ ಸಂದರ್ಭದಲ್ಲಿ ಭಾಷೆಯ ಧ್ವನಿಶಕ್ತಿಯ ಬಗ್ಗೆ ಆರಿಫ್‌ರಂಥ ಕವಿಗಳು ನಂಬಿಕೆ ಮೂಡಿಸುತ್ತಾರೆ. ಭಾಷೆ, ಭಾವಕೋಶ ಹಾಗೂ ವಿಚಾರ ಅಭಿನ್ನವಾಗಿರುವ ಅವರ ಕವಿತೆಗಳು ಓದುಗರನ್ನು ದಣಿಸುವುದಿಲ್ಲ. ಅರ್ಥದ ಪದರುಗಳನ್ನು ಬಿಟ್ಟುಕೊಟ್ಟೂ ಬೆಡಗಿನಂತೆ ಉಳಿಯುವ, ಪ್ರತಿ ಓದಿನೊಂದಿಗೂ ಬೆಳೆಯುವ ರಚನೆಗಳು ಅವರವು. ಮನಸ್ಸನ್ನು ಪ್ರಫುಲ್ಲಗೊಳಿಸುವ ಜೊತೆಜೊತೆಗೇ ಕದಡುವ ಕಾವ್ಯಗುಣದ ಅನುಭವಕ್ಕೆ ಆರಿಫ್‌ರ ಕಾವ್ಯವನ್ನು ಓದಬೇಕು.

ಮನು ವಿ. ದೇವದೇವನ್ ಅವರ ಮುನ್ನುಡಿ ಆರಿಫ್ ಕಾವ್ಯವನ್ನು ಬೆಲೆಗಟ್ಟುವ ಕೆಲಸ ಮಾಡಿದೆ. ಮುನ್ನುಡಿಕಾರರ ಕಾವ್ಯನೋಟಗಳು ಕುತೂಹಲಕರವಾಗಿವೆ. ಆದರೆ, ಕನ್ನಡಕಾವ್ಯ ಪರಂಪರೆಯಲ್ಲಿ ಆರಿಫ್‌ರನ್ನು ಎಲ್ಲಿ ಮತ್ತು ಹೇಗೆ ಗುರ್ತಿಸಬೇಕು ಎನ್ನುವ ಪ್ರಯತ್ನದಲ್ಲಿ ಅವರು ಕನ್ನಡ ಕಾವ್ಯಕ್ಷಿತಿಜವನ್ನೇ ಸಂಕುಚಿತಗೊಳಿಸಿದಂತೆ ಕಾಣಿಸುತ್ತದೆ.

ಮೊದಲ ಓದು

ಸಾಂಸ್ಕೃತಿಕ ಜಗತ್ತಿನ ಅನನ್ಯ ಚಿತ್ರಣ

ಜಗತ್ತು ಅಭೂತಪೂರ್ವ ಬದಲಾವಣೆಯನ್ನು ಕಂಡ ಕಾಲಘಟ್ಟ – ಕಳೆದ ಶತಮಾನ. ಅದು ಕೈಗಾರಿಕಾ ಕ್ರಾಂತಿಯೇ ಆಗಿರಬಹುದು, ಕಲ್ಪನಾತೀತವಾಗಿದ್ದ ಸಾಮಾಜಿಕ, ರಾಜಕೀಯ ಪಲ್ಲಟಗಳೇ ಆಗಿರಬಹುದು, ಬದುಕಿನ ಗತಿಯನ್ನೇ ಬದಲಿಸಿದ ವೈಜ್ಞಾನಿಕ ಪ್ರಗತಿಯೇ ಆಗಿರಬಹುದು. ಅಬ್ಬಬ್ಬಾ, ಎಂತೆಂಥ ಸೋಜಿಗದ ಸ್ಥಿತ್ಯಂತರಗಳಿಗೆ ಕಳೆದ ಶತಮಾನ ಸಾಕ್ಷಿಯಾಗಿದೆ. ಅಂತೆಯೇ ಜಗತ್ತಿನ ಸಾಂಸ್ಕೃತಿಕ ಚಹರೆಯು ಬದಲಾದ ಕಾಲಘಟ್ಟ ಕೂಡ ಇದಾಗಿದೆ. ಹಾಗಾದರೆ ಆಗ ಭಾರತೀಯ ಸಾಂಸ್ಕೃತಿಕ ಜಗತ್ತಿನಲ್ಲಿ ಏನೆಲ್ಲ ಮಹತ್ತರ ಬದಲಾವಣೆಗಳು ಘಟಿಸಿವೆ? ನಾಗತಿಹಳ್ಳಿ ಚಂದ್ರಶೇಖರ ಅವರು ಸಂಪಾದಿಸಿರುವ 'ಶತಮಾನದಂಚಿನಲಿ' ಕೃತಿಯ ಮುಖ್ಯ ಪ್ರಶ್ನೆ ಇದೇ ಆಗಿದೆ. ದಶಕಗಳ ಹಿಂದೆಯೇ ಬಂದ ಈ ಕೃತಿ ಈಗ ಮರುಮುದ್ರಣ ಕಂಡಿದೆ.



ಶತಮಾನದಂಚಿನಲಿ
ಸಂಪಾದಕ: ನಾಗತಿಹಳ್ಳಿ ಚಂದ್ರಶೇಖರ
ಪ್ರ: ಅಭಿವ್ಯಕ್ತಿ
ಸಂ: 9481435460
ಪು: 180 ₹180

ಕಳೆದ ಶತಮಾನದ ಹಲವು ಸ್ಥಿತ್ಯಂತರಗಳಿಗೆ ಸಾಕ್ಷಿಯಾಗಿದ್ದ ಹದಿನೆಂಟು ಜನ ಚಿಂತಕರು, ಲೇಖಕರು ಹಾಗೂ ಕಲಾವಿದರ ಮುಂದೆ ಹನ್ನೆರಡು ಪ್ರಶ್ನೆಗಳನ್ನಿಟ್ಟು, ಪಡೆದ ಉತ್ತರಗಳೇ ಈ ಕೃತಿಯ ಲೇಖನಗಳಾಗಿವೆ. ಸಾಹಿತ್ಯ, ಸಿನಿಮಾ, ರಂಗಭೂಮಿ, ಕಲೆ ಮತ್ತು ಪರಿಸರದ ಕುರಿತು ಇಲ್ಲಿನ ಲೇಖನಗಳು ಮಾತನಾಡುತ್ತವೆ. ಜಿ.ಎಸ್. ಶಿವರುದ್ರಪ್ಪ, ಎ.ಎನ್. ಮೂರ್ತಿರಾವ್, ಎಲ್.ಎಸ್.ಶೇಷಗಿರಿರಾವ್, ಗಿರೀಶ ಕಾರ್ನಾಡ, ಬಿ.ಸಿ. ರಾಮಚಂದ್ರ ಶರ್ಮ, ಎಂ.ಎಚ್. ಕೃಷ್ಣಯ್ಯ, ಗಿರಡ್ಡಿ ಗೋವಿಂದರಾಜ್, ಗಿರೀಶ ಕಾಸರವಳ್ಳಿ, ಬರಗೂರು ರಾಮಚಂದ್ರಪ್ಪ ಮೊದಲಾದವರ ವಿದ್ವತ್‌ಪೂರ್ಣ ಹಾಗೂ ತಲಸ್ಪರ್ಶಿ ಲೇಖನಗಳು ಇಲ್ಲಿವೆ. ಜಗತ್ತಿನ ಸಂಸ್ಕೃತಿಯ ಹಿನ್ನೆಲೆಯಲ್ಲಿ ಭಾರತೀಯತೆಯನ್ನು ಅವುಗಳು ಚರ್ಚೆ ಮಾಡಿವೆ.

'ಶತಮಾನದ ಹಿನ್ನೋಟ' ಎಂಬ ಲೇಖನದಲ್ಲಿ ಜಿಎಸ್‌ಎಸ್, ಸಾಹಿತ್ಯ ಪರಂಪರೆಯ ನಿರ್ಮಾಣ ಹಾಗೂ ಮುಂದುವರಿಕೆಯನ್ನು ವಿವರವಾಗಿ ವಿಶ್ಲೇಷಿಸಿ, ಈಗ ಎಲ್ಲ ಚಳವಳಿಗಳೂ ಮುಗಿದಿದ್ದು ಮುಂದಿನ ದಾರಿಯನ್ನು ಕಂಡುಕೊಳ್ಳಬೇಕಿದೆ ಎಂಬ ಅಭಿಪ್ರಾಯವನ್ನು ಮಂಡಿಸಿದ್ದಾರೆ. ನಾವು ನಿಜವಾದ ವೈಚಾರಿಕ ನೆಲೆಯಲ್ಲಿ ಸ್ವತಂತ್ರವಾದ, ಸ್ವಾವಲಂಬಿಯಾದ, ಆತ್ಮ ಗೌರವವುಳ್ಳ ವಿಶಿಷ್ಟ ವ್ಯಕ್ತಿಗಳಾಗಿ ರೂಪುಗೊಳ್ಳುವುದು ಹೇಗೆ ಎಂಬ ಪ್ರಶ್ನೆಯನ್ನೂ ಅವರು ಮುಂದಿಟ್ಟಿದ್ದಾರೆ.

ಕಾರ್ನಾಡರ ಬರಹವು ಇಂಗ್ಲಿಷರ ಬಳವಳಿಯಾದ ನಗರ ಸಂಸ್ಕೃತಿಯ ಕುರಿತು ಚರ್ಚಿಸಿದೆ. ಸಿನಿಮಾ, ರಂಗಭೂಮಿ ಹಾಗೂ ಪರಿಸರಕ್ಕೆ ಸಂಬಂಧಿಸಿದ ಅನನ್ಯ ಬರಹಗಳು ಕೃತಿಯ ಮೌಲ್ಯವನ್ನು ಹೆಚ್ಚಿಸಿವೆ. ಕೃತಿಗೆ ಲಂಕೇಶರ ಮುನ್ನುಡಿ ಬೇರೆ ಇದೆ. ಆ ಲೇಖನದಲ್ಲಿ ಜಿಎಸ್‌ಎಸ್ ಸೇರಿದಂತೆ ಬಹುತೇಕ ಲೇಖಕರನ್ನು ಅವರು ಕುಟುಕಿದ್ದಾರೆ. 'ತಾರತಮ್ಯದ ಗ್ರಹಿಕೆಯ ಕೊರತೆ', 'ಅಸ್ಪಷ್ಟ ಗೊಣಗಾಟ', 'ಕುಕಾವ್ಯದ ಅಡ್ಡದಾರಿ', 'ಕಣಿ ಹೇಳುವುದು', 'ಮೊಸಳೆ ಕಣ್ಣೀರು', 'ಚಿಂತನೆಯ ಅಭಾವ' ಎಂದೆಲ್ಲ ಇಲ್ಲಿನ ಲೇಖನಗಳನ್ನು ಟೀಕಿಸಿದ್ದಾರೆ. ಈ ಅಭಿಪ್ರಾಯವನ್ನು ಒಪ್ಪುವುದಿಲ್ಲ ಎಂದು ನಾಗತಿಹಳ್ಳಿಯವರು ಆರಂಭದಲ್ಲೇ ಸ್ಪಷ್ಟಪಡಿಸಿದ್ದಾರೆ. 'ಲಂಕೇಶರ ಬೈಗುಳ ಹೊಟ್ಟೆಕಿಚ್ಚಿನ ಹತಾಶ ವ್ಯಕ್ತಿಯ ಕಾರುವಿಕೆಯಾಗಿ ಕಾಣುತ್ತದೆ' ಎಂದು ಸುಮತೀಂದ್ರ ನಾಡಿಗ್ ಅವರು ಈ ಕೃತಿಗೆ ಬರೆದ ವಿಮರ್ಶೆಯಲ್ಲಿ ಅಭಿಪ್ರಾಯಪಟ್ಟಿದ್ದ ನೆನಪು. 'ಆಹ್ವಾನಿತ ಬರಹಗಳಿಗೆ ಅನಾಯಾಸ ಮಂಗಳಾರತಿ' ಎನ್ನುವುದು ಅವರ ವಿಮರ್ಶಾಬರಹಕ್ಕೆ ಕೊಟ್ಟಿದ್ದ ತಲೆಬರಹವಾಗಿತ್ತು. ಆಗಿನ ಸಾಂಸ್ಕೃತಿಕ ಚಹರೆಯ ದರ್ಶನಕ್ಕೆ ಈ ಎರಡು ಲೇಖನಗಳೂ ನೆರವಿಗೆ ಬಂದಾವು.

ಆದರ್ಶಗಳ ಕಪ್ಪು–ಬಿಳುಪು ನೋಟ

ಬಿ.ಎಂ.ಹನೀಫ್

ಕತೆ ಡಬ್ಬಿ
ಲೇ: ರಂಜನಿ ರಾಘವನ್
ಪ್ರ: ಬಹುರೂಪಿ
ಸಂ: 7019182729
ಪು: 172 ₹200

ರಂಜನಿ ರಾಘವನ್ ಕನ್ನಡದ ಟಿವಿ ಧಾರಾವಾಹಿ ಪ್ರಿಯರಿಗೆ ಪರಿಚಿತ ಹೆಸರು. 'ಪುಟ್ಟಗೌರಿ ಮದುವೆ' ಧಾರಾವಾಹಿಯ ಮೂಲಕ ಕನ್ನಡಿಗರ ಮನಸ್ಸು ಗೆದ್ದು, 'ಕನ್ನಡತಿ' ಧಾರಾವಾಹಿಯ ಮೂಲಕ ಜನಪ್ರಿಯತೆಯ ತುದಿಗೇರಿದವರು. ಜೊತೆಗೆ ಈಗ ಸಿನಿಮಾ, ವೆಬ್ ಸರಣಿಯ ನಟನೆ ಮತ್ತು ಚಿತ್ರಕಥೆ ಬರೆಯುವುದರ ಮೂಲಕ ಬಿಡುವಿಲ್ಲದ ದಿನಚರಿಯಲ್ಲಿ ತೊಡಗಿದವರು. ಅವರ ಮೊದಲ ಕಥಾ ಸಂಕಲನ 'ಕತೆ ಡಬ್ಬಿ' ಜೀವನದಲ್ಲಿ ಕಂಡುಂಡದ್ದೇ ಎನ್ನಬಹುದಾದ ಹಲವು ಘಟನೆಗಳ ಕಥಾವಿಸ್ತರಣೆಯಾಗಿದೆ.

ಕುಟುಂಬದಲ್ಲಿ ಬದಲಾಗುತ್ತಿರುವ ಮನುಷ್ಯ ಸಂಬಂಧಗಳ ಮರುವ್ಯಾಖ್ಯೆ ಇಲ್ಲಿಯ ಬಹುತೇಕ ಕಥೆಗಳಲ್ಲಿ ಎದ್ದು ಕಾಣುವ ಅಂಶ. ಸರಳ ಕನ್ನಡದಲ್ಲಿ ನೇರವಾಗಿ ಕಥೆ ಹೇಳುವ ರಂಜನಿಯವರು, ಓದುಗರ ಕುತೂಹಲ ಕಾಯ್ದುಕೊಳ್ಳುವಂತೆ ಇಲ್ಲಿ ಅನುಭವವನ್ನು ಕಟ್ಟಿಕೊಟ್ಟಿದ್ದಾರೆ. ಕಥೆಯ ಓಘಕ್ಕೆ ಎಲ್ಲೂ ತಡೆಯಾಗದಂತೆ ಸರಾಗವಾಗಿ ಘಟನೆಗಳನ್ನು ನಿರೂಪಿಸುತ್ತಾರೆ.

ಒಟ್ಟು 14 ಕಥೆಗಳಿರುವ ಈ ಡಬ್ಬಿಯಲ್ಲಿ ಅನುಭವದ ವೈವಿಧ್ಯ ಗಮನ ಸೆಳೆಯುತ್ತದೆ. ಎಲ್ಲ ಕಥೆಗಳಲ್ಲೂ ಮನುಷ್ಯರ ಒಳಿತು ಕೆಡುಕುಗಳ ಕುರಿತ ಜಿಜ್ಞಾಸೆಯಿದೆ. ಕೆಲವು ಕಥೆಗಳ ಪಾತ್ರಗಳು ಮನಸ್ಸಿನಲ್ಲಿ ಅಚ್ಚೊತ್ತಿದಂತೆ ನಿಲ್ಲುತ್ತವೆ. ಉದಾಹರಣೆಗೆ 'ಕ್ಯಾಬ್ ವಿ ಮೆಟ್' ಕಥೆಯ ಡ್ರೈವರ್ ತಿಮ್ಮೇಶ್, 'ಚುಚ್ಚುಮದ್ದಿನ ಸೈಡ್ ಎಫೆಕ್ಟ್' ಕಥೆಯ ನರಹರಿ ಶರ್ಮಾ, 'ನಂಜನಗೂಡು ಟು ನ್ಯೂಜೆರ್ಸಿ'ಯ ಕನಕಮ್ಮ, 'ದೇವರು ಕಾಣೆಯಾಗಿದ್ದಾರೆ' ಕಥೆಯ ಗೋಪಾಲಾಚಾರಿ- ಹೀಗೆ ಹಲವು ಪಾತ್ರಗಳನ್ನು ಹೆಸರಿಸಬಹುದು. ಸಂಕಲನದ ವೈವಿಧ್ಯವನ್ನು ಸೂಚಿಸುವಂತೆ ಒಂದು ಕಥೆಯಲ್ಲಿ ಕೋತಿ ಮತ್ತು ಅದರ ಮರಿಯೇ ಮುಖ್ಯ ಪಾತ್ರಗಳಾಗಿವೆ.

ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ ಎನ್ನುವುದೇ ಕಥೆಯ ಯಶಸ್ಸು ಎಂದುಕೊಂಡರೆ ಇಲ್ಲಿರುವ ಹೆಚ್ಚಿನವು ಯಶಸ್ವೀ ಕಥೆಗಳೇ. ಆದರೆ ಕಥೆಯೊಂದು ಓದುಗರ ಮನಸ್ಸಿನಲ್ಲಿ ಬೆಳೆಯಬೇಕಾದರೆ, ಪರಿಣಾಮಕಾರಿಯಾಗಿ ಕಾಡಬೇಕಾದರೆ ಇದಿಷ್ಟೇ ಸಾಕಾಗುವುದಿಲ್ಲ. ಅಲ್ಲಿರುವ ಪಾತ್ರಗಳ ನಡುವಣ ತಾಕಲಾಟ ಹೊಸ ಅರ್ಥಗಳನ್ನು ಹೊಳೆಯಿಸಬೇಕಾಗುತ್ತದೆ. ಇಲ್ಲಿಯ ಬಹುತೇಕ ಕಥೆಗಳಲ್ಲಿ ಆದರ್ಶ ಪಾತ್ರಗಳ ಚಿತ್ರಣ ಮತ್ತು ಉಪದೇಶದ ಧಾಟಿಯೇ ಮುಖ್ಯವಾಗಿ ಮನುಷ್ಯಲೋಕದ ವೈವಿಧ್ಯಮಯ ಬಣ್ಣಗಳು ಗೈರುಹಾಜರಾಗಿವೆ. ಒಳಿತು-ಕೆಡುಕುಗಳ ಕಪ್ಪು–ಬಿಳುಪು ಚಿತ್ರಣವೇ ಇಲ್ಲಿನ ಕಥೆಗಳ ಮುಖ್ಯ ಮಿತಿ. ಕಥೆಗೂ ಪ್ರಬಂಧಕ್ಕೂ ನಡುವಣ ವ್ಯತ್ಯಾಸವೇ ಇಲ್ಲವಾದಂತೆ ಕಾಣುವ 'ಹಂಗ್ರೀ ಮ್ಯಾನ್' ಎನ್ನುವ ಕಥೆಯೂ ಇಲ್ಲಿದೆ. ಹಲವು ಕಥೆಗಳಲ್ಲಿ ಕಥೆಗಾರ್ತಿಯ ಇಂತಹ ಉಪದೇಶಪ್ರಿಯತೆ ಓದಿನ ಓಘಕ್ಕೆ ತಡೆಯೊಡ್ಡುತ್ತದೆ.

ಬುದ್ಧಿಯೇ ಪ್ರಮುಖ ಪಾತ್ರ ವಹಿಸುವ ಇಲ್ಲಿನ ಕಥೆಗಳಲ್ಲಿ ಇಂಗ್ಲಿಷ್ ಶಬ್ದಗಳ ಜಾಣ ಬಳಕೆ, ನಗರಕೇಂದ್ರಿತ ವಸ್ತುಗಳ ಸಿನಿಮೀಯ ನಿರೂಪಣೆ, ಅನಿರೀಕ್ಷಿತ ತಿರುವಿನೊಂದಿಗೆ ಕಥೆಯನ್ನು ಮುಕ್ತಾಯಗೊಳಿಸುವುದು- ಮುಂತಾಗಿ ಹಳೆಕಾಲದ ತಂತ್ರಗಳು ಎದ್ದುಕಾಣುತ್ತಿವೆ. ಸಿನಿಮಾ ಮತ್ತು ಟಿವಿ ಧಾರಾವಾಹಿಗಳ ಪ್ರಭಾವ ಇದಕ್ಕೆ ಕಾರಣ ಇರಬಹುದು. ಇಂತಹ ದುರ್ಬಲ ಘಳಿಗೆಗಳನ್ನು ಮೀರಿ ನಿಂತು, ಕಥನ ಕ್ರಿಯೆ ಮತ್ತು ಭಾಷೆಯ ಜೀವಂತಿಕೆಯನ್ನು ರೂಢಿಸಿಕೊಂಡರೆ ಈ ಕಥೆಗಾರ್ತಿಯಿಂದ ಗಮನಾರ್ಹ ಕಥೆಗಳನ್ನು ನಿರೀಕ್ಷಿಸಬಹುದು. ಅಂದವಾದ ಮುದ್ರಣ, ವಿನ್ಯಾಸ ಈ ಕೃತಿಯ ಹೆಚ್ಚುಗಾರಿಕೆ ಎನ್ನುವುದಂತೂ ನಿಜ.

ಕಥೆ
ರಂಗಸ್ವಾಮಿ ಮಾರ್ಲಬಂಡಿ
ಅವರ
ಕುಲ್ಕಣ್ಣಿ ಮಾಡಿಸದ ಸಂಬಳ
ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ಕವನ
ಚಾಂದ್ ಪಾಷ ಎನ್. ಎಸ್.
ಅವರ
ಈ ಸಾವನ್ನೊಮ್ಮೆ ಸ್ವಾಗತಿಸು!
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

ಏಷ್ಯಾದ ಬೆಳಕು
ಎಡ್ವಿನ್ ಅರ್ನಾಲ್ಡ್‌ರ ಬುದ್ಧನ ಕಾವ್ಯ ಕುರಿತು
ಜೈರಾಮ್ ರಮೇಶ್ ಅವರು ಬರೆದ
ವಿದ್ವತ್‌ಪೂರ್ಣ ಕೃತಿ ಕುರಿತು
ಸುದೀರ್ಘ ವಿಶ್ಲೇಷಣೆ ವೆಬ್‌ಸೈಟ್‌ನಲ್ಲಿ
ಪ್ರೊ. ಕೆ.ಈ. ರಾಧಾಕೃಷ್ಣ ಅವರಿಂದ
https://www.prajavani.net

ಮುಳುಗಿಹೋದ ಸಮೃದ್ಧ ಸಂಸ್ಕೃತಿಯ ಕಥನ

ಗಣಪತಿ ಶರ್ಮ

ಒಳನೋಟ

ಪ್ರಸ್ಥಾನ
ಲೇ: ಡಾ. ಶ್ರೀಧರ ಎಚ್.ಜಿ. ಮುಂಡಿಗೆಹಳ್ಳ
ಪ್ರ: ಶ್ರೀ ರಾಜೇಂದ್ರ ಪ್ರಿಂಟರ್ಸ್ ಆ್ಯಂಡ್ ಪಬ್ಲಿಷರ್ಸ್, ಮೈಸೂರು
ಸಂ: 0821-2476019
ಪು: 592 ₹500

'ಪ್ರಸ್ಥಾನ', ಇದು ಬಲವಂತದ ಒಕ್ಕಲೆಬ್ಬಿಸುವಿಕೆಯ ಸಂಕಟಗಳನ್ನು ಕಟ್ಟಿಕೊಡುವ ಕಾದಂಬರಿ. ಅಭಿವೃದ್ಧಿಯ ಹೆಸರಿನಲ್ಲಿ ಅಣೆಕಟ್ಟೆಯ ನೀರಿನಲ್ಲಿ ಶಾಶ್ವತವಾಗಿ ಮುಳುಗಿಹೋದ ಸಂಸ್ಕೃತಿಯೊಂದರ ಚಿತ್ರಣವನ್ನು ಕಾವ್ಯಸತ್ಯದ ಚೌಕಟ್ಟಿನಲ್ಲಿ, ವಾಸ್ತವಕ್ಕೆ ಕುಂದುಂಟಾಗದಂತೆ ಓದುಗರಿಗೆ ಮನದಟ್ಟು ಮಾಡಿಸುತ್ತದೆ. ಶರಾವತಿ ನದಿಗೆ ಮಡೆನೂರು ಹಾಗೂ ಲಿಂಗನಮಕ್ಕಿಯಲ್ಲಿ ಅಣೆಕಟ್ಟು ಕಟ್ಟುವಾಗ ಆ ಪ್ರದೇಶದ ಜನಮಾನಸದಲ್ಲಿ ಉಂಟಾದ ತಲ್ಲಣ ಈ ಕಾದಂಬರಿಯಲ್ಲಿದೆ. ಶ್ರಮ ಸಂಸ್ಕೃತಿಯನ್ನೇ ಉಸಿರಾಗಿಸಿಕೊಂಡಿದ್ದ, ತಮ್ಮದೇ ಆದ ಪ್ರಪಂಚದಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತಿದ್ದ ಗ್ರಾಮೀಣ ಪ್ರದೇಶದ ಜನರ ಮೇಲೆ ಅಭಿವೃದ್ಧಿಯ ಹೆಸರಿನಲ್ಲಿ ಆದ ಗದಾಪ್ರಹಾರದ ಚಿತ್ರಣ ಕಾದಂಬರಿಯಲ್ಲಿ ಹರಳುಗಟ್ಟಿದೆ.

ನದಿಗಳನ್ನೇ ಅವಲಂಬಿಸಿಕೊಂಡು ಹಲವು ನಾಗರಿಕತೆಗಳು ಬೆಳೆದಿವೆ. ಭಾರತದ ಇತಿಹಾಸದಲ್ಲಿ ನದಿ ಪಾತ್ರಗಳಿಗೆ ವಿಶೇಷ ಸ್ಥಾನವಿದೆ. ಅಂತೆಯೇ ಶರಾವತಿ ನದಿಯ ಬಲದಂಡೆ ಹಾಗೂ ಎಡದಂಡೆಗಳಲ್ಲಿ ವಾಸಿಸುತ್ತಿರುವ ಜನಜೀವನದ ಸಂಸ್ಕೃತಿಯ ಸೊಬಗು ಕಾದಂಬರಿಯಲ್ಲಿ ಮೈದಳೆದಿದೆ. ಪ್ರಕೃತಿ-ಮಾನವ, ಮನುಷ್ಯ-ಮನುಷ್ಯ, ಜನ ಹಾಗೂ ಪ್ರಾಣಿ-ಪಕ್ಷಿಗಳ ನಡುವಣ ಬಾಂಧವ್ಯವೂ ಅನಾವರಣಗೊಂಡಿದೆ. ಹರಿವ ನೀರನ್ನು ತಡೆಹಿಡಿಯುವ ಪ್ರಯತ್ನದಲ್ಲಿ ಆ ಸಂಬಂಧಗಳು ಹೇಗೆ 'ನೀರು ಪಾಲಾದವು' ಎಂಬುದನ್ನೂ ಮನೋಜ್ಞವಾಗಿ ಕಟ್ಟಿಕೊಡಲಾಗಿದೆ.

'ಕೆಳಗಿನ ಬರುವೆ' ಎಂಬಲ್ಲಿನ ಸೂರಯ್ಯ ಅವರ ಮಗಳ ಮದುವೆಯ ವರ್ಣನೆಯೊಂದಿಗೆ ಆರಂಭವಾಗುವ ಕಥೆಯಲ್ಲಿ, ಮಲೆನಾಡಿನ ಸಮೃದ್ಧ ಸಂಸ್ಕೃತಿಯ ಚಿತ್ರಣವಿದೆ. ಸೂರಯ್ಯನವರ ಮಗ ಗೋಪಾಲಕೃಷ್ಣ (ಗೋಪಣ್ಣ) ಉನ್ನತ ಶಿಕ್ಷಣಕ್ಕೆಂದು ಮೈಸೂರಿಗೆ ಹೋಗುವುದು, ಅಲ್ಲಿ ಶಂಕರರಾಯರು ಎಂಬ ಸರ್ಕಾರಿ ನೌಕರರೊಬ್ಬರ ಮನೆಯಲ್ಲಿ ಅತ ಉಳಿದುಕೊಳ್ಳುವುದು, ಅವರ ಮಗಳನ್ನೇ ಮದುವೆಯಾಗುವುದು, ನಂತರ ತಮ್ಮದೇ ಊರಿನ ಇತರ ಯುವಕರ ಉನ್ನತ ಶಿಕ್ಷಣಕ್ಕೂ ನೆರವಾಗುವುದು ಗ್ರಾಮೀಣ ಜನರ ಪರೋಪಕಾರದ ಮನೋಭಾವಕ್ಕೆ ಹಿಡಿದ ಕನ್ನಡಿ. ಮತ್ತೊಂದೆಡೆ ಎಲ್ಲಿಂದಲೋ 'ಬರುವೆ'ಗೆ ಬಂದು ಜೊತೆಯಾದ 'ರಾಮಣ್ಣ'ನನ್ನು ತಮ್ಮದೇ ಮಗನಂತೆ ಸೂರಯ್ಯನವರು ಕಾಣುವುದು, ತಮ್ಮ ಆಸ್ತಿಯಲ್ಲಿ ಒಂದು ಭಾಗವನ್ನು ಆತನಿಗೇ ನೀಡುವುದು, ಗ್ರಾಮೀಣ ಜನರು ಮನುಷ್ಯ ಸಂಬಂಧಗಳನ್ನು ಕಾಣುವ ರೀತಿಗೆ ದ್ಯೋತಕ. ಮಾನವ ಮತ್ತು ಪ್ರಾಣಿ ಜಗತ್ತಿನ ಸಂಬಂಧ ಕೂಡ ಕಾದಂಬರಿಯಲ್ಲಿ ಅತ್ಯಂತ ಮಾರ್ಮಿಕವಾಗಿ ನಿರೂಪಣೆಗೊಂಡಿದೆ.

ಸ್ವಾತಂತ್ರ್ಯಪೂರ್ವದಲ್ಲಿ ಮಹಾತ್ಮ ಗಾಂಧಿ ಪ್ರಣೀತ ಚಳವಳಿಗಳು ಗ್ರಾಮೀಣ ಬದುಕಿನ ಮೇಲೆ ಬೀರಿದ ಪರಿಣಾಮವನ್ನೂ ಕಾದಂಬರಿಯಲ್ಲಿ ಕಾಣಬಹುದು. ಮಡೆನೂರಿಗೆ ಅಣೆಕಟ್ಟೆ ಕಟ್ಟುತ್ತಾರೆ ಎಂಬ ವಿಚಾರ ತಿಳಿಯುತ್ತಿದ್ದಂತೆ ಸೂರಯ್ಯನವರ ನೇತೃತ್ವದಲ್ಲಿ ಆರಂಭವಾದ ಚಳವಳಿ ಇದಕ್ಕೆ ಸಾಕ್ಷಿ. ಅಣೆಕಟ್ಟೆ ನಿರ್ಮಾಣವಾಗುವುದನ್ನು ತಡೆಯುವುದು ಸಾಧ್ಯವಾಗುವುದಿಲ್ಲ ಎಂಬುದು ಅರಿವಿಗೆ ಬರುತ್ತಿದ್ದಂತೆ ಪರಿಹಾರಕ್ಕಾಗಿ ನಡೆಸುವ ಹೋರಾಟ ಆಡಳಿತವರ್ಗದ ಮತ್ತೊಂದು ಮುಖವನ್ನು ಬಯಲಾಗಿಸಿದೆ. ಹತ್ತಾರು ವರ್ಷಗಳಿಂದ ತಾವು ಬಾಳಿಬದುಕಿರುವ ಮನೆ, ಜಮೀನು ತೊರೆದು ಹೋಗುವಾಗಲೂ ಅದಕ್ಕೆ ಪರಿಹಾರ ಪಡೆಯಬೇಕಿದ್ದರೆ ಅಧಿಕಾರಿಗಳಿಗೆ ಲಂಚ ನೀಡಬೇಕಾದುದು, ಅವರನ್ನು ಓಲೈಸಬೇಕಾದುದು ಗ್ರಾಮೀಣ ಜನರಿಗೆ ನುಂಗಲಾರದ ತುತ್ತಾಗುತ್ತದೆ.

ತಲೆತಲಾಂತರದಿಂದ ತಮ್ಮ ಪೂರ್ವಜರು ಅನುಭವಿಸಿದ್ದ, ಇಡೀ ಜೀವನಕ್ಕೆ ಆಧಾರವಾದ ಮನೆ, ಕೃಷಿ ಭೂಮಿಯನ್ನು ಬಿಟ್ಟು ಹೋಗಲಾರದೆ ಕೆಲವು ಹಿರಿಯ ಜೀವಗಳು ಸಂಕಟಪಟ್ಟು ಮರಣ ಹೊಂದಿದ ಘಟನೆಗಳು ಕಣ್ಣುಗಳನ್ನು ಮಂಜಾಗಿಸುತ್ತವೆ. ಹರದೂರು ದುರ್ಗಾ ದೇವಸ್ಥಾನ, ಅನೇಕ ಐತಿಹಾಸಿಕ ಶಾಸನಗಳು ಹಾಗೂ ಸ್ಮಾರಕಗಳು ಅಣೆಕಟ್ಟೆಯ ನೀರಿನಲ್ಲಿ ಮುಳುಗಡೆಯಾಗಿರುವುದರ ಉಲ್ಲೇಖ ಇತಿಹಾಸದ ದೃಷ್ಟಿಯಿಂದಲೂ ಗಮನಾರ್ಹ. ಈ ಎಲ್ಲ ಬೆಳವಣಿಗೆಗಳ ನಡುವೆ ಎತ್ತಿನ ಬಂಡಿಯಲ್ಲಿ ಓಡಾಡುತ್ತಿದ್ದ ಜನ ಬೈಸಿಕಲ್ ಕಂಡು ಅಚ್ಚರಿಪಡುವುದು, ಕ್ರಮೇಣ ರೈಲು, ಬಸ್ಸು ಪ್ರಯಾಣದತ್ತ ಮುಖ ಮಾಡುವುದು, ಕಾರನ್ನು ಅವಲಂಬಿಸುವುದು ನಡೆಯುತ್ತದೆ. ದೋಣಿ ನಡೆಸಿಯೇ ಜೀವನ ಸಾಗಿಸುತ್ತಿದ್ದ 'ದುಗ್ಗಣ್ಣ' ಅಣೆಕಟ್ಟೆಯ ಮೇಲೆ ಸಂಚಾರ ಆರಂಭವಾದಾಗ ಕೆಲಸವಿಲ್ಲದೆ ಸಾಗರಕ್ಕೆ ಹೋಗಿ ಕಡಲೆ ಮಾರಾಟ ಮಾಡಬೇಕಾಗುತ್ತದೆ. ಈ ಮಧ್ಯೆ, ಮನೆಗಳಿಗೆ ವಿದ್ಯುತ್ ಸಂಪರ್ಕ ದೊರೆಯುತ್ತದೆ. ಕಾದಂಬರಿಯಲ್ಲಿ ಬರುವ ಈ ಎಲ್ಲ ಘಟನಾವಳಿಗಳು ಜಗತ್ತು ನಿಧಾನವಾಗಿ ಬದಲಾಗುತ್ತಾ ಬಂದುದರ ದಾಖಲೆ.

ಅಭಿವೃದ್ಧಿ ಹೆಸರಿನಲ್ಲಿ ಅಣೆಕಟ್ಟೆ ರೂಪುಗೊಂಡಾಗ ಜನ ಅನುಭವಿಸುವಂತಹ ತಲ್ಲಣ, ಯಾತನೆ ಇಲ್ಲಿ ಧ್ವನಿ ಪಡೆದುಕೊಂಡಿದೆ. ಕಾದಂಬರಿಯ ಹೆಸರಿನಲ್ಲಿಯೇ ನಿರ್ಗಮನದ ನೋವೂ ಇದೆ. ಆ ನೋವೇ ಕೃತಿಯ ಸ್ಥಾಯಿಭಾವವಾಗಿ ಪ್ರತಿಪುಟದಲ್ಲಿಯೂ ಅನುರಣಿಸಿದೆ.

ನೋವದೆಂತಹುದೊ...

8ನೇ ಪುಟದಿಂದ...

ಶಾಲೆ ಮತ್ತು ಕಾಲೇಜುಗಳಲ್ಲಿ ಯಾವುದಾದರೂ ಪರೀಕ್ಷೆ ತುಂಬಾ ಕಠಿಣವಾಗಿದ್ದು, ಎಲ್ಲರೂ ಎಡವಿದ್ದರೆ ಆಗ ಯಾವ ವಿದ್ಯಾರ್ಥಿಗೂ ಅಷ್ಟೊಂದು ನೋವಾಗುವುದಿಲ್ಲ. ಕಾಲೇಜಿನ ದಿನಗಳಲ್ಲಿ ಅಂತಹ ಸಮಯದಲ್ಲಿ ಎಲ್ಲರೂ ಸಿನಿಮಾಕ್ಕೆ ಹೋಗಿ ಮಜಾ ಮಾಡಿ ಬಂದ ನೆನಪು ನನಗಾಗುತ್ತಿದೆ. ಏಕೆಂದರೆ ಎಲ್ಲರೊಂದಿಗೆ ನಾನಿದ್ದೇನೆ ಎಂಬ ಧೈರ್ಯವಿರುತ್ತದೆ. ಆದರೆ ಎಲ್ಲರೂ ಪರೀಕ್ಷೆಯನ್ನು ಚೆನ್ನಾಗಿ ಮಾಡಿ, ನಾವು ಮಾತ್ರ ಎಡವಿದಾಗ ಎದೆ ಬಡಿದುಕೊಳ್ಳಲು ಶುರುವಾಗುತ್ತದೆ. ನೋವಿನ ಸೆಲೆ ಶುರುವಾಗುತ್ತದೆ. ಹಾಗಂತ ಪರಿಪೂರ್ಣ ನೋವು ಇಲ್ಲವೆಂದೇನೂ ಅರ್ಥವಲ್ಲ. ಉದಾಹರಣೆಗೆ ನಿಮಗೆ ಮಂಡಿ ನೋವು ಪ್ರಾರಂಭವಾಗುತ್ತದೆ ಎಂದುಕೊಳ್ಳಿ. ಅದು ಖಂಡಿತವಾಗಿಯೂ ಮತ್ತೊಬ್ಬರಿಗೆ ಇಲ್ಲ ಎನ್ನುವ ಕಾರಣಕ್ಕೆ ಆಗುವ ನೋವಲ್ಲ. ಆದರೆ ಅಲ್ಲಿಯೂ ಹೋಲಿಕೆ ಇರುತ್ತದೆ. ಅದು ಸ್ವಂತ ಹೋಲಿಕೆಯಾಗಿರುತ್ತದೆ. ಆ ಮಂಡಿ ನೋವಿಲ್ಲದ ಸ್ಥಿತಿ ಎಂತಹದು ಎನ್ನುವುದನ್ನು ನೀವು ಈಗಾಗಲೇ ಅನುಭವಿಸಿದ್ದೀರಿ. ಆದ್ದರಿಂದಲೇ ಅದು ಕಷ್ಟದ್ದು. ಹುಟ್ಟು ಕುರುಡುತನಕ್ಕಿಂತಲೂ, ಮಧ್ಯವಯಸ್ಕನೊಬ್ಬ ಕಣ್ಣು ಕಳೆದುಕೊಂಡರೆ ಹೆಚ್ಚು ದುಃಖಪಡುತ್ತಾನೆ ಅನ್ನಿಸುತ್ತದೆ.

ಒಬ್ಬರಿಗೆ ನಲಿವು ಕೊಡುವ ಸಂಗತಿ ಮತ್ತೊಬ್ಬರಿಗೆ ನೋವು ಕೊಡುವ ಸಾಧ್ಯತೆಗಳೂ ಇರುತ್ತವೆ. ಇಂತಹ ವಿಚಿತ್ರ ಸನ್ನಿವೇಶವನ್ನು ನಾನು ಆಪ್ತಸಮಾಲೋಚನೆಯೊಂದರಲ್ಲಿ ಎದುರಿಸಿದ್ದೇನೆ. ಆ ಹುಡುಗ ಬಹಳಷ್ಟು ಖಿನ್ನತೆಯಿಂದ ಬಳಲುತ್ತಿದ್ದ. ಸರಿಯಾದ ಮನೋವೈದ್ಯವನ್ನು ಕಂಡು ಆರೈಕೆ ಶುರು ಮಾಡಿಕೊಂಡಿಲ್ಲದ ಕಾರಣ, ಖಿನ್ನತೆ ಆತ್ಮಹತ್ಯೆಯ ಪ್ರಯತ್ನದ ತನಕ ಅವನನ್ನು ಒಯ್ದಿತ್ತು. ಅಂತಹ ಹೊತ್ತಿನಲ್ಲಿ ಅವನು ನನ್ನನ್ನು ಕಾಣಲು ಬಂದಿದ್ದ. ಅವನ ಆತ್ಮಹತ್ಯೆಯ ಪ್ರಯತ್ನದ ಸನ್ನಿವೇಶವನ್ನು ವಿವರಿಸಲು ಹೇಳಿದೆ.

'ನದಿ ತುಂಬಿ ಹರಿಯುತ್ತಿತ್ತು ಸಾರ್. ನನಗೆ ಬದುಕು ಬೇಡವಾಗಿತ್ತು. ರಾತ್ರಿಯ ಹೊತ್ತು. ಯಾರೂ ಇರಲಿಲ್ಲ. ಅಲ್ಲಿಯ ತನಕ ಬೈಕಿನಲ್ಲಿ ಹೋಗಿ, ಸೇತುವೆಯ ಮೇಲೆ ಇಪ್ಪತ್ತು ನಿಮಿಷ ನಿಂತಿದ್ದೆ ಸಾರ್'

ನಾನು ಹೆಚ್ಚಿನ ಆಘಾತವನ್ನು ಮುಖದಲ್ಲಿ ತೋರಿಸದೆ 'ಮತ್ತೆ ವಾಪಾಸು ಬರಲು ಕಾರಣವೇನು? ಯಾವ ಸಂಗತಿ ನಿಮ್ಮನ್ನು ಮತ್ತೆ ಬದುಕಿಗೆ ಹಿಂತಿರುಗಿಸಿತು' ಎಂದು ಸಮಾಧಾನದಿಂದ ಕೇಳಿದೆ.

'ನಂಗೆ ಬಾಲ್ಯದಿಂದಲೂ ಚೆನ್ನಾಗಿ ಈಜಲು ಬರುತ್ತದೆ ಸಾರ್. ಬಿದ್ದರೂ ಹೇಗೋ ಈ ಜೀವ ದಡದ ಕಡೆ ಈಜಿ ಉಳಿದುಬಿಡುತ್ತದೆ ಎಂದು ಮನಸ್ಸಿಗೆ ಗೊತ್ತಿತ್ತು. ಆದ್ದರಿಂದ ಜಿಗಿಯಲಿಲ್ಲ'

ಈ ಮಾತನ್ನು ಹೇಳುವಾಗ ಅವನ ಕಣ್ಣುಗಳು ತೇವಗೊಂಡಿದ್ದವು. ಸುಮ್ಮನೆ ಯಾರಿಗಾದರೂ ಈ ವಿಷಯವನ್ನು ಹೇಳಿದರೆ ಒಂದು ನಗೆಹನಿಯಾಗಿ ಕೇಳಿಸಬಹುದು. ಆದರೆ ಅವನು ನಿಜಕ್ಕೂ ನೊಂದಿದ್ದ. ಅವನ ನೋವು ನನಗೆ ಅರ್ಥವಾಗುತ್ತಿತ್ತು.

'ಹಾಗಿದ್ದರೆ ಬೇರೆ ಬಗೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಯತ್ನವೇಕೆ ಮಾಡಲಿಲ್ಲ' ಎಂದು ಕೇಳಿದೆ.

'ಬೇರೆ ಕ್ರಮ ಭಯ ತರಿಸುತ್ತದೆ ಸಾರ್. ಸಾಧ್ಯವೇ ಇಲ್ಲ' ಎಂದ. ಅಂದರೆ ಅವನಿಗೆ ಬದುಕಿನಲ್ಲಿ ಇನ್ನೂ ಆಸೆ ಇದೆ ಎನ್ನುವ ಸಂಗತಿ ನನಗೆ ಸೂಕ್ಷ್ಮವಾಗಿ ಅರ್ಥವಾಗಿತ್ತು. ನೀರಿನಲ್ಲಿ ಬಿದ್ದು ಉಲ್ಲಾಸದಿಂದ ಈಜಾಡುವ ಸುಖ ಈಜಲು ಬಲ್ಲವರೆಲ್ಲರಿಗೂ ಗೊತ್ತು. ಆದರೆ ಈಜು ಬಲ್ಲದ್ದಕ್ಕಾಗಿ ಈ ವ್ಯಕ್ತಿ ಕಣ್ಣೀರು ಹಾಕುತ್ತಿದ್ದ ಸಂಗತಿ ನನಗೆ ನೋವಿನ ಮತ್ತೊಂದು ವ್ಯಾಖ್ಯಾನವನ್ನು ನೀಡಿತ್ತು.

ನನ್ನ ಅಡುಗೆಯವಳು ಅಕಸ್ಮಾತ್ತಾಗಿ ಒಂದು ವಿಶೇಷ ಮಾತನ್ನು ಒಂದು ದಿನ ಹೇಳಿದಳು. ಅವಳು ಅಡುಗೆ ಮಾಡುವ ಮತ್ತೊಂದು ಮನೆಯಲ್ಲಿ ಪ್ರತಿ ತಿಂಗಳು ಮಾತ್ರೆಗಳಿಗಾಗಿ ಹತ್ತು ಸಾವಿರ ರೂಪಾಯಿ ಖರ್ಚು ಮಾಡುತ್ತಾರೆ ಎನ್ನುವ ಪ್ರಮುಖ ಸುದ್ದಿಯ ಜೊತೆಗೆ 'ಬಡವರಿಗೆ ದೇವರು ಯಾವತ್ತೂ ಮಾತ್ರೆ ಖರ್ಚು ಕೊಡಲ್ಲ ಅಣ್ಣಾ' ಎಂದಳು. ಕೇಳಲು ಬಹುರಮ್ಯವಾದ ಈ ಮಾತು ನನಗೆ ರೋಮಾಂಚನ ತಂದಿತ್ತು. ಆದರೆ ಹಲವಾರು ಬಾರಿ ಆಸ್ಪತ್ರೆಗಳಿಗೆ ಭೇಟಿ ಕೊಟ್ಟಿರುವ ನನಗೆ ಇದು ಪೂರ್ತಿ ನಿಜವಲ್ಲ ಎನ್ನುವ ಕಹಿಸತ್ಯ ಗೊತ್ತು. ಬಡತನ ಸಾಕಷ್ಟು ದುಡಿಸುತ್ತದೆಯಾದ ಕಾರಣ ದೈಹಿಕ ಆರೋಗ್ಯವನ್ನು ಹೆಚ್ಚು ಕೊಡಬಹುದೇನೋ. ಆದರೆ ಮಾನಸಿಕ ಆರೋಗ್ಯದ ಸಂಗತಿ? ಮಾನಸಿಕ ಆಸ್ಪತ್ರೆಗಳಲ್ಲಿ ರಾಶಿ ರಾಶಿ ಬಡವರನ್ನೂ ನಾನು ಕಂಡಿದ್ದೇನೆ. ಕ್ಯಾನ್ಸರ್ ಕೇಂದ್ರಗಳಲ್ಲಿ ಹತ್ತಾರು ಬಡ ಕುಟುಂಬಗಳನ್ನು ನೋಡಿದ್ದೇನೆ.

ಮೊನ್ನೆ ಹೊಸಪೇಟೆಯ ಒಂದು ಔಷಧದ ಅಂಗಡಿಯಲ್ಲಿ ಹಳ್ಳಿಯ ಹೆಂಗಸೊಬ್ಬಳು ವೈದ್ಯರು ಬರೆದುಕೊಟ್ಟ ಚೀಟಿಯನ್ನು ತೋರಿಸಿ ತನಗೆ ಅಗತ್ಯವಾದ ಮಾತ್ರೆಗಳನ್ನು ಕೊಳ್ಳುತ್ತಿದ್ದಳು. ವೈದ್ಯರು ಹೇಳಿದಷ್ಟು ಮಾತ್ರೆಗಳನ್ನು ಕೊಂಡರೆ ನಾಲ್ಕು ನೂರಾ ಅರವತ್ತು ರೂಪಾಯಿ ಆಗುತ್ತದೆ ಎಂದು ಅಂಗಡಿಯ ಹುಡುಗಿ ಹೇಳಿದಳು. 'ಯಕ್ಕಾ, ನನ್ನ ತಾವ ಇರೋದು ಬರೀ ನಾಕು ನೂರು ರೂಪಾಯಿ. ಹಳ್ಳಿಗೆ ಹೋಗಾಕೆ ಐವತ್ತು ರೂಪಾಯಿ ಬೇಕು. ಬರೀ ಮೂನ್ನೂರ ಐವತ್ತು ರೂಪಾಯಿದು ಗುಳಿಗಿ ಕೊಡವ್ವಾ... ಉಳಿದಿದ್ದಕ್ಕೆ ದೇವರಿದ್ದಾನೆ' ಎಂದು ಬಿಟ್ಟಳು. ನೋವೆನ್ನುವುದು ಯಾರನ್ನೂ ಬಿಡುವುದಿಲ್ಲ. ಎಷ್ಟೋ ಬಾರಿ ಶ್ರೀಮಂತಿಕೆಯು ತನ್ನ ಆರ್ಥಿಕ ಶಕ್ತಿಯ ಆರ್ಭಟದಿಂದ ಹಲವು ನೋವುಗಳನ್ನು ಉಪಶಮನ ಮಾಡಿಕೊಂಡು ಬಿಡುತ್ತದೇನೋ ಎಂದು ನನಗನ್ನಿಸುತ್ತದೆ. ಅತ್ಯಾಧುನಿಕ ವೈದ್ಯೋಪಚಾರ ದಕ್ಕುವುದು ಯಾವತ್ತೂ ಶ್ರೀಮಂತರಿಗೇ ಆಗಿರುತ್ತದೆ. ಹಣವಿಲ್ಲವೆಂಬ ಕಾರಣಕ್ಕೇ ಎಷ್ಟೋ ಬಡವರು ಅನಾರೋಗ್ಯದಿಂದ ಸಾಯುತ್ತಾರೆ.

ನೋವಿಗೂ ದೈವಕ್ಕೂ ವಿಶೇಷ ಸಂಬಂಧವಿದೆ. ಮನುಷ್ಯನಿಗೆ ನೋವಿರದಿದ್ದರೆ ದೈವದ ಉದಯವೇ ಆಗುತ್ತಿರಲಿಲ್ಲ. ಮಹಾ ನಾಸ್ತಿಕರಾಗಿದ್ದವರು ನೋವಿನ ತೀಕ್ಷ್ಣ ಗಳಿಗೆಯಲ್ಲಿ ಆಸ್ತಿಕರಾಗಿ ಬದಲಾಗಿರುವುದನ್ನು ನಾವು ಕಾಣುತ್ತೇವೆ. ನೋವಿನ ತೀಕ್ಷ್ಣತೆಯನ್ನೂ ಎದುರಿಸಿ ನಾಸ್ತಿಕತೆಯನ್ನು ಕಾಪಾಡಿಕೊಳ್ಳುವ ಮಾನಸಿಕ ಸ್ಥೈರ್ಯ ಬಹುತೇಕರಿಗೆ ಇರುವುದಿಲ್ಲ. ಮನುಷ್ಯರಾದವರು - ಅಪ್ಪ, ಅಮ್ಮ, ಗೆಳೆಯ, ವೈದ್ಯ - ಯಾರೂ ನಮ್ಮ ನೋವನ್ನು ಪರಿಹಾರ ಮಾಡಲು ಸಾಧ್ಯವೇ ಇಲ್ಲ ಎಂದು ಅರ್ಥವಾದಾಗ, ಬದುಕುಳಿಯಲು ಗಟ್ಟಿಯಾಗಿ ಹಿಡಿದುಕೊಳ್ಳಲು ಏನಾದರೂ ಬೇಕಾಗುತ್ತದೆ. ಅಂತಹ ಸೃಷ್ಟಿಯೇ ಭಗವಂತನಾಗಿರಬೇಕು. ಸುಲಭವಾಗಿ ಯಾವುದೋ ದೇವರನ್ನು ಸೃಷ್ಟಿ ಮಾಡಿಕೊಂಡು, ಅದನ್ನು ಸತ್ಯವೆಂದು ಒಪ್ಪಿಕೊಂಡು, ಹಲವು ತಲ್ಲಣಗಳಿಗೆ ಸಮಾಧಾನ ಮಾಡಿಕೊಳ್ಳುವುದು ಯಾರಿಗೆ ಬೇಡ? ಆದರೆ ಇಂದು ಆ ಭಗವಂತನ ಹೆಸರಿನಲ್ಲಿ ಬೇರೆಯೇ ಭ್ರಷ್ಟ ಸಂಗತಿಗಳು ನಡೆಯುತ್ತಿವೆ ಎನ್ನುವುದು ವಿಷಾದದ ವಿಷಯ. ಅದು ಬೇರೆಯೇ ಸಂಗತಿ.

'ನಿತ್ಯ ಸಾಯುವವರಿಗೆ ಅಳುವವರು ಯಾರು?' ಎನ್ನುವ ಪ್ರಸಿದ್ಧ ಗಾದೆ ಮಾತಿದೆ. ಇದು ಸತ್ಯದ ಮಾತೇ ಆದರೂ ಅತ್ಯಂತ ಕ್ರೌರ್ಯದ ನುಡಿಯಾಗಿದೆ. ಆರೋಗ್ಯದಿಂದ ಪುಟಿಪುಟಿಯುತ್ತಿರುವ ವಯಸ್ಕ ಮೊಮ್ಮಗ ಊರಿಗೆ ಬಂದಾಗ ಹಾಸಿಗೆಯಲ್ಲಿ ಬಹುಕಾಲದ ಅನಾರೋಗ್ಯದಿಂದ ಮಲಗಿದ ಅಜ್ಜಿಯನ್ನು ಕಂಡು 'ಹೆಂಗಿದಿ ಅಜ್ಜಿ?' ಎಂದು ಒಮ್ಮೆ ಪ್ರಶ್ನೆ ಕೇಳಿ ಆಕೆ ಉತ್ತರಿಸುವುದಕ್ಕೂ ಮುಂಚೆಯೇ ತನ್ನ ಕೋಣೆಗೆ ಓಡಿ ಹೋಗುತ್ತಾನಲ್ಲ, ಆಗ ಅದರ ಕ್ರೌರ್ಯ ತಿಳಿಯುತ್ತದೆ. ನೋವು ಹಂಚಿಕೊಂಡಷ್ಟೂ ಅದು ಕಡಿಮೆಯಾಗುತ್ತದೆ ಎಂದು ಹೇಳುತ್ತಾರೆ. ಆದರೆ ಹಂಚಿಕೊಳ್ಳಲು ತಕ್ಕ ಕಿವಿಗಳು ಸುಲಭವಾಗಿ ಸಿಕ್ಕುವುದಿಲ್ಲ. ಸಿಕ್ಕರೂ ಅವರು ಒಮ್ಮೆ ಕೇಳಿಯಾರೇ ಹೊರತು ಮತ್ತೆ ಮತ್ತೆ ಕೇಳಲು ಅವರಿಗೂ ಸಾಧ್ಯವಿಲ್ಲ. ಆರೋಗ್ಯವು ಯಾವತ್ತೂ ಅನಾರೋಗ್ಯವನ್ನು ನಿಕೃಷ್ಟವಾಗಿಯೇ ಕಾಣುತ್ತದೆ. ಆದ್ದರಿಂದಲೇ ಬಹುತೇಕರು ಏಕಾಂಗಿಯಾಗಿ ಕೊರಗುವುದು. ಹಣವುಳ್ಳ ಸ್ಥಿತಿವಂತರು ತಮ್ಮ ನೋವನ್ನು ಹೇಳಿಕೊಳ್ಳಲು ಅಪರಿಚಿತ ಆಪ್ತಸಮಾಲೋಚಕರಿಗೆ ಹಣ ಕೊಡುತ್ತಾರೆ. ಒಂದು ತಾಸು ನೋವನ್ನು ಕೇಳಿಸಿಕೊಳ್ಳುವುದಕ್ಕೆ ಏನಿಲ್ಲವೆಂದರೂ ಎರಡು ಸಾವಿರ ತೆಗೆದುಕೊಳ್ಳುವ ಹಲವು ಆಪ್ತಸಮಾಲೋಚಕರು ಇಂದು ಇದ್ದಾರೆ. ಅವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಆದರೆ ಆಪ್ತಸಮಾಲೋಚನೆ ಮಾನಸಿಕ ನೋವಿಗೆ ಸಾಕಷ್ಟು ಉಪಶಮನ ನೀಡುತ್ತದೆಯಾದ್ದರಿಂದ ಈ ವೆಚ್ಚವನ್ನು ನಮ್ಮ ದೈಹಿಕ ಇಲಾಜಿಗೆ ನೀಡಿದ ಶುಲ್ಕದಂತೆಯೇ ಎಂದು ಭಾವಿಸಬೇಕಿದೆ.

ವಿಜ್ಞಾನ ಮತ್ತು ವೈದ್ಯಕೀಯ ಪ್ರಗತಿಯಿಂದಾಗಿ ಹಲವು ನೋವುಗಳನ್ನು ಇಂದು ಉಪಶಮನ ಮಾಡುವ ಶಕ್ತಿಯನ್ನು ಮನುಷ್ಯ ಕಂಡುಕೊಂಡಿದ್ದಾನೆ. ಆದರೆ ಎಷ್ಟೋ ನೋವುಗಳಿಗೆ ಯಾವುದೇ ಪರಿಹಾರವಿಲ್ಲ. ಅನುಭವಿಸುವುದು ಮಾತ್ರ ಅದಕ್ಕಿರುವ ಏಕೈಕ ಮಾರ್ಗ. ನೋವು ನುಂಗುವುದನ್ನು ಕಲಿಯಬೇಕು ಎಂದು ಹಿರಿಯರು ಹೇಳುವುದು ಆ ಕಾರಣಕ್ಕಾಗಿಯೇ ಇರಬೇಕು. ಆದರೆ ಮಾತ್ರೆ ನುಂಗಿದಷ್ಟು ಸುಲಭವಾಗಿ ನೋವು ನುಂಗಲು ಆಗುವುದಿಲ್ಲ. ಅಥವಾ ಸಾಲವನ್ನು ಹಂಚಿಕೊಂಡಂತೆ ಮತ್ತೊಬ್ಬ ಆತ್ಮೀಯರಿಗೆ ನೋವನ್ನು ವರ್ಗಾಯಿಸುವುದೂ ಸಾಧ್ಯವಿಲ್ಲ. ಅದೇನಿದ್ದರೂ ನಮ್ಮದು ಮಾತ್ರ! ಎದುರಿಸಬೇಕು ಇಲ್ಲವೇ ಶರಣಾಗಬೇಕು. ಆದರೆ ಇಂದು ವೈದ್ಯಕೀಯ ರಂಗದ ಪ್ರಗತಿಯಿಂದಾಗಿ ಅಂಗಾಂಗ ದಾನ ಮಾಡುವ ಸಂಗತಿಗಳು ನಡೆಯುತ್ತಿವೆ. ಇದೊಂದು ರೀತಿಯಲ್ಲಿ ನೋವು ಹಂಚಿಕೊಂಡಂತೆಯೇ ಆಗಿದೆ. ಗಂಡನಿಗೆ ಹೆಂಡತಿಯೋ, ತಮ್ಮನಿಗೆ ಅಕ್ಕನೋ ಕಿಡ್ನಿ ದಾನ ಮಾಡುವ ಪ್ರಸಂಗ ಕೇಳಿದಾಗಲೆಲ್ಲಾ ನನಗೆ ನೋವು ಹಂಚಿಕೊಳ್ಳುತ್ತಿದ್ದಾರೆ ಎಂದೇ ಅನ್ನಿಸುತ್ತದೆ. ಹಣಕ್ಕಾಗಿ ಜೀವಂತ ವ್ಯಕ್ತಿ ಅಂಗಾಂಗ ಮಾರಿಕೊಳ್ಳುವುದು ಬಡತನದ ಕ್ರೌರ್ಯವನ್ನು ತೋರಿದರೆ, ತಮ್ಮ ಆತ್ಮೀಯರ ಒಳಿತಿಗಾಗಿ ಆರೋಗ್ಯವಂತರು ತಮ್ಮ ಒಂದು ಹೆಚ್ಚಿನ ಅಂಗವನ್ನು ದಾನ ಮಾಡುವ ಪ್ರಸಂಗವು ದೈವಸ್ವರೂಪದ್ದಾಗಿ ಕಾಣುತ್ತದೆ.

ಆರೋಗ್ಯವು ಅಹಂಕಾರವನ್ನು ಹೆಚ್ಚಿಸುತ್ತಲೇ ಇರುತ್ತದೆ. ಅದು ಶಾಶ್ವತ ಎನ್ನುವ ಹುಸಿಯನ್ನು ನಮ್ಮಲ್ಲಿ ತುಂಬುತ್ತಿರುತ್ತದೆ. ಆದರೆ ಒಂದು ದಿನ ಚಕ್ಕನೆ ಋತುಮಾನ ಬದಲಾದಂತೆ, ಅನಾರೋಗ್ಯ ಬಂದು ಒಕ್ಕರಿಸುತ್ತದೆ. ನಿನ್ನೆಯವರೆಗೆ ಆರೋಗ್ಯವಾಗಿದ್ದವರು, ಒಂದೆರಡು ದಿನ ಕಳೆಯುವುದರಲ್ಲಿ ನಿತ್ಯ ಹಲವು ಮಾತ್ರೆಗಳನ್ನು ನುಂಗುವವರಾಗಿ ಬಿಡುತ್ತೇವೆ. ನೋವಿಗಿಂತಲೂ ಈ ಬದಲಾವಣೆಯನ್ನು ಜೀರ್ಣಿಸಿಕೊಳ್ಳುವುದಕ್ಕೆ ಹಲವು ಸಮಯ ಬೇಕಾಗುತ್ತದೆ. ಚಿಕ್ಕಂದಿನಲ್ಲಿ ನಾವು ಜ್ವರ ಬಂದು ನರಳುವಾಗ ನಮ್ಮಮ್ಮ ಹೇಳುತ್ತಿದ್ದ ಒಂದು ಮಾತು ನೆನಪಿಗೆ ಬರುತ್ತದೆ. 'ದೇವರು ಮನುಷ್ಯರನ್ನ ಆಗಾಗ ಕಾಸಿ ಬಡಿದು ಸರಿಯಾದ ಆಕಾರಕ್ಕೆ ತರ್ತಾನೆ. ಜ್ವರ ಬಂತು ಅಂತ ದುಃಖ ಪಡಬಾರದು' ಎನ್ನುತ್ತಿದ್ದಳು. ಜ್ವರದಂತಹ ಪುಟ್ಟ ಸಂಗತಿಗೆ ಅವಳ ಮಾತನ್ನು ಒಪ್ಪಿಕೊಳ್ಳೋಣ. ಆದರೆ ಸಾವನ್ನೇ ತಂದು ಬಿಡುವಂತಹ ಮಾರಕ ರೋಗ ಬಂದರೆ ಏನು ಹೇಳೋಣ? 'ದೇವರು ಚಿತೆಗೆ ಒಗೆಯುತ್ತಿದ್ದಾನೆ' ಎಂದು ಸಮಾಧಾನ ಮಾಡಿಕೊಳ್ಳುವ ಶಕ್ತಿ ಎಷ್ಟು ಜನರಿಗಿದೆ?

ಸರಿಯಾದ ಆಹಾರ, ಆರೈಕೆ, ವ್ಯಾಯಾಮ ಮತ್ತು ಅದೃಷ್ಟದಿಂದ ನಾವು ಹೇಗೋ ನೋವನ್ನು ತಪ್ಪಿಸಿಕೊಳ್ಳಬಹುದು. ಆದರೆ ನಮ್ಮ ಆತ್ಮೀಯರು ನೋವಿಗೆ ಸಿಕ್ಕಿದರೂ ಅದು ನಮ್ಮ ನೋವಾಗುತ್ತದೆಯಲ್ಲವೆ? ಮಾನಸಿಕ ಅಸ್ವಸ್ಥ ಮಕ್ಕಳನ್ನು ಪಡೆದ ತಂದೆ-ತಾಯಿಯರು ಆರೋಗ್ಯವಂತರಾಗಿದ್ದರೂ ನಿತ್ಯ ನವೆಯುತ್ತಾರೆ.

ನೋವು ಅನುಭವಿಸದ ಜೀವವೇ ಇಲ್ಲ. ನೋವಿಲ್ಲದ ಜಗತ್ತಿಲ್ಲ. ನೋವಿದೆಯಾದ ಕಾರಣದಿಂದಲೇ ನಲಿವಿಗೆ ಗೌರವ ಮತ್ತು ಘನತೆ. ಆದರೆ ಈ ಭುವಿಯಲ್ಲಿ ನೋವು ಅಥವಾ ನಲಿವು - ಯಾವುದೂ ಶಾಶ್ವತವಲ್ಲ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಚಕ್ರೀಯ ಸಂಖ್ಯಾ ಸ್ವಾರಸ್ಯ

ಸಣ್ಣಾಟ: 1 4 2 8 5 7 ಇದೊಂದು ಚಕ್ರೀಯ ಸಂಖ್ಯೆ. ಈ ಸಂಖ್ಯೆಗೆ 1ರಿಂದ 6ರವರೆಗಿನ ಯಾವುದೇ ಸಂಖ್ಯೆಯಿಂದ ಗುಣಿಸಿದರೂ ಗುಣ್ಯದಲ್ಲಿರುವ 1 4 2 8 5 7 ಸಂಖ್ಯಾ ಸರಣಿಯೇ ಚಕ್ರೀಯವಾಗಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ.

ಉದಾ: 142857
x 5
714285



ದೊಡ್ಡಾಟ: ಇಂಥದ್ದೇ ಇನ್ನೊಂದು ಸಂಖ್ಯೆ

052631578947368421

ಈ ಸಂಖ್ಯೆಗೆ 1ರಿಂದ 18ರವರೆಗಿನ ಯಾವುದೇ ಸಂಖ್ಯೆಯಿಂದ ಗುಣಿಸಿದರೂ ಗುಣ್ಯದಲ್ಲಿನ ಅಂಕಿಗಳೇ ಚಕ್ರೀಯವಾಗಿ ಮತ್ತೆ ಮತ್ತೆ ಕ್ರಮಬದ್ಧವಾಗಿ ಕಾಣಿಸಿಕೊಳ್ಳುತ್ತವೆ.

ಉದಾ: 052631578947368421
x 5
= 2631578947368421|05

ಬೇರೆ ಬೇರೆ ಸಂಖ್ಯೆಗಳಿಂದ ನೀವೇ ಗುಣಿಸಿ ನೋಡಿ

ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ಮೊದಲ ಬೇಟೆ = __________
2. ನಲಿವಿನ ಆಟ = __________
3. ಕಲರತೀಡ = __________
4. ಮಹಾಗುರು = __________

ಶಬ್ದಗಳೊಡನೆ ಸರಸ

1. ತುಟಿಗೆ ತುಟಿ ಹತ್ತದ ಕಾವ್ಯ
ಸುರನರ ನಾಗಾಧೀಶ್ವರ ಕಿರ
ಕಿರೀಟಾಗ್ರ ಲಗ್ನ ಚರಣ ಸರೋಜಾ
ಧೀರೋದಾರ ಚರಿತ್ರೋತ್ಸಾರಿತ
ಕಲುಕ್ಷಾಘರ ಸಕ್ಷಿಳ್ಯರಿನಾಹಾರ್ಾ
(ಹಿಂದಿನ ಕವಿಗಳು ಇಂಥ ಕಾವ್ಯ ಕಸರತ್ತನ್ನು ಮಾಡುತ್ತಿದ್ದರು.)

2. ಪದ ಹುಡುಕಾಟ
ಇಲ್ಲಿ ಕೊಟ್ಟಿರುವ ಸಿನಿಮಾ ಹೆಸರುಗಳಲ್ಲಿ ಒಬ್ಬ ಖ್ಯಾತ ಕವಿಯ ಹೆಸರು ಅಡಗಿದೆ. ಹುಡುಕಿಕೊಡಿ.
1. ಚಲಿಸುವ ಮೋಡಗಳು
2. ವೀರ ಕನ್ನಡಿಗ
3. ಕಠಾರಿವೀರ
4. ರಣಧೀರ
5. ಕರುಳಿನ ಕರೆ
6. ಹಣಬಲವೋ ಜನಬಲವೋ
7. ರವಿಚಂದ್ರ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸಣ್ಣ ಚಿಕ್ಕ ಶ್ರೇಷ್ಠ ಕಥೆಯ

ಪರಮಹಂಸ ಮತ್ತು ಯೋಗಿ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ


ರಾಮಕೃಷ್ಣ ಪರಮಹಂಸರು ಭಾರತದ ಶ್ರೇಷ್ಠ ಅಧ್ಯಾತ್ಮ ಸಾಧಕರು. ಎಲ್ಲ ಧರ್ಮಗಳೂ ಒಂದೇ ಗುರಿಯತ್ತ ನಮ್ಮನ್ನು ಒಯ್ಯುತ್ತವೆ ಎಂದು ನಂಬಿ, ಬಾಳಿದ ದಾರ್ಶನಿಕ


ಹಿಮಾಲಯದಲ್ಲಿ ತಪಸ್ಸು ಮಾಡಿದ್ದ ಒಬ್ಬ ಋಷಿಯು ಯಾವುದೇ ಚಮತ್ಕಾರ ಮಾಡದ ರಾಮಕೃಷ್ಣರಿಗೆ ಪರಮಹಂಸ ಎಂಬ ಹೆಸರು ಹೇಗೆ ಬಂತು ಎಂಬ ಸಂದೇಹಪಟ್ಟರು

ರಾಮಕೃಷ್ಣರನ್ನು ಭೇಟಿಯಾದ ಯೋಗಿ, ನೀವೇನು ಚಮತ್ಕಾರ ಮಾಡಿದ್ದೀರಿ ಎಂದು ಕೇಳಿದರು. ಅದಕ್ಕೆ ಪರಮಹಂಸರು, 'ನಾನೇನೂ ಚಮತ್ಕಾರ ಮಾಡುವುದಿಲ್ಲ' ಎಂದರು


ಅದಕ್ಕೆ ನಕ್ಕುಬಿಟ್ಟ ಯೋಗಿಯು, 'ಇದೋ ನೋಡಿ 20 ವರ್ಷಗಳ ತಪಸ್ಸಿನ ಫಲವಾಗಿ ನಾನು ನೀರಿನ ಮೇಲೆ ನಡೆಯಬಲ್ಲೆ' ಎಂದು ನಡೆದು ತೋರಿಸಿದರು

ಯೋಗಿಗೆ ಪ್ರತಿಕ್ರಿಯಿಸಿದ ರಾಮಕೃಷ್ಣರು, 'ನಾನು ನದಿ ದಾಟಲು ಅಂಬಿಗನನ್ನು ಕರೆಯುತ್ತೇನೆ. ಇದಕ್ಕಾಗಿ ನೀವು 20 ವರ್ಷ ವ್ಯರ್ಥ ಮಾಡಿದಿರಿ' ಎಂದರು

ರಾಮಕೃಷ್ಣರ ಮಾತಿನಿಂದ ಯೋಗಿಗೆ ಜ್ಞಾನೋದಯ ಆಯಿತು. ಮುಂದೆ ಅವರು ರಾಮಕೃಷ್ಣರ ಶಿಷ್ಯರಾದರು. ಹೀಗೆ ರಾಮಕೃಷ್ಣ ಪರಮಹಂಸರ ನೀತಿಕಥೆಗಳು ಜನಜನಿತವಾಗಿವೆ

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ಶಬ್ದಾರ್ಥಗಳನ್ನು ಹೊಂದಿಸಿ

1.	ಕುಕಿಲ	A.	ಬಟ್ಟೆ
2.	ಚರ್ವಿತ	B.	ಕೊಬ್ಬು
3.	ಟೀಕು	C.	ಕತ್ತಲೆ
4.	ತಾಮಸ	D.	ಉಪವಾಸ
5.	ದಾಪುಗಾಲು	E.	ತಿನ್ನಲ್ಪಟ್ಟ
6.	ಬತ್ತಾಸು	F.	ಆಯಾಸ
7.	ಬಿತ್ತಿ	G.	ಅರ್ಥವಿವರಣೆ
8.	ನೆಣ	H.	ಕೆಂಪು ಬಣ್ಣ
9.	ಮಧುಕರಿ	I.	ಕೋಗಿಲೆ
10.	ಮಾಹೆ	J.	ತಿಂಗಳು
11.	ಲೋಹಿತ	K.	ದೂರದೂರಕ್ಕೆ ಇಡುವ ಹೆಜ್ಜೆ
12.	ವಿಲೇವಾರಿ	L.	ಸಿಹಿತಿಂಡಿ
13.	ಸಂಕಲೆ	M.	ಜಾರು
14.	ಸತ್ತಿಗೆ	N.	ಗೋಡೆ
15.	ಸುಪ್ರೀತ	O.	ಹೆಣ್ಣು ದುಂಬಿ
16.	ಸುಸ್ತು	P.	ವರ್ಗೀಕರಣ
17.	ಬಾಯು	Q.	ಸರಪಣಿ
18.	ಬಳಚು	R.	ಕೊಡೆ
19.	ಲಂಘನ	S.	ಊದು
20.	ಜವಳಿ	T.	ಸುಪ್ರಸನ್ನ



ಪದ ಹಿಗ್ಗು

ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಮೇಲಿನ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ.

1. ಸತಿ 2. ಶಾಲೆ 3. ಕಡಿ
4. ಅಪ್ಪ 5. ಸುಳಿ 6. ಸಲ
7. ಇಡಿ 8. ಸೋಯಾ

1.		ರು	
2.		ಯ್ಯ	
3.		ಮ್ಮ	
4.		ದ್ದ	
5.		ಕಾ	
6.		ಮ	
7.		ನ್ನ	
8.		ನಿ	

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಹಿಗ್ಗು:
1. ಹರಣ 2. ಸೋರಿಸು 3. ಒಬ್ಬಟ್ಟು 4. ಕಣ್ಕಟ್ಟು
5. ಸಾಗಣೆ 6. ಮೂಗುತಿ 7. ಮಾಧುರಿ 8. ಜಠರ

ಅದಲು ಬದಲು ಕಂಚಿ ಕದಲು:
1. ಪಾದಯಾತ್ರೆ 2. ನಾಗವೇಣಿ 3. ಹರಿದಾಸ 4. ಬದಲಿಸಿ

ಶಬ್ದಗಳೊಡನೆ ಸರಸ:
1. 1. ಮಲ್ಲಿಗೆ 2. ಸೇವಂತಿಗೆ 3. ಕೇದಿಗೆ 4. ಸಂಪಿಗೆ
2. 1. ಗುರಿ 2. ಬಿಡುಗಡೆ 3. ಗಂಧದ ಗುಡಿ 4. ಮಾರ್ಗದರ್ಶಿ 5. ಆಕಸ್ಮಿಕ

ಟ್ವೆಂಟಿ-20 ಮ್ಯಾಚ್:
A) 1-B 2- H 3-J 4-G 5-I 6-C 7-D 8-F 9-A 10-E
B) 1-B 2-C 3-D 4-E 5-A C) 1-C 2-E 3-B 4-D 5-A

ಹಳ್ಳಿಗರು ಹೇಳುವ ಕಾಡಕಂಟಕ ಲೆಕ್ಕ
1. ಹಗೇವುಗಳು: 2+6+7 = 15 ಚೀಲ 1ನೇ ಮಗನಿಗೆ
3+8+4 = 15 ಚೀಲ 2ನೇ ಮಗನಿಗೆ, 1+5+9= 15 ಚೀಲ ಮೂರನೇ ಮಗನಿಗೆ
2. ಗಿಳಿಗಳು: ನಾವು = 36 + ನಮ್ಮಷ್ಟು = 36 + ನಮ್ಮರ್ಧ = 18 + ನಮ್ಮ ಗಿರ್ಧ = 9 ನೀನೊಬ್ಬ = 1
36+36+36+18+9+1=100

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಲಿಖಿತ್‌ಕುಮಾರ್ ಎಂ., ಚಾಮರಾಜನಗರ

ಕವಿತಾ ಅರ್ಹಾಲ್, ಗಂಗಾವತಿ

ಭಾಗ್ಯಶ್ರೀ ದಗ್ಗರ, ತಾಳಿಕೋಟೆ (ವಿಜಯಪುರ)

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇ- ಮೇಲ್ ವಿಳಾಸ:

majakoora@prajavani.co.in


ಚಂದ್ರಹಾಸ ಸಿನಿಮಾ ಶೂಟಿಂಗ್‌ನ ನೋಟ. ಬಲತುದಿಯಲ್ಲಿ ಇರುವವರು ಚಿತ್ರದ ನಿರ್ದೇಶಕ ಶಾಂತೇಶ ಪಾಟೀಲ

ಚಂದ್ರಹಾಸ ಸಿನಿಮಾ ತಯಾರಿ ಕಥೆ

ಎ.ಎಲ್.ನಾಗೂರ

ಭಾರತದ ಮೊದಲ ವಾಕ್ಚಿತ್ರ 'ಆಲಂ ಆರಾ' 1930ರಲ್ಲಿ ತೆರೆಕಂಡಿತು. ಅದೇ ಸರಿಸುಮಾರಿಗೆ ತಮಿಳು, ತೆಲುಗಿನಲ್ಲೂ ವಾಕ್ಚಿತ್ರಗಳು ಸಿದ್ಧವಾದವು. ಕನ್ನಡದಲ್ಲಿ ಅಂತಹ ಚಿತ್ರ ನೋಡಲು ಮಾತ್ರ ಮತ್ತೆ ಮೂರು ವರ್ಷ ಕಾಯಬೇಕಾಯಿತು. ಚಿತ್ರೀಕರಣ ಮೊದಲೇ ಪ್ರಾರಂಭವಾದರೂ 'ಭಕ್ತ ಧ್ರುವ' ತೆರೆಕಾಣಲು ತಡವಾಯಿತು. 'ಸತಿ ಸುಲೋಚನಾ' (1934) ತೆರೆಗೆ ಬಂದ ಪ್ರಥಮ ವಾಕ್ಚಿತ್ರವೆಂಬ ಹೆಗ್ಗಳಿಕೆ ಪಡೆಯಿತು. 'ಸತಿ ಸುಲೋಚನಾ', 'ಭಕ್ತ ಧ್ರುವ'ಗಳು 'ಮಾತನಾಡಿ' ಇತಿಹಾಸ ಸೃಷ್ಟಿಸಿದವು.

ಪ್ರಾರಂಭದಲ್ಲಿ ಮೂಕಿ ಚಿತ್ರಗಳು ಬರುತ್ತಿದ್ದವು; ಅವುಗಳನ್ನು ಪ್ರದರ್ಶಿಸುತ್ತಿದ್ದ ಚಿತ್ರಮಂದಿರಗಳೇ ಮಾತನಾಡುವ ಚಿತ್ರಗಳನ್ನೂ ಪ್ರದರ್ಶಿಸಬೇಕಿತ್ತು. ಒಮ್ಮೆಲೇ ಪುಂಖಾನುಪುಂಖವಾಗಿ ಮಾತನಾಡುವ ಚಿತ್ರಗಳೇನೂ ಸಿದ್ಧವಾಗಲಿಲ್ಲ. ಮೂಕಿ ಚಿತ್ರಗಳ ವೇಗಕ್ಕೂ ಟಾಕಿ ಚಿತ್ರಗಳ ವೇಗಕ್ಕೂ ವ್ಯತ್ಯಾಸವಿತ್ತು. ಅದರಿಂದಾಗಿ ಮಾತು, ದೃಶ್ಯಗಳನ್ನು ಜೋಡಿಸುವಾಗ ವ್ಯತ್ಯಾಸವಾಗುತ್ತಿತ್ತು. ಅಲ್ಲದೆ, ಟಾಕಿ ಚಿತ್ರಗಳಿಗೆ ಚಿತ್ರಮಂದಿರಗಳೂ ತಾಂತ್ರಿಕವಾಗಿ ಸಿದ್ಧವಾಗಬೇಕಿತ್ತು. ಸೌಂಡ್‌ಬಾಕ್ಸ್ ಇತ್ಯಾದಿ ಪರಿಕರಗಳನ್ನು ಅಳವಡಿಸಬೇಕಿತ್ತು.

ಬಹುತೇಕ ರಂಗಭೂಮಿಯ ನಟ-ನಟಿಯರು ಆ ಸಂದರ್ಭದಲ್ಲಿ ಚಿತ್ರರಂಗಕ್ಕೆ ವಲಸೆ ಬಂದರು. ಟಾಕಿ ಚಿತ್ರಗಳು ಪ್ರಾರಂಭವಾದ ಮೇಲೆ ಕಥೆ ಹೇಳುವ ರೀತಿ ಸಹ ಬದಲಾಯಿತು. ಸಂಭಾಷಣೆ, ಹಾಡುಗಳ ಉಪಯೋಗ ಎಲ್ಲವೂ ಒಂದೊಂದು ಪ್ರಯೋಗವೇ ಎಂಬಂತೆ ಬಳಕೆಯಾಗತೊಡಗಿದವು. ಬಹುತೇಕ ಪೌರಾಣಿಕ ವಸ್ತುವನ್ನೇ ಆಯ್ದುಕೊಳ್ಳುತ್ತಿದ್ದರು. ನೇರವಾಗಿ ರಾಮಾಯಣ-ಮಹಾಭಾರತ ಮಹಾಕಾವ್ಯಗಳನ್ನು ತೆಗೆದುಕೊಳ್ಳದೇ ಅವುಗಳ ಗರ್ಭದಲ್ಲಿರುವ ಉಪಕಥೆಗಳನ್ನು ಚಲನಚಿತ್ರಕ್ಕೆ ವಸ್ತುವಾಗಿಸಿಕೊಂಡರು. ಸಾಮಾನ್ಯವಾಗಿ ಎಲ್ಲ ವೃತ್ತಿರಂಗಭೂಮಿಯಲ್ಲೂ ಇಂಥ ವಸ್ತು ಇರುವ ನಾಟಕ ಪ್ರಯೋಗವೇ ಯಶಸ್ವಿ ಆಗುತ್ತಿತ್ತು. ರಾಮಾಯಣ-ಮಹಾಭಾರತದ ಅತೀ ದೀರ್ಘ ಕಥಾ ಭಾಗಕ್ಕಿಂತ ಉಪಕಥೆಗಳನ್ನು ರಚಿಸಿ ಹೇಳುತ್ತಿದ್ದ ವಿಧಾನವೇ ಹೆಚ್ಚಾಗಿ ಚಲಾವಣೆಯಲ್ಲಿತ್ತು. ಅಂದಿನ ರಂಗಭೂಮಿಯ ನಕ್ಷತ್ರಗಳೇ ಚಲನಚಿತ್ರಕ್ಕೂ ಅನಿವಾರ್ಯವಾದರು.

1936ರಲ್ಲೇ ಧಾರವಾಡದ ಕರ್ನಾಟಕ ಟಾಕೀಸ್‌ನ ಮುಧೋಳ್ಕರ ಸಹೋದರರು ದೇವುಡು ಅವರಿಂದ ರಚಿತವಾದ 'ಮಾರ್ಕಂಡೇಯ' ನಾಟಕವನ್ನು 'ಚಿರಂಜೀವಿ' ಹೆಸರಿನಲ್ಲಿ ಚಲನಚಿತ್ರ ಮಾಡಿದರು. 1937ರಲ್ಲಿ 'ಚಿರಂಜೀವಿ' ತೆರೆಗೆ ಬಂತು. ಇದು ಉತ್ತರ ಕರ್ನಾಟಕದವರು ನಿರ್ಮಿಸಿದ ಮೊಟ್ಟಮೊದಲ ಕನ್ನಡ ಚಿತ್ರ. 1947ರಲ್ಲಿ ಉತ್ತರ ಕರ್ನಾಟಕದವರಿಂದ ನಿರ್ಮಿತ ಎರಡನೆಯ ಕನ್ನಡ ಚಿತ್ರ ಮತ್ತು ಶಾಂತೇಶ ಪಾಟೀಲ ನಿರ್ದೇಶಿತ ಮೊಟ್ಟಮೊದಲ ಕನ್ನಡ ಚಿತ್ರ 'ಚಂದ್ರಹಾಸ' ಬಿಡುಗಡೆಗೊಂಡಿತು.

ಪಂಪಾ ಪಿಕ್ಚರ್ಸ್ ಅಡಿ ನಿರ್ಮಾಣಗೊಂಡ ಮೊಟ್ಟಮೊದಲ ಚಿತ್ರವಿದು. ಉತ್ತರ ಕರ್ನಾಟಕದ ಹಲವಾರು ಹೊಸ ಪ್ರತಿಭೆಗಳು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಪುಣೆಯ ಆರ್ಕೈವ್‌ನಲ್ಲಿದ್ದ ಈ ಚಿತ್ರದ ನೆಗೆಟಿವ್ ನೈಟ್ರೇಟ್ ಬಳಕೆಯ ಕಾರಣ ಹಾಗೂ ಅಂದಿನ ದಿನಗಳಲ್ಲಿ ನೆಗೆಟಿವ್ ರೋಲ್‌ಗಳ ಸಂರಕ್ಷಣೆಯ ತಾಂತ್ರಿಕತೆಗಳು ಬೆಳೆಯದಿದ್ದ ಕಾರಣ ಎಂದೋ ಹಾಳಾಗಿ ಹೋಗಿದೆ. ಚಿತ್ರ ನೋಡೋಣವೆಂದರೆ ಅತ್ತ ನೆಗೆಟಿವ್ ಇಲ್ಲ, ಇತ್ತ ಹಾಕಿದ ಹನ್ನೊಂದು ಪ್ರಿಂಟ್‌ಗಳೂ ಇಲ್ಲ!

ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಹಿರೇಬೇವನೂರು ಗ್ರಾಮದ ಭೌತಶಾಸ್ತ್ರ ಸ್ನಾತಕೋತ್ತರ ಪದವೀಧರ ಶಾಂತೇಶ ಪಾಟೀಲರು ಮುಂಬೈನ ಸಾಗರ್ ಮೂವಿಟೋನ್‌ನಲ್ಲಿ ಸರ್ವೋತ್ತಮ ಬಾದಾಮಿಯವರೊಂದಿಗೆ ಧ್ವನಿಗ್ರಾಹಕರಾಗಿ ಕೆಲಸ ಮಾಡಿದವರು.

ಬಿ.ಡಿ.ಜತ್ತಿಯವರೊಂದಿಗೆ ಶಾಂತೇಶ ಪಾಟೀಲ, ಬಿ.ವಿ. ಭೂಮರೆಡ್ಡಿ ಮತ್ತಿತರ ಗಣ್ಯರು ಸೇರಿ ಪಂಪಾ ಪಿಕ್ಚರ್ಸ್ ಲಿಮಿಟೆಡ್ ಹುಟ್ಟುಹಾಕಿದರು. ಅದರ ಮೊದಲ ಕಾಣಿಕೆ ಚಂದ್ರಹಾಸ.

ಸುಮಾರು ನಾಲ್ಕೈದು ವರ್ಷಗಳಿಂದ ಈ ಚಿತ್ರ ಸಮಗ್ರ ಶೋಧಕಾರ್ಯದಲ್ಲಿ ಮುಳುಗಿದ್ದ ನನಗೆ ಹಲವು ರೋಚಕ ಮಾಹಿತಿಗಳು ಸಿಕ್ಕವು. ಶಾಂತೇಶ ಪಾಟೀಲರ ಪುತ್ರಿ ಜಯಶ್ರೀ ಸಿಕ್ಕೆದೇಸಾಯಿಯವರಿಂದ ಚಂದ್ರಹಾಸದ ಶೂಟಿಂಗ್‌ನ ಫೋಟೊಗಳು, ಹಂದಿಗನೂರು ಸಿದ್ರಾಮಪ್ಪ ಇವರ ಮೊಮ್ಮಗ ಭೀಮಸಿಂಗ್ ರಜಪೂತ ಅವರಿಂದ ಪಂಪಾ ಪಿಕ್ಚರ್ಸ್‌ನ ಲೆಟರ್‌ಹೆಡ್ ಸಿಕ್ಕವು. ಈ ಚಿತ್ರದ ಮುಖ್ಯನಟ ವಿಕಾಸ ಶಹಾರ ಪುತ್ರಿ ಕೋಮಲ್ ಅವರಿಂದ ಚಲನಚಿತ್ರದ ವಿಶೇಷ ಫೋಟೊಗಳು, ಬಾಲಪಾತ್ರಧಾರಿ ಚಂದ್ರಶೇಖರ ಮೋದಗಿಯವರ ಪುತ್ರ ಟಿ.ಸಿ. ಮೋದಗಿಯವರಿಂದ ಪದ್ಯಾವಳಿ ಪುಸ್ತಿಕೆ ದೊರೆಯಿತು.

ಮಲ್ಲಿಕಾರ್ಜುನ ಮನ್ಸೂರ, ನಲವಡಿ ಶ್ರೀಕಂಠ ಶಾಸ್ತ್ರಿ, ಅಮೀರ್‌ಬಾಯಿ ಕರ್ನಾಟಕಿ, ಎನ್ಕೆ ಕುಲಕರ್ಣಿ, ಸಿದ್ರಾಮಪ್ಪ ಹಂದಿಗನೂರ ಅವರಂತಹ ಘಟಾನುಘಟಿಗಳು ಈ ಚಿತ್ರಕ್ಕೆ ಕೈಜೋಡಿಸಿದ್ದು ಈಗ ಇತಿಹಾಸ.


ಖಳನಾಯಕನ ಪಾತ್ರದಲ್ಲಿ ಮಿಂಚಿದ ಸಿದ್ರಾಮಪ್ಪ ಹಂದಿಗನೂರು

'ಚಂದ್ರಹಾಸ'ನ ಪ್ರವರ

- **ಚಿತ್ರ ತಯಾರಿಸಿದ ಸಂಸ್ಥೆ:** ಪಂಪಾ ಪಿಕ್ಚರ್ಸ್ ಲಿಮಿಟೆಡ್ (ಬಾಂಬೆ)
- **ಸ್ಥಾಪನೆ:** 1946, ಅಧಿಕೃತ ಬಂಡವಾಳ- ₹ 10,00,000, ಸ್ವೀಕೃತ ಬಂಡವಾಳ- ₹ 5,00,000.
- **ನಿರ್ದೇಶಕ ಮಂಡಳಿಯ ಸದಸ್ಯರು:** ರಾವಬಹದ್ದೂರ ಕೆ.ಬಿ.ಭದ್ರಾಪುರ–ಚೇರಮನ್, ಬಿ.ವಿ.ಭೂಮರೆಡ್ಡಿ, ಎಸ್.ಐ.ಗುತ್ತಿಗೋಳಿ, ಎಸ್.ಎಸ್.ಯಳಮೇಲಿ, ಡಾ ಬಿ.ಎಸ್. ಜೀರಗೆ, ಡಾ. ಎಸ್.ಬಿ.ಪಾಟೀಲ, ಬಿ.ವಿ.ಜಕಾತಿ, ಶಾಂತೇಶ ಪಾಟೀಲ-ಮ್ಯಾನೇಜಿಂಗ್ ಡೈರೆಕ್ಟರ್.
  ಪಂಪಾ ಪಿಕ್ಚರ್ಸ್ ಪ್ರಧಾನ ಕಚೇರಿ: 16, ಸಿಯಾನ್,ಮಾತುಂಗಾ ಎಸ್ಟೇಟ್, ಸಾಯನ್, ಬಾಂಬೆ-22, ವಿತರಣಾ ಕಚೇರಿಗಳು: 1) ರಿಸಾಲ್ದಾರ್ ಲೇನ್, ಬೆಳಗಾಂ, 2) ಅಬ್ಬಾಸ್ ಬಿಲ್ಡಿಂಗ್, 11, ಕಾಕ್‌ಬರ್ನ್ ರೋಡ್, ಬೆಂಗಳೂರು.

ಚಿತ್ರದ ತಾಂತ್ರಿಕ ವರ್ಗ

- **ನಿರ್ಮಾತೃ-ದಿಗ್ದರ್ಶಕ:** ಶಾಂತೇಶ ಪಾಟೀಲ, ಕಥೆ: ಲಕ್ಷ್ಮೀಶ ಮಹಾಕವಿಯ ಜೈಮಿನಿ ಭಾರತ, ಚಿತ್ರಕಥೆ: ಶಾಂತೇಶ ಪಾಟೀಲ, ಕಥಾರೂಪಣ-ಸಂವಾದ: ಎನ್ಕೆ ಕುಲಕರ್ಣಿ, ಗೀತೆಗಳು: ನಲವಡಿ ಶ್ರೀಕಂಠ ಶಾಸ್ತ್ರಿ ಮತ್ತು ಗಂಗಾಧರ ವಾಲಿ, ಸಂಗೀತ: ಸಂಗೀತರತ್ನ ಮಲ್ಲಿಕಾರ್ಜುನ ಮನ್ಸೂರ, ನೃತ್ಯ: ಲಕ್ಷ್ಮೀನಾರಾಯಣ ಭಾರ್ಗವ, ಕಲೆ: ಜನಾರ್ಧನ ಗೋಂಧಳೇಕರ, ಛಾಯಾಲೇಖನ: ವಾಸುದೇವ ಕರ್ನಾಟಕಿ, ಧ್ವನಿಲೇಖನ: ವಿರೂಪಾಕ್ಷ ಜಿ. ಪಾಟೀಲ (ಹುಬ್ಬಳ್ಳಿ), ಚಿತ್ರಸಂಕಲನ: ಶಿವಾಜಿ ಅವಧೂತ, ಚಿತ್ರ ಕಲೆಗಾರರು: ಶಂತನು ಮಾಳಿ, ವ್ಯವಸ್ಥಾಪಕರು: ಜಯವಂತ ಭಂಡಾರಕರ ಮತ್ತು ಗುರುಪಾದ ಕೊಂಗಿ
- **ಚಂದ್ರಹಾಸ ಕಲಾವಿದರು:** ವಿಕಾಸ ಶಹಾ (ಚಡಚಣ), ತಿಲೋತ್ತಮ (ಬಿ.ಶಾರದಾ/ ವೈಶಾಲಿ ಕಾಸರವಳ್ಳಿಯವರ ಚಿಕ್ಕಮ್ಮ), ಸಿದ್ರಾಮಪ್ಪ ಹಂದಿಗನೂರ (ವಿಜಯಪುರ), ಅಮೀರ್‌ಬಾಯಿ ಕರ್ನಾಟಕಿ, ಎಂ.ನಾಗೇಂದ್ರ, ಶ್ಯಾಮಲಾ, ಕೆ.ಪಿ.ರಾವ್, ಮಾಧವಿ, ಚಂದ್ರಶೇಖರ ಮೋದಗಿ, ಲಲಿತಾ, ಕುಮುದ, ಶಶಿಧರ ಪಾಟೀಲ ಮತ್ತು ರವಿ ಪಾಟೀಲ (ಶಾಂತೇಶ ಪಾಟೀಲರ ಮಕ್ಕಳು), ವತ್ಸಲಾ, ಮೋಹನ ಕಿತ್ತೂರ, ಯಮುನಾಮೂರ್ತಿ (ಯಾಮಿನಿ), ಎ.ಜಿ.ನೀಲಗಾರ (ಧಾರವಾಡ)
- **ಗಾಯಕರು:** ಅಮೀರ್‌ಬಾಯಿ ಕರ್ನಾಟಕಿ, ಜೋಳದರಾಶಿ ದೊಡ್ಡನಗೌಡ, ವಿಜಯಾ ದೇಸಾಯಿ, ಹಂದಿಗನೂರು ಸಿದ್ರಾಮಪ್ಪ



ಇಂಡಿಯಾ ಓಪನ್ ಬ್ಯಾಡ್ಮಿಂಟನ್: ಫೈನಲ್ ಪ್ರವೇಶಿಸಿದ ಭಾರತದ ಯುವ ಆಟಗಾರ

ಪ್ರಶಸ್ತಿ ಗೆಲುವಿನತ್ತ ಸೇನ್ 'ಲಕ್ಷ್ಯ'

ನವದೆಹಲಿ (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಭಾರತದ ಆಟಗಾರ ಲಕ್ಷ್ಯ ಸೇನ್ ಅವರು ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟಿದ್ದಾರೆ. ಹಿನ್ನಡೆಯಿಂದ ಪುಟಿದೆದ್ದ ಅವರು ಸೆಮಿಫೈನಲ್‌ನಲ್ಲಿ ಮಲೇಷ್ಯಾದ ಎನ್‌ಜಿ ಜೆ ಯಾಂಗ್ ಅವರ ಸವಾಲು ಹತ್ತಿಕ್ಕಿದರು.

ಉತ್ತರಾಖಂಡದ ಅಲ್ಮೊರಾದ 20 ವರ್ಷದ ಲಕ್ಷ್ಯ ಅವರಿಗೆ ಇದು ವಿಶ್ವ ಟೂರ್ ಸೂಪರ್ 500 ಟೂರ್ನಿಯಲ್ಲಿ ಮೊದಲ ಫೈನಲ್ ಪ್ರವೇಶವಾಗಿದೆ. ಪುರುಷರ ಸಿಂಗಲ್ಸ್ ನಾಲ್ಕರ ಘಟ್ಟದ ರೋಚಕ ಹಣಾಹಣಿಯಲ್ಲಿ ಅವರು 19-21, 21-16, 21-12ರಿಂದ ವಿಶ್ವ ಕ್ರಮಾಂಕದಲ್ಲಿ 60ನೇ ಸ್ಥಾನದಲ್ಲಿರುವ ಆಟಗಾರನಿಗೆ ಸೋಲುಣಿಸಿದರು.

ಲಕ್ಷ್ಯ ಮತ್ತು ಯಾಂಗ್ ಸೆಮಿಫೈನಲ್ ಪಂದ್ಯವು ಆಕ್ರಮಣಕಾರಿ ಪರಾಕ್ರಮಗಳ ಅನಾವರಣಕ್ಕೆ ಸಾಕ್ಷಿಯಾಯಿತು.

ಮೊದಲ ಗೇಮ್‌ನಲ್ಲಿ ಬಲಿಷ್ಠ ರಿಟರ್ನ್, ಪರಿಣಾಮಕಾರಿ ಸ್ಮ್ಯಾಷ್‌ಗಳಿಂದ ಎದುರಾಳಿಯನ್ನು ಅಂಗಣದ ತುಂಬ ಓಡಾಡಿಸಿದ ಲಕ್ಷ್ಯ ಆರಂಭದಲ್ಲಿ 10-6ರಿಂದ ಮುಂದಿದ್ದರು. ವಿರಾಮದ ವೇಳೆಗೆ ಇದು 11-8ಕ್ಕೆ ತಲುಪಿತು. ವಿರಾಮದ ಬಳಿಕ ಚೇತರಿಸಿಕೊಂಡ ಮಲೇಷ್ಯಾ ಆಟಗಾರ 14-14ರ ಸಮಬಲ ಸಾಧಿಸಿದರು. ಬಳಿಕ ಇಬ್ಬರ ಮಧ್ಯೆ ಜಿದ್ದಾಜಿದ್ದಿ ಪೈಪೋಟಿ ನಡೆದರೂ ಗೇಮ್ ಯಾಂಗ್ ಕೈವಶವಾಯಿತು.

ಎರಡನೇ ಗೇಮ್‌ನಲ್ಲೂ ಯಾಂಗ್ ಅದೇ ಲಯ ಮುಂದುವರಿಸಿ, ಆರಂಭದಲ್ಲಿ 4-1ರಿಂದ ಮುಂದಿದ್ದರು. ವಿರಾಮದ ವೇಳೆ ಭಾರತದ ಆಟಗಾರ 9-11ರಿಂದ ಹಿಂದೆ ಇದ್ದರು. ಬಳಿಕ ಕ್ರಮೇಣ ಮೇಲುಗೈ ಸಾಧಿಸಿದ ಅವರು ಗೇಮ್‌ಅನ್ನು 19-16ಕ್ಕೆ ಕೊಂಡೊಯ್ದರು. ಯಾಂಗ್ ಅವರು ನೆಟ್‌ನಲ್ಲಿ ಮಾಡಿದ ಲೋಪಗಳಿಂದಾಗಿ ಗೇಮ್ ತನ್ನದಾಗಿಸಿಕೊಳ್ಳುವುದು ಲಕ್ಷ್ಯ ಅವರಿಗೆ ಮತ್ತಷ್ಟು ಸರಳವಾಯಿತು.

ನಿರ್ಣಾಯಕ ಮತ್ತು ಗೇಮ್‌ನಲ್ಲಿ ಲಕ್ಷ್ಯ ಮತ್ತಷ್ಟು ವಿಶ್ವಾಸದಿಂದ ಆಡಿದರು; ಜಯದ ಸಂತಸದಲ್ಲಿ ಮಿಂದೆದ್ದರು.

ಇಲ್ಲಿ ಮೂರನೇ ಶ್ರೇಯಾಂಕ ಪಡೆದಿರುವ ಲಕ್ಷ್ಯ, ಪ್ರಶಸ್ತಿಗಾಗಿ ವಿಶ್ವ ಚಾಂಪಿಯನ್, ಸಿಂಗಪುರದ ಲೋಹ್ ಕೀನ್ ಯಿವ್ ಎದುರು ಭಾನುವಾರ ಸೆಣಸಲಿದ್ದಾರೆ. ಕಳೆದ ವರ್ಷ ಡಚ್ ಓಪನ್ ಫೈನಲ್‌ನಲ್ಲೂ ಇಬ್ಬರೂ ಮುಖಾಮುಖಿಯಾಗಿದ್ದರು. ಆಗ ಸೇನ್ ಸೋತಿದ್ದರು. 5ನೇ ಶ್ರೇಯಾಂಕದ ಲೋಹ್ ಅವರಿಗೆ ನಾಲ್ಕರ ಘಟ್ಟದ ಪಂದ್ಯದಲ್ಲಿ ವಾಕ್‌ಓವರ್ ಸಿಕ್ಕಿತು. ಅವರ ಎದುರು ಆಡಬೇಕಿದ್ದ ಕೆನಡಾದ ಬ್ರಿಯನ್ ಯಂಗ್ ಗಂಟಲು ನೋವು ಮತ್ತು ತಲೆನೋವಿನ ಕಾರಣ ಪಂದ್ಯದಿಂದ ಹಿಂದೆ ಸರಿದರು.

> 'ನನ್ನ ಮೊದಲ ಸೂಪರ್ 500 ಫೈನಲ್‌ಅನ್ನು ತವರಿನಲ್ಲಿ ಆಡಲಿರುವುದಕ್ಕೆ ಖುಷಿ ಇದೆ. ಮೊದಲ ಗೇಮ್‌ನಲ್ಲಿ ತಪ್ಪುಗಳನ್ನು ಎಸಗಿದೆ. 2ಮತ್ತು 3ನೇ ಗೇಮ್‌ನಲ್ಲಿ ಶಾಂತಚಿತ್ತದಿಂದ ಆಡಿದೆ.
> **ಲಕ್ಷ್ಯ ಸೇನ್** ಭಾರತದ ಆಟಗಾರ

ಲಕ್ಷ್ಯ ಸೇನ್ ಗೆಲುವಿನ ಸಂತಸ– ಪಿಟಿಐ ಚಿತ್ರ

ಲಕ್ಷ್ಯ ಹಾಗೂ ಲೋಹ್ ಒಟ್ಟು ನಾಲ್ಕು ಬಾರಿ ಮುಖಾಮುಖಿಯಾಗಿದ್ದು, ತಲಾ ಎರಡು ಬಾರಿ ಗೆಲುವು ಸಾಧಿಸಿದ್ದಾರೆ. ಆದರೆ ಕಳೆದ ಮೂರು ಪಂದ್ಯಗಳಲ್ಲಿ ಲಕ್ಷ್ಯ ಎರಡು ಬಾರಿ ನಿರಾಸೆ ಅನುಭವಿಸಿದ್ದಾರೆ.

ಫೈನಲ್‌ಗೆ ಸಾತ್ವಿಕ್– ಚಿರಾಗ್; ಸಿಂಧು, ಆಕರ್ಷಿ ಪರಾಭವ

ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್

ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದಲ್ಲಿ ಸಾತ್ವಿಕ್ ಸಾಯಿ ರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಫೈನಲ್‌ಗೆ ಲಗ್ಗೆಯಿಟ್ಟರು. ಆದರೆ ಮಹಿಳಾ ಸಿಂಗಲ್ಸ್‌ನಲ್ಲಿ ಮಾಜಿ ವಿಶ್ವ ಚಾಂಪಿಯನ್ ಭಾರತದ ಪಿ.ವಿ. ಸಿಂಧು ಅವರ ಸವಾಲು ಸೆಮಿಫೈನಲ್‌ನಲ್ಲೇ ಅಂತ್ಯವಾಯಿತು.

ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಸಾತ್ವಿಕ್– ಚಿರಾಗ್ 21-10, 21-18ರಿಂದ ಫ್ರಾನ್ಸ್‌ನ ವಿಲಿಯಮ್ ವಿಲೆಗರ್ ಮತ್ತು ಫ್ಯಾಬಿಯನ್ ಡೆಲ್‌ರು ಎದುರು ಜಯಿಸಿದರು. ಭಾನುವಾರ ನಡೆಯುವ ಫೈನಲ್‌ನಲ್ಲಿ ಭಾರತದ ಜೋಡಿಗೆ ಮೂರು ಬಾರಿಯ ವಿಶ್ವ ಚಾಂಪಿಯನ್ಸ್, ಇಂಡೊನೇಷ್ಯಾದ ಮೊಹಮ್ಮದ್ ಎಹಸಾನ್ ಮತ್ತು ಹೆಂಡ್ರಾ ಸೆಟಿಯಾವಾನ್ ಎದುರಾಗಲಿದ್ದಾರೆ.

ಅಗ್ರಶ್ರೇಯಾಂಕದ ಸಿಂಧು ನಾಲ್ಕರಘಟ್ಟದ ಪಂದ್ಯದಲ್ಲಿ 14-21, 21-13, 10-21ರಿಂದ ಆರನೇ ಶ್ರೇಯಾಂಕದ ಥಾಯ್ಲೆಂಡ್ ಆಟಗಾರ್ತಿ ಸುಪನಿದಾ ಕೇಟ್‌ತೊಂಗ್ ಎದುರು ಮಣಿದರು.

ಮಹಿಳಾ ಸಿಂಗಲ್ಸ್‌ನ ಇನ್ನೊಂದು ಜಿದ್ದಾಜಿದ್ದಿನ ಸೆಮಿಫೈನಲ್‌ನಲ್ಲಿ ಭಾರತದ ಆಕರ್ಷಿ ಕಶ್ಯಪ್ 26-24, 21-9ರಿಂದ ಥಾಯ್ಲೆಂಡ್‌ನ ಬುಸಾನನ್ ಒಂಗ್‌ಬಮ್ರುಂಗ್‌ಪನ್ ಎದುರು ಎಡವಿದರು.

ರಾಷ್ಟ್ರಮಟ್ಟದ ರೆಫರಿಗಳಾಗಿ ಹರ್ಷಾ, ಪೂಜಾ

ಹರ್ಷಾ ಸೈನಿ

ಪೂಜಾ

ಬೆಂಗಳೂರು: ಕರ್ನಾಟಕದ ಹರ್ಷಾ ಸೈನಿ ಹಾಗೂ ಪೂಜಾ ಅವರು ರಾಷ್ಟ್ರಮಟ್ಟದ ಫುಟ್‌ಬಾಲ್ ರೆಫರಿಗಳಾಗಿ ಅರ್ಹತೆ ಗಳಿಸಿದ್ದಾರೆ.

ಇದೇ 11ರಂದು ಗ್ವಾಲಿಯರ್‌ನಲ್ಲಿ ನಡೆದ ಬಡ್ತಿ ಪರೀಕ್ಷೆಯಲ್ಲಿ ಇವರಿಬ್ಬರು ಉತ್ತೀರ್ಣರಾಗಿದ್ದಾರೆ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ ಪತ್ರದಲ್ಲಿ ತಿಳಿಸಿದ್ದಾಗಿ ಪ್ರಕಟಣೆ ಹೇಳಿದೆ.

ತೋಬಿಯಾಸ್ ಮರ್ವಿನ್ ಮತ್ತು ಭಾಗವತ್ ಸುಂದರ್ ಕೂಡ ರೆಫರಿ ಪರೀಕ್ಷೆ ಪಾಸು ಮಾಡಿದ್ದಾರೆ. ಅಭಿಲಾಷ್ ಎಂ. ಸುರೇಶ್ ಅವರು ಸಹಾಯಕ ರೆಫರಿಯಾಗಿ ಅರ್ಹತೆ ಗಳಿಸಿದ್ದಾರೆ.

ಮತ್ತೆ ಕೋವಿಡ್ ಹಾವಳಿ

ಕೋವಿಡ್ ಹಿನ್ನೆಲೆಯಲ್ಲಿ ಮತ್ತಿಬ್ಬರು ಆಟಗಾರರು ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. ರಷ್ಯಾದ ಮಿಶ್ರ ಡಬಲ್ಸ್ ಆಟಗಾರ ರೊಡಿಯೊನ್ ಅಲಿಮೊವ್ ಅವರಿಗೆ ಕೋವಿಡ್ ಖಚಿತಪಟ್ಟ ಕಾರಣ ಆಡಲಿಲ್ಲ. ಹೀಗಾಗಿ, ಪ್ರಾಥಮಿಕ ಸಂಪರ್ಕಿತೆ ಎಂದು ಪರಿಗಣಿಸಲಾದ ಅವರ ಜೊತೆ ಆಟಗಾರ್ತಿ ಅಲಿನಾ ದವ್ಲೆಟೊವಾ ಕೂಡ ಹಿಂದೆ ಸರಿಯಬೇಕಾಯಿತು.

ಇದರಿಂದ ಅವರ ಎದುರಾಳಿಗಳಾಗಿದ್ದ ಇಂಡೊನೇಷ್ಯಾದ ಯಾಂಗ್ ಕಾಯ್ ಹೀ ಮತ್ತು ವೇ ಹಾನ್ ತೊನ್ ಅವರು ಮಿಶ್ರ ಡಬಲ್ಸ್ ಫೈನಲ್ ತಲುಪಿದರು.

ರಷ್ಯಾದ ಡಬಲ್ಸ್ ಆಟಗಾರ್ತಿ ಏಕಟೆರಿನಾ ಮಾಲ್ಕೊವಾ ಬೆನ್ನುನೋವಿನಿಂದ ಬಳಲಿದ ಕಾರಣ ಅವರು ಮತ್ತು ಜೊತೆಗಾರ್ತಿ ಅನಸ್ತಾಸಿಯಾ ಶಪವೊಲೊವಾ ಕೂಡ ಟೂರ್ನಿಯಿಂದ ಹಿಂದೆ ಸರಿದರು. ಇದರಿಂದಾಗಿ ಸೆಮಿಫೈನಲ್‌ನಲ್ಲಿ ಇವರ ಎದುರಾಳಿಗಳಾಗಿದ್ದ ರಷ್ಯಾದ ಅನಸ್ತಾಸಿಯಾ ಅಕ್ಚುರಿನಾ ಮತ್ತು ಓಲ್ಗಾ ಮೊರೊಜೊವಾ ಪ್ರಶಸ್ತಿ ಸುತ್ತು ತಲುಪಿದರು.

ಭಾರತ ಮಹಿಳಾ ಕ್ರಿಕೆಟ್ ತಂಡಕ್ಕೆ ಮುಂಬೈನಲ್ಲಿ ಕ್ವಾರಂಟೈನ್

ನವದೆಹಲಿ (ಪಿಟಿಐ): ಮಹಿಳೆಯರ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಆಡಲಿರುವ ಭಾರತ ತಂಡವು, ನ್ಯೂಜಿಲೆಂಡ್‌ಗೆ ತೆರಳುವ ಮೊದಲು ಭಾನುವಾರ ಮುಂಬೈನಲ್ಲಿ ಸೇರಲಿದ್ದು, ಒಂದು ವಾರ ಕ್ವಾರಂಟೈನ್‌ನಲ್ಲಿ ಇರಲಿದೆ.

ತಂಡದ 15 ಮಂದಿ ಸದಸ್ಯರು ಮತ್ತು ಮೂವರು ಕಾಯ್ದಿರಿಸಿದ ಆಟಗಾರ್ತಿಯರನ್ನು ಮುಂಬೈನಲ್ಲಿ ಸೇರುವಂತೆ ತಿಳಿಸಲಾಗಿದ್ದು, ಒಂದು ವಾರದವರೆಗೆ ಪ್ರತ್ಯೇಕವಾಸದಲ್ಲಿರಲಿದ್ದಾರೆ. ತಂಡವು ಇದೇ 24ರಂದು ನ್ಯೂಜಿಲೆಂಡ್‌ಗೆ ತೆರಳುವ ನಿರೀಕ್ಷೆಯಿದೆ. ಅಲ್ಲಿಗೆ ತೆರಳಿದ ಬಳಿಕ ಮತ್ತೊಂದು ಬಾರಿ ಕ್ವಾರಂಟೈನ್‌ಗೆ ಒಳಗಾಗಬೇಕಾಗುತ್ತದೆ.

ಮಾರ್ಚ್ - ಏಪ್ರಿಲ್‌ನಲ್ಲಿ ನಡೆಯಲಿರುವ ವಿಶ್ವಕಪ್‌ಗೆ ಮೊದಲು ಫೆಬ್ರುವರಿ 11ರಿಂದ ಆತಿಥೇಯ ನ್ಯೂಜಿಲೆಂಡ್ ವಿರುದ್ಧ ಭಾರತ ಐದು ಪಂದ್ಯಗಳ ಸರಣಿ ಮತ್ತು ಒಂದು ಟಿ20 ಪಂದ್ಯವನ್ನು ಆಡುತ್ತದೆ.

ಅಧಿಕ ಶಕ್ತಿ, ಅಧಿಕ ಸಾಮರ್ಥ್ಯ
ZEE
ಮಲ್ಟಿ–ವಿಟ್ಯಾಮಿನ್, ಮಲ್ಟಿ–ಮಿನೆರಲ್ ಜೊತೆಗೆ
ಕೊರಿಯನ್ ಜಿನ್ಸೆಂಗ್
ದೈನಂದಿನ ಪೂರಕ ಪೌಷ್ಟಿಕಾಂಶ
ಎಲ್ಲಾ ಪ್ರಾಯದವರಿಗೂ ಸೂಕ್ತ ಕ್ಯಾಪ್ಸೂಲ್ಸ್ ಸಿರಪ್
9896134500
ಭಾರತ ಅತ್ಯಂತ ಮೆಚ್ಚಿನ
ZEEGOLD

Required RSMs, ASMs & Sales Executives Call - 9896306767 or Email - corp@zeelab.co.in

ZEE LABORATORIES
Da´ZEAGRA POWER



ಪವರ್ ಟ್ಯಾಬ್ಲೆಟ್ಸ್ ಮತ್ತು ತೈಲ
ಪುರುಷರಿಗಾಗಿ
ಕೇವಲ ಪುರುಷರಿಗಾಗಿ ಮಾತ್ರ
9896134500
fssai
हर प्रमुख दवा विक्रेता के यहां उपलब्ध

ದೀರ್ಘಕಾಲೀನ ಕೀಲುಗಳ ನೋವಿನಿಂದ ಬಳಲುತ್ತಿರುವ ರೋಗಿಗಳಿಗೆ ಸಿಹಿಸುದ್ದಿ

SELECTED NO.1 BRAND INDIA 2014
WORLD'S GREATEST BRANDS 2015-16 IUA

Helpline : 7876977777
BUY NOW

ಡಾ. ಆರ್ಥೋವನ್ನೇ ಏಕೆ ಕೊಳ್ಳಬೇಕು?

ಭಾರತದಾದ್ಯಂತ ಕಂಡುಬಂದ ಫಲಿತಾಂಶಗಳು

Rajasthan — ಮೊಹಮ್ಮದ್ ಜಾವೇದ್ ಕುರೇಶಿ, 29 ವರ್ಷ ಪ್ರಾಯ. ಇವರು ಬರೆದು ತಿಳಿಸಿದ್ದು ಏನೆಂದರೆ, ಕೆಲವು ಸಮಯದ ಹಿಂದೆ ನನಗೆ ಅಪಘಾತವಾಗಿತ್ತು. ನಾನು ಔಷಧಿ ಸೇವಿಸುವುದನ್ನು ನಿಲ್ಲಿಸಿದ ಬಳಿಕ ಮಂಡಿಗಳು ನಿರಂತರವಾಗಿ ನೋಯಲು ಪ್ರಾರಂಭಿಸಿದ್ದವು ಮತ್ತು ನನಗೆ ತುಂಬಾ ಆತಂಕವಾಗಿತ್ತು. ನಂತರ ಒಂದು ದಿನ, ನನ್ನ ಸ್ನೇಹಿತನೊಬ್ಬ ಡಾ. ಆರ್ಥೋ ತೈಲ್ ಮತ್ತು ಕ್ಯಾಪ್ಸೂಲ್ಸ್ ಬಳಸುವಂತೆ ಸೂಚಿಸಿದ. ನಾನು ಅದನ್ನು ಬಳಸಿದೆ ಮತ್ತು ಈಗ ನನಗೆ ನೋವು ಎಂದರೇನು ಎಂಬುದೇ ನೆನಪಿನಲ್ಲಿ ಉಳಿದಿಲ್ಲ.

Bihar — ನನ್ನ ಹೆಸರು ನಂದ ಕಿಶೋರ್ ವಿಶ್ವ ಕರ್ಮ, ವಯಸ್ಸು 40 ವರ್ಷ. ಬಹುಕಾಲದಿಂದ ನಾನು ಕೀಲು ನೋವಿನಿಂದ ಬಳಲುತ್ತಿದ್ದೆ. ನಡೆದಾಡು ವಾಗ ಕೀಲುಗಳಲ್ಲಿ ನೋವಿನಿಂದ ಸದ್ದು ಕೂಡ ಕೇಳಿಬರುತ್ತಿತ್ತು. ಸ್ನೇಹಿತರೊಬ್ಬರ ಸಲಹೆಯ ಪ್ರಕಾರ ನಾನು ಡಾ. ಆರ್ಥೋ ತೈಲ ಮತ್ತು ಕ್ಯಾಪ್ಸೂಲ್ಸ್ ಸೇವಿಸ ತೊಡಗಿದೆ. ಇದರಿಂದಾಗಿ ನನಗೆ ಸಾಕಷ್ಟು ಪರಿಣಾಮ ಲಭಿಸಿತು. ಈಗ ನಾನು ಆರಾಮವಾಗಿ ನಡೆದಾಡಬಲ್ಲೆ ಹಾಗೂ ಯಾವುದೇ ಕೀಲು ನೋವಿಲ್ಲದೆ ಕುಳಿತುಕೊಳ್ಳಬಲ್ಲೆ.

Gujarat — ನನ್ನ ಹೆಸರು ಲಕ್ಷ್ಮಿ ಬೆನ್ ಸೋಳಂಕಿ, 52 ವರ್ಷ ಪ್ರಾಯ. ನಾನು ಟೈಲರಿಂಗ್ ಉದ್ಯೋಗದಲ್ಲಿದ್ದೇನೆ ಮತ್ತು ಕಳೆದ ಎರಡು ವರ್ಷಗಳಿಂದ ಕಾಲುಗಳಲ್ಲಿ ಮತ್ತು ಹಿಮ್ಮಡಿಗಳಲ್ಲಿನ ನೋವಿನಿಂದ ಭಾರಿ ಯಾತನೆ ಅನುಭವಿಸುತ್ತಿದ್ದೆ. ನಂತರದ ದಿನಗಳಲ್ಲಿ ನನಗೆ ಡಾ. ಆರ್ಥೋ ತೈಲ ಮತ್ತು ಕ್ಯಾಪ್ಸೂಲ್ ಬಗ್ಗೆ ತಿಳಿಯಿತು. ಇದನ್ನು ಬಳಸುತ್ತ ಕೇವಲ 50 ದಿನಗಳಲ್ಲಿ ನನಗೆ ನಿವಾರಣೆ ದೊರಕಿತು. ನಿಮಗೆ ನನ್ನ ಧನ್ಯವಾದಗಳು.

Haryana — ಸಂಜು ಕುಮಾರ್, 33 ಪ್ರಾಯ, ಗ್ರಂಥಾಲಯದಲ್ಲಿ ಕೆಲಸ. ಇವರು ಬರೆದು ತಿಳಿಸಿರುವುದು ಏನೆಂದರೆ, "ಕಳೆದ 3–4 ವರ್ಷಗಳಿಂದ ನಾನು ಕತ್ತು ಹಾಗೂ ಭುಜದ ನೋವಿನಿಂದ ಬಳಲುತ್ತಿದ್ದೆ. ಹಲವಾರು ಚಿಕಿತ್ಸೆ ಪಡೆದುಕೊಂಡರೂ ಯಾವುದೇ ಪ್ರಯೋಜನವಾಗಿರಲಿಲ್ಲ. ನಂತರ ಒಂದು ದಿನ, ದಿನಪತ್ರಿಕೆಯಲ್ಲಿ ಡಾ. ಆರ್ಥೋ ತೈಲ ಮತ್ತು ಕ್ಯಾಪ್ಸೂಲ್ ಜಾಹೀರಾತು ನೋಡಿದೆ. ಅದರ ಮೇಲಿನ ನಿರ್ದೇಶನಗಳ ಪ್ರಕಾರ ಅದನ್ನು ಬಳಸಿದೆ ಮತ್ತು ಈಗ ನಾನು ಆರಾಮವಾಗಿದ್ದೇನೆ".

Uttar Pradesh — ತಾರೀಕ್ ಮೆಹಮೂದ್, 66 ವರ್ಷ, ವ್ಯಾಪಾರಿ. ಇವರು ಬರೆದು ತಿಳಿಸಿರುವುದು ಏನೆಂದರೆ, "ನಾನು ಮಂಡಿ ಹಾಗೂ ಕೀಲು ನೋವುಗಳಿಂದ ತೀವ್ರ ಬಾಧೆಗೊಳಗಾಗಿದ್ದೆ, ಭಾರಿ ವೆಚ್ಚದಾಯಕ ಚಿಕಿತ್ಸೆ ಪಡೆದುಕೊಂಡರು ಪ್ರಯೋಜನವಾಗಿರಲಿಲ್ಲ. ಆದರೆ, ಡಾ. ಆರ್ಥೋ ತೈಲ ಮತ್ತು ಕ್ಯಾಪ್ಸೂಲ್ಸ್ ಬಳಸಲು ಆರಂಭಿಸಿದಾಗಿನಿಂದ, ಕೊಂಚ ನಿರಾಳವಾಗಿದ್ದೇನೆ. ನನ್ನ ಪರಿಚಯದ ಎಲ್ಲರಿಗೂ ನಾನು ಖಂಡಿತವಾಗ್ಯೂ ಡಾ. ಆರ್ಥೋ ಬಗ್ಗೆ ತಿಳಿಸಿ ಹೇಳುತ್ತೇನೆ."

Gujarat — ಭಾಸ್ಕರ್ ಬ್ರಜ್‌ಲಾಲ್ ಸೋಳಂಕಿ, 71 ವರ್ಷ ವಯಸ್ಸು, ನಿವೃತ್ತ ಶಿಕ್ಷಕ. ಇವರು ಬರೆದು ತಿಳಿಸಿದ್ದು ಏನೆಂದರೆ, "ಕಳೆದ ಹಲವಾರು ವರ್ಷಗಳಿಂದ ನಾನು ಎದ್ದು ನಿಲ್ಲುವಾಗ, ಕುಳಿತುಕೊಳ್ಳುವಾಗ ಯಾವಾಗಲೂ ನನ್ನ ಮಂಡಿಗಳಲ್ಲಿ ಒಂದು ರೀತಿ ಸದ್ದು ಉಂಟಾಗುತ್ತಿತ್ತು. ಕೆಲವೊಮ್ಮೆ ಹಾಸಿಗೆಯಿಂದ ಎದ್ದೇಳಲು ಕೂಡ ನನಗೆ ಸಾಧ್ಯವಾಗುತ್ತಿರಲಿಲ್ಲ. ನಾನು ನಿಮಗೆ ಧನ್ಯವಾದ ತಿಳಿಸಲು ಇಚ್ಛಿಸುತ್ತೇನೆ ಮತ್ತು ನಿಮ್ಮ ಮೂಲಕ ಎಲ್ಲರೂ ಡಾ. ಆರ್ಥೋ ತೈಲ ಮತ್ತು ಕ್ಯಾಪ್ಸೂಲ್ಸ್ ಬಳಸಬೇಕೆಂದು ಆಗ್ರಹಿಸುತ್ತೇನೆ".

Rajasthan — ಲೋಕೇಶ ಕುಮಾರ ಮಲಾವತ್, 20 ವರ್ಷ ಪ್ರಾಯ. ಇವರು ಪತ್ರದಲ್ಲಿ ಬರೆದಿರುವುದು ಏನೆಂದರೆ, "ಈ ತಾರುಣ್ಯದ ಪ್ರಾಯದಲ್ಲಿಯೇ ನನಗೆ ಗಂಭೀರವಾದ ಕತ್ತುನೋವು ಪೀಡಿಸುತ್ತಲಿತ್ತು ಹಾಗೂ ಚಿಕಿತ್ಸೆ ಪಡೆದುಕೊಂಡರು ಯಾವುದೇ ಪರಿಹಾರ ಸಿಕ್ಕಿರಲಿಲ್ಲ. ಆದರೆ, ಡಾ. ಆರ್ಥೋ ಅಯುರ್ವೇದಿಕ ತೈಲ ಮತ್ತು ಕ್ಯಾಪ್ಸೂಲ್‌ನ್ನು ನಿರಂತರವಾಗಿ ಬಳಸಿದ ನಂತರ, ನನಗೀಗ ಸಂಪೂರ್ಣ ಆರೋಗ್ಯವೆನಿಸುತ್ತಿದೆ ಮತ್ತು ಉತ್ತಮವಾಗಿ ಜೀವಿಸುತ್ತಿದ್ದೇನೆ".

Maharashtra — ಶಾಂತಾರಾಮ ಚಾಬಿ ಸಿಂಗ್ ರಜಪೂತ, 61 ವರ್ಷ ಪ್ರಾಯ, ನಿವೃತ್ತ ಪ್ರಾಂಶುಪಾಲ. ಇವರು ಬರೆದು ತಿಳಿಸಿರುವಂತೆ "ಕಳೆದ 3 ವರ್ಷಗಳಿಂದ ನಾನು ಕೀಲುಗಳ ನೋವಿನಿಂದ ಕಂಗಾಲಾಗಿದ್ದೆ. ನಂತರ ಟಿವಿಯಲ್ಲಿ ಡಾ. ಆರ್ಥೋ ತೈಲ ಮತ್ತು ಕ್ಯಾಪ್ಸೂಲ್ ಜಾಹೀರಾತು ಕಂಡು, ಅದೇ ದಿನ ಖರಿದೀಸಿ ತಂದುಕೊಂಡೆ. 5 ತಿಂಗಳ ಸಂಪೂರ್ಣ ಕೋಸ್ ಬಳಸುವಷ್ಟರಲ್ಲಿ ನನಗೆ ಬೆನ್ನುನೋವು ಮತ್ತು ಕೀಲುಗಳ ನೋವಿನಿಂದ ಮುಕ್ತಿ ಲಭಿಸಿತು.

Maharashtra — ದತ್ತಾತ್ರೇಯ ವಿನಾಯಕ ದಿಕ್ಷಿತ್, 68 ವರ್ಷ ಪ್ರಾಯ, ಸಾಮಾಜಿಕ ಕಾರ್ಯಕರ್ತರು. ಕಳೆದ ಹಲವು ವರ್ಷಗಳಿಂದ ನನಗೆ ಮಂಡಿ ಮತ್ತು ಕೀಲುಗಳಲ್ಲಿ ಭಾರಿ ನೋವು ಕಾಣಿಸಿಕೊಂಡಿತ್ತು. ಸಾಕಷ್ಟು ವೆಚ್ಚದಾಯಕ ಚಿಕಿತ್ಸೆಗಳನ್ನು ಪಡೆದುಕೊಂಡರೂ ಪ್ರಯೋಜನವಾಗಿರಲಿಲ್ಲ. ವಯಸ್ಸು ಮೀರತೊಡಗಿತ್ತು, ಆದರೆ ನೋವು ಮಾತ್ರ ಕಡಿಮೆಯಾಗಿರಲಿಲ್ಲ. ನಂತರ ಒಂದು ದಿನ ನನ್ನ ಸ್ನೇಹಿತನೊಬ್ಬ ಆಯುರ್ವೇದಿಕ ಡಾ. ಆರ್ಥೋ ತೈಲ ಮತ್ತು ಕ್ಯಾಪ್ಸೂಲ್ ಬಗ್ಗೆ ತಿಳಿಸಿದ. ಇದನ್ನು ಬಳಸಿದ 40 ದಿನಗಳಲ್ಲಿ ನನ್ನ ನೋವುಗಳೆಲ್ಲ ದೂರವಾದವು.

Maharashtra — ವಿಜಯ್ ಬಸಂತರಾವ್ ಭೋಸಲೆ, 71 ವರ್ಷ ವಯಸ್ಸು, ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಕಳೆದ 6 ವರ್ಷಗಳ ಹಿಂದೆಯೇ ಇವರ ಮಂಡಿಗಳಲ್ಲಿ ನೋವು ಬಂದಿತ್ತು. ಮಂಡಿಗಳ ಊತದಿಂದಾಗಿ ಇವರಿಗೆ ನಡೆಯಲಿಕ್ಕೂ ಸಾಧ್ಯವಾಗಿರಲಿಲ್ಲ. ಒಂದು ದಿನ ಇವರು ದಿನಪತ್ರಿಕೆಯಲ್ಲಿ ಆಯುರ್ವೇದಿಕ ಡಾ. ಆರ್ಥೋ ತೈಲ ಮತ್ತು ಕ್ಯಾಪ್ಸೂಲ್ಸ್ ಜಾಹೀರಾತು ಕಂಡು, ಅದರ ಕುರಿತ ಸಂಪೂರ್ಣ ಮಾಹಿತಿ ಪಡೆದುಕೊಂಡು ಉತ್ಸಾಹದಿಂದ ಬಳಸಿದರು ಮತ್ತು ಇದೀಗ ಸಂತೋಷವಾಗಿದ್ದಾರೆ.

Maharashtra — ಆನಂದ ಲಕ್ಷ್ಮಣ ಗುಜಲ್ವಾರಿಸ್, 64 ವರ್ಷ ಪ್ರಾಯದ ನಿವೃತ್ತ ಅಧಿಕಾರಿ. ಕಳೆದ 4–5 ವರ್ಷಗಳಿಂದ ಅವರ ಮೊಣಕಾಲುಗಳು ನೋವಿನಿಂದ ಬಾಧಿಸುತ್ತಿದ್ದವು. ತಮ್ಮ ನೆರೆಯವರ ಸಲಹೆಯ ಮೇರೆಗೆ, ಇವರು 3 ತಿಂಗಳ ಕಾಲ ಡಾ. ಆರ್ಥೋ ಆಯುರ್ವೇದಿಕ ತೈಲದಿಂದ ಮೃದುವಾಗಿ ಮಂಡಿಗಳ ಮೇಲೆ ಮಸಾಜ್ ಮಾಡಿಕೊಂಡರು ಮತ್ತು ಬೆಳಗ್ಗೆ ಹಾಗೂ ರಾತ್ರಿ 2–2 ಕ್ಯಾಪ್ಸೂಲ್ಸ್ ಸೇವಿಸಿದರು. ಇದೀಗ ಇವರ ಸಂತೋಷವಾಗಿದ್ದಾರೆ.

Uttar Pradesh — ಮುಮ್ತಾಜ್ ಬೇಗಂ, 67 ವರ್ಷ, ಗೃಹಿಣಿ. ಕಳೆದ 3 ವರ್ಷಗಳಿಂದ ಮಂಡಿ ಮತ್ತು ಕಾಲುಗಳ ನೋವಿನಿಂದಾಗಿ ನನಗೆ ನಡೆದಾಡಲೂ ಸಾಧ್ಯವಾಗುತ್ತಿರಲಿಲ್ಲ. ಎಲ್ಲಾ ರೀತಿಯ ಚಿಕಿತ್ಸೆಗಳನ್ನು ಪಡೆದುಕೊಂಡರೂ ಉಪಯೋಗವಾಗಲಿಲ್ಲ. ನಂತರ ಒಂದು ದಿನ, ಟಿವಿಯಲ್ಲಿ ಜಾಹೀರಾತು ನೋಡಿ ಡಾ. ಆರ್ಥೋ ತೈಲ ಮತ್ತು ಕ್ಯಾಪ್ಸೂಲ್‌ನ್ನು ತೆಗೆದುಕೊಂಡು ಬಂದೆ ಮತ್ತು ಅದರ ಮೇಲಿನ ನಿರ್ದೇಶನಗಳ ಪ್ರಕಾರ ಅದನ್ನು ಬಳಸಿದೆ. ಈಗ, ನನ್ನ ನೋವುಗಳೆಲ್ಲ ಸಂಪೂರ್ಣ ಮಾಯವಾಗಿವೆ.

Madhya Pradesh — ಪಂಡಿತ್ ಲಕ್ಷ್ಮಿ ನಾರಾಯಣ ಸತ್ಯಾರ್ಥಿ, 64 ವರ್ಷ ಪ್ರಾಯ, ವೃತ್ತಿಯಲ್ಲಿ ಶಿಕ್ಷಕ ಮತ್ತು ವೈದ್ಯ. ಇವರು ಬರೆದು ತಿಳಿಸಿರುವುದು ಏನೆಂದರೆ, "ಕಳೆದ 3–4 ವರ್ಷಗಳಿಂದ ನನ್ನ ಕೈಗಳಲ್ಲಿ, ಮೊಳಕೈಯಲ್ಲಿ ಮತ್ತು ಮಂಡಿಗಳಲ್ಲಿ ಭಾರಿ ನೋವು ಕಾಣಿಸುತ್ತಿತ್ತು. ಅದಕ್ಕೆ ನಾನು ಡಾ. ಆರ್ಥೋ ತೈಲದಿಂದ ಮೃದುವಾಗಿ ಮಸಾಜ್ ಮಾಡಿದೆ ಮತ್ತು ಬೆಳಗ್ಗೆ ಹಾಗೂ ರಾತ್ರಿ 2–2 ಕ್ಯಾಪ್ಸೂಲ್ಸ್ ಸೇವಿಸಿದೆ. ಹೀಗೆ ಮಾಡುತ್ತ ಕೇವಲ ಐದು ತಿಂಗಳಲ್ಲಿ ನನಗೆ ಭಾರಿ ಕೀಲುಗಳ ನೋವಿನಿಂದ ನಿವಾರಣೆ ಸಿಕ್ಕಿತು".

Odisha — ಚಂದ್ರಮಣಿ ಬೂರಿಯಾ, 71 ವರ್ಷ, ನಿವೃತ್ತ ಉದ್ಯೋಗಿ. ಇವರು ಬರೆದಿದ್ದಾರೆ "ಕಳೆದ ಹಲವು ವರ್ಷಗಳಿಂದ ಇವರು ಕೀಲು ನೋವುಗಳಿಂದ ಬಳಲುತ್ತಿದ್ದರಂತೆ. ಆದರೆ, ಆಯುರ್ವೇದಿಕ ಡಾ. ಆರ್ಥೋ ತೈಲದಿಂದ ಮಸಾಜ್ ಮಾಡಿಕೊಂಡ ಬಳಿಕ ಹಾಗೂ ಬೆಳಗ್ಗೆ ಮತ್ತು ರಾತ್ರಿ ಎರಡೆರಡು ಡಾ. ಆರ್ಥೋ ಕ್ಯಾಪ್ಸೂಲ್ಸ್ ಸೇವಿಸಿದ ನಂತರ ಇವರ ಜೀವನ ಸುಧಾರಣೆಗೊಂಡಿದೆಯಂತೆ. ಇದಕ್ಕಾಗಿ ನಾನು ಡಾ. ಆರ್ಥೋಗೆ ಹೃತ್ಪೂರ್ವಕ ಧನ್ಯವಾದಗಳು" ಎಂದಿದ್ದಾರೆ.

Punjab — ಸೋಹನಲಾಲ್ ಗುಪ್ತಾ, 68 ವರ್ಷ ಪ್ರಾಯ, ನಿವೃತ್ತ ಶಿಕ್ಷಕರು. ಇವರು ಬರೆಯುತ್ತಾರೆ, "ಕಳೆದ 2 ವರ್ಷಗಳಿಂದ ನನ್ನ ಭುಜದಲ್ಲಿ ಮತ್ತು ಕೀಲುಗಳಲ್ಲಿ ಸಹಿಸಲಸಾಧ್ಯ ನೋವಿನಿಂದ ಬಳಲುತ್ತಿದ್ದೆ. ನಂತರ ಒಂದು ದಿನ ಟಿವಿಯಲ್ಲಿ ಆಯುರ್ವೇದಿಕ ಡಾ. ಆರ್ಥೋ ತೈಲ ಮತ್ತು ಕ್ಯಾಪ್ಸೂಲ್ಸ್ ಜಾಹೀರಾತು ನೋಡಿದ ಬಳಿಕ ನಾನು ತುಂಬಾ ಉತ್ಸಾಹಗೊಂಡಿದ್ದೆ. ಅದರ ಮೇಲಿನ ನಿರ್ದೇಶನಗಳ ಪ್ರಕಾರ ನಾನು ಅದನ್ನು ಬಳಸತೊಡಗಿದೆ ಮತ್ತು ಕೇವಲ 2 ತಿಂಗಳಲ್ಲಿ ನನ್ನ ಕೀಲು ನೋವು ಸಾಕಷ್ಟು ಪ್ರಮಾಣದಲ್ಲಿ ನಿವಾರಣೆಗೊಂಡಿತು".

Rajasthan — ಕಲ್ಯಾಣ ಪ್ರಸಾದ ಜೋಶಿ, 52 ವರ್ಷ, ವೃತ್ತಿಯಿಂದ ಅರ್ಚಕರು. ಕಳೆದ 3 ವರ್ಷಗಳಿಂದ ಇವರು ಬೆನ್ನುನೋವು ಮತ್ತು ಮಂಡಿ ನೋವಿನಿಂದ ಬಳಲುತ್ತಿದ್ದರು. ನಂತರ ಒಂದು ದಿನ ಟಿವಿಯಲ್ಲಿ ಡಾ. ಆರ್ಥೋ ತೈಲ ಮತ್ತು ಕ್ಯಾಪ್ಸೂಲ್ ಜಾಹೀರಾತು ಗಮನಿಸಿದರು. ಇದನ್ನು ಮೂರು ತಿಂಗಳವರೆಗೆ ಬಳಸಿದರು ಮತ್ತು ಕೇವಲ 3 ತಿಂಗಳಲ್ಲಿ ತಮ್ಮ 3 ವರ್ಷ ಹಳೆಯ ನೋವಿನಿಂದ ಮುಕ್ತಿ ದೊರೆಯಿತು ಎಂದು ಬರೆದು ತಿಳಿಸಿದ್ದಾರೆ.

Rajasthan — ರಾಮ್ ಕರಣ್ ಖೀಂಚಿ, 74 ವರ್ಷ. ಇವರು ತಮ್ಮ ಮಂಡಿ ನೋವಿನಿಂದಾಗಿ ಬಸವಳಿದಿದ್ದರು. ಇವರು ಹಲವಾರು ಚಿಕಿತ್ಸೆಗಳು ಪಡೆದಿದ್ದರು ಕೂಡ ಯಾವುದರಿಂದಲೂ ಕೀಲು ನೋವುಗಳಿಗೆ ಶಾಶ್ವತ ನಿವಾರಣೆ ದೊರಕಿರಲಿಲ್ಲ. ಆದರೆ 3–4 ತಿಂಗಳಿಂದ ಡಾ. ಆರ್ಥೋ ತೈಲ ಮತ್ತು ಕ್ಯಾಪ್ಸೂಲ್ ಬಳಕೆಯಿಂದಾಗಿ ಇವರು ಸದೃಢವಾಗಿದ್ದಾರಂತೆ. ಇದೀಗ, ಇವರಿಗೆ ಯಾವುದೇ ಅಲೋಪಥಿಕ್ ಔಷಧಿಗಳ ಅಗತ್ಯವಿಲ್ಲವಂತೆ.

Maharashtra — ಶಾಂತಾಬಾಯಿ ಉತ್ತಮರಾವ್ ಬಂಸೋದೆ, 67 ವರ್ಷ, ಗೃಹಿಣಿ. ಇವರು ಬರೆದು ತಿಳಿಸಿರುವುದು ಏನೆಂದರೆ, "ಕಳೆದ 1 ವರ್ಷದಿಂದ ನನ್ನ ಕಾಲು ಮತ್ತು ಮಂಡಿಗಳಲ್ಲಿ ಭಯಂಕರ ನೋವು ಕಾಣಿಸಿಕೊಳ್ಳುತ್ತಿತ್ತು. ವೈದ್ಯರನ್ನು ಭೇಟಿ ಮಾಡಿ ಚಿಕಿತ್ಸೆ ಪಡೆದುಕೊಂಡರೂ ನಿವಾರಣೆ ಸಿಕ್ಕಲಿಲ್ಲ. ನಂತರ ಒಂದು ದಿನ ಡಾ. ಆರ್ಥೋ ಆಯುರ್ವೇದಿಕ ತೈಲ ಮತ್ತು ಕ್ಯಾಪ್ಸೂಲ್ ಜಾಹೀರಾತು ಕಂಡು, ಅವತ್ತೇ ಮೆಡಿಕಲ್ ಶಾಪ್‌ನಿಂದ ಕೊಂಡುತಂದೆ. ಅದನ್ನು ಬಳಸಿದ ಕೇವಲ ಎರಡು ತಿಂಗಳಲ್ಲಿ ನನಗೆ ಮುಕ್ತಿ ದೊರೆಯಿತು".

Rajasthan — ಮೋಟ್ ಸಿಂಗ್, 76 ವರ್ಷ ಪ್ರಾಯ. ಕಳೆದ 10 ವರ್ಷಗಳಿಂದ ಇವರು ಮಂಡಿ ನೋವಿನಿಂದ ಬಳಲುತ್ತಿದ್ದರು ಮತ್ತು ಇದರಿಂದಾಗಿ ಭಾರಿ ಬೇಸರದಲ್ಲಿದ್ದರು. ಸಾಕಷ್ಟು ವೆಚ್ಚದಾಯಕ ಔಷಧಿಗಳನ್ನು ಬಳಸಿದ್ದರೂ ಇವರಿಗೆ ಫಲಿತಾಂಶ ಸಿಕ್ಕಿರಲಿಲ್ಲ. ನಂತರ ಒಂದು ದಿನ ಇವರ ಸ್ನೇಹಿತರೊಬ್ಬರು ಡಾ. ಆರ್ಥೋ ತೈಲ ಮತ್ತು ಕ್ಯಾಪ್ಸೂಲ್ಸ್ ಬಳಸಲು ನೀಡಿದರಂತೆ. ಆಯುರ್ವೇದಿಕ ಡಾ. ಆರ್ಥೋ ಬಳಸಿದ ನಂತರ, ಇವರ ಕೀಲುಗಳ ನೋವೆಲ್ಲ ನಿವಾರಣೆಗೊಂಡಿದೆ.

Odisha — ನನ್ನ ಹೆಸರು ಗೀತ ಪ್ರಕಾಶ ಚಂದ್ರ ಮಿಶ್ರಾ. 65 ವರ್ಷದ ನಿವೃತ್ತ ಬ್ಯಾಂಕ್ ಮ್ಯಾನೇಜರ್ ಮತ್ತು ಕರಾಟೆಯಲ್ಲಿ ಬೆಲ್ಟ್ ಸಾಧಕ. ಕಳೆದ 10 ವರ್ಷಗಳಿಂದ, ನನ್ನ ಎರಡೂ ಮಂಡಿ ಮತ್ತು ಭುಜಗಳಲ್ಲಿ ಸಾಕಷ್ಟು ನೋವು ಕಾಡುತ್ತಿತ್ತು. ಮಂಡಿ ಮತ್ತು ಭುಜಗಳಿಗೆ ಡಾ. ಆರ್ಥೋ ಆಯುರ್ವೇದಿಕ ತೈಲದಿಂದ ಮಸಾಜ್ ಮಾಡಿಕೊಂಡೆ ಮತ್ತು ಬೆಳಗ್ಗೆ ಹಾಗೂ ರಾತ್ರಿ 2–2 ಡಾ. ಆರ್ಥೋ ಆಯುರ್ವೇದಿಕ ಕ್ಯಾಪ್ಸೂಲ್ಸ್ ಸೇವಿಸಿದೆ. ಕೆಲವು ವಾರಗಳ ನಂತರ ನನಗೆ ಸಾಕಷ್ಟು ನೋವಿನಿಂದ ಮುಕ್ತಿ ಲಭಿಸಿದೆ.

ಜಾಗ್ರತೆ ಇರಲಿ — ಡಾ. ಆರ್ಥೋ ರವರ ಎಲ್ಲ ಉತ್ಪನ್ನಗಳನ್ನು "ಡಾ. ಆರ್ಥೋ" ಎಂಬ ಹೆಸರಿನಲ್ಲಿ ಮಾತ್ರ ಉತ್ಪಾದಿಸಲಾಗುತ್ತದೆ. ಮಾರುಕಟ್ಟೆಯಲ್ಲಿ ಲಭ್ಯವಿರುವ ಇದೇ ರೀತಿಯ ಹೆಸರು, ಪ್ಯಾಕೇಜಿಂಗ್, ಬಾಟಲ್, ಜಾಹೀರಾತು ಇತ್ಯಾದಿ ಹೊಂದಿರುವ ಉತ್ಪನ್ನಗಳಿಗೆ ಮಾರು ಹೋಗದಿರಿ. ಅತ್ಯುತ್ತಮವಾದ ಡಾ.ಆರ್ಥೋ ಮಾತ್ರ ಕೊಳ್ಳಿರಿ.